ಮಂಡಲಿ ರಚನೆಯ ಬಗ್ಗೆ ಆರ್ಡಿನೆನ್ಸ್ ಹೊರಡಿಸುತ್ತೇನೆಂದು ಹೇಳಿದ್ದರು. ಆದರೆ ಇದುವರೆಗೆ ಆರ್ಡಿನೆನ್ಸ್ ಬರಲಿಲ್ಲ. ಈಗ ಶಾಸನಸಭೆ ಸೇರಿದೆ. ಅದರ ಬಗ್ಗೆ ಬಿಲ್ ಆಗಲಿ, ಪ್ರಿಂಟ್ ಆಗಿರುವುದಾಗಲಿ ಏನೂ ಇಲ್ಲ. ಈ ಮೈದಾನ ಪ್ರದೇಶ ಅಭಿವೃದ್ಧಿ ಮಂಡಳಿ 6 ಜಿಲ್ಲೆಗಳಿಗೆ ಸಂಬಂಧಪಟ್ಟದ್ದು; ಬರಗಾಲಪೀಡಿತ ಜಿಲ್ಲೆಗಳಿಗೆ ಸಂಬಂಧಪಟ್ಟದ್ದು. ಸರ್ಕಾರದಿಂದ ಆಶ್ವಾಸನೆ ಬೇಕು. ಇವತ್ತು ಸದನ ಮುಗಿದ ಮೇಲೆ ಮುಂದಿನ ಸೆಕ್ಷನ್ನಲ್ಲಾದರೂ ಮೈದಾನ ಪ್ರದೇಶಾಭಿವೃದ್ಧಿ ಮಂಡಲಿಯ ಮಸೂದೆಯನ್ನು ತರುತ್ತೀರಾ ಅಥವಾ ಇಲ್ಲವೇ ಎಂಬ ಬಗ್ಗೆ ಸರ್ಕಾರದಿಂದ ಆಶ್ವಾಸನೆ ಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಬೀದರ್ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ತಮಗೆ ಒಂದು ಪತ್ರವನ್ನು ಕಳುಹಿಸಿದ್ದೆ.

ಅಧ್ಯಕ್ಷರು : ತಮ್ಮ ಪತ್ರ ಬಂದಿದೆ. ನಿನ್ನೆ ನಾನು ಸರ್ಕಾರಕ್ಕೆ ಅದನ್ನು ಕಳುಹಿಸಿ ಕೊಟ್ಟಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ (ಯೋಜನಾ ರಾಜ್ಯ ಸಚಿವರು) : ಮಾನ್ಯ ಸದಸ್ಯರು ಹೇಳಿರತಕ್ಕದ್ದು ಬಹಳ ಗಂಭೀರವಾಗಿರತಕ್ಕದ್ದು. ಮುಖ್ಯಮಂತ್ರಿಗಳು ಅದರ ಬಗ್ಗೆ ಆಸಕ್ತಿ ವಹಿಸಿದ್ದಾರೆ. ಆ ಬಗ್ಗೆ ಈ ಕೂಡಲೇ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ : ಕಾರ್ಯಕ್ರಮ ಅಲ್ಲ. ಮುಂದಿನ ಸೆಕ್ಷನ್ನಲ್ಲಿ ತರಬೇಕು.

ಶ್ರೀ ಟಿ.ಎಂ. ಮಂಜುನಾಥ್ : ಮುಂದಿನ ಸೆಕ್ಷನ್ನಲ್ಲಿ ಬಿಲ್ಲನ್ನು ತರುತ್ತೇವೆ.

ಶ್ರೀ ಮನೋಹರ್ ಐನಾಪುರ : ನನ್ನ ಕ್ಷೇತ್ರದ ಇಂಡಿ ತಾಲ್ಲೂಕಿನಲ್ಲಿ....

ಅಧ್ಯಕ್ಷರು : ತಾವು ಬರೆದು ಕಳುಹಿಸಿ, ನಾನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಮನೋಹರ್ ಐನಾಪುರ್ : ಹೇಳಿಕೆ ನೀಡಬೇಕು.

ಅಧ್ಯಕ್ಷರು : ಈಗ ಹೇಳಿಕೆ ನೀಡುವುದಕ್ಕೆ ಅವಕಾಶ ಇಲ್ಲ. ಕುಳಿತುಕೊಳ್ಳಿ.

ಅವಿಶ್ವಾಸ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

+ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಮೊಯ್ಲಿಯವರ ಸರ್ಕಾರದ ಮೇಲೆ ಅವರು ಇರತಕ್ಕ ಪಕ್ಷದ ಮೇಲೆ ಎಲ್ಲ ವಿರೋಧ ಪಕ್ಷಗಳವರು ಒಮ್ಮತದಿಂದ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೇವೆ. ಈ ಅವಿಶ್ವಾಸ ನಿರ್ಣಯದ ಮೇಲೆ ಸಮಗ್ರ ಚಿಂತನೆ ಆಗಬೇಕಾಗಿದೆ ಹಾಗೂ ಸಮಗ್ರವಾಗಿ ಚರ್ಚೆ ಆಗಬೇಕಾಗಿದೆ.

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುವುದು,. ಕಾರ್ಯಕಲಾಪ ನಡೆಯುವಾಗ ಆ ಕಡೆ ಈ ಕಡೆ ಓಡಾಡುವುದಕ್ಕೆ ನಾನು ಬೇಡ ಅನ್ನುವುದಿಲ್ಲ. ಮಾತುಗಳನ್ನು ಏನು ಆಡುತ್ತೀರಿ ಅದಕ್ಕೆ ಅಭ್ಯಂತರವಿಲ್ಲ. ಆದರೆ ತಾವು ಮಾತನಾಡಿದ ಧ್ವನಿ ತರಂಗಗಗಳು ನನ್ನವರೆಗೆ ಮುಟ್ಟಬಾರದು. ಕಿವಿಯಲ್ಲಿ ಮಾತನಾಡಿಕೊಳ್ಳಿ. ಕಲಾಪಕ್ಕೆ ತೊಂದರೆ ಆಗಬಾರದೆಂದು ಕೇಳಿಕೊಳ್ಳುತ್ತೇನೆ. ಬಹಳ ಜಾಸ್ತಿ ಚರ್ಚೆ ಮಾಡಬೇಕಾದರೆ ಲಾಬಿಯಲ್ಲಿ ಕುಳಿತು ಮಾಡನಾಡಬಹುದು. ಕಲಾಪ ಸರಿಯಾಗಿ ಎಲ್ಲರಿಗೆ ಕೇಳುವ ಹಾಗೆ ನಡೆಯುವ ಹಾಗೆ ಆಸ್ಪದ ಮಾಡಿಕೊಡುತ್ತೀರೆಂದು ವಿಶ್ವಾಸ ಹೊಂದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಈ ಅವಿಶ್ವಾಸ ನಿರ್ಣಯದ ಚರ್ಚೆಗೆ ತಾವು ಸಂಪೂರ್ಣ ಅವಕಾಶವನ್ನು ಕೊಡುವ ಭರವಸೆಯನ್ನು ನೀಡಿದ್ದೀರಿ. ಇದರಲ್ಲಿ ಎಲ್ಲಾ ಸದಸ್ಯರು ಸಮಗ್ರವಾಗಿ ಚರ್ಚೆಯಲ್ಲಿ ಭಾಗವಹಿಸಬೇಕಾಗಿದೆ. ಈಗಾಗಲೇ ತಾವು

ತಿಳಿದಿರುವ ರೀತಿ ವಿರೋಧ ಪಕ್ಷದ ವತಿಯಿಂದ 3-4 ಜನರು ಮಾತ್ರ ಮಾತನಾಡಿದ್ದಾರೆ. ಇನ್ನೂ ಬಹಳ ಜನ ಈ ಚರ್ಚೆಯಲ್ಲಿ ಭಾಗವಹಿಸಬೇಕಾದ ಅವಶ್ಯಕತೆ ಇದೆ. ಅವಿಶ್ವಾಸ ನಿರ್ಣಯ ಕೇವಲ ಅವಿಶ್ವಾಸವನ್ನು ಸರ್ಕಾರದ ಮೇಲೆ ತಂದು ನಮಗೆ ಚರ್ಚೆಗೂ ಪರಿಣಾಮಕಾರಿಯಾಗಿ ಅವಕಾಶ ಇಲ್ಲದೆ ಸರ್ಕಾರ ತರಾತುರಿಯಲ್ಲಿ ನಮ್ಮ ಉತ್ತರವನ್ನು ಕೊಡುತ್ತೇವೆಂದು ಹೊರಡುವ ನೀತಿ ಏನಿದೆ, ಅದು ಪ್ರಜಾಪ್ರಭುತ್ವಕ್ಕೆ ಸರಿಯಾದ ನೀತಿ ಅಲ್ಲ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಈ ಸದನದ ಸಲಹಾ ಸಮಿತಿ ಮೂಲಕ ತಮ್ಮಲ್ಲಿ ನಾವು ಮನವಿ ಮಾಡಿದ್ದೇವೆ. ಏನೆಂದರೆ, ಈ ಸಭೆಯನ್ನು ಇನ್ನೂ 5 ದಿನಗಳ ಕಾಲ ಮುಂದುವರಿಸಿ ಇದರ ಸಮಗ್ರ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ನಾವು ಮನವಿ ಮಾಡಿದ್ದೇವೆ.

ಸರ್ಕಾರ ಆ ಮನವಿಗೆ ಎಷ್ಟು ಮಟ್ಟಿಗೆ ಸ್ಪಂಧಿಸಿದೆ ಎಂದು ಹೇಳುವುದಕ್ಕೆ ನಾನು ಇನ್ನೂ ಆಲೋಚನೆಯನ್ನು ಮಾಡಿಲ್ಲ. ಆದರೂ ಇವತ್ತಿನ ಈ ಕಲಾಪದ ಈ ಪಟ್ಟಿಯನ್ನು ನೋಡಿದಾಗ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ, ನಂತರ ಅನೇಕ ಮಸೂದೆಗಳ ಮಂಡನೆ ಎಂದಿದೆ. ಹೀಗಿರುವಾಗ ಈ ಕಾರ್ಯಕ್ರಮದ ಪಟ್ಟಿಯನ್ನು ನೋಡಿದರೆ ನನಗನ್ನಿಸುತ್ತದೆ, ಇಲ್ಲಿ ಇವತ್ತು ಇದೆಲ್ಲಾ ಮುಗಿಯುವ ಪರಿಸ್ಥಿತಿಯಲ್ಲಿ ಇಲ್ಲ ಎನ್ನುವ ಮಾತನ್ನು ತಮ್ಮಲ್ಲಿ ಅರಿಕೆ ಮಾಡಿ ಈ ಅವಿಶ್ವಾಸ ನಿರ್ಣಯದ ಸಂಪೂರ್ಣ ಹಾಗೂ ಸಮಗ್ರ ಚರ್ಚೆಗೆ ಅವಕಾಶ ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಈ ಸರ್ಕಾರದ ಮೇಲೆ ನಾವೆಲ್ಲರೂ ಸೇರಿ ಅವಿಶ್ವಾಸವನ್ನು ಮಂಡಿಸಿದ್ದೇವೆ. ಇದು ಒಬ್ಬ ವ್ಯಕ್ತಿಯ ಬಗ್ಗೆ ಆಗಲೀ ಅಥವಾ ಯಾವುದೇ ವೈಯುಕ್ತಿಕವಾಗಿಯಾಗಲಿ ಇರುವಂತಹ ಪ್ರಶ್ನೆ ಅಲ್ಲ. ಈ ರಾಜ್ಯದ ಸಮಗ್ರ ಆಡಳಿತ, ಯಾವ ಪಕ್ಷದ ಹೆಸರಿನಲ್ಲಿ ಆಡಳಿತ ನಡೆಯುತ್ತಿದೆಯೋ ಆ ಪಕ್ಷವೂ ಸಹ ಇಲ್ಲಿ ಎಣಿಕೆ ಪಕ್ಷವಾಗಿ ಉಳಿದಿರಬಹುದೇ ಹೊರತು ರಾಜ್ಯದ ಜನತೆಯ ಹೃದಯದಲ್ಲಿ ಈ ಪಕ್ಷದ ಮೇಲೆ ಸಂಪೂರ್ಣವಾಗಿ ವಿಶ್ವಾಸ ಹೋಗಿದೆ. ಕಾಂಗ್ರೆಸ್ ಪಕ್ಷ ಸಮಗ್ರವಾಗಿ ಈ ರಾಜ್ಯದಲ್ಲಿ ಹೋಗಬೇಕೆನ್ನುವ ಒಂದು ಚಿಂತನೆ ಇಡೀ ನಾಡಿನ ಸಮಗ್ರ ಜನತೆಯಲ್ಲಿ ಇವತ್ತು ಮೂಡಿದೆ.

(ಗೊಂದಲ)

ಇಷ್ಟು ತೊಂದರೆ ಕೊಟ್ಟರೆ ಹೇಗೆ? ಸ್ವಲ್ಪ ಕೇಳಿ, ನೀವು ಮಧ್ಯ ತೊಂದರೆ ಕೊಡಬೇಡಿ. ಇಷ್ಟಕ್ಕೆ ಈಗಲೇ ತೊಂದರೆ ಕೊಟ್ಟರೆ ಹೇಗೆ? ಅಧ್ಯಕ್ಷರೇ, ನಾನು ಇಲ್ಲಿ ಇರುವವನು ಒಬ್ಬನೇ.

ಶ್ರೀ ಎ.ಕೆ. ಅನಂತಕೃಷ್ಣ : ಅವರು ಒಬ್ಬರೇ ಹೇಗೆ ಆಗುತ್ತಾರೆ? ನಿನ್ನೆ ಅವರು ಎಂಟೈರ್ ಅಪೋಷಿಷನ್ ಲೀಡ್ ಮಾಡಿದರು.

ಶ್ರೀ ವಾಟಾಳ್ ನಾಗರಾಜ್ : ನಾನು ಒಬ್ಬನೇ ಅಧ್ಯಕ್ಷರೇ, ನಿಮ್ಮ ರಕ್ಷಣೆ ನನಗೆ ಯಾವಾಗಲೂ ಸಿಗುತ್ತಿದೆ. ತಾವು ಕೊಡುತ್ತಿದ್ದೀರಿ. ಅದಕ್ಕೆ ಧನ್ಯವಾದಗಳು. ಆದರೆ ಇಲ್ಲಿ ಒಬ್ಬನೇ ಎಂದು ಏಕೆ ಹೇಳುತ್ತಿದ್ದೇನೆ ಎಂದರೆ, ನಿನ್ನೆ ಜನತಾ ದಳದ ಮುಖಂಡರು ಆದ ಶ್ರೀಮಾನ್ ಹೆಗ್ಡೆಯವರು ನಿಂತಾಗ ಇಡೀ ಜನತಾ ದಳದ ಸದಸ್ಯರು ಅವರು ಏನೇ ಹೇಳಲಿ ಅವರ ಪರ ನಿಂತು ರಕ್ಷಣೆಗೆ ಬಂದರು. ಆ ಕಡೆ ಬಂಗಾರಪ್ಪನವರು ನಿಂತಾಗ ಅವರ ಒಂದು ಗುಂಪು ಅವರನ್ನು ರಕ್ಷಣೆ ಮಾಡಿತು. ನಾನು ಮತ್ತು ನಂಜುಂಡಸ್ವಾಮಿ ಅವರು ನಿಂತರೆ ಯಾರೂ ರಕ್ಷಣೆ ಮಾಡುವವರು ಇಲ್ಲವೇನೋ ಎನ್ನುವ ಪರಿಸ್ಥಿತಿ ಇಲ್ಲಿ ಕಾಣುತ್ತಿದೆ.

ಶ್ರೀ ಎ.ವಿ. ಉಮಾಪತಿ : ನಿನ್ನೆ ಅವರನ್ನೆಲ್ಲಾ ಬಾವಿಗೆ ತಳ್ಳಿ ನೀವು ಮೇಲೆ ನಿಂತು ಮಾತನಾಡುತ್ತಿದ್ದಿರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಯಡಿಯೂರಪ್ಪನವರು ಮಾತನಾಡುವಾಗ ಅವರು ಪಕ್ಷದ 3 ಜನರಲ್ಲಿ ಯಾರನ್ನೂ ಬಿಡದೇ ಅವರು ನಿಲ್ಲುತ್ತಾರೆ. ನಾನು ಎಂದರೆ, ನಾನು ಒಬ್ಬನೇ ನಿಲ್ಲಬೇಕು. ನಂಜುಂಡಸ್ವಾಮಿಯವರೂ ಒಬ್ಬರೇ ನಿಲ್ಲಬೇಕು. ಬಾಬಾಗೌಡರು ಕೂಡ ಪಾಪ ಒಂದು ರೀತಿಯಲ್ಲಿ ಧರ್ಮರಾಯರು ಇದ್ದಹಾಗೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ನೀವು ಅಸಹಾಯಶೂರರು.

ಶ್ರೀ ವಾಟಾಳ್ ನಾಗರಾಜ್ : ಅಸಹಾಯಶೂರರು ಎಂದು ಆಶೀರ್ವಾದ ಮಾಡುತ್ತಿದ್ದಾರೆ. ಅದನ್ನು ನಾನು ಅತ್ಯಂತ ಸಂತೋಷಾಭಿಮಾನದಿಂದ ಸ್ವೀಕಾರ ಮಾಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಆಶೀರ್ವಾದ ಮಾಡುವುದಕ್ಕೆ ಯಾರಿಗೆ ಅವಕಾಶ ಇದೆಯೋ ಅವರು ಮಾಡಿದಾಗ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಒಪ್ಪಿಕೊಳ್ಳುತ್ತೇನೆ. ಅವರು ಈ ರಾಜ್ಯಕ್ಕೆ ಮಾಡಿರತಕ್ಕ ತ್ಯಾಗ, ಸೇವೆ, ಚಿಂತನೆ ಬಗ್ಗೆ ನನ್ನ ಎರಡನೇ ಅಭಿಪ್ರಾಯ ಇಲ್ಲ. ನಾನು ಬಾಬಾಗೌಡರನ್ನು ಏಕೆ ಧರ್ಮರಾಯರು ಎಂದೆ ಎಂದರೆ, ಯಾವುದಕ್ಕೂ ಇವತ್ತು ನಂಜುಂಡಸ್ವಾಮಿಯವರು ಒಬ್ಬರೇ, ನಾನೂ ಒಬ್ಬನೇ. ಬಾಬಾಗೌಡರು ಪಾಪ ಯಾವುದಕ್ಕೂ ಎದ್ದುನಿಂತು ನಂಜುಂಡಸ್ವಾಮಿಯವರ ಪರವೂ ನಿಲ್ಲುವುದಿಲ್ಲ; ನನ್ನ ಪರವೂ ನಿಲ್ಲುವುದಿಲ್ಲ. ಆದರೂ ನಮ್ಮ ಬಗ್ಗೆ ಅವರಿಗೆ ಅಭಿಮಾನ ಇದೆ. ನಮ್ಮ ಮಧ್ಯೆ ಅವರು ಕೂತಿದ್ದಾರೆ. ನಾನು ಇನ್ನೂ ಭಾಷಣ ಪ್ರಾರಂಭವೇ ಮಾಡಿಲ್ಲ; ಆಗಲೇ ನಮ್ಮ ಸ್ನೇಹಿತರ ಸ್ವರ ಶುರುವಾಯಿತು. ಸ್ವಲ್ಪ ಹೆಚ್ಚು ಕಮ್ಮಿ ಆದೀತು ಎಂದು ನಾನು ತಮ್ಮನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅಧ್ಯಕ್ಷರೇ. ಅವಿಶ್ವಾಸ ನಿರ್ಣಯವನ್ನು ಈ ಸರ್ಕಾರದ ಹಾಗೂ ಈ ಪಕ್ಷದ ಮೇಲೆ ನಾವು ತಂದಿದ್ದೇವೆ ಹಾಗೂ ಆ ಪಕ್ಷದ ಸಮಗ್ರ ಮಂತ್ರಿಮಂಡಲದ ಮೇಲೆ ತಂದಿದ್ದೇವೆ.

ಈ ರಾಜ್ಯಸರ್ಕಾರ 185 ಜನ ಭಾರೀ ಪ್ರಮಾಣದ ಸದಸ್ಯರನ್ನು ಹೊಂದಿದಂತಹ ಒಂದು ದೊಡ್ಡ ರಾಷ್ಟ್ರೀಯ ಪಕ್ಷ ಪ್ರಥಮವಾಗಿ ಸಮಗ್ರವಾಗಿ ಇವರ ಆಡಳಿತ ಸಂಪೂರ್ಣವಾಗಿ ಅಧಿಕಾರಕ್ಕೆ ಬಂದಂದಿನಿಂದ ಇಲ್ಲಿಯವರೆಗೆ ಕೆಲವು ದಿನಗಳು ಮಾತ್ರ ಮಾನ್ಯ ವೀರೇಂದ್ರ ಪಾಟೀಲರ ಅಧಿಕಾರ ಆದರ್ಶವಾಗಿದ್ದು ಕೊನೆಯ ಗಳಿಗೆಯಲ್ಲಿ ಅವರ ಅಧಿಕಾರವನ್ನು ಮೂಲೆಗುಂಪು ಮಾಡುವುದಕ್ಕೆ ಸಂಚು ಪಿತೂರಿ ನಡೆಯಿತು. ಅವರ ಅಧಿಕಾರದ ನಂತರ ಶ್ರೀಮಾನ್ ಬಂಗಾರಪ್ಪನವರು ಅಧಿಕಾರಕ್ಕೆ ಬಂದರು. ಅವರನ್ನು ಹೊರಗೆ ಕಳುಹಿಸುವಂತಹ ಪಿತೂರಿ ಹಾಗೂ ಸಂಚು ನಡೆಯಿತು. ಅವರದು ಆದ ಮೇಲೆ ಈಗ ಮಾನ್ಯ ವೀರಪ್ಪ ಮೊಯಿಲಿಯವರನ್ನು ಹೊರಗೆ ಕಳುಹಿಸುವಂತಹ ಪಿತೂರಿ ಹಾಗೂ ಸಂಚು ನಡೆಯುತ್ತಿದೆ. ಅವರಿಗೆ ಸಂಪೂರ್ಣವಾದ ಯಶಸ್ಸು ದೊರಕಲಿ. ಆದರೆ ಮೂರು ಮುಕ್ಕಾಲು ವರ್ಷದಲ್ಲಿ ಈ ರಾಜ್ಯದ ಚಿಂತನೆಯ ಬಗ್ಗೆ ನೀವು ಏನಾದರೂ ಯೋಚನೆ ಮಾಡಿದ್ದೀರಾ? ನಿಮಗೆ ಆತ್ಮ ಇದ್ದರೆ ಹೃದಯವಿದ್ದರೆ ತಾವು ಒಂದು ಚಿಂತನೆಯನ್ನು ಮಾಡಿ. ಈ ಮೂರು ಮುಕ್ಕಾಲು ವರ್ಷದಲ್ಲಿ ಈ ರಾಜ್ಯದ ಯಾವ ಸಮಸ್ಯೆಗಳ ಬಗ್ಗೆ ಹಾಗೂ ರಾಜ್ಯದ ಭವಿಷ್ಯದ ಬಗ್ಗೆ ನೀವೇನು ಚಿಂತನೆ ಮಾಡಿದ್ದೀರಿ? ಯಾವ ಚಿಂತನೆಯನ್ನೂ ಮಾಡಲಿಲ್ಲ. ಸಂಪೂರ್ಣವಾಗಿ ಈ ರಾಜ್ಯಕ್ಕೆ ಅನಾಯಕತ್ವವನ್ನು ಕೊಟ್ಟಿದ್ದೀರಿ. ಈ ಕರ್ನಾಟಕ ರಾಜ್ಯದಲಲ್ಲಿ ಒಂದು ರಾಜಕೀಯ ಸ್ಥಿರತೆಗೆ ಭಂಗ ತಂದಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ರಾಜಕೀಯ ನಾಯಕತ್ವಕ್ಕೆ ನೀವು ತಿಲಾಂಜಲಿಯನ್ನು ಇಟ್ಟಿದ್ದೀರಿ. ನಿಮ್ಮ

ಒಂದು ಯಾದವೀ ಕಲಹದಿಂದ ಸಮಗ್ರ ಕರ್ನಾಟಕದ ಅಭಿವೃದ್ಧಿ ಮೂಲೆ ಗುಂಪಾಗಿದೆ. ಸಮಗ್ರ ಕರ್ನಾಟಕದ ಬೆಳವಣಿಗೆ ಕಾಲಕಸವಾಗಿದೆ. ಸಮಗ್ರ ಕರ್ನಾಟಕದ ಬಗ್ಗೆ ನಿಮಗೆ ಸ್ವಲ್ಪವೂ ಚಿಂತನೆಯಿಲ್ಲ. ಇವತ್ತು ವೀರೇಂದ್ರ ಪಾಟೀಲರನ್ನು ಅಧಿಕಾರದಿಂದ ಇಳಿಸಿದಾಗಿನಿಂದಲೂ ಹಾಗೂ ಮೊಯಿಲಿಯವರನ್ನು ಅಧಿಕಾರದಿಂದ ಇಳಿಸಬೇಕೆಂದು ಯಾತ್ರೆ ಮಾಡಿರುವವರೆಗೆ ನೀವು ಲೆಕ್ಕ ಹಾಕಿ. ಅದೇ ಕಾವೇರಿಯ ಬಗ್ಗೆ ಈ ರೀತಿ ಟ್ರಕಲೋಡ್ ಶಾಸಕರು ವಿಶೇಷ ವಿಮಾನದಲ್ಲಿ ಹೋಗಿ ಪ್ರಧಾನಮಂತ್ರಿಗಳನ್ನು ಕಂಡು ಮಾತನಾಡಿದ್ದನ್ನು ನಾನು ಎಂದೂ ಕಾಣಲಿಲ್ಲ. ಒಂದು ಸಾರಿ ನಮ್ಮನ್ನು ಸರ್ಕಾರದವರು ಕಳುಹಿಸಿದ್ದರು. ಅದೇ ನೀವಾಗಗಿ ನೀವು ಎಂದಾದರೂ ಹೋಗಿದ್ದೀರಾ? ಮಂತ್ರಿ ಮಂಡಲವನ್ನು ಉರುಳಿಸುವುದಕ್ಕೆ ನೀವು ಹೋಗುತ್ತಾ ಇದ್ದೀರಿ. ರಾಜ್ಯದ ಅಭಿವೃದ್ಧಿಯ ಬಗ್ಗೆ ಎಂದಾದರೂ ಹೋರಾಡತಕ್ಕ ನಾಯಕತ್ವವನ್ನು ನೀವು ಹೊಂದಿದ್ದೀರಾ? ಖಂಡಿತಾ ನಿಮ್ಮಲ್ಲಿ ಅದು ಇಲ್ಲ. ನಿಮ್ಮ ಸ್ವಾರ್ಥಸಾಧನೆಗೆ ಇವತ್ತು ಮೂರು ಜನ ಮುಖ್ಯಮಂತ್ರಿಗಳನ್ನು ಪಡೆದಿದ್ದೀರಿ. ಕಾಂಗ್ರೆಸ್‌ನವರು ಸಂಪೂರ್ಣ ಸ್ವಾರ್ಥಿಗಳು ಎನ್ನತಕ್ಕ ಹಣೆಬರಹವನ್ನು ಹಚ್ಚಿಕೊಂಡಿದ್ದೀರಿ. ಅಧಿಕಾರ ಗದ್ದುಗೆಯನ್ನು ಹಿಡಿಯತಕ್ಕ ಒಂದೇ ಒಂದು ತತ್ವವನ್ನು ನೀವು ಅಳವಡಿಸಿಕೊಂಡಿದ್ದೀರಿ. ಈ ರಾಜ್ಯದ ಸಮಗ್ರ ಜನತೆಯ ಚಿಂತನೆಯ ಬಗ್ಗೆ ನಿಮ್ಮ ಆಲೋಚನೆ ಏನೂ ಕಾಣಲಿಲ್ಲ. ಶ್ರೀ ವೀರೇಂದ್ರ ಪಾಟೀಲರು ಪ್ರಾರಂಭದಲ್ಲಿ ಮಂತ್ರಿಮಂಡಲವನ್ನು ರಚನೆ ಮಾಡಿದರು.

ಆ ಪ್ರಾರಂಭದ ಮಂತ್ರಿಮಂಡಲ ಏನಿತ್ತು, ಅದನ್ನು ಸಮಗ್ರ ನಾಡಿನ ಜನತೆ ಸ್ವಾಗತ ಮಾಡಿದರು. ಮತ್ತು ಮಾನ್ಯ ವೀರಪ್ಪ ಮೊಯ್ಲಿಯವರು ಸ್ವಚ್ಛ ಆಡಳಿತವನ್ನು ಕೊಡುತ್ತಾರೆ ಎನ್ನತಕ್ಕಂಥ ನಂಬಿಕೆಯೂ ನಮಗೆ ಬಂದಿತ್ತು. ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾದ ತರುವಾಯ, ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳನ್ನೂ ತಮ್ಮ ಖಾಸಗಿ ಕಾರ್ಯಾಲಯ, ಕೃಷ್ಣಾದಲ್ಲಿ ಕರೆದು ನನ್ನ ಸರ್ಕಾರ ತೆರೆದ ಪುಸ್ತಕ, ನೀವು ಯಾವಾಗ ಬೇಕಾದರೂ ನನ್ನ ಸರ್ಕಾರದ ತೆರೆದ ಪುಸ್ತಕವನ್ನು ಬಂದು ನೋಡಬಹುದು. ಆ ಪುಸ್ತಕವನ್ನು ಸಚಿವ ಸಂಪುಟದ ಕೋಣೆಯ ಪಕ್ಕದಲ್ಲಿಯೇ ಇಟ್ಟಿರುತ್ತೇವೆಂಬ ಮಾತನ್ನು ಹೇಳಿದರು. ಮೂರನೇ ಮಹಡಿಯಲ್ಲಿ ಈ ಪುಸ್ತಕ ಎಲ್ಲಿದೆ ಎಂದು, ನಾವು ಇಲ್ಲಿಯವರೆಗೂ ಹುಡುಕುತ್ತಿದ್ದೇವೆ, ಅದೂ ಸಾವಿರ ಕ್ಯಾಂಡಲ್ ಬ್ಯಾಟರಿ ಹಾಕಿ ಹುಡುಕುತ್ತಿದ್ದೇವೆ ಮತ್ತು ದುರ್ಬೀನ್ ಹಾಕಿ ಹುಡುಕುತ್ತಿದ್ದೇವೆ; ಆದರೆ ಅದು ಎಲ್ಲಿಯೂ ಕಾಣುತ್ತಾ ಇಲ್ಲ. ಆ ತೆರೆದ ಪುಸ್ತಕ ಎಲ್ಲಿ ಹೋಯಿತು?

ಶ್ರೀ ಸಿ. ಭೈರೇಗೌಡ : ಅಷ್ಟೇ ಅಲ್ಲ, ಕೆಲವು ಇಲಾಖೆಗಳಿಗೆ, ಆರ್ಥಿಕ ಇಲಾಖೆಗೆ ಸಂಬಂಧಿಸಿದಂತೆ ಏನಾದರೂ ಸಮಾಚಾರ ಕೇಳಿ ಕಾಗದ ಬರೆದರೆ, ಉತ್ತರವೇ ಬರುವುದಿಲ್ಲ. ನಾವೇ ಖುದ್ದಾಗಿ ಕಚೇರಿಗೆ ಹೋಗಿ, ಇಂತಹ ವಿಷಯಗಳು ಬೇಕು, ಇಂತಹ ಸಮಾಚಾರಗಳು ಬೇಕೆಂದು ಕೇಳಿದರೆ, ಅದಕ್ಕೂ ಉತ್ತರ ಕೊಡುವುದಿಲ್ಲ. ಇನ್ನು ತೆರೆದ ಪುಸ್ತಕ ಎಲ್ಲಿ ಬಂತು, ಇದು ತೆರೆದ ಪುಸ್ತಕ ಅಲ್ಲ, ಶೀಲ್ ಮಾಡಿರತಕ್ಕ ಪುಸ್ತಕ.

ಶ್ರೀ ವಾಟಾಳ್ ನಾಗರಾಜ್: ನಾನು ಮೊದಲೇ ತಮಗೆ ಹೇಳಿದ ರೀತಿ, ಕರ್ನಾಟಕದಲ್ಲಿ ರಾಜಕೀಯ ಸ್ಥಿರತೆ, ರಾಜಕೀಯರ ನಾಯಕತ್ವ ಇವತ್ತು ಇಲ್ಲ. ಇವತ್ತು ಮುಖ್ಯಮಂತ್ರಿಗಳ ನೇಮಕ, ಮುಖ್ಯಮಂತ್ರಿಗಳ ಆಯ್ಕೆ, ಮುಖ್ಯಮಂತ್ರಿಯಾಗಿ ಬರತಕ್ಕವರು, 185 ಜನರ ಭಾರಿ ಪ್ರಮಾಣದ ಸದಸ್ಯರ ಬೆಂಬಲದಿಂದ ಆರಿಸಿ ಬರದೆ ಪ್ರಜಾಪ್ರಭುತ್ವದ ದೃಷ್ಟಿಯಿಂದ, ನಿಮಗೆ ಆರಿಸಿ ಬರಲು ಶಕ್ತಿ ಇದ್ದರೂ, ಕೇಂದ್ರದ ವರಿಷ್ಠರಿಂದ, ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳ ನೇಮಕದ ರೀತಿ ಮುಖ್ಯಮಂತ್ರಿಗಳ ನೇಮಕ ಆಗುತ್ತಾ ಇದೆ. ಆದ್ದರಿಂದ, ಈ ಮುಖ್ಯಮಂತ್ರಿಗಳ ಸ್ಥಾನ ಇದೆಯಲ್ಲ, ಕರ್ನಾಟಕದ ಮುಖ್ಯಮಂತ್ರಿಗಳ ಮೊದಲನೇ ಪೀಠ, ಇಲ್ಲಿ ಯಾರನ್ನು ಕೂರಿಸಬೇಕೆಂಬ ಸೂತ್ರ

ದೆಹಲಿಯಲ್ಲಿದೆ; ಸದ್ಯಕ್ಕೆ ಇಲ್ಲಿ ಇಲ್ಲ. ಅವರು ಯಾರನ್ನು ಬೇಕಾದರೂ ಕೂರಿಸಬಹುದು, ಯಾರನ್ನು ಬೇಕಾದರೂ ತೆಗೆಯಬಹುದು. ಅಂದಮೇಲೆ ದೆಹಲಿಯ ವರಿಷ್ಠರಿಗೆ, ಒಂದು ರೀತಿ ಗ್ರಾಮ್ಯ ಭಾಷೆಯಲ್ಲಿ ಹೇಳುವುದಾದರೆ, ಇವರು ತಮ್ಮ ಸರ್ವಸ್ವಾತಂತ್ರ್ಯವನ್ನು ಕಳೆದುಕೊಂಡು, ಸಂಪೂರ್ಣ ಸ್ವಾತಂತ್ರ್ಯವನ್ನು ಅಡವಿಟ್ಟು, ಗುಲಾಮಗಿರಿಯ ಸಂಕೇತವಾಗಿ ಇರಬೇಕಾದ ಪರಿಸ್ಥಿತಿ ಇವತ್ತು ಇದೆ. ರಾಜ್ಯದ 4 ಕೋಟಿ ಕನ್ನಡಿಗರನ್ನು ಪ್ರತಿನಿಧಿಸತಕ್ಕ ಮುಖ್ಯಮಂತ್ರಿಯವರ ಪರಿಸ್ಥಿತಿ, ಕೇಂದ್ರದ ವರಿಷ್ಠರಿಂದ, ಕೇಂದ್ರದ ಸೂತ್ರದ ಬೊಂಬೆಯಾಗಿ ಕೂರತಕ್ಕ ಪರಿಸ್ಥಿತಿಗೆ ಹೋಗಿದೆ. ಇದು ಎಲ್ಲಿಂದ ಬಂತು ಎಂಬುದನ್ನೂ ಸಹ ನಾನು ಹೇಳುತ್ತೇನೆ. ಸ್ವಲ್ಪ ಹೆಚ್ಚುಕಡಿಮೆ, ಮಾನ್ಯ ಗುಂಡೂರಾಯರ ಕಾಲದಿಂದ ಇದು ಶುರುವಾಯಿತು. ಇವತ್ತು, ಅಲ್ಲಿಂದ ಹಿಂದಕ್ಕೆ ರಾಜ್ಯದ ನಾಯಕತ್ವ ಭದ್ರವಾಗಿಯೇ ಇತ್ತು. ಇವತ್ತು ನಾವು ದಿವಂಗತ ದೇವರಾಜ ಅರಸರ ವಿಷಯವಾಗಿ ಮುಕ್ತ ಕಂಠದಿಂದ ಹೇಳಲೇಬೇಕು. ಅದರಲ್ಲೇನೂ ಎರಡನೇ ಅಭಿಪ್ರಾಯ ಇಲ್ಲ. ಅವರು ಕೇಂದ್ರಕ್ಕೆ ಷಡ್ ಹೊಡೆದು ನಿಂತರು, ನೀವಲ್ಲ, ನಾನು ಹೈಕಮಾಂಡ್ ಎಂದು ಹೇಳಿದರು. ಅದನ್ನು ಒಪ್ಪಬೇಕು, ಕನ್ನಡಿಗರು ಬೆನ್ನುತಟ್ಟಿಕೊಳ್ಳಬೇಕು. ಹೈಕಮಾಂಡ್ ನಾವು ಎಂದು ಮಾನ್ಯ ದೇವರಾಜ ಅರಸರು ಹೇಳಿದರು.

11.40 ಎ.ಎಂ.

ನಮ್ಮ ಪೂಜ್ಯರೂ, ಹಿರಿಯರು ಹಾಗೂ ಯಜಮಾನರಾದಂಥ ನಿಜಲಿಂಗಪ್ಪನವರನ್ನು ಒಪ್ಪಬೇಕು. ನಿಜಲಿಂಗಪ್ಪನವರ ಕಾಲದಲ್ಲಿ ಕರ್ನಾಟಕವೇ ದೆಹಲಿಯಾಗಿತ್ತು. ಕರ್ನಾಟಕವೇ ಹೈಕಮಾಂಡ್ ಆಗಿತ್ತು. ಎಲ್ಲಾ ಕೆಲಸ ಇಲ್ಲೇ ನಡೆಯುತ್ತಿತ್ತು. ಆದರೆ ಆ ಪರಿಸ್ಥಿತಿ ಇವತ್ತು ಇಲ್ಲ. ಇವತ್ತು ಮಹಾರಾಷ್ಟ್ರ, ಕೇರಳ, ಆಂಧ್ರ ಪ್ರದೇಶ ಹೈಕಮಾಂಡ್ ಆಗಿದೆ.

ಶ್ರೀ ಸಿ. ಭೈರೇಗೌಡ : ಕರ್ನಾಟಕದ ಹೈಕಮಾಂಡ್ ಎಂದರೆ ದೆಹಲಿ ಅಲ್ಲ. ಕೇರಳ ರಾಜ್ಯ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯ ಮಂತ್ರಿಗಳಾದವರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಈ ರೀತಿ ಕರ್ನಾಟಕ ರಾಜ್ಯದ ಆಡಳಿತವನ್ನು ಮೂಲೆಗೆ ಹಾಕಿ ಪ್ರತಿನಿತ್ಯ ದೆಹಲಿ, ಬಾಂಬೆ, ಕೇರಳ, ಆಂಧ್ರ ಈ ಕಡೆ ಓಡಾಡಿ ಕುಳಿತರೆ ಆಡಳಿತ ಶಿಥಿಲವಾಗುತ್ತದೆ. ಆಗ ಸಮಗ್ರ ಆಡಳಿತ ಅಧಿಕಾರಿಗಳ ಕೈಯಲ್ಲಿ ಹೋಗಿ ಅಧಿಕಾರಿಗಳ ದರ್ಬಾರಾಗುತ್ತದೆ ಮತ್ತು ಪ್ರಜಾಪ್ರಭುತ್ವಕ್ಕೆ ಕಳಂಕ ಬರುತ್ತದೆ. ಇಂತಹ ಪರಿಸ್ಥಿತಿ ವೀರೇಂದ್ರ ಪಾಟೀಲರ ಕೊನೆಯ ದಿನಗಳಿಂದ ಹಿಡಿದು ಇಲ್ಲಿನವರೆಗೆ ಬಂದೊದಗಿದೆ. ಅಧ್ಯಕ್ಷರೇ, ತಮಗೆ ಹೇಳುತ್ತೇನೆ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಮುಖ್ಯ ಕಾರ್ಯದರ್ಶಿಗಳು ಬೇರೆ, ಅವರ ಆಪ್ತ ಕಾರ್ಯದರ್ಶಿಗಳು ಬೇರೆ, ಅವರ ವ್ಯವಸ್ಥೆಯ ಕಾರ್ಯದರ್ಶಿಗಳು ಬೇರೆಯಾಗಿದ್ದರು. ಅವರು ಹೋದ ನಂತರ ಬಂಗಾರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ವೀರೇಂದ್ರ ಪಾಟೀಲರ ಕಾಲದಲ್ಲಿದ್ದ ಅಧಿಕಾರಿಗಳನ್ನು ಹೊರಗಡೆ ಹಾಕಿ ಅವರಿಗೇ ಬೇರೆ ಮುಖ್ಯ ಕಾರ್ಯದರ್ಶಿ. ಅವರದೇ ಆದಂಥ ಬೇರೆ ಆಪ್ತ ಕಾರ್ಯದರ್ಶಿ ಬಂದರು. ಈಗ ಇವರ ಅಧಿಕಾರಿಗಳೇ ಬೇರೆ, ಇವರ ವ್ಯವಸ್ಥೆಯೇ ಬೇರೆ. ಹೀಗಾದರೆ ಅಧಿಕಾರಿಗಳ ಹಣೆಬರಹ ಏನು? ಅಧಿಕಾರಿಗಳಿಗೆ ಯಾವ ಸ್ಥೈರ್ಯ ಇದೆ? ಇವತ್ತು ಬಂದ ಮುಖ್ಯ ಮಂತ್ರಿಗಳು ಹಿಂದೆ ಇದ್ದಂಥ ಮುಖ್ಯ ಕಾರ್ಯದರ್ಶಿಗಳನ್ನು ಹಾಗೂ ಬೇರೆ ಅಧಿಕಾರಿಗಳನ್ನು ಬೇರೆ ಕಡೆ ಹಾಕುತ್ತಾರೆ. ಇದರಿಂದಾಗಿ ಈ ತಕ್ಷಣಕ್ಕೆ 3 ವರ್ಗದ ಅಧಿಕಾರಿಗಳಿದ್ದ ಹಾಗೆ ಆಯಿತು. ವೀರೇಂದ್ರ ಪಾಟೀಲರ ಅಧಿಕಾರಿಗಳು, ಬಂಗಾರಪ್ಪನವರ ಅಧಿಕಾರಿಗಳು, ಮೊಯಿಲಿಯವರ ಕಾಲದ ಅಧಿಕಾರಿಗಳು. ಇನ್ನು ಯಾರ ಕೈಗೂ

ಸಿಗದೇ ಇರತಕ್ಕಂಥ ಅಧಿಕಾರಿಗಳು ಕುಟ್ಟುವುದಕ್ಕೆ ಕೆಲಸಕ್ಕೆ ಬಾರದೇ ಇರತಕ್ಕಂಥ ಇಲಾಖೆಗಳಲ್ಲಿ ಇದ್ದಾರೆ. ಅವರಿಗೆ ಯಾವ ಕಾರ್ಯವೂ ಇಲ್ಲ. ಬಹುಶಃ ಹರಿಶ್ಚಂದ್ರ ಘಾಟ್ಗೆ ಅಂತಹ ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದರೋ ಏನೋ ಗೊತ್ತಿಲ್ಲ. ಅಧಿಕಾರಿಗಳ ಪ್ರಶ್ನೆ ಈ ರೀತಿಯಾದರೆ ರಾಜ್ಯದ ಆಡಳಿತ ಪರಿಸ್ಥಿತಿ ಏನು? ತಾವು ಏನಾದರೂ ಕಾಂಗ್ರೆಸ್‌ನ ಈ 3 ವರ್ಷಗಳ ಆಡಳಿತದ ಅವಧಿಯಲ್ಲಿ ಇದರ ಬಗ್ಗೆ ಚಿಂತನೆ ಮಾಡಿದ್ದೀರಾ? ಈ ರಾಜ್ಯದ ಬೆಳವಣಿಗೆ ಬಗ್ಗೆ ಚಿಂತನೆ ಮಾಡಿದ್ದೀರಾ? ಖಂಡಿತಾ ಇಲ್ಲ. ನಿಮ್ಮದು ಅಧಿಕಾರದಲ್ಲಿ ಉಳಿಯತಕ್ಕಂಥ ಚಿಂತನೆ. ನಾನು ತಮಗೆ ನೇರವಾಗಿ ಹೇಳುತ್ತಿದ್ದೇನೆ. ವೀರಪ್ಪಮೊಯಿಲಿಯವರು ಹೋಗಬೇಕು. ವೀರಪ್ಪಮೊಯಿಲಿಯವರ ಸಚಿವ ಸಂಪುಟ ಹೋಗಬೇಕು, ಕಾಂಗ್ರೆಸ್ ಸರ್ಕಾರ ಹೋಗಬೇಕು. ಅದಕ್ಕಾಗಿ ಈ ಶಾಸನ ಸಭೆಯನ್ನು ರದ್ದು ಮಾಡಿ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ತಂದೇ ತರಬೇಕು. ರಾಷ್ಟ್ರಪತಿ ಆಳ್ವಿಕೆ ತರದಿದ್ದರೆಮ ಈ ರಾಜ್ಯ ಅನಾಯಕತ್ವಕ್ಕೆ ಹೋಗುತ್ತದೆ. ಇದು ಅನಾಯಕತ್ವದ ಪರಮ ಹಂತಕ್ಕೆ ಮುಟ್ಟುತ್ತದೆಂದು ಹೇಳುತ್ತೇನೆ. ಇದಾಗಲಿಲ್ಲವೆಂದರೆ ಈ ರಾಜ್ಯದಲ್ಲಿ ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತದೆ. ರಾಜ್ಯಪಾಲರು, ರಾಜಭವನ, ಅವರು ಇಷ್ಟ ಬಂದ ಹಾಗೆ ಮತ್ತು ಅವರಿಗೆ ಯಾವಾಗ ಕೇಂದ್ರದಿಂದ ಇಂಥಾ ಸರ್ಕಾರ ವಜಾ ಮಾಡಬೇಕು ಅದಕ್ಕಾಗಿ ಎಲ್ಲಾ ಕಡತಗಳನ್ನು ಕೇಂದ್ರಕ್ಕೆ ಕಳುಹಿಸಿ ಎಂದು ಸೂಚನೆ ಬರುತ್ತದೋ ಆಗ ಅದನ್ನು ಕಳುಹಿಸುವ ಗುಮಾಸ್ತರಾಗಿದ್ದಾರೆಯೇ ಹೊರತು ಪರಿಸ್ಥಿತಿಯ ಅರಿವನ್ನು ಅರ್ಥ ಮಾಡಿಕೊಂಡು ಅವರು ಕೆಲಸ ಮಾಡುತ್ತಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಬಗ್ಗೆ ಮಾತನಾಡುವಾಗ ಹೆಚ್ಚಿನ ಗೌರವ ಕೊಟ್ಟು ಮಾತನಾಡಬೇಕಾಗುತ್ತದೆ. ಇದನ್ನು ನಮ್ಮ ಮಿತ್ರರಾಗಿರತಕ್ಕಂಥ ನಾಗರಾಜ್‌ವರು ತಿಳಿದುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಗೌರವದಿಂದ ಏನು ಮಾತನಾಡಿದ್ದಾರೆ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಗುಮಾಸ್ಥರು ಎನ್ನುವ ಮಾತನಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವು ಅವರನ್ನು ಗುಮಾಸ್ಥರಿಗೆ ಎಳೆದಿದ್ದೀರೆಂದು ಹೇಳುತ್ತಿದ್ದಾರೆ ಅಷ್ಟೇ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಚಂದ್ರೇಗೌಡರು ಹೇಳಿದ್ದು ನಿಜ. ರಾಜ್ಯಪಾಲರ ಬಗ್ಗೆ ನನಗೆ ವೈಯುಕ್ತಿಕವಾಗಿ ಬಹಳ ಗೌರವ ಇದೆ. ನಾವು ಅಲ್ಲಿಗೆ ಹೋದಾಗಲೆಲ್ಲಾ ನನ್ನ ಸ್ನೇಹಿತರಿಗಿಂತ ನನ್ನ ಹತ್ತಿರವೇ ಹೆಚ್ಚು ಮಾತನಾಡುತ್ತಾರೆ. ಅವರ ಬಗ್ಗೆ ನನ್ನ ತಕರಾರು ಏನಿಲ್ಲ. ನಾನು ಮೊದಲಿನಿಂದಲೂ, ಈ ರಾಜಭವನ, ರಾಜ್ಯಪಾಲರ ವ್ಯವಸ್ಥೆ ಸರಿ ಇಲ್ಲವೆಂದು ಹೇಳಿಕೊಂಡು ಬಂದಿರತಕ್ಕವನು. ರಾಜ್ಯ ಸಚಿವ ಸಂಪುಟ ತಯಾರು ಮಾಡಿದ ಭಾಷಣವನ್ನು ಹೇಳಿಕೊಂಡು ಬಂದಿರತಕ್ಕವನು. ರಾಜ್ಯ ಸಚಿವ ಸಂಪುಟ ತಯಾರು ಮಾಡಿದ ಭಾಷಣವನ್ನು ಅವರ ಬಾಯಿಯಲ್ಲಿ ಪರಕಾಯ ಪ್ರವೇಶ ಮಾಡಿಸಿ ಓದಿಸುವುದು ಏನಿದೆ, ಇದು ಪ್ರಜಾಪ್ರಭುತ್ವಕ್ಕೆ ಅಗೌರವವಾದ ಪದ್ಧತಿ, ಇದು ಹೋಗಬೇಕೆಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ.

ಶ್ರೀ ಹಾರನಳ್ಳಿ ರಾಮಸ್ವಾಮಿ : ಬ್ರಿಟನ್ನಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆ ಇದೆ. ಆದರೂ ಅಲ್ಲಿ ಮಹಾರಾಣಿಯನ್ನು ಕರೆದು ಬಹಳ ಗೌರವದಿಂದ ಕಾಣುತ್ತಾರೆ. ಹಾಗೆ ಒಂದೊಂದು ದೇಶದಲ್ಲಿ ಒಂದೊಂದು ಸಂಪ್ರದಾಯವಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮ ದೇಶಕ್ಕೆ ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯ ತಂದುಕೊಟ್ಟದ್ದು ಆಗಿನ ಮಹಾರಾಣಿಯವರ ಕಿರೀಟಕ್ಕೆ ಮತ್ತು ಅವರ ಸಿಂಹಾಸನಕ್ಕೆ ಕೈ ಮುಗಿದುಕೊಂಡು ಕುಳಿತುಕೊಳ್ಳಬೇಕೆಂದು ಮಾಡಿದ್ದಲ್ಲ. ನಿಮ್ಮ ಮುಂದೆ

ನಾನು ಅತ್ಯಂತ ಸಣ್ಣ ಹುಡುಗ. ತಮಗೆ ನಾನು ಹೆಚ್ಚು ಹೇಳುವುದಕ್ಕೆ ತಯಾರಿಲ್ಲ. ತಾವೆಲ್ಲಾ ಸ್ವಾತಂತ್ರ್ಯಕ್ಕಾಗಿ ಸಾಕಷ್ಟು ದುಡಿದಿರತಕ್ಕಂಥವರು. ನಾನು ಆ ಮಾತನ್ನು ತಮ್ಮ ಮುಂದೆ ಹೇಳುವುದಕ್ಕಾಗುವುದಿಲ್ಲ. ಆಮೇಲೆ ಮಾನ್ಯ ಅಧ್ಯಕ್ಷರೇ, ಸಂವಿಧಾನದ 356ನೇ ವಿಧಿಯನ್ನು ಕೇಂದ್ರ ಸರ್ಕಾರವು ಉಪಯೋಗ ಮಾಡಿಕೊಂಡು ತಮಗೆ ಯಾರು ಬೇಡವೆಂದು ಕಾಣುತ್ತಾರೋ ಅವರಿಗೆ ಬಹುಮತವಿದ್ದರೂ ಯಾವಾಗ ಬೇಕಾದರೂ ಕಿತ್ತು ಎಸೆಯುವುದಕ್ಕೆ ರಾಜ್ಯಪಾಲರನ್ನು ಇಟ್ಟುಕೊಂಡಿದ್ದಾರೆ. ಅವರಿಂದ ವರದಿ ತರಿಸಿಕೊಳ್ಳುವುದಕ್ಕೆ ಅವರನ್ನು ಇಟ್ಟುಕೊಂಡಿದ್ದಾರೆ. ಅವರೂ ಒಬ್ಬರು ವರದಿಗಾರರು ಇದ್ದಂತೆ. ಈ ವ್ಯವಸ್ಥೆ ನಮ್ಮಲ್ಲಿ ನಡೆಯುತ್ತಿಲ್ಲವೇ? ಈ 3 ವರ್ಷಗಳ ಕಾಲ ರಾಜ್ಯದಲ್ಲಿ ಆಡಳಿತ ಸುಗಮವಾಗಿತ್ತೇ? ಈ ರಾಜ್ಯದಲ್ಲಿ ಜನರ ಬಗ್ಗೆ ನೀವು ಪರಿಣಾಮಕಾರಿಯಾದ ಯಾವುದಾದರೂ ಒಂದು ಕಾರ್ಯಕ್ರಮವನ್ನು ಮಾಡಿರುವ ಬಗ್ಗೆ ನೀವು ಹೇಳಿ? ಈ ವರ್ಷದಲ್ಲಿ ನೀವು ಜನರಿಗೆ ಯಾವ ರೀತಿ ಮಾಡಿದ್ದೀರೆಂದರೆ, ಇದನ್ನು ಗ್ರಾಮ್ಯ ಭಾಷೆಯಲ್ಲಿ ಹೇಳುವುದಾದರೆ, ನೀವು ಬೊಗಳೆ ಬಿಟ್ಟಿದ್ದೀರಿ, ಬುರುಡೆ ಹೊಡೆದಿದ್ದೀರಿ, ಸತ್ಯಕ್ಕೆ ದೂರವಾದಂಥ ಭರವಸೆಗಳನ್ನು ನೀಡಿದ್ದೀರಿ. ನಿಮ್ಮ ಭರವಸೆಗಳನ್ನು ನೂರು, ಇನ್ನೂರು ಪುಟಗಳ ಪುಸ್ತಕಗಳಲ್ಲಿ ಮುದ್ರಣಾ ಮಾಡಿದ್ದೀರಿ, ನೀವು ಯಾವುದನ್ನು ಈಡೇರಿಸಿದ್ದೀರಿ? ಒಂದು ಚೂರೂ ಇಲ್ಲ. ಅಂದರೆ ಯಾರು ಮುಖ್ಯ ಮಂತ್ರಿಯಾದರೆ ನಮಗೇನು? ನಿಮ್ಮ ಸರ್ಕಾರಕ್ಕೆ ನಾನು ನೇರವಾಗಿ ಹೇಳುತ್ತಿದ್ದೇನೆ, ನಿಮ್ಮ ಸರ್ಕಾರ ಹೋಗಬೇಕು. ಮತ್ತೆ ಚುನಾವಣೆ ಬರಲೇಬೇಕು. ಇನ್ನೊಬ್ಬ ಮುಖ್ಯಮಂತ್ರಿಯನ್ನು ನೀವು ಚುನಾಯಿಸಿ ಆ ದುರಂತವನ್ನು ನೋಡತಕ್ಕಂಥ ದೌರ್ಭಾಗ್ಯ ನಮಗೆ ಬರುವುದು ಬೇಡ. ನಾನು ನೇರವಾಗಿ ಹೇಳುತ್ತಿದ್ದೇನೆ ನಿಮ್ಮ ಸರ್ಕಾರ ಸಂಪೂರ್ಣವಾಗಿ ಹೋಗಬೇಕು. ಶ್ರೀ ವೀರೇಂದ್ರ ಪಾಟೀಲರು ಈ ರಾಜ್ಯದ ಒಬ್ಬ ಧೀಮಂತ ರಾಜಕಾರಣಿ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಅವರನ್ನು ಚಾಮರಾಜನಗರಕ್ಕೆ ತಾವು ಕರೆದುಕೊಂಡು ಹೋಗಿದ್ರಿ.

ಶ್ರೀ ವಾಟಾಳ್ ನಾಗರಾಜ್ : ನಾನು ಅವರನ್ನು ಸುಮ್ಮನೆ ಚಾಮರಾಜನಗರಕ್ಕೆ ಕರೆದುಕೊಂಡು ಹೋಗಿಲ್ಲ. 250 ಕಮಾನುಗಳನ್ನು ಹಾಕಿಸಿ, ಆಳೆತ್ತರದ ಮಾಲೆ ಹಾಕಿ ಮಡಿ ಪಂಚೆಗಳನ್ನು ಹಾಸಿ ಅದರ ಮೇಲೆ ಅವರನ್ನು ಕರೆದುಕೊಂಡು ಹೋಗಿದ್ದೇನೆ. ಆ ಗೌರವಕ್ಕೆ ವೀರೇಂದ್ರಪಾಟೀಲರು ಅರ್ಹರಾಗಿದ್ದಾರೆ. ಅದರ ಬಗ್ಗೆ ಯಾವುದೇ ತಕರಾರಿಲ್ಲ.

ಅಂಥ ಗೌರವ ಪಡೆಯಲು ಮಾನ್ಯ ವಿರೇಂದ್ರಪಾಟೀಲರಿಗೆ ಅರ್ಹತೆ ಇದೆ ಎನ್ನತಕ್ಕಂಥ ಮಾತಿನಲ್ಲಿ ಹಿಂದೆ ಮುಂದೆ ಯಾವುದೇ ತಕರಾರು ಇಲ್ಲ. ಆದ್ದರಿಂದ ಅದರ ಬಗ್ಗೆ ಮಾನ್ಯ ಶಿವಕುಮಾರ್‌ರವರು ಚಿಂತನೆ ಮಾಡಬೇಕಾಗಿಲ್ಲ ಎಂದು ಹೇಳ ಬಯಸುತ್ತೇನೆ. ಮಾನ್ಯ ವೀರೇಂದ್ರ ಪಾಟೀಲ್‌ರವರು ಇವೊತ್ತು ಅನಾರೋಗ್ಯದಿಂದ ಇದ್ದಾರೆ. ಅಂಥ ಪರಿಸ್ಥಿತಿಯು ಅವರಿಗೆ ಒದಗಬಾರದಾಗಿತ್ತು. ಅವರು ಯಾವುದೇ ಪಕ್ಷದಲ್ಲಿದ್ದರೂ ಕೂಡ ಅವರು ನಮ್ಮ ರಾಜ್ಯದ ಒಬ್ಬ ಹಿರಿಯ ಮುಖಂಡರು ಎಂಬ ಬಗ್ಗೆ ಯಾರದ್ದೂ ಭಿನ್ನಾಭಿಪ್ರಾಯವಿಲ್ಲ. ಅವರು ಪಾರ್ಶ್ವವಾಯು ಪೀಡಿತರಾಗಿದ್ದರೂ ಕೂಡ ತಾನು ಸದನದಲ್ಲಿ ಭಾಗವಹಿಸ ಬೇಕೆಂಬ ಒಂದು ಕಾತುರ, ಆತುರ, ಕಳಕಳಿ ಮುಂತಾದವನ್ನು ತುಂಬಾ ಇಟ್ಟುಕೊಂಡಿದ್ದಾರೆ. ಎಲ್ಲ ಸಂದರ್ಭದಲ್ಲಿಯೂ ಅವರು ಈ ಸದನಕ್ಕೆ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದಾರೆ. ಎಲ್ಲಾ ಸಂದರ್ಭದಲ್ಲಿಯೂ ಅವರು ಈ ಸದನಕ್ಕೆ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದಾರೆ ಹಾಗೂ ಮಾತನಾಡಿದ್ದಾರೆ. ಮೊನ್ನೆಯೂ ಕೂಡ ಇಲ್ಲಿಗೆ ಬಂದು ಮಾತನಾಡಿದ್ದಾರೆ. ಜೊತೆಗೆ ರಾಜ್ಯದ ರಾಜಕಾರಣದ ಬಗ್ಗೆ ತಮ್ಮ ಸ್ಪಷ್ಟ ನಿಲುವನ್ನು ಅನೇಕಭಾರಿ

ಕಳಕಳಿಯಿಂದ ನೀಡಿದ್ದಾರೆ. ಈ ಸದನದಲ್ಲಿ ಅವರು ಪ್ರಥಮ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ನಾನು ಇಲ್ಲಿ ಶಾಸಕನಾಗಿದ್ದೆ. ಹಿಂದೆ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗಲೂ ನಾನು ಶಾಸಕನಾಗಿದ್ದೆ. ಅವೊತ್ತಿನ ದಿನಗಳು ಒಂದು ರೀತಿಯಲ್ಲಿ ಸುವರ್ಣಯುಗದ ದಿನಗಳು. ಈ ಸಭೆಯ ಪೀಠಗಳು ಮಹಾ ಮಹಾನ್ ನಾಯಕರುಗಳು ಕುಳಿತಿದ್ದಂಥ ಪೀಠಗಳು. ಈ ಮಾತನ್ನು ಹೇಳುವ ಮೂಲಕ ಇಲ್ಲಿ ಎಂಥೆಂಥ ಮಹನೀಯರುಗಳು ಇದ್ದರು ಎಂಬ ಮಾತನ್ನು ಹೇಳುವಾಗ ಈ ಚರಿತ್ರೆಯನ್ನು ಓದದೇ ಇಲ್ಲಿನ ಚರಿತ್ರೆಯ ಬಗ್ಗೆ ತಿಳಿದು ಕೊಳ್ಳಲಾಗುವುದಿಲ್ಲ. ಇಂಥ ಮಹಾನ್ ಪೀಠದಲ್ಲಿ ಸಾಹುಕಾರ್ ಚೆನ್ನಯ್ಯನವರು ಕುಳಿತಿದ್ದರು. ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಇಲ್ಲಿ ಎಷ್ಟು ಆರೋಗ್ಯಕಾರಿಯಾದಂಥ ಮತ್ತು ಪರಿಣಾಮಕಾರಿಯಾದಂಥ ಚರ್ಚೆಗಳು ಇಲ್ಲಿ ನಡೆಯುತ್ತಿದ್ದುವು ಎಂದು ನಾವು ಜ್ಞಾಪಿಸಿಕೊಳ್ಳಬೇಕು. ದಿವಂಗತ ಶ್ರೀಮಾನ್ ಗೋಪಾಲಗೌಡರು ಕರ್ನಾಟಕ ಒಂದು ಧೀಮಂತ ಶಕ್ತಿ. ಮಧುಗಿರಿಯಲ್ಲಿ ನೇರವಾಗಿ ಪೋಲೀಸರಿಂದ ಅತ್ಯಾಚಾರ ಮತ್ತು ದಾಂಧಲೆ ನಡೆಯಿತು. ಈ ಸದನದಲ್ಲಿ ಆಗ ಗೋಪಾಲಗೌಡರು ಮಾತನಾಡಿದಾಗ ಆ ಕಡೆ ಗೃಹಮಂತ್ರಿಗಳಾಗಿದ್ದಂಥವರು ಶ್ರೀ ಎಂ.ವಿ. ರಾಮರಾಯರು. ಅವರೊಂದು ಅಪ್ಪಟ ಚಿನ್ನ. ನಡೆದಂಥ ಸಮಗ್ರ ಅನ್ಯಾಯಗಳ ಹೊಣೆ ಹೊತ್ತು ನೀವು ರಾಜಿನಾಮೆ ಕೊಡಬೇಕು, ಅಲ್ಲಿದ್ದ ಹೆಣ್ಣುಮಕ್ಕಳ ಮೇಲೆ ಆಗಿರತಕ್ಕಂಥ ಅತ್ಯಾಚಾರ ನಿಮ್ಮ ಮನೆಯ ಹೆಣ್ಣು ಮಕ್ಕಳ ಮೇಲೆ ನಡೆದಿದ್ದರೆ ಎನ್ನುವ ಮಾತನ್ನು ಹೇಳಿದ ತತ್ಕ್ಷಣ ಗೃಹಸಚಿವರು ಈ ಸದನದಲ್ಲಿ ರಾಜಿನಾಮೆಯನ್ನು ಪ್ರಕಟಿಸಿದಂಥ ಆದರ್ಶ ಮತ್ತು ನಿದರ್ಶನಗಳನ್ನು ನಾವು ಇಲ್ಲಿ ನೋಡಿದ್ದೇವೆ. ಆಗ ಹಿರಿಯರಾದಂಥ ಮಾನ್ಯ ರಂಗನಾಥ್‌ರವರು ಕೂಡ ಈ ಕಡೆಯಲ್ಲಿ ಕುಳಿತು ಮಾತನಾಡಿದ್ದಾರೆ. ಆ ಕಾಲದಲ್ಲಿ ಅವರ ಜೊತೆಯಲ್ಲಿ ವಿರೋಧ ಪಕ್ಷದಲ್ಲಿ ಇರತಕ್ಕಂಥ ಸೌಭಾಗ್ಯವು ನನಗಿತ್ತು. ಹಾಗೆಯೇ ಶ್ರೀಮಾನ್ ಎಸ್.ಎಂ. ಕೃಷ್ಣರವರು, ಶ್ರೀಮಾನ್ ಹುಚ್ಚಮಾಸ್ತಿಗೌಡರು, ಮುಂತಾಗಿ ಬಹಳಷ್ಟು ಮಹನೀಯರಗಳು ಇಲ್ಲಿ ಕುಳಿತಿದ್ದವರಗಿದ್ದಾರೆ. ಹಾಗೆಯೇ ಈ ಸದನಕ್ಕೆ ತನ್ನದೇ ಆದ ಒಂದು ಇತಿಹಾಸ ಇದೆ.

ಇನ್ನು ವಿಧಾನಸೌಧವನ್ನು ಕಟ್ಟಿಸಿದಂತಹ ಕೆಂಗಲ್ ಹನುಮಂತಯ್ಯನವರ ಆಡಳಿತ ಎಷ್ಟು ಆದರ್ಶವಾಗಿತ್ತು ಎಂದರೆ ಈ ವಿಧಾನಸೌಧ ಕಟ್ಟಿಸುವಾಗ ಭ್ರಷ್ಟಾಚಾರ ನಡೆದಿದೆ ಎಂದು ಹನುಮಂತಯ್ಯನವರ ಮೇಲೆ ಆರೋಪ ಬಂದಾಗ ಅವರು ಮೈಸೂರಿನ ಯಾರನ್ನಾದರೂ ತನಿಖೆಗೆ ಹಾಕಿದರೆ ನನ್ನ ಪ್ರಭಾವ ಅವರ ಮೇಲೆ ಬೀರಬಹುದೇನೋ ಎಂದು ಇದರಿಂದ ಸಾರ್ವಜನಿಕರಿಗೆ ನನ್ನ ಮೇಲೆ ತಪ್ಪು ಅಭಿಪ್ರಾಯ ಬರಬಹುದೇನೋ ಎಂದು ಹೊರಗಡೆಯವರನ್ನು ನೇಮಕ ಮಾಡಿದರು. ಹೊರಗಡೆ ಅಂದರೆ ಕರ್ನಾಟಕದವರಲ್ಲ, ಬೇರೆ ರಾಜ್ಯದವರನ್ನು ನೇಮಕ ಮಾಡಿದರು. ಇವತ್ತು ಸ್ವಾಮಿ, ಅಂತಹ ಆದರ್ಶ ಇಲ್ಲೇನಾದರೂ ಉಳಿದಿದೆಯೇ ಎಂದು ನೇರವಾಗಿ ನಿಮ್ಮನ್ನು ಕೇಳುತ್ತೇನೆ. ಪರಿಣಾಮಕಾರಿಯಾದ ಒಬ್ಬ ಪ್ರಮುಖ ಸದಸ್ಯರು ನಿಮ್ಮ ಆಡಳಿತದಲ್ಲಿ ಯಾರಿದ್ದಾರೆ? ಕೇವಲ ಮಧುಗಿರಿ ಪ್ರಕರಣದ ಬಗ್ಗೆ ಮಾತನಾಡಿದ ತಕ್ಷಣ ರಾಜೀನಾಮೆ ಕೊಟ್ಟ ನಿದರ್ಶಗಳನ್ನು ನೋಡಿದ್ದೇವೆ. ಹನುಮಂತಯ್ಯನವರು ತಮ್ಮ ಮೇಲೆ ಸ್ವತಃ ತನಿಖೆ ನೇಮಕ ಮಾಡಿಕೊಂಡಂತಹ ಚರಿತ್ರೆ ಕರ್ನಾಟಕದ ಪುಟದಲ್ಲಿದೆ. ಇವತ್ತು ನಾವು ಒಂದೇ ಸಮನೆ ನಿಮಗೆ ಹೇಳುತ್ತಿದ್ದೇವೆ. ನಿಮ್ಮ ಆಡಳಿತ ದಾರಿ ತಪ್ಪಿದೆ, ನಿಮ್ಮ ಆಡಳಿತದಲ್ಲಿ ಅನ್ಯಾಯ ನಡೆದಿದೆ ಎಂದು ಹೇಳಿದರೆ ನೀವು ರಾಜೀನಾಮೆ ಕೊಡುವಂತಹ ಮಾತಿಗೆ ಕಿವಿಯನ್ನು ಮುಚ್ಚಿಕೊಂಡಿದ್ದೀರಿ; ಕಣ್ಣನ್ನು ಮುಚ್ಚಿಕೊಂಡಿದ್ದೀರಿ. ಈ ರೀತಿ ಮುಂದುವರೆದರೆ ಇದು ನಿಜವಾಗಿಯೂ ಅತ್ಯಂತ ಘೋರ ಅಪರಾಧವಾಗುತ್ತೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಏನು ಕೇಳಿದರೂ ನಮ್ಮ ಮನೆಯ ಜಗಳ ಎಂದು ಹೇಳುತ್ತೀರಿ. ಯಾವುದು ಸ್ವಾಮಿ ನಿಮ್ಮ ಮನೆಯ ಜಗಳ? ಎಲ್ಲಿದೆ ನಿಮ್ಮ

ಮನೆ ಜಗಳ? ನೀವು ನಿಮ್ಮ ವ್ಯಾಜ್ಯವನ್ನು ಬೀದಿಗೆ ತಂದು ರಾಜ್ಯದ ಆಡಳಿತಕ್ಕೆ ತೀವ್ರವಾದ ಪರಿಣಾಮಕಾರಿಯಾದ ಕುತ್ತನ್ನು ತಂದಿದ್ದೀರಿ. ಆದ್ದರಿಂದ ನೇರವಾಗಿ ನಿಮ್ಮ ಸರ್ಕಾರ ರಾಜೀನಾಮೆ ಕೊಡಲೇಬೇಕೆಂಬ ಮಾತನ್ನು ನಾನು ಘಂಟಾಘೋಷವಾಗಿ ಹೇಳುತ್ತಿದ್ದೇನೆ.

ಶ್ರೀ ಆರ್.ಎನ್. ನಾಯಕ್ : ಹಿಂದೆ ನಡೆದ ರಾಜೀನಾಮೆಯ ಸಂದರ್ಭದ ಬಗ್ಗೆ ತಾವು ವಿವರಣೆ ಕೊಟ್ಟಿರಿ. ಆದರೆ ರಾಜೀನಾಮೆ ಕೇಳುವವರೂ ಅಷ್ಟೇ ಯೋಗ್ಯತಾವಂತರಾಗಿದ್ದರು. ಹಿಂದಲ್ಲ ರಾಜೀನಾಮೆ ಕೊಟ್ಟಾಗ ರಾಜೀನಾಮೆ ಕೇಳುವವರು ಇಲ್ಲಿ ಕೂತವರಿಗಿಂತ ಯೋಗ್ಯತಾವಂತರಾಗಿದ್ದರು. ಅದ್ದರಿಂದ ರಾಜೀನಾಮೆ ಬಂತು.

ಶ್ರೀ ವಾಟಾಳ್ ನಾಗರಾಜ್ : ಈಗ ನಾನಂತೂ ಯೋಗ್ಯ ಎಂದು ತಿಳಿದುಕೊಂಡಿದ್ದೇನೆ. ನಿಮ್ಮ ಅಯೋಗ್ಯತೆಗೆ ನಾನೇನೂ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನರಸಿಂಹರಾಯರಿಗೆ ಮೆಮೊರ್‍ಯಾಂಡಂ ಸಬ್ಮಿಟ್ ಮಾಡಿದ ಯಾರಿಗೂ ಆ ಯೋಗ್ಯತೆ ಇಲ್ಲವಾ?

ಶ್ರೀ ಆರ್.ಎನ್. ನಾಯಕ್ : ಬೇರೆಯವರ ಮನೆಯ ಕಿಟಕಿ ಪರದೆ ಸರಿಸಿ ನೋಡೋದು ನಿಮ್ಮ ಅಭ್ಯಾಸ, ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ? ನೀವು ನೋಡ್ತಾ ಇರಿ. ನೋಡಿ ಸ್ವಾಮಿ, ನಿಮಗೆ ಬೇರೆ ಕೆಲಸ ಇಲ್ಲ. ಮನುಷ್ಯನಿಗೆ ಬೇರೆ ಕೆಲಸ ಇಲ್ಲದಿದ್ದರೆ ಕೂಡಲೇ ಏನು ಮಾಡ್ತಾನೆ? ಬೇರೆಯವರ ಬಗ್ಗೆ ವಿಚಾರ ಮಾಡ್ತಾನೆ. ನೀವು ನೋಡಿ. ಆದರೆ ಕಿಟಕಿ ಹತ್ತಿರ ಬಂದು ಒಳಗೆಲ್ಲಾ ನೋಡಬೇಡಿ. ನಿಮಗಿರುವ ಕಿಟಕಿ ಇಣುಕುವ ಅಭ್ಯಾಸವನ್ನು ಸ್ವಲ್ಪ ಬಂದ್ ಮಾಡಿ.

ಶ್ರೀ ಸಿ.ಬೈರೇಗೌಡ : ಅಧ್ಯಕ್ಷರೇ, ನಾಯಕರು ಹೇಳಿದ ಹಾಗೆ ಕಿಟಕಿಯ ಪರದೆ ಸರಿಸಿ ಏನೂ ನೋಡಬೇಕಾಗಿಲ್ಲ. ಎಲ್ಲಾ ಬಟ್ಟಾಬಯಲು; ಎಲ್ಲಾ ಬಹಿರಂಗ. ಅದರಲ್ಲಿ ಕಿಟಕಿಯ ಪರದೆ ಸರಿಸಿ ನೋಡುವಂತಹ ಅವಶ್ಯಕತೆ ಏನಿದೆ? ಎಲ್ಲಾ ಬಹಿರಂಗವಾಗಿ ನಡೆಯುತ್ತಿರುವಾಗ ನಿಮ್ಮನ್ಯಾಕ್ರೀ ನೋಡೋಕೆ ಬರ್‍ತಾರೆ?

ಶ್ರೀ ಆರ್.ಎನ್. ನಾಯಕ್ : ತಿಳಿದುಕೊಳ್ಳಿ. ಮರ್‍ಯಾದಸ್ಥರಿದ್ದರೆ ಬಟ್ಟಾಬಯಲಾದರೆ ಕಣ್ಮುಚ್ಚಿಕೊಂಡು ಹೋಗ್ತಾರೆ. ನೀವು ಕಿಟಕಿಯಲ್ಲಿ ನೋಡುವವರು ಬಟ್ಟೆ ಅಡ್ಡ ಆದರೂ ನೋಡ್ತೀರಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕ್ರಿಯಾಲೋಪ ಎತ್ತುತ್ತೇನೆ ಸ್ವಾಮಿ. ಮಾನ್ಯ ಗೌರವಾನ್ವಿತ ಸದಸ್ಯರಾದ ನಾಯಕರು ಗಂಭೀರವಾದ ಅವಿಶ್ವಾಸ ನಿರ್ಣಯವನ್ನು ಚರ್ಚೆ ಮಾಡುವ ಕಾಲದಲ್ಲಿ ಈ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವುದಕ್ಕೆ ನಮಗೆ ಯೋಗ್ಯತೆ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಆರ್.ಎನ್. ನಾಯಕ್ : ಸ್ವಾಮಿ ತಾವು ಬಹಳ ಸೀನಿಯರ್ ಮೆಂಬರ್. ದಯವಿಟ್ಟು ಕುಳಿತುಕೊಳ್ಳಿ. ನಾನು ಹೇಳುತ್ತೇನೆ.

(ಶ್ರೀ ಶಿವಾನಂದ ಹೆಚ್. ಕೌಜಲಗಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ಈ ರೀತಿ ಮಧ್ಯೆ ಎದ್ದುನಿಂತು ಮಾತನಾಡುವುದು ಇದೆಯಲ್ಲಾ, ಈ ಪ್ರವೃತ್ತಿಯನ್ನು ನೀವು ಕಡಿಮೆ ಮಾಡದಿದ್ದರೆ ಶಾಸನಸಭೆ ನಡೆಸುವುದಕ್ಕೆ ಕಷ್ಟವಾಗುತ್ತದೆ. ನಾನು ಕೇಳುತ್ತೇನೆ, ಏನು ಶಬ್ದ ಕಡತಕ್ಕೆ ಹೋಗಿದೆಯೋ ಆ ಶಬ್ದದ ಬಳಕೆಯಿಂದಾಗಿ ಯಾರು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದಾರೋ

ಅವರಿಗೆ ಸರ್ಕಾರದ ರಾಜೀನಾಮೆಯನ್ನು ಕೇಳುವಂತಹ ಯೋಗ್ಯತೆ ಇಲ್ಲಾಂತ ಅನ್ನುವ ಅರ್ಥದಲ್ಲಿ ಅವರು ಮಾತನಾಡಿದ್ದಾರೆ. ಅದು ಕಡತದಲ್ಲಿ ಉಳಿದರೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಂಥವರೂ ಹಾಗೂ ಅದರ ಮೇಲೆ ಚರ್ಚೆ ಮಾಡುವಂಥವರೂ ಯೋಗ್ಯರಲ್ಲ ಎನ್ನುವ ಅಭಿಪ್ರಾಯ ಬರುತ್ತದೆ. ಇದು ಸರಿಯೇ? ತಮಗೇ ಬಿಡುತ್ತೇನೆ. ಹೀಗೆ ಮಾತನಾಡುವ ಪ್ರವೃತ್ತಿ ಇದೆಯಲ್ಲಾ, ಇದನ್ನು ಅವರು ಬಿಡಬೇಕು. ಇಲ್ಲದಿದ್ದರೆ ಯಾರು ಇದನ್ನು ಪ್ರಸ್ತಾಪ ಮಾಡಿದರೋ, ಅವರ ಯೋಗ್ಯತೆಯನ್ನು ನಾವು ಪ್ರಶ್ನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದು ಈ ಸದನದಲ್ಲಿ ಆಗಬಾರದು. ಆದ್ದರಿಂದ ದಯಮಾಡಿ ರೆಕಾರ್ಡ್ಸ್ ತರಿಸಿ ಅವರು ಅನ್ಕಂಡಿಷನಲ್ಲಾಗಿ ಅಪಾಲಜಿ ಕೇಳಬೇಕು. ಈ ರೀತಿ ಶಾಸನಸಭೆಯಲ್ಲಿ ಲಘುವಾಗಿ ಮಾತನಾಡುವಂತಹ ಪ್ರವೃತ್ತಿ ಇದೆಯಲ್ಲಾ, ಇದು ಸರಿಯಲ್ಲ.

(ಗೊಂದಲ)

SRI D.B. CHANDRE GOWDA : I am confining to the language used by the Hon.Member. If you feel that it is right, we will take our own decision; otherwise, it has to be expunged. ನಾವು ಅಯೋಗ್ಯರು ಅನಿಸಿಕೊಂಡು ಇಲ್ಲಿ ಕೂರೋದಿಕ್ಕೆ ಸಿದ್ಧವಿಲ್ಲ. It is the question of a privilege of Member of this House. ಆದ್ದರಿಂದ ಕಡತದಿಂದ ಅದನ್ನು ತೆಗೆಯಿರಿ.

ಛೇರ್ಮನ್ : ಕಡತವನ್ನು ತರಿಸಿಕೊಂಡು ನೋಡುತ್ತೇನೆ. ಕಡತ ನೋಡಿ ಅನ್‌ಪಾರ್ಲಿಮೆಂಟರಿ ಯಾವುದಾದರೂ ಇದ್ದರೆ ಅದನ್ನು ತೆಗೆಸಿಹಾಕುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಮ್ಮ ಯೋಗ್ಯತೆ ಕೇಳೋದಕ್ಕೆ ಇವರ್ಯಾರ್ರಿ? ಇವರ್ಯಾರು? ಅದು ಕಡದಲ್ಲಿರಬೇಕೇ? ಪಾರ್ಲಿಮೆಂಟರಿ ಅನ್‌ಪಾರ್ಲಿಮೆಂಟರಿ ಪ್ರಶ್ನೆ ಅಲ್ಲ. It is the question of a privilege of Members of this House. It cannot be lightly treated.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, ಮಾನ್ಯ ನಾಯಕರು ಮಾತನಾಡುವಾಗ ಬಹಳ ಗಂಭೀರವಾದ ಪ್ರಶ್ನೆ ಎತ್ತಿದ್ದಾರೆ. ಹಿಂದೆ ರಾಜೀನಾಮೆ ಕೇಳುವ ಯೋಗ್ಯತೆ ಇರುವವರು ಇದ್ದರು. ಈಗ ರಾಜೀನಾಮೆ ಕೇಳುವವರಲ್ಲಿ ಆ ಯೋಗ್ಯತೆ ಇಲ್ಲವೆನ್ನುವುದು ಅದರ ಸ್ಪಷ್ಟ ಅರ್ಥ.

ಶ್ರೀ ಆರ್.ಎನ್. ನಾಯಕ್ : ನಾನು ಹಾಗೆಲ್ಲಿ ಹೇಳಿದೆ? ಕಡತ ತರಿಸಿ ನೋಡೋಣ. ಯೋಗ್ಯತೆ ನಿಮಗಿಲ್ಲ ಎಂದು ನಾನು ಹೇಳಿದ್ದರೆ ನಾನು ಖಂಡಿತ ಅಪಾಲಜಿ ಕೇಳುತ್ತೇನೆ. ಅದನ್ನು ತೆಗೆಸಿ. ಸುಮ್ಮನೆ ಏಕೆ ಹೀಗೆ ಮಾಡ್ತೀರಿ?

(ಗೊಂದಲ)

SRI D.B. CHANDRE GOWDA :I am trying to throwsome light. If the Hon. Member wants to just generate hear and be done away with it - I don't question rather his intelligence. But I am trying to throw some light. If you want to take it, please take it.

ಛೇರ್ಮನ್ : ಕಡತ ತರಿಸುತ್ತಿದ್ದೇನೆ ಈಗ. ಆ ಕಡತ ತರಿಸಿ ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ತರಿಸಿ ಸ್ವಾಮಿ. ಇಲ್ಲದಿದ್ದರೆ ನಾವು ಅಲೋ ಮಾಡೋದಿಲ್ಲ. ಅವರು ಹೇಳಿದ್ದೇ ನಿಜವಾದರೆ ನಾವಿಲ್ಲಿ ಕೂತುಕೊಳ್ಳೋಕೆ

ಯೋಗ್ಯತೆಯಲ್ಲ. Let it be expunged; otherwise, we will go out. Unless that is done, we are not prepared to participate.

(ಗೊಂದಲ)

ಛೇರ್ಮನ್ : ಈಗ ರಿಪೋರ್ಟ್ ತರಿಸುತ್ತೇನೆ. ರಿಪೋರ್ಟ್ ಬಂದನಂತರ ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಲ್ಲಿಯವರೆಗೆ ಸದನವನ್ನು ಅಜರ್ನ್ ಮಾಡಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಯಾವುದೇ ಸದಸ್ಯರಿಗೆ ಅಗೌರವ ಬರತಕ್ಕಂಥ ರೀತಿಯಲ್ಲಿ ಮಾತನಾಡಿದ್ದಾರೆ.

ಶ್ರೀ ಸಿ. ಬೈರೇಗೌಡ : ನಮ್ಮ ಯೋಗ್ಯತೆಯನ್ನು ಪ್ರಶ್ನೆ ಮಾಡುತ್ತಿದ್ದಾರೆ.

ಛೇರ್ಮನ್ : ಅದರ ಸಲುವಾಗಿಯೇ ಕಡತ ತರಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ್ದು. I have reserved the ruling.

ಶ್ರೀ ಡಿ.ಬಿ. ಚಂದ್ರೇಗೌಡ : ಕಡತದಿಂದ ತೆಗೆಯುವುದಷ್ಟೇ ಕಾರ್ಯ ಇಲ್ಲಿ ಆಗುತ್ತಿದ್ದರೆ ಅದನ್ನು ಹೇಳುವುದು ತೆಗೆಯುವುದು ಇದು ಪದೇ ಪದೇ ಆಗುತ್ತದೆ. ಸಂಬಂಧಪಟ್ಟ ಸದಸ್ಯರಿಗೆ ತಾವು ಮಾರ್ಗದರ್ಶನ ಕೊಡಬೇಕು.

(ಗೊಂದಲ)

ಛೇರ್ಮನ್ : ವಾಟಾಳರೇ, ತಾವು ಪ್ರಾರಂಭ ಮಾಡಿ. ರೂಲಿಂಗ್‌ನ್ನು ನಾನು ರಿಸರ್ವ್ ಮಾಡಿದ್ದೇನೆ. ರಿಪೋರ್ಟನ್ನು ತರಿಸಿ ನೋಡುತ್ತೇನೆ. ನಂತರ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ತಾವು ರೂಲಿಂಗ್ ಕೊಡುವವರೆಗೂ ನಾವು ಹೊರಗಡೆ ಇರುತ್ತೇವೆ. ಆಮೇಲೆ ಬರುತ್ತೇವೆ. ಆಗಬಹುದಲ್ಲಾ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರು ಅದನ್ನು ನೋಡುತ್ತೇನೆ, ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆಂದರು. ಅವರು ತೀರ್ಮಾನ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೇನು? ಅಷ್ಟು ದೂರ ಹೋಗುವುದು ಸಾಧ್ಯವಾಗುವುದಿಲ್ಲ. ಮಾನ್ಯ ಅಧ್ಯಕ್ಷರು ಹೇಳಿದ್ದಾರೆ;

ಶ್ರೀ ಆರ್.ಎಲ್. ಜಾಲಪ್ಪ : ತಾವು ಹಿರಿಯರು, ಅವರು ಮಾತನಾಡಿದ್ದು ಸರಿ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೇವೆ. ತಾವು ಹೇಳಿ.

ಶ್ರೀ ಕೆ.ಹೆಚ್. ರಂಗನಾಥ್ : ಯಾವುದು ಕಡತಕ್ಕೆ ಹೋಗಬೇಕು, ಯಾವುದು ಹೋಗಬಾರದು ಹಾಗೂ ಈ ಸಭೆಯ ಘನತೆ ಗೌರವವನ್ನು ಉಳಿಸಿಕೊಳ್ಳುವುದಕ್ಕೆ ಏನು ಮಾಡಬೇಕು, ಎನ್ನತಕ್ಕಂಥದ್ದು ಅಧ್ಯಕ್ಷರಿಗೆ ಬಿಟ್ಟ ವಿಚಾರ. ಅವರು ಕಡತನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ ಎಂದು ಹೇಳುವಾಗ ನಾವು ಅಷ್ಟಕ್ಕೇ ಬಿಟ್ಟು ಕಲಾಪ ಮುಂದುವರಿಸುವುದು ಸೂಕ್ತ ಎಂದು ನನ್ನ ಒಂದು ವಿನಂತಿ ಅಷ್ಟೆ; ಮಾನ್ಯ ಸದಸ್ಯರು ಹೇಳಿದ್ದು ಸರಿ ಎಂದು ನಾನು ಹೇಳಲಿಲ್ಲ. ನಾನು ಸರಿ ಎಂದು ಹೇಳಿದೆನೇ? ನಾನು ಸರಿ ಎಂದು ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ನೋಡಿ, ಎಕ್ಸ್‌ಚೇಂಜ್ ಮಾಡುವುದರಿಂದ ಇದು ಮುಗಿಯುವುದಿಲ್ಲ. He must tender an unqualified apology to this House. ಹಾಗೆಂದರೆ ನಮಗೆ ಮಾತನಾಡುವುದಕ್ಕೆ ಏನೂ ಬರುವುದಿಲ್ಲ ಎಂದು ತಿಳಿದುಕೊಂಡಿದ್ದೀರಾ? ನಾವು ಈ ಮಟ್ಟಕ್ಕೆ ಇಳಿಯುವುದಿಲ್ಲ ಅಷ್ಟೆ; ಇಳಿದರೆ ನಿಮಗಿಂತ ನಾವು ಚೆನ್ನಾಗಿ ಮಾತನಾಡಬಲ್ಲೆವು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಹಿಂದಿನವರು ಸರ್ಕಾರದ ರಾಜೀನಾಮೆ ಕೇಳುವ ಯೋಗ್ಯತೆ ಉಳಿಸಿಕೊಂಡಿದ್ದರು. ಅಂದರೆ ನಮಗೆ ಇಲ್ಲ ಎಂದು ಅರ್ಥ.

ಶ್ರೀ ಕೆ.ಹೆಚ್. ರಂಗನಾಥ್ : ಅಧ್ಯಕ್ಷರು ಅದನ್ನೆಲ್ಲಾ ಗಮನಿಸಿದ್ದಾರೆ. ಪುನಃ ನಾವು ಅದರ ಮೇಲೆ ಒತ್ತಾಯ ಮಾಡುವುದು ಸರಿಯಾಗಲಾರದು.

ಒಬ್ಬ ಮಾನ್ಯ ಸದಸ್ಯರು : ತಾವು ಆಗ ಇರಲಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ಇದ್ದೆ ಸ್ವಾಮಿ. ಮಧುಗಿರಿ ಪ್ರಕರಣ ಆದಾಗಲೂ ನಾನು ಇದ್ದೆ. ಇದನ್ನು ಪ್ರಸ್ತಾಪ ಮಾಡಿದಾಗಲೂ ಇದ್ದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹಿರಿಯ ಸಚಿವರಾದಂಥ ಶ್ರೀಮಾನ್ ರಂಗನಾಥ್‌ರವರು ಏನು ಹೇಳಿದ್ದಾರೆ, ನಾನು ಆ ಮಾತನ್ನು ಸ್ವಾಗತಿಸುತ್ತೇನೆ. ಅವರು ಯಾವ ಭಾವನೆಯಿಂದ ಹೇಳುತ್ತಿದ್ದಾರೋ ನನಗೆ ಇನ್ನೂ ಅರ್ಥವಾಗುತ್ತಿಲ್ಲ. ಅದು ಇರಲಿ. ಆಮೇಲೆ ತಾವು ಅದರ ಬಗ್ಗೆ ತೀರ್ಪು ಕೊಡುತ್ತೇನೆ ಎಂದು ಹೇಳಿದ್ದೀರಿ, ಅದನ್ನು ತಮಗೆ ಬಿಟ್ಟಿದ್ದೇನೆ. ನಿನ್ನೆ ಇಲ್ಲಿ ಚರ್ಚೆ ನಡೆಯುವಾಗ ಇಲ್ಲಿ ಶ್ರೀಮಾನ್ ಹಿರಿಯ ಮುಖಂಡರು ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಶ್ರೀಮಾನ್ ರಾಮಕೃಷ್ಣಹೆಗಡೆಯವರು ಮಾತನಾಡುವಾಗ ವೀರೇಂದ್ರಪಾಟೀಲರು ನನಗೆ ದ್ರೋಹ ಮಾಡಿದರು ಎಂದು ಹೇಳಿದರು. ಅವರ ದೃಷ್ಟಿಯಲ್ಲಿ ವೀರೇಂದ್ರಪಾಟೀಲರು ದ್ರೋಹ ಮಾಡಿದ್ದಾರೆ ಎಂದು ಇರಬಹುದು. ನಾನು ಅದನ್ನು ಸರಿ, ಇಲ್ಲ ಎಂದು ಹೇಳತಕ್ಕಂಥ ಗೋಜಿಗೆ ಹೋಗುವುದಿಲ್ಲ. ಅದು ಸರಿಯೇ ಅಲ್ಲವೇ ಎನ್ನುವುದಕ್ಕೆ ಹೋಗುವುದಿಲ್ಲ. ವೀರೇಂದ್ರಪಾಟೀಲರ ಆಡಳಿತ ಮುಗಿದು ಎರಡೂ ಮುಕ್ಕಾಲು ವರ್ಷ ಆಯಿತು. ಈಗ ಅವರು ಈ ಸದನಕ್ಕೆ ಅನಾರೋಗ್ಯದಲ್ಲೇ ಬಂದು ಹೋಗುತ್ತಿದ್ದಾರೆ. ಯಾವುದೋ ಒಂದು ಸಂದರ್ಭವನ್ನು ತೆಗೆದುಕೊಂಡು ಅವರು ನಿನ್ನೆ ಮಾತನಾಡಿದಂತಹ ಧಾಟಿ ನೋಡಿ ನನಗೆ ಅತ್ಯಂತ ನೋವಾಗಿದೆ. ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಕುಲ್ದೀಪ್ ಸಿಂಗ್ ಆಯೋಗಕ್ಕೆ ಆಗಲಿ ದೂರವಾಣಿ ಕದ್ದಾಲಿಕೆ ವಿಚಾರದಲ್ಲಿ ಆಗಲಿ ಅವರು ಯಜ್ಞಪಶು. ಅದನ್ನು ನೇಮಕ ಮಾಡಿದಂತಹವರು ಶ್ರೀಮಾನ್ ವೀರೇಂದ್ರ ಪಾಟೀಲರಲ್ಲ ಅವರಿಗೂ ಅದಕ್ಕೂ ಸಂಬಂಧ ಇಲ್ಲ. ಅವರು ಮುಖ್ಯಮಂತ್ರಿಗಳು ಆಗಿದ್ದರು. ಅದರ ಬಗ್ಗೆ ಚರ್ಚೆ ಆಯಿತು. ಇವತ್ತಿಗೂ ಸಹ ಆ ಚರ್ಚೆಯ ಧಾಟಿ ನನಗೆ ಇನ್ನೂ ಜ್ಞಾಪಕ ಇದೆ. ಬಹಳ ಸೊಗಸಾಗಿ ಚೆನ್ನಾಗಿ ಅದನ್ನು ಆ ಧಾಟಿಯಲ್ಲಿ ಹೇಳಿದ್ದಾರೆ. ಅವತ್ತೇ ಶ್ರೀಮಾನ್ ರಾಮಕೃಷ್ಣ ಹೆಗಡೆ ಅವರು ಇಲ್ಲಿ ಇದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಇದ್ದರು. ನಾನು ಇದ್ದೆ ಎಂದು ಇಲ್ಲಿ ಹೇಳಿದ್ದಾರೆ. ನಾನು ಎರಡು ದಿನದಿಂದಲೂ ಮಾನ್ಯ ವೀರೇಂದ್ರ ಪಾಟೀಲರ

ಭಾಷಣವನ್ನು ಮೂಕ ಪ್ರೇಕ್ಷಕನಾಗಿ ಕುಳಿತು ಕೇಳಿದ್ದೇನೆ. ಈಗ ಮಾತನಾಡಬೇಕಾಗಿದೆ ಎಂದು ಅವರು ಹೇಳಿರತಕ್ಕದ್ದು ಈ ಕಡತದಲ್ಲಿದೆ. ಈ ಕಡತ ಸುಳ್ಳು ಎಂದು ನಾವು ಹೇಳುವುದಾದರೆ ಇಲ್ಲಿ ಇದ್ದಕ್ಕೆ ಏನು ಮಾಡಬೇಕು ಎಂದು ನನಗೆ ಅರ್ಥ ಆಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಬಾಬಾ ಗೌಡರೇ, ತಾವು ಸಹ ನೋಡಿದ್ದೀರಲ್ಲವೆ? ನಮ್ಮ ಸ್ನೇಹಿತರು ಈ ತರಹ ಇರಲಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಕೆ. ಶಿವಮೂರ್ತಿ : ವಾಟಾಳ್‌ಜೀ ಅವರೇ, ಹಾಗಾದರೆ ನಿನ್ನೆ ಸದನಕ್ಕೆ ಮಾನ್ಯ ರಾಮಕೃಷ್ಣ ಹೆಗಡೆಯವರು ಸುಳ್ಳು ಹೇಳಿದ್ದಾರೆ ಎಂದು ಅರ್ಥ ಅಲ್ಲ ತಾನೆ?

ಶ್ರೀ ವಾಟಾಳ್ ನಾಗರಾಜ್ : ನೀವು ಏನಾದರೂ ತಿಳಿದುಕೊಳ್ಳಿ. ಅದು ನಿಮಗೆ ಸೇರಿದ್ದು ನಾನು ಅಷ್ಟಕ್ಕೇ ನಿಲ್ಲಿಸುತ್ತೇನೆ. ಇಲ್ಲಿ ಏನಾಗಿ ಹೋಗಿದೆ ಎಂದರೆ ನನಗೆ ಅವರ ಬಗ್ಗೆ ಗೌರವ ಇದೆ. ಅವರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರೂ ಆಗಿದ್ದರು. ಈ ಸದನದಲ್ಲಿ ಅವರು ಮಂತ್ರಿಗಳಾಗಿದ್ದರು. ಹಣಕಾಸಿನ ಸಚಿವರು ಆಗಿದ್ದರು. ಆಗ ನಾನು ಇಲ್ಲಿ ಸದಸ್ಯನಾಗಿದ್ದೆ. ಮತ್ತು ಶಾಸಕರ ದಿನಾಚರಣೆಯಲ್ಲಿ ಅನೇಕ ಆಟ ಪಾಠಗಳಲ್ಲಿ ಅವರನ್ನು ನಾನು ಸೋಲಿಸಿದ್ದೇನೆ. ಮತ್ತು ನಾನೂ ಮಾನ್ಯ ರಾಮಕೃಷ್ಣ ಹೆಗಡೆಯವರೂ ಕುಸ್ತಿ ಮಾಡಿದ್ದೇವೆ. ಆ ಚಿತ್ರ ಇದೆ. ಬಹಳ ಜನ ನೋಡಿದ್ದಾರೆ. ಕುಸ್ತಿಗೆ ರೆಫರಿ ಎಂದು ಹೇಳುತ್ತಾರಲ್ಲಾ, ಆ ಕೆಲಸ ಮಾಡಲು ಮಾನ್ಯ ಹುಚ್ಚಮಾಸ್ತಿ ಗೌಡರು ಇದ್ದರು. ಇಬ್ಬರೂ ಸಮಾ ಸಮ ಆದರು ಎಂದು ಹೇಳಿ ಅವರು ತೀರ್ಪು ಕೊಟ್ಟರು. ಏಕೆಂದರೆ ಒಬ್ಬರು ಮತ್ತೊಬ್ಬರನ್ನು ಎತ್ತಿ ಹಿಡಿಯಬಾರದಲ್ಲಾ ಎಂದು ಹಾಗೆ ತೀರ್ಪು ಕೊಟ್ಟರು. ನನಗೆ ಹೆಗಡೆ ಅವರ ಬಗ್ಗೆ ಅಗೌರವ ಇಲ್ಲ, ನಾನು ಆ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಹೆಗಡೆಯವರೂ ವೀರೇಂದ್ರ ಪಾಟೀಲರೂ ಬಹಳ ಅತ್ಯಂತ ಆತ್ಮೀಯ ಸ್ನೇಹಿತರು. ಹೆಗಡೆಯವರ ಮಗಳ ಮದುವೆಗೆ ಕಾಂಗ್ರೆಸ್‌ನವರು ಯಾರೂ ಹೋಗಬಾರದು ಎನ್ನುವ ಮಟ್ಟಕ್ಕೆ ಒಂದು ಸಲ ತೀರ್ಮಾನ ತೆಗೆದುಕೊಂಡಾಗ, ವೀರೇಂದ್ರ ಪಾಟೀಲರು ನಿಮಗೂ ಅದಕ್ಕೂ ಸಂಬಂಧ ಇಲ್ಲ; ನಾನು ಹೋಗೇ ಹೋಗುತ್ತೇನೆ ಎಂದು ಹೇಳಿ ಅವರು ಕೇಂದ್ರ ಸಚಿವರಾಗಿ ಇಲ್ಲಿಗೆ ಬಂದಿದ್ದನ್ನು ನಾನು ಇನ್ನೂ ಜ್ಞಾಪಿಸಿಕೊಳ್ಳುತ್ತಿದ್ದೇನೆ. ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆ ಎಂದರೆ ಎರಡೂ ಮುಕ್ಕಾಲು ವರ್ಷ ಕಳೆದು ಅದರ ಕಥೆ ಮುಗಿದು ಆ ಕುಲದೀಪ್‌ಸಿಂಗ್ ವರದಿ, ಆ ಕದ್ದಾಲಿಕೆ ಈ ವರದಿಗಳೆಲ್ಲಾ ಎಲ್ಲೋ ಬಿದ್ದುಹೋಗಿದೆ. ಈ ಸರ್ಕಾರಕ್ಕೇ ಗೊತ್ತಿಲ್ಲ; ಅದು ಎಲ್ಲಿದೆ ಎಂದು. ಬಂಗಾರಪ್ಪನವರ ಸರ್ಕಾರಕ್ಕೆ ಎಲ್ಲಿದೆ ಎಂದು ಗೊತ್ತಿಲ್ಲ. ಆ ವರದಿಗಳನ್ನು ಎಲ್ಲಿ ಇಟ್ಟಿದ್ದೀರೆಂಬುದು ನಮಗೆ ಗೊತ್ತಿಲ್ಲ. ಈ ಪತ್ರಾಗಾರ ಎಂದು ಹೇಳುತ್ತಾರೆಲ್ಲಾ, ಅಲ್ಲಿ ಇಟ್ಟಿದ್ದೀರಾ ಅಥವಾ ಎಲ್ಲಿ ಇಟ್ಟಿದ್ದೀರಿ ಅಥವಾ ಕಾರ್ಪೋರೇಷನ್‌ನ ಕಸದ ತೊಟ್ಟಿಯಲ್ಲಿ ಹೋಗಿದೆಯೋ? ಅದೆಲ್ಲಾ ಗೊತ್ತಿಲ್ಲ ಬಿಡಿ. ಅದರ ಬಗ್ಗೆ ಚಿಂತನೆ ಮಾಡುವುದಕ್ಕೆ ಹೋದರೆ ಅದು ಒಂದು ರೀತಿ ನಮಗೆ ಏನಾದರೂ ತಲೆಗಿಲೆ ಕೆಟ್ಟಿದೆಯೋ ಎಂದು ಯಾರಾದರೂ ಏನಾದರೂ ಅಂದುಗಿಂದಾರೋ ಎಂದು ನಾನು ಸುಮ್ಮನೆ ಇದ್ದೇನೆ. ಆ ವರದಿಗಳನ್ನು ಎಲ್ಲಿ ಹುಡುಕೋಣ. ಆ ಪ್ರಶ್ನೆ ಬೇರೆ. ರಾಮಕೃಷ್ಣ ಹೆಗಡೆಯವರು ಕತ್ತೆಗೆ ಐದು ಕಾಲು ಇದೆ ಎಂದು ಐದು ಕಾಲು ಇದ್ದೇ ಇದೆ ಇದ್ದೇ ಇದೆ ಎಂದು ಹೇಳುವ ನಮ್ಮ ಸ್ನೇಹಿತರು ಇದ್ದಾರೆ. ಅದೇ ರೀತಿ ಬಂಗಾರಪ್ಪನವರು ಒಂದು ಕತ್ತೆಗೆ ಮೂರು ಕಾಲು ಎಂದು ಮೂರು ಕಾಲು, ಮೂರು ಕಾಲು ಎಂದು ಹೇಳುವವರೂ ಇದ್ದಾರೆ. ಇದು

ಏನಾಗಿದೆ ಎಂದರೆ ನಮ್ಮ ಹಣೆಬರಹ. ನಿಜವಾಗಿ ಅದಕ್ಕೆ ನಾಲ್ಕು ಕಾಲು ಎಂದು ನಾವೇನಾದರೂ ಹೇಳಿದರೆ ಇವರು ಯಾರೂ ಒಪ್ಪಿಕೊಳ್ಳುವುದಿಲ್ಲ. ನಮ್ಮ ನಾಯಕ ಅಂತಹವರು ನಿಂತುಕೊಂಡು ನೀವೆಲ್ಲಾ ಅದಕ್ಕೆ ಸಮಾನರಲ್ಲ, ನೀವು ಸರಿಯಿಲ್ಲ, ನೀವು ಸರಿಸಮಾನರಲ್ಲ. ನಿಮಗೆ ಯೋಗ್ಯತೆ ಇಲ್ಲ ಎಂದು ಈ ತರಹ ಪದವನ್ನು ಅವರು ಉಪಯೋಗಿಸುತ್ತಾರೆ. ನಮ್ಮ ಹಣೇ ಬರಹ, ನಾವೇನು ಮಾಡೋಣ? ಇಂದು ನಾವು ಬಹಳ ಕಷ್ಟದಲ್ಲಿ ಸಿಕ್ಕಿದ್ದೇವೆ.

12.10 ಪಿ.ಎಂ.

ಕತ್ತೆಗೆ. ಐದು ಕಾಲುಗಳಿವೆ ಎನ್ನುವವರು ಇಲ್ಲಿದ್ದಾರೆ. ಆ ಕಡೆ ಇರುವವರು ಮೂರು ಕಾಲು ಇವೆ ಎನ್ನುವವರಿದ್ದಾರೆ. ಹೀಗಾದರೆ ನನ್ನ ಹಾಗೂ ನನ್ನ ಸದಸ್ಯ ಸ್ನೇಹಿತರಾದ ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್‌ವರ ಹಣೆಬರಹವೇನು? ನಾವು ಸ್ಪಷ್ಟವಾಗಿ ಕತ್ತೆಗೆ ನಾಲ್ಕು ಕಾಲುಗಳೆಂದು ಹೇಳುತ್ತೇವೆ. ಅವರು ಅದರ ಬಾಲವನ್ನು ಸೇರಿಸಿಕೊಂಡು ಐದು ಕಾಲುಗಳಿವೆಯೆಂದು ಹೇಳುತ್ತಾರೆ. ಅಲ್ಲದೆ, ಬಾಲ, ಒಂದು ಕಾಲನ್ನು ತೆಗೆದು ಬರೀ ಮೂರು ಕಾಲುಗಳಿವೆಯೆಂದು ಬಂಗಾರಪ್ಪನವರ ಕಡೆಯವರು ಹೇಳುತ್ತಾರೆ. ಇದು ಬಹಳ ವಿಪರ್ಯಾಸದ ಸಂಗತಿಯಾಗಿದೆ.

ಶ್ರೀ ಬಿ.ಎಚ್. ಬನ್ನಿಕೋಡ್ : ವಾಟಾಳ್ ನಾಗರಾಜ್‌ರವರೇ, ತಾವು ಹೇಳಿದ 'ಕತ್ತೆ' ಯಾವುದೆಂದು ಹೇಳಿಲ್ಲ. ಆದಕಾರಣ, ಅದನ್ನೂ ಸ್ವಲ್ಪ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರವನ್ನು ನಾನು ಅಷ್ಟಕ್ಕೇ ಬಿಡುತ್ತೇನೆ. ಏಕೆಂದರೆ, ನನಗೆ ತೀರಾ ಆತ್ಮೀಯ ಸ್ನೇಹಿತರಾದಂಥ ಶ್ರೀಮಾನ್ ಸಿಂಧ್ಯರವರು ಯಾವತ್ತೂ ನಗುನಗುತ್ತಲೇ ಇರುವವರು ಇವೊತ್ತು ಸ್ವಲ್ಪ ಕೋಪದಲ್ಲಿರುವಂತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ಮಾತನಾಡಿದ ತಕ್ಷಣ ಇವರು ಮುನಿಸಿಕೊಳ್ಳುವುದು ಬೇಡ. ನಮ್ಮಿಬ್ಬರ ಸ್ನೇಹ ಹೀಗೆ ಇರಲಿ, ಅದು ಸುದೀರ್ಘವಾದ ಸ್ನೇಹ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ನಮ್ಮ ಸ್ನೇಹವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲವೆನ್ನುವ ವಿಶ್ವಾಸ ನಮಗಿದೆ. ಆದರೆ, ಇವೊತ್ತು ನಾನು ಹೇಳುತ್ತಿದ್ದೇನೆ; ಈಗ ಉಪ ಮುಖ್ಯಮಂತ್ರಿಗಳಾಗಿರತಕ್ಕಂಥ ಮಾನ್ಯ ಕೃಷ್ಣರವರು ಆಗ ಪ್ರಿಸೈಡ್ ಮಾಡತಕ್ಕಂಥ ಸಂದರ್ಭ, ಹಾಗೂ ಈ ಸದನದಲ್ಲಿ ಟೆಲಿಫೋನ್ ಕದ್ದಾಲಿಕೆ ಪ್ರಕರಣದ ಬಗ್ಗೆ ಚರ್ಚೆಯ ಮೇಲೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಮಾತನಾಡುತ್ತಿರತಕ್ಕಂಥ ಸಂದರ್ಭದಲ್ಲಿ, ಗುಲ್ಬರ್ಗಾದಲ್ಲಿ ನಡೆಯುತ್ತಿದ್ದಂಥ ದೇವರ ಬಗ್ಗೆ ಮತ್ತು ಈರುಳ್ಳಿ ತಿನ್ನಿಸುವ ವಿಚಾರದ ಬಗ್ಗೆ ಹೇಳುವಂಥ ಸಂದರ್ಭದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಸದನದಲ್ಲಿರಲಿಲ್ಲವೆನ್ನುವುದನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಸಭಾಧ್ಯಕ್ಷರೇ, ವಿರೋಧ ಪಕ್ಷದ ಉಪ ನಾಯಕರಾದ ಸನ್ಮಾನ್ಯ ಶ್ರೀ ಸಿಂಧ್ಯರವರು ಒಂದು ಮಾತನ್ನು ಹೇಳಿದರು. ನನಗೆ ನೆನಪಿರುವ ಪ್ರಕಾರ 'ಉಳ್ಳಾಗಡ್ಡಿ' ವಿಚಾರ ಬಂದಿದ್ದು, ಸನ್ಮಾನ್ಯ ವೀರೇಂದ್ರ ಪಾಟೀಲ್‌ರ ಟೆಲಿಫೋನ್ ಕದ್ದಾಲಿಕೆ ಪ್ರಕರಣಕ್ಕೆ ಉತ್ತರ ಕೊಡುತ್ತಿರುವ ಸಂದರ್ಭದಲ್ಲಿ. ಆ ಸಂದರ್ಭದಲ್ಲಿ ರಾಮಕೃಷ್ಣ ಹೆಗಡೆಯವರು ಸದನದಲ್ಲಿರದಿದ್ದರೆ ಅದು ವೀರೇಂದ್ರ ಪಾಟೀಲರ ತಪ್ಪೇನೂ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಆ ವಿಷಯಕ್ಕೆ ಹೋಗುವುದಿಲ್ಲ. ನಾನು ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ಬಹಳ ಗೌರವಿಟ್ಟುಕೊಂಡಿರುವವನು. ಆ ವಿಚಾರದಲ್ಲಿ ಎರಡು ಮಾತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಲ್ಲಿನ ಪ್ರಶ್ನೆಯೇನೆಂದರೆ, ಅನೇಕ ವಿಚಾರಗಳನ್ನು ನಾವು ಈ ಸದನದಲ್ಲಿ ಹೇಳುವುದಕ್ಕಾಗುವುದಿಲ್ಲ. ಹೇಳುವ ವಿಚಾರ ಬಹಳ ಇರುತ್ತದೆ. ಇವರೆಲ್ಲಾ ಸದನದ ಹೊರಗಡೆ ಬಂದು ಏನೇನು ಮಾತನಾಡುತ್ತಾರೆಂದು ಎಲ್ಲವನ್ನೂ ಇಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ಆದುದರಿಂದ, ಒಬ್ಬ ಮನುಷ್ಯನಿಗೆ ಒಂದೇ ವ್ಯಕ್ತಿತ್ವ ಇರಬೇಕು. ಎರಡು ವ್ಯಕ್ತಿತ್ವ ಇರಬಾರದು. 'ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವ, ಶ್ರದ್ಧೆ ಇದೆ, ರಾಮಕೃಷ್ಣ ಹೆಗಡೆಯವರು ಸುಳ್ಳು ಹೇಳುತ್ತಿದ್ದಾರೆ' ಇದೆಲ್ಲಾ ಏನು? ಇದು ಸರಿಯಲ್ಲ. ನಮ್ಮ ವ್ಯಕ್ತಿತ್ವದ ಬಗ್ಗೆ it does not reflect well; ರಾಮಕೃಷ್ಣ ಹೆಗಡೆಯವರಿಗೆ ಬಯ್ದು ತಕ್ಷಣ ನಮಗೇನೋ ಸಿಟ್ಟು ಬರುತ್ತದೆಂದು ತಿಳಿದು ಕೊಳ್ಳುತ್ತಾರೆ. ಆದರೆ, ನಾನೇನೂ ರಾಮಕೃಷ್ಣ ಹೆಗಡೆಯವರ ಭಟ್ಟಂಗಿ ಅಲ್ಲ. ವಸ್ತುಸ್ಥಿತಿ ಸರಿಯಾಗಿರಬೇಕೆಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇವೊತ್ತು ಟೀಕೆ ಮಾಡುವುದಕ್ಕೆ ಆಡಳಿತ ಪಕ್ಷದವರಿಗೆ ನೈತಿಕ ಹಕ್ಕು ಏನಿದೆ? ಮೊನ್ನೆ ದಿವಸದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಮೀಟಿಂಗ್‌ನಲ್ಲಿ ನಡೆದಿರುವ ವಿಚಾರ ಇಡೀ ಪ್ರಪಂಚಕ್ಕೆ ಗೊತ್ತಾಗಿದೆ. ನಾವೂ ತಪ್ಪುಗಳನ್ನು ಮಾಡಿದ್ದೇವೆ. ಅದನ್ನು ಟೀಕಿಸುವ ನೈತಿಕ ಹಕ್ಕು ನಿಮಗಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಮಾನ್ಯ ಅಧ್ಯಕ್ಷರೆ, ಸಿಎಲ್‌ಪಿ ವಿಚಾರವಾಗಿ ವಿರೋಧ ಪಕ್ಷದ ಉಪ ನಾಯಕರು ಪದೇ ಪದೇ ಮಾತನಾಡುತ್ತಿದ್ದಾರೆ. ನಮಗೆ ಮಾತನಾಡುವುದಕ್ಕೆ ನೀವು ಅವಕಾಶ ಕೊಟ್ಟಿಲ್ಲ. ಅವಕಾಶ ಕೊಟ್ಟರೆ ನಾವೂ ಸಹ ಮಾತನಾಡುತ್ತೇವೆ.

ಶ್ರೀ ಎಸ್. ರಮೇಶ್ : ಸಿಎಲ್‌ಪಿ ವಿಚಾರವಾಗಿ ಏಕೆ ಮಾತನಾಡುತ್ತೀರಾ? ಸರ್ಕಾರದ ವಿರುದ್ಧ ತಂದಿರುವ ಅವಿಶ್ವಾಸ ಗೊತ್ತುವಳಿ ಮೇಲೆ ಮಾತನಾಡಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಏನು ಬೇಕಾದರೂ ಮಾಡಿಕೊಳ್ಳಿ; ನಮಗೇನೂ ಸಂಬಂಧಪಡುವುದಿಲ್ಲ.

(ಗೊಂದಲ)

ಶ್ರೀ ಎಸ್. ರಮೇಶ್ : ನಮ್ಮ ಮನೆಯ ವಿಷಯವನ್ನು ನಾವು ಮಾತನಾಡಿಕೊಳ್ಳುತ್ತೇವೆ. ಆದರೆ ಇವರಿಗೇನಾಗಬೇಕು? ಮಾತೆತ್ತಿದರೆ ಸಿ.ಎಲ್.ಪಿ. ಯ ಬಗ್ಗೆ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ : ಮಾನ್ಯ ವಾಟಾಳ್‌ನಾಗರಾಜ್‌ರವರು ಸರಿಯಾಗಿ ಮಾತನಾಡುತ್ತಿದ್ದಾರೆ. ಅವರು ಮಾತನಾಡುವಾಗ ನಾವ್ಯಾರೂ ಸಹ ಯಾವುದೇ ಕಾರಣದಿಂದ ಅಡ್ಡಬರುವುದಿಲ್ಲ. ಆದರೆ ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯರವರು ನಾವು ಇಲ್ಲಿದ್ದಾಗ ಒಂದು ರೀತಿ ಹೊರಗಡೆ ಹೋದಾಗ ಮತ್ತೊಂದು ರೀತಿಯಲ್ಲಿ ಮಾತನಾಡುತ್ತೇವೆಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮಗೆ ಮಾನ್ಯ ಹೆಗಡೆಯವರ ಮೇಲೆ ಅಪಾರವಾದ ಗೌರವಿದೆ ಎಂದು ಹೇಳಿದ್ದೇನೆ. ಮಾನ್ಯ ವೀರೇಂದ್ರ ಪಾಟೀಲರು, ಹೆಗಡೆಯವರು ಬಹಳ ಹೊಂದಾಣಿಕೆಯಿಂದ ಈ ರಾಜ್ಯದಲ್ಲಿ ವ್ಯಕ್ತಿತ್ವವನ್ನು ಹೊಂದಿದ್ದರು. ಅದರಲ್ಲಿ ನನ್ನದು ಬೇರೆ ಅಭಿಪ್ರಾಯವಿಲ್ಲ. ಇದರ ಬಗ್ಗೆ ನಾನು ಎರಡು ಮಾತನಾಡುವುದಿಲ್ಲ. ಇದರಲ್ಲಿ ದ್ವಂದ್ವವನ್ನು ತಂದು, ರಾಜಕೀಯ ಲಾಭವನ್ನು

ಮಾಡಿಕೊಳ್ಳಬೇಕೆಂಬ ಉದ್ದೇಶ ನನ್ನದಲ್ಲ. ನನಗೆ ಅಂಥ ಭಾವನೆ ಇಲ್ಲ. ಬಹಳ ದಿನಗಳ ಹಿಂದಿನ ವಿಚಾರ ಇಲ್ಲಿ ಏಕೆ ಚರ್ಚೆ ಮಾಡಬೇಕು ಎಂಬುದೇ ನನ್ನ ಪ್ರಶ್ನೆ. ಅದನ್ನು ಬಿಟ್ಟರೆ ಮತ್ತೆ ಯಾವ ಅಭಿಪ್ರಾಯವೂ ಸಹ ನನಗಿಲ್ಲ. ವೀರಪ್ಪಮೊಯ್ಲಿಯವರು ಆಡಳಿತದ ಬಗ್ಗೆ, ಗಾದೆ ಮಾತಿನಲ್ಲಿ ಹೇಳುವುದಾದರೆ: ರಾಯರ ಕುದುರೆ ಕತ್ತೆಯಾಯಿತಂತೆ! ಪಟ್ಟದ ಕುದುರೆಯು ಬಹಳ ಜೋರಾಗಿ ರಾಯರ ಸವಾರಿಗೆ ಹೊರಟು ಬರಬರುತ್ತಾ ಕತ್ತೆಯಾಯಿತು. ಅಂದರೆ ವೀರಪ್ಪಮೊಯ್ಲಿಯವರು ಪ್ರಾರಂಭದಲ್ಲಿ ಯಾವ ಒಂದು ಹೊಸ ದಿಕ್ಕಿನಲ್ಲಿ ಆಡಳಿತವನ್ನು ನಡೆಸಬೇಕೆಂದು ಹೊರಟರೋ, ನಾನು ಅಧಿಕಾರಕ್ಕೆ ಬಂದರೆ ದೊಡ್ಡ ಶಸ್ತ್ರಚಿಕಿತ್ಸೆಯನ್ನೇ ಮಾಡುತ್ತೇನೆಂದು ಊರೆಲ್ಲಾ ಹೇಳಿದರು, ಆದರೆ ಅವರು ಅಧಿಕಾರಕ್ಕೆ ಬಂದ ಮೇಲೆ ಆಡಳಿತದ ಹೊಟ್ಟೆಯನ್ನು ಕತ್ತರಿಸಿ ಶಸ್ತ್ರ ಚಿಕಿತ್ಸೆಯನ್ನು ಮಾಡಲು ಹೋಗಿ ಹೊಟ್ಟೆಯ ಒಳಗಡೆ ಕತ್ತರಿಯನ್ನು ಇಟ್ಟು ಮೇಲುಗಡೆ ಹೊಲಿಗೆಯನ್ನು ಹಾಕಿದ್ದಾರೆ. ಇದು ಶಸ್ತ್ರಚಿಕಿತ್ಸೆಯೇ? ಖಂಡಿತಾ ಇದು ಶಸ್ತ್ರ ಚಿಕಿತ್ಸೆಯಲ್ಲ; ಮೊದಲು ಮಂತ್ರಿಮಂಡಲವನ್ನು ರಚನೆ ಮಾಡಿದಾಗ ಏನು ಗೌರವ, ಗಾಂಭೀರ್ಯವಿತ್ತೋ ಅದೆಲ್ಲವೂ ಸಂಪೂರ್ಣವಾಗಿ ಎರಡನೇ ಸಲ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿದ ನಂತರ ಬಿದ್ದುಹೋಯಿತು. ಮೊದಲು ಎಷ್ಟು ಎತ್ತರಕ್ಕೆ ಹೋಗಿದ್ದರೋ ಅನಂತರ ಅಷ್ಟೇ ಕೆಳಕ್ಕೆ ಜಾರಿಬಿದ್ದಿದ್ದಾರೆ. ಅವರು 40 ಜನ ಮಂತ್ರಿಗಳನ್ನು ಮಾಡಿದ್ದಾರೆ. ವಿಧಾನಸೌಧವನ್ನು ಕಟ್ಟಿದಂಥ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಮಂತ್ರಿಗಳ ಸಂಖ್ಯೆಯ ಬಗ್ಗೆ ಮತ್ತು ಆಡಳಿತ ಸುಧಾರಣೆಯ ಬಗ್ಗೆ, ಒಂದು ಸಮಿತಿ ಮಾಡಿದ್ದರು. ಅದು ಎಷ್ಟು ಶಾಸಕರಿಗೆ ಎಷ್ಟು ಜನ ಮಂತ್ರಿಗಳು ಇರಬೇಕು ಎನ್ನುವ ಬಗ್ಗೆ ಹೇಳಿದೆ. ಇವರು ಆ ಆದರ್ಶಗಳನ್ನು, ಆ ವರದಿಯನ್ನು ಮೂಲೆಗುಂಪು ಮಾಡಿ ತಮಗೆ ಕೈ ಜೋಡಿಸುವಂಥ, ತಮ್ಮ ಮಂತ್ರಿಮಂಡಲ ಉಳಿದುಕೊಳ್ಳಲು ಬೇಕಾದಂಥ ಸಂಖ್ಯೆಯಲ್ಲಿ ಮಂತ್ರಿಗಳನ್ನು ನೇಮಕ ಮಾಡಿಕೊಂಡು, ವೀರಪ್ಪ ಮೊಯ್ಲಿಯವರು ಅಪಹಾಸ್ಯಕ್ಕೆ ಈಡಾದರು. ನಿಜವಾಗಲೂ ವೀರಪ್ಪಮೊಯ್ಲಿರವರು ಆ ಮಂತ್ರಿಗಳ ಹಿನ್ನೆಲೆ ಏನು, ಅವರ ವಿಚಾರ ಏನು, ಅವರ ಚರಿತ್ರೆ ಏನು ಎಂಬ ಬಗ್ಗೆ ಯಾವುದನ್ನೂ ಸಮಗ್ರವಾಗಿ ಪರಿಶೀಲನೆ ಮಾಡದೆ, ದಾರಿತಪ್ಪಿದ ಆಡಳಿತಕ್ಕೆ ಎಡೆಮಾಡಿಕೊಟ್ಟಿದ್ದಾರೆ. ಆದ್ದರಿಂದ ತಾವು ಮುಖ್ಯಮಂತ್ರಿಯಾಗಿದ್ದುಕೊಂಡು ನಿಮ್ಮ ಪಕ್ಷದ ರಕ್ಷಣೆಯನ್ನು ಮಾಡಿ, ಈ ರಾಜ್ಯಕ್ಕೆ ಅಪವಾದವನ್ನು ತರತಕ್ಕ ಗೋಜಿಗೆ ಹೋಗದೆ ಕೂಡಲೇ ರಾಜೀನಾಮೆಯನ್ನು ಕೊಡುವುದು ಕ್ಷೇಮವೆಂದು ಸ್ಪಷ್ಟವಾಗಿ ಮತ್ತು ನೇರವಾಗಿ ಹೇಳುತ್ತಿದ್ದೇನೆ. ಈ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳ ಮೇಲೆ ವೈಯಕ್ತಿಕವಾದಂಥ ಭ್ರಷ್ಟಾಚಾರದ ಆಪಾದನೆಯನ್ನು ಮಾಡಲು ನಾನು ತಯಾರಾಗಿಲ್ಲ.

ಮಾನ್ಯ ವೀರಪ್ಪ ಮೊಯಿಲಿಯವರ ಆಡಳಿತ ಭ್ರಷ್ಟಾಚಾರದ ಮೇಲೆ ಮಾಡಬೇಕಾದಂತಹ ತೀಕ್ಷ್ಣವಾದಂತಹ ಟೀಕೆಗಿಂತ ಸಂಪೂರ್ಣವಾಗಿ ಆಡಳಿತ ಕುಸಿದು ಬಿದ್ದಿದೆ. ಒಂದು ಕಡೆ ಭ್ರಷ್ಟಾಚಾರದ ಹಣೆ ಪಟ್ಟಿಯನ್ನು ಕಟ್ಟುವುದಕ್ಕೆ ನಾವು ತಯಾರಿಲ್ಲ. ಆದರೆ ಅವರ ಆಡಳಿತ ಯಂತ್ರದ ಮೇಲೆ ನಂಬಿಕೆ ಇಲ್ಲ. ಅವರಿಗೆ ಯಾರ ಮೇಲೆ ನಂಬಿಕೆ ಇದೆ ಅಂದರೆ ಅವರೊಬ್ಬರ ಮೇಲೆ ನಂಬಿಕೆ ಇದೆಯೇ ಹೊರತು,ಇನ್ನೊಬ್ಬರ ಮೇಲೆ ನಂಬಿಕೆ ಇಟ್ಟವರಲ್ಲ. ಈ ಮಾತನ್ನೇ ಅವರ ಹಿರಿಯ ನಾಯಕರಾದಂತಹ ವೀರೇಂದ್ರ ಪಾಟೀಲರೇ ಎಲ್ಲರನ್ನೂ ನಂಬಿಕೊಂಡು ನೀವು ಹೋಗಬೇಕೆಂದು ಹೇಳಿದರು. ನಂಬಿಕೊಳ್ಳುವುದೂ ಬಿಡುವುದೂ ಅವರಿಗೆ ಸೇರಿದ್ದು. ಅವರ ಪತ್ರಗಳು ಆದೇಶಗಳೇನು ಎಂದರೆ ನಾವು ಯಾವುದೇ ಪತ್ರ ಕೊಟ್ಟರೂ ಕೂಡ ಕ್ರಮ ಕೈಗೊಳ್ಳಿ, ಕ್ರಮ ಕೈಗೊಳ್ಳಿ ಎಂದು ಇರುತ್ತದೆ. ಅವರು ಬಹಳ ಬುದ್ಧಿವಂತರು, ಕ್ರಮ ಕೈಗೊಳ್ಳಿ ಅಂದರೆ ಏನು? ಏನಾದರೂ ಆಗಬಹುದು. ನೇಣು ಗಂಬಕ್ಕೆ ಏರಿಸುವುದಿದ್ದರೆ ಏರಿಸಬಹುದು. ಮಾನ್ಯ ಮುಖ್ಯ ಮಂತ್ರಿಗಳೇ ನನಗೆ ಅನ್ಯಾಯವಾಗಿದೆ

ನೇಣುಗಂಬಕ್ಕೇರಿಸುತ್ತಿದ್ದಾರೆ, ಆ ನೇಣು ಕುಣಿಕೆಯಿಂದ ಬಿಡಿಸಿ ಎಂದು ಮುಖ್ಯ ಮಂತ್ರಿಗಳಿಗೆ ಮನವಿ ಕೊಟ್ಟರೆ, ಕ್ರಮ ಕೈಗೊಳ್ಳಿ ಎಂದು ಹೇಳುತ್ತಾರೆ. ಅಂದರೆ ನೇಣುಗಂಬಕ್ಕೇರಿಸಿ ಎಂದು ಅರ್ಥವೇ? ಅವರ ಯಾವುದೇ ಪತ್ರ ನೋಡಿ ಕ್ರಮ ಕೈಗೊಳ್ಳಿ ಮುಂದುವರಿಸಿ ಎಂದು ಈ ಕ್ರಮ ಕೈಗೊಳ್ಳತಕ್ಕಂತಹವನಿಗೆ ಈ ಪದ. ನೋಡಿ ನಡುಕ ಹುಟ್ಟುತ್ತದೆ. ಅವನೇನು ಕ್ರಮ ಕೈಗೊಳ್ಳಬೇಕು? ಯಾವುದೇ ಅರ್ಜಿಯನ್ನು ಮುಖ್ಯ ಮಂತ್ರಿಗಳಿಗೆ ಕೊಟ್ಟರೆ ಅವರು ಬರೆಯುವುದು ಕ್ರಮ ಕೈಗೊಳ್ಳಿ ಎಂದು. ಈ ರೀತಿಯಾದರೆ ಇದು ಬಹಳ ಕಷ್ಟ. 3 ತರಹ ಶಾಯಿ ಇದೆ. ಪಾಪ, ಅವರು ಒಂದೇ ಶಾಯಿ ಇಟ್ಟುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ : 3 ತರಹ ಅಂದರೆ ಏನು ಅದು? ನನಗೆ ಖಂಡಿತ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ಗೊತ್ತಿರುತ್ತದೆ, ನೀವು ಚಾಣಕ್ಯರಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಗೊತ್ತಾಗಬಾರದೆಂದು ಈ 3 ಬಣ್ಣ ಯಾರ್‍ಯಾರಿಗೆ ಯಾವ ಬಣ್ಣದಲ್ಲಿ ಆಜ್ಞೆ ಹೊರಡಿಸಬೇಕೆಂದು ಅವರಿಗೆ ಗೊತ್ತಿದ್ದರೆ ಸಾಕು.

ಶ್ರೀ ವಾಟಾಳ್ ನಾಗರಾಜ್ : ಗ್ಯಾಲರಿಯಲ್ಲಿ ಕುಳಿತಿರುವವರಿಗೆ ಕ್ರಮ ಕೈಗೊಳ್ಳಿ ಎಂದು ಪತ್ರ ಬರೆದರೆ ಅವರ ಕೈಗೆ ಹೋಗುತ್ತದೆ. ಕ್ರಮ ಕೈಗೊಳ್ಳಬೇಕೆಂದು ಎಂದರೆ ಅವರೇನು ಕ್ರಮ ಕೈಗೊಳ್ಳಬೇಕು. ಅವರು ತಬ್ಬಿಬ್ಬಾಗುತ್ತಾರೆ. ಏನು ಕ್ರಮ ಕೈಗೊಳ್ಳುವುದೆಂದು. ಅವರು ಕಾನೂನು ಕ್ರಮ ಕೈಗೊಳ್ಳುತ್ತಾರಾ....

ಶ್ರೀ ಎಂ.ವಿ. ವೆಂಕಟಪ್ಪ : ಕಾನೂನು ಪ್ರಕಾರ ಕ್ರಮಕೈಗೊಳ್ಳಿ ಎಂದು....

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ ಅಂದರೆ ನೇಣುಗಂಬಕ್ಕೇರಿಸುತ್ತೇವೆಂದು ಹೇಳುತ್ತಾರೆ.

ಶ್ರೀ ಎಂ.ವಿ. ವೆಂಕಟಪ್ಪ : ಐ.ಎ.ಎಸ್. ಅಧಿಕಾರಿಗಳಿಗೆ ಕಾನೂನೇನೆಂದು ಗೊತ್ತಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಐ.ಎ.ಎಸ್. ಅಧಿಕಾರಿಗಳ ಕೈಲಿ ನಿಮ್ಮ ಆಡಳಿತ ಕೊಟ್ಟು ಬಿಟ್ಟರೆ ನಮಗೆ ಪ್ರಜಾಪ್ರಭುತ್ವವೇಕೆ ಬೇಕು ಇಲ್ಲಿ? ಮಾನ್ಯ ಮುಖ್ಯಮಂತ್ರಿಯಾಗಲೀ, ಮಂತ್ರಿಯಾಗಲೀ ನೇರವಾಗಿ ಸ್ಪಷ್ಟವಾಗಿ ಈ ರೀತಿ ಈ ರೀತಿ ಎಂದು ಆದೇಶವನ್ನು ಬರೆಯಬೇಕು. ಆಗುವುದಿಲ್ಲವೆಂದರೆ ಖಂಡಿತವಾಗ ಆಗುವುದಿಲ್ಲವೆಂದು ಬರೆಯಬೇಕು. ನಾನು ಬಂದಾಗ ಕ್ರಮ ಕೈಗೊಳ್ಳಿ ಎಂದು ಬರೆದರೆ, ಈ ಪತ್ರ ಹಿಡಿದುಕೊಂಡು ಹೋದರೆ ಕ್ರಮ ಕೈಗೊಳ್ಳಿ ಎಂದು ಬರೆದಿದ್ದಾರೆಂದು ನಮಗೆ ಅನುಕೂಲವಾಯಿತೆಂದು ನಾನು ತಿಳಿದುಕೊಳ್ಳುವುದು. ಆದರೆ ಅಧಿಕಾರಿ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ, ನೀವು ಮುಂದಿನ ತಿಂಗಳು ಬನ್ನಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತಾರೆ. ಇವರ 3ನೇ ಮಹಡಿಯಿಂದ ಇಡೀ ರಾಜ್ಯದ ಮೂಲೆ ಮೂಲೆಗೆ ಇಂತಹ ಪತ್ರಗಳು ಹೋಗುತ್ತಿದ್ದಾವೆ. ಎಲ್ಲಿ ಕ್ರಮ ಕೈಗೊಳ್ಳುವುದು? ಇದು ಸರಿಯಾದ ರೀತಿಯಲ್ಲ, ನೇರವಾಗಿ ಆಡಳಿತದ ಅಂಕಿತವನ್ನು ಹಾಕಿ ಸರಿಯಾಗಿ ಆದೇಶ ನೀಡಿದರೂ ಕೂಡ ಇಲ್ಲ. ಆಡಳಿತ ಯಂತ್ರ ನೇರವಾಗಿ ಕುಸಿದು ಬಿದ್ದಿದೆ. ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳಿಗೆ ನಮ್ಮ ಈ ಒಂದು ವಾದ ವಿವಾದ ಚರ್ಚೆ ಈ ಒಂದು ಅವಿಶ್ವಾಸ ನಿರ್ಣಯ ಮತ್ತು ಮಂತ್ರಿಮಂಡಲದ ಬದಲಾವಣೆ ಅವರಿಗೆ ಒಂದು ರೀತಿಯ ರಸಕವಳ, ಸುಗ್ಗಿಯಾಗಿದೆ.

ಶ್ರೀ ಸಿ. ಬೈರೇಗೌಡ : ನನ್ನ ಕ್ಷೇತ್ರದಲ್ಲಿನ ಖಾಸಗಿ ಪಾಠ ಶಾಲೆಯನ್ನು ಸರಕಾರ ವಶಕ್ಕೆ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಯವರು ಕಡತ ತರಿಸಿ ಸ್ಪಷ್ಟವಾದ ಆಜ್ಞೆ ಮಾಡಿದ್ದಾರೆ. ಅದನ್ನು ಕಾರ್ಯದರ್ಶಿಗಳಾಗಿರತಕ್ಕಂತಹವರು ಐ.ಎ.ಎಸ್.ನವರು ಅದನ್ನು ಪುನಃ ಇಲಾಖೆಗೆ ಕಳುಹಿಸುತ್ತಾರೆ. ಇದರ ಮೇಲೆ ಒಕ್ಕಣೆ ಬರೆಯತಕ್ಕಂತಹವರು ಒಬ್ಬ ಜೂನಿಯರ್ ಅಸಿಸ್ಟೆಂಟ್.

ಅವರು ಮುಖ್ಯಮಂತ್ರಿಗಳ ಆಜ್ಞೆಯ ಮೇಲೆ ಪುನಃ ಡಿಪಾರ್ಟ್‌ಮೆಂಟ್‌ಗೆ ನೋಟ್ ಹಾಕತಕ್ಕದ್ದು, ಹಾಗಿದ್ದ ಮೇಲೆ ಮುಖ್ಯಮಂತ್ರಿಗಳು ಏಕೆ ಇರಬೇಕು ಇಲ್ಲಿ ಜೂನಿಯರ್ ಅಸಿಸ್ಟೆಂಟ್‌ಗಳನ್ನೇ ಸೂಪರ್ ಚೀಫ್ ಮಿನಿಸ್ಟರ್ ಮಾಡಿ ಬಿಡೋಣ. ರಾಜ್ಯದಲ್ಲಿ ಮುಖ್ಯಮಂತ್ರಿಗಳು ಏಕೆ ಬೇಕು. ಈ ಐ.ಎ.ಎಸ್.ಗಳ ಕೆಳಗಡೆ ಇರುವಂತಹ ಜೂನಿಯರ್ ಅಸಿಸ್ಟೆಂಟ್‌ಗಳನ್ನು ಕರೆದುಕೊಂಡು ಬಂದು ಸೂಪರ್ ಚೀಫ್ ಮಿನಿಸ್ಟರ್ ಮಾಡಿಬಿಡೋಣ. ಇದರಲ್ಲಿ ನಾವು 224 ಜನರು ಏಕೆ ಇರಬೇಕು, ಅಲ್ಲಿ 40+1 ಇದೆಲ್ಲಾ ಏಕೆ ಇರಬೇಕು? ಇದು ಐ.ಎ.ಎಸ್.ಗಳು ಮತ್ತು ಜೂನಿಯರ್ ಅಸಿಸ್ಟೆಂಟ್‌ಗಳ ಸರ್ಕಾರವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಅಧಿಕಾರಿಗಳಿಗೆ ಪ್ರಜಾ ಪ್ರತಿನಿಧಿಗಳ ಬಗ್ಗೆ ಗೌರವವಿಲ್ಲ, ಇವರ ದೃಷ್ಟಿಯಲ್ಲಿ ಪ್ರಜಾಪ್ರತಿನಿಧಿಗಳು ಕೆಲಸಕ್ಕೆ ಬಾರದಂತಹ ವ್ಯಕ್ತಿಗಳು ಎನ್ನುವ ರೀತಿಯಲ್ಲಿ ವರ್ತನೆ ಮಾಡುತ್ತಿದ್ದಾರೆ. ಇದರಲ್ಲಿ ಮುಖ್ಯಮಂತ್ರಿಗಳನ್ನು ಹೌದು, ಮಂತ್ರಿಗಳನ್ನು ಹೌದು, ಇಲ್ಲಿ ಎಷ್ಟೋ ಜನ ಮಂತ್ರಿಗಳ ಹೆಸರನ್ನು ಹೇಳುವುದು. ಇವರು ದೂರವಾಣಿಯಲ್ಲಿ ಕೆಲವು ಐ.ಎ.ಎಸ್. ಅಧಿಕಾರಿಗಳಿಗೆ ಇವರು ಸ್ವಾಮಿ ದಯಮಾಡಿ ಮಾಡಿ ಎಂದು ಹೇಳುತ್ತಾರೆ. ಹೀಗೆ ಹೇಳುವುದು ಅವರ ಕೆಳಗೆ ಇರುವಂತಹ ಇಲಾಖೆಯ ಅಧಿಕಾರಿಗಳಿಗೆ. ಇದನ್ನು ತಾವು ನೋಡಬೇಕು. ಆ ಒಂದು ಕುರ್ಚಿಯ ಪಕ್ಕದಲ್ಲಿ ಕುಳಿತಿರುವಂತಹ ನಮ್ಮ ಕೆಲವರು ಜೋರಾಗಿ ಇರುವಂತಹ ಮಂತ್ರಿಗಳಿಗೆ ಅವರು ಎದ್ದುನಿಂತುಕೊಂಡು ಅವರ ಕಿವಿಗೆ ಅಧಿಕಾರಿಗಳು ಬಾಯಿ ಕೊಡುತ್ತಾರೆ. ಅದೇ ಸ್ವಲ್ಪ ಕಡಿಮೆ ಕೆಲಸಕ್ಕೆ ಬಾರದ ಮಂತ್ರಿಗಳು ಬಂದರೆ ಅಧಿಕಾರಿಗಳ ಕಿವಿಗೆ ಈ ಮಂತ್ರಿಗಳೇ ಬಾಯಿ ಕೊಡುತ್ತಾರೆ. ಇದೆಲ್ಲಾ ನೋಡಬೇಕು. ಈ ಅಧಿಕಾರಿಗಳಿಗೆ ಎಷ್ಟು ಸೊಕ್ಕು, ಅಹಂಕಾರ, ದರ್ಪ, ಇದು ನಮ್ಮ ಪ್ರಜಾಪ್ರಭುತ್ವಕ್ಕೆ ಕಳಂಕ, ಇದು ಪ್ರಜಾಪ್ರಭುತ್ವಕ್ಕೆ ಅಪಚಾರವಾಗಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದಕ್ಕೆಲ್ಲಾ ಕಾರಣ ಈಗ ನಡೆಯುತ್ತಿರುವಂತಹ ಮುಖ್ಯಮಂತ್ರಿಗಳ ಆಡಳಿತದಲ್ಲಿ ನಿಯಂತ್ರಣ ಇಲ್ಲದಿರುವುದು. ಆಡಳಿತದಲ್ಲೇ ಚೆಲ್ಲಾಟ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲರ ಕಾಲದ ಆಡಳಿತದ ಹಣೆಬರಹವು ಇದೇ ರೀತಿಯಾಗಿದೆ. ನಾವು ಯಾರ ಕಾಲವೆಂದು ಹೇಳೋಣ. ಆದುದರಿಂದ ಅಧ್ಯಕ್ಷರೇ, ನಾನು ತಮಗೆ ಹೇಳುತ್ತಿದ್ದೇನೆ. ಕೆಲವು ಐ.ಎ.ಎಸ್. ಅಧಿಕಾರಿಗಳು ಸಿಗರೇಟ್ ಸೇದಿ ಮಂತ್ರಿಗಳ ಮುಖಕ್ಕೆ ಹೊಗೆ ಬಿಡುತ್ತಾರೆ. ನಾನು ಇದನ್ನು ಪ್ರಾಮಾಣಿಕವಾಗಿ ನೋಡಿದ್ದೇನೆ. ಏಕೆಂದರೆ ಇದು ಅವರಿಗೆ ಅಭ್ಯಾಸವಿರಬೇಕು. ಅದು ನನಗೆ ಗೊತ್ತಿಲ್ಲ. ಹಾಗೆ ಯಾವಾಗಲೂ ಸೇದಿ ಅಭ್ಯಾಸವಿರಬೇಕು. ಅದು ನನಗೆ ಗೊತ್ತಿಲ್ಲ. ಹೀಗೆ ಮಾಡಿದ್ದು ಯಾರು ಏನು ಎಂದು ನನ್ನನ್ನು ಕೇಳಬೇಡಿ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇತ್ತೀಚಿನ ದಿನಗಳಲ್ಲಿ ಸರ್ಕಾರ ಕೆಲವು ಸಭೆಗಳಿಗೆ ನಮ್ಮನ್ನು ಕರೆಯುತ್ತದೆ. ಆ ಸಭೆಗಳಲ್ಲಿ ನಾವು ಭಾಗವಹಿಸುತ್ತೇವೆ. ಈಗ ವಿಧಾನಸೌಧದ ಎಲ್ಲಾ ಕಡೆಗಳಲ್ಲಿ ಧೂಮಪಾನ ಮಾಡಬಾರದೆಂದು ಬೋರ್ಡ್

ಹಾಕಿದೆ. ಆದರೆ ಸರ್ಕಾರಿ ಅಧಿಕಾರಿಗಳು ಕೊನೆಯ ಪಕ್ಷ ಸಭೆ ನಡೆಯುವಂತಹ ಸಂದರ್ಭದಲ್ಲಿ ಈ ಪೈಪ್, ಸಿಗರೇಟು ಕುಡಿಯುವುದನ್ನು ನಿಬಂಧನೆ ಮಾಡುವುದಕ್ಕೆ ಸಾಧ್ಯವೇ ಹೇಗೆ ಎಂಬುದನ್ನು ತಾವು ದಯಮಾಡಿ ತಿಳಿಸಿ, ನಮಗೆ ಆ ಸಭೆಗಳಲ್ಲಿ ಕುಳಿತುಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾವು ನಮ್ಮ ಕ್ಷೇತ್ರಕ್ಕೆ ಶಾಸಕರಾಗಿದ್ದೇವೆ. ಶಾಸಕರ ಹಿಂದೆ ಅವರು ಹೋಗುವಂತಹ ಕ್ಷೇತ್ರದಲ್ಲಿ ಜನ ಸಂಪರ್ಕ ಸಭೆಯಾಗಲಿ, ಸಾರ್ವಜನಿಕ ಸಭೆಯಾಗಲಿ ಶಾಸಕರು ಕರೆದ ತಕ್ಷಣ ಅಧಿಕಾರಿಗಳು ಶಾಸಕರಿಗೆ ಮಾನ್ಯತೆ ಕೊಟ್ಟು ಹೋಗಬೇಕು ಎನ್ನತಕ್ಕ ಆದೇಶವನ್ನು ಸರ್ಕಾರ ನೇರವಾಗಿ ಹೊರಡಿಸಬೇಕು. ಇಲ್ಲದೆ ಹೋದರೆ ಒಬ್ಬ ಶಾಸಕರಾಗಿ ಅಧಿಕಾರಿಯನ್ನು ಕರೆದರೆ ಬರುವುದಿಲ್ಲವೆಂದರೆ ಇನ್ನು ಅದಕ್ಕಿಂತ ನಾಚಿಕೆಗೇಡು ಮತ್ತೊಂದು ಇಲ್ಲ. ಇದು ನನಗೆ ಅಂಥ ಅಲ್ಲ, ಇವತ್ತು ಅನೇಕರ ಪರಿಸ್ಥಿತಿ ಇದೇ ಆಗಿದೆ. ಆದುದರಿಂದ ಈ ಅಧಿಕಾರಿ ಶಾಹಿಪದ್ಧತಿ ಇಳಿಯಬೇಕಾದರೆ ನಮ್ಮಲ್ಲಿ ಪ್ರಜಾಪ್ರಭುತ್ವ ಭದ್ರವಾಗಿರಬೇಕು, ಹಾಗೂ ಪ್ರಜಾಪ್ರಭುತ್ವದ ಬುನಾದಿ ಹೆಚ್ಚಬೇಕೆನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ವೀರಪ್ಪಮೊಯಿಲಿ ಅವರು ಮುಖ್ಯಮಂತ್ರಿಗಳಾದ ನಂತರ ಕೋಮು ಗಲಭೆಗಳು ದರೋಡೆಗಳು, ಕೊಲೆ, ಸುಲಿಗೆಗಳು ಜಾಸ್ತಿಯಾಗಿದೆ. ಅಂದರೆ ಹಿಂದೆ ಏನೂ ಇರಲೇ ಇಲ್ಲ ಎನ್ನುವ ಭಾವನೆ ಅಲ್ಲ. ಈಗ ಹೆಚ್ಚಿದೆ; ಬೆಂಗಳೂರು ಒಂದರಲ್ಲೇ 6 ಲಾಕಪ್ ಸಾವುಗಳು ಕೇವಲ 6 ತಿಂಗಳಿನಲ್ಲಿ ನಡೆದಿವೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಪ್ರತಿದಿನವೂ ಕೊಲೆಯಾಗುತ್ತಿದೆ; ಶಾಂತಿ ಸುವ್ಯವಸ್ಥೆಯನ್ನು ಕಾಪಾಡತಕ್ಕಂತಹ ಪೋಲೀಸ್ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದೆ. ಬೆಂಗಳೂರು ನಗರದಲ್ಲಿ ಇವತ್ತು ಹಗಲೊತ್ತು ಬಹಿರಂಗವಾಗಿ ತಿರುಗಾಡುವುದಕ್ಕೆ ಭಯಭೀತಿ ಬಂದಿದೆ. ಮೊನ್ನೆ ಮಹಾಲಕ್ಷ್ಮಿ ಪೋಲೀಸ್ ಠಾಣೆಯಲ್ಲಿ ಕಮಲಾಕರನ್ ಎನ್ನುವವರನ್ನು ಲಾಕಪ್‌ನಲ್ಲಿ ಹೊಡೆದು ಹಾಕಿದರು. ಇದು ಗಮನಕ್ಕೆ ಬರತಕ್ಕಂತಹ ಚಿತ್ರಗಳು. ಗಮನಕ್ಕೆ ಬಾರದೇ ಪ್ರತಿ ಪೋಲೀಸ್ ಸ್ಟೇಷನ್‌ನಲ್ಲಿ ಕನಿಷ್ಠ ದಿನಕ್ಕೆ ಒಬ್ಬರಾದರೂ ಒಂದಲ್ಲ ಒಂದು ರೀತಿ ಸಾಯುತ್ತಿದ್ದಾರೆ. ಪೋಲೀಸ್ ಆಡಳಿತ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಪೋಲೀಸ್ ಆಡಳಿತವನ್ನು ಸಮಗ್ರವಾಗಿ ವ್ಯವಸ್ಥೆ ಮಾಡತಕ್ಕಂತಹ ಭರವಸೆಯನ್ನು ತಾವು ಕೊಟ್ಟಿದ್ದೀರಿ. ತಾವು ಆಯವ್ಯಯ ಮಂಡನೆಯಲ್ಲಿ ಇದಕ್ಕೆ ಹೊಸ ರೂಪ ಕೊಡುತ್ತಿದ್ದೇವೆ, ಪೋಲೀಸ್ ಸ್ಟೇಷನ್ ಜಾಸ್ತಿ ಮಾಡುತ್ತಿದ್ದೇವೆ. ಆಧುನಿಕ ಶಸ್ತ್ರಾಸ್ತ್ರಗಳನ್ನು ಕೊಡುತ್ತಿದ್ದೇವೆ ಎಂದು ಹೇಳಿದ್ದೀರಿ. ಇವತ್ತಿನವರೆಗೆ ಯಾವ ಆಧುನಿಕ ಶಸ್ತ್ರಾಸ್ತ್ರಗಳನ್ನು ತಾವು ಕೊಟ್ಟಿದ್ದೀರಿ. ನಾನು ಮೊನ್ನೆ ಒಂದು ಪೋಲೀಸ್ ಠಾಣೆಗೆ ಹೋದಾಗ ನಿಮ್ಮ ಹಳೇ ಕಾಲದ ಬಂದೂಕು ಇದೆಯಲ್ಲಾ ಅದನ್ನು ನೋಡಿದೆ. ಅದಕ್ಕೆ ಒಂದು ರಾಡ್ ಹಾಕುತ್ತಾರೆ, ಮತ್ತು ಒಂದು ಚೈನ್ ಹಾಕಿ ಬೀಗ ಹಾಕಿ ಬಂದೂಕನ್ನು ಒಳಗಡೆ ಬಂಧಿಸಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಸ್ವಲ್ಪ ಈ ವಿಚಾರದಲ್ಲಿ ಗಮನ ಕೊಡಬೇಕು. ಏಕೆಂದರೆ ನಿಜವಾಗಲೂ ಇದು ಬಹಳ ಅತ್ಯಂತ ಪ್ರಮುಖವಾದಂತಹದ್ದು. ಸ್ವಾಮಿ, ಆಕಸ್ಮಾತ್ ಗದ್ದಲವಾಯಿತು. ಕೋಮು ಗಲಭೆಯಾಯಿತು. ದರೋಡೆಯಾಯಿತು. ಆ ಬಂದೂಕಿಗೆ ಬೀಗ ಹಾಕಿರುವ ಕಾನ್‌ಸ್ಟೇಬಲ್ ಎಲ್ಲೋ ಹೊರಗೆ ಹೋಗಿರುತ್ತಾನೆ. ಬೀಗ ಅವನ ಹತ್ತಿರ ಇರುತ್ತದೆ. ಗಲಭೆ ನಡೆಯುತ್ತಿರುತ್ತದೆ, ಬಂದೂಕು ಬೇಕು, ಬೀಗ ಇಲ್ಲ, ಚೈನ್ ಬಿಚ್ಚುವ ಹಾಗೇ ಇಲ್ಲ; ಆ ಬಂದೂಕನ್ನು ತೆಗೆದುಕೊಳ್ಳುವ ಹಾಗೇ ಇಲ್ಲ; ಅವನ್ನು ಒಂದು ಗಂಟೆಗೆ ಬಂದಮೇಲೆ ಆ ಬೀಗ ಬಿಚ್ಚಿ ಈ ಹಳೇ ಕಾಲದ ಓಬೀರಾಯನ ಕಾಲದ ಬಂದೂಕು ತೆಗೆದುಕೊಂಡು ಅದಕ್ಕೆ ಗುಂಡು ಹಾಕಿ ಹೊಡೆಯುವಷ್ಟರಲ್ಲಿ ಪೋಲೀಸರನ್ನು ಜನರೇ ಕೊಂದುಹಾಕಿಬಿಡುತ್ತಾರೆ. ಇದು

ನಿಮ್ಮ ಪೊಲೀಸರ ಕತೆ. ಇಷ್ಟು ತೀರ ಅತ್ಯಂತ, ನಾಚಿಕೆ ಪಡಬೇಕಾದಂತಹದ್ದು ಅಂದರೆ ಈ ಪೊಲೀಸ್ ಇಲಾಖೆ. ಬೆಂಗಳೂರಿನಲ್ಲಿ ನಿಜವಾಗಿಯೂ ಸರಿಯಾದ ಆಡಳಿತ ಕೊಡಬೇಕು.

ನಮ್ಮಲ್ಲಿ ಬಹಳ ಉತ್ತಮವಾದ ದಕ್ಷ ಅಧಿಕಾರಿಗಳು ಇದ್ದಾರೆ. ಅವರನ್ನೆಲ್ಲಾ ಮೂಲೆಗುಂಪು ಮಾಡಿ ನಮ್ಮ ರಾಜಕೀಯಕ್ಕಾಗಿ ನಮಗೆ ಬೇಕು ಬೇಕಾದವರನ್ನು ಉನ್ನತ ಸ್ಥಾನಗಳಿಗೆ ಕೂರಿಸಿ ಈ ಆಡಳಿತವನ್ನು ಒಂದು ರೀತಿ ಶಿಥಿಲಪಡಿಸಿರತಕ್ಕಂಥಾದ್ದು ಸರಿಯಾದ ನೀತಿ ಅಲ್ಲ. ಇವತ್ತು ಹೆಲ್ಮೆಟ್ ಯಾರಿಗೆ ಬೇಕು. ಅದನ್ನು ತಗೆದು ಎಷ್ಟು ದಿವಸವಾಯಿತು. ಇವತ್ತು ಮತ್ತೆ ಅದನ್ನು ಹಾಕಬೇಕೆಂದು ಹೇಳಿದ್ದೀರಿ. ಪೊಲೀಸ್ ಕಮಿಷನರ್‌ರವರು ಹೇಳುತ್ತಾರೆ. ಏನಾದರೂ ಆಗಲಿ, ಅಕ್ಟೋಬರ್ ಒಂದನೇ ತಾರೀಖಿನಿಂದ ತಲೆಗೆ 1 ಕೆಜಿ ತೂಕದ ಈ ಒಂದು ಕಬ್ಬಿಣವನ್ನು ಹಾಕಿಕೊಂಡು ಹೋಗಬೇಕು ಎಂದು ಏನು ಸ್ವಾಮಿ ಇದು? ಇದರ ಹಿಂದೆ ಏನು ಇದೆ? ಇದು ಸರಿಯಲ್ಲ. ಸರ್ಕಾರ ನೇರವಾಗಿ ಆದೇಶ ಹೊರಡಿಸಲಿ. ಪ್ರಯಾಣ ಮಾಡತಕ್ಕಂತಹ ಎರಡು ಚಕ್ರದ ವಾಹನದವನಾಗಲಿ, ಇನ್ನೊಬ್ಬರಿಗೆ ಆಗಲಿ ತನ್ನ ಶರೀರವನ್ನು ಹೇಗೆ ಇಟ್ಟುಕೊಂಡು ಹೋಗಬೇಕು ಎಂದು ಗೊತ್ತಿರುತ್ತದೆ. ಯಾರಿಗೆ ಗೊತ್ತಿರುವುದಿಲ್ಲ ಎಂದರೆ ಮಧ್ಯಪಾನ ಮಾಡಿರತಕ್ಕಂಥವರಿಗೆ ಗೊತ್ತಿರುವುದಿಲ್ಲ. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದುದರಿಂದ ನಾನು ತಮಗೆ ಪ್ರಾಮಾಣಿಕವಾಗಿ ಒತ್ತಾಯ ಮಾಡಿ ಹೇಳುತ್ತಿದ್ದೇನೆ, ತಾವು ಈ ಹೆಲ್ಮೆಟ್ ಹಾಕತಕ್ಕಂತಹ ಪದ್ಧತಿಯನ್ನು ಕೂಡಲೇ ರದ್ದು ಪಡಿಸಬೇಕು. ಎನ್ನತಕ್ಕಂತಹ ಒತ್ತಾಯವನ್ನು ತಮಗೆ ಈ ಮೂಲಕ ಮಾಡುತ್ತಿದ್ದೇನೆ. ಸಮಗ್ರವಾಗಿ ಕಳೆದ, 3 ವರ್ಷಗಳಲ್ಲಿ ಪೊಲೀಸರಿಂದ ಈ ರಾಜ್ಯದಲ್ಲಿ ನಡೆದಿರತಕ್ಕಂತಹ ಗೋಲಿಬಾರ್‌ಗಳು, ಕೋಮು ಗಲಭೆಗಳು, ದರೋಡೆಗಳು ಮತ್ತು ಪಿತೂರಿಗಳು, ಕೊಲೆಗಳು, ಲಾಕಪ್ ಸಾವುಗಳು ಇದರ ಬಗ್ಗೆ ಸಮಗ್ರವಾದಂತಹ ಒಂದು ಶ್ವೇತಪತ್ರವನ್ನು ಈ ಸರ್ಕಾರ ಹೊರಡಿಸಬೇಕಾಗುತ್ತದೆ. ಇದು ಮುಂದೆ ಬರತಕ್ಕಂಥವರಿಗೆ ಇದೆಲ್ಲಾ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ.

ಈ ಸರ್ಕಾರದ ಮೇಲೆ ನೇರವಾಗಿ ಅವಿಶ್ವಾಸವನ್ನು ವ್ಯಕ್ತಪಡಿಸಿ 2-3 ಮುಖ್ಯವಾದ ವಿಚಾರಗಳನ್ನು ಹೇಳುತ್ತೇನೆ, ಮುಖ್ಯಮಂತ್ರಿಗಳೇ ಒಂದು ಪ್ರಕರಣದಲ್ಲಿ ನನಗೇ ರಕ್ಷಣೆ ಇಲ್ಲವೆಂದು ಹೇಳಿಬಿಟ್ಟರು. ಇನ್ನು ಸಾಮಾನ್ಯ ಜನರಿಗೆ ರಕ್ಷಣೆ ಕೊಡತಕ್ಕಂಥ ಆತ್ಮಸ್ಥೈರ್ಯ ಎದೆಗಾರಿಕೆ ಇವರಿಗೆ ಇದೆಯೋ ಎಂದು ಕೇಳುತ್ತೇನೆ. ಇಲ್ಲ; ಸಾಮಾನ್ಯ ಮನುಷ್ಯ ರಸ್ತೆಯಲ್ಲಿ ನಿಂತುಕೊಂಡು ಮೂತ್ರವಿಸರ್ಜನೆ ಮಾಡಿದರೆ ಪೊಲೀಸ್ನವರು ಬಂದು ಅವನ ಮೇಲೆ ಒಂದು ಪೆಟ್ಟಿ ಕೇಸ್ ಹಾಕಿ ಎಳೆದುಕೊಂಡು ಹೋಗುತ್ತಾರೆ. ಮುಖ್ಯಮಂತ್ರಿಯವರು ನನಗೆ ರಕ್ಷಣೆ ಇಲ್ಲವೆಂದರೆ ಇದಕ್ಕೆ ದೇವರೇ ರಕ್ಷಣೆಯನ್ನು ಕೊಡಬೇಕು, ಇನ್ನೇನೂ ಇಲ್ಲ; ನಿಮ್ಮ ಆಡಳಿತ ಸಂಪೂರ್ಣವಾಗಿ ಕುಸಿದುಬಿದ್ದುಹೋಗಿದೆ. ಎನ್ನುವುದಕ್ಕೆ ನಿಮ್ಮ ಈ ಒಂದೇ ಪದ ಸಾಕು. ಮುಖ್ಯಮಂತ್ರಿಯಾದ ನನಗೇ ಕರ್ನಾಟಕದಲ್ಲಿ ರಕ್ಷಣೆ ಇಲ್ಲವೆನ್ನತಕ್ಕಂಥ ಈ ಒಂದು ಮಾತಿನಿಂದ ನಿಮ್ಮ ಆಡಳಿತ ಸಂಪೂರ್ಣವಾಗಿ ಕುಸಿದುಬಿದ್ದಿದೆ ಎನ್ನುವುದಕ್ಕೆ ನಿದರ್ಶನ. ಸ್ವಾಮಿ, ಈ ರಾಜ್ಯದಲ್ಲಿ ಮನೆಗಳನ್ನು ಖಾಲಿ ಮಾಡಿಸಬೇಕೆಂದರೆ ಪೊಲೀಸರಲ್ಲ, ರೌಡಿಗಳನ್ನು ಕರೆದುಕೊಂಡು ಬರುತ್ತಾರೆ. ಅವರಿಗೆ ಇಷ್ಟು ಹಣವನ್ನುಕೊಡುತ್ತೇವೆಂದರೆ ಯಾರ ಮನೆಯನ್ನು ಬೇಕಾದರು ಖಾಲಿ ಮಾಡಿಸಬಹುದು. ಯಾರಿಗಾದರೂ ಒದೆಯಬೇಕಾದರೆ ರೌಡಿಗಳನ್ನು ಯಾರು ಬೇಕಾದರೂ ಕರೆದುಕೊಂಡು ಬರಬಹುದು. ಕ್ಲಬ್‌ಗಳು ರಸ್ತೆ ರಸ್ತೆಯಲ್ಲಿ ಹುಟ್ಟಿಕೊಂಡಿವೆ. ಯಾರೂ ಹೇಳುವವರಿಲ್ಲ ಕೇಳುವವರೂ ಇಲ್ಲ , ಒಂದು ರೀತಿಯಲ್ಲಿ ಇಡೀ ಹೊಲಸು ಪರಿಸ್ಥಿತಿ ನಿರ್ಮಾಣವಾಗಿಬಿಟ್ಟಿದೆ. ನಮಗೆ ಒಂದು ಕಡೆ ಸಿ.ಓ.ಡಿ. ಒಂದು

ಕಡೆ ಲೋಕಾಯುಕ್ತ, ಯಾರಿಗೆ ಸ್ವಾಮಿ ಅದು. ಅದೇನು ಇರಬೇಕೇ ಎಂದು ನಾನು ಕೇಳುತ್ತೇನೆ. ಇಟ್ಟುಕೊಂಡರೆ ಇಟ್ಟುಕೊಳ್ಳಿ. ಅದು ಯಾರನ್ನು ಹಿಡಿಯುವುದಕ್ಕೆ ಇರುವುದು? ಯಾರೋ ಒಬ್ಬ ಅನಾಮಧೇಯ ಗುಮಾಸ್ತನು, ಎಲ್ಲೋ ಒಂದೆರಡು ಮೂರು ರೂಪಾಯಿಗಳನ್ನು ತಿಂದಿರುವವರನ್ನು ಹಿಡಿಯುವುದಕ್ಕೆ ಅದು ಇರುವುದು. ಇದಕ್ಕೆ ಏತಕ್ಕೆ ಸ್ವಾಮಿ? ಲೋಕಾಯುಕ್ತ ಈ ಸಿ.ಓ.ಡಿ. ಇವೆರಡು ನಾವು ನಮಗೆ ಯಾರಿಗೆ ಬೇಕೋ ಅವರ ವಿರುದ್ಧ ಬಳಸಲಿಕ್ಕೆ ಇರತಕ್ಕಂಥ ಅಸ್ತ್ರಗಳಲ್ಲ. ಯಾರು ಮುಖ್ಯಮಂತ್ರಿಗಳಾಗುತ್ತಾರೆ, ಅವರ ಎಡಬಲವಾಗಿ ಅವರಿಗೆ ಇಚ್ಛೆಬಂದಂತೆ ಬಳಸತಕ್ಕಂಥ ಅಸ್ತ್ರಗಳಲ್ಲ; ಅವರು ಸ್ವತಂತ್ರವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡತಕ್ಕಂಥ ಸಂಸ್ಥೆಗಳಾಗಬೇಕೆ ಹೊರತು ಅವು ಸರ್ಕಾರದ ಏಜೆಂಟರಾಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆಯಾಗಬಾರದು. ಅಲ್ಲಿಗೆ ಪ್ರಾಮಾಣಿಕರಾದಂಥ ಅಧಿಕಾರಿಗಳನ್ನು ಹಾಕಬೇಕೆನ್ನುವುದು ನನ್ನ ಪ್ರಾಮಾಣಿಕವಾದ ಒತ್ತಾಯ. ಮಾನ್ಯ ಮುಖ್ಯಮಂತ್ರಿಯವರು ಕೊಲೆಗಡುಕ ವೀರಪ್ಪನ್ನಬಗ್ಗೆ ಈ ಸದನದಲ್ಲಿ ಸ್ಪಷ್ಟವಾದ ಭರವಸೆಗಳನ್ನು ಕೊಟ್ಟರು. ನೀವು ನೋಡಿ ದಿನದನ ಕೇಳಬೇಡಿ, ಚರ್ಚೆಯನ್ನು ಮಾಡಬೇಡಿ ಎಂದು ಹೇಳಿದರೆ ಅಂದರೆ ನನಗೆ ಏನು ಅನಿಸಿತು ಎಂದರೆ ವೀರಪ್ಪನ್ನು ಪೋಲಿಸ್ ಸ್ಟೇಷನ್ನಲ್ಲಿ ಎಲ್ಲೋ ಕರೆದುಕೊಂಡು ಬಂದು ಯಾವತ್ತಾದರೂ ಒಂದು ದಿವಸ ಪ್ರದರ್ಶನ ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ನಾವು ನೋಡುತ್ತಾ ಇದ್ದೇವೆ, ಮಾನ್ಯ ವೀರೇಂದ್ರ ಪಾಟೀಲರು ತೋರಿಸುತ್ತಿದ್ದರು, ನೋಡಿ ನೋಡಿ ಎಂದು. ಮಾನ್ಯ ಬಂಗಾರಪ್ಪನವರು ನೋಡಿ ನೋಡಿ ಎಂದು ಹೇಳುತ್ತಿದ್ದರು. ಈಗ ಇವರು ನೋಡಿ ನೋಡಿ ಎಂದು ಹೇಳುತ್ತಿದ್ದಾರೆ, ಅಲ್ಲಿಗೆ ಗಡಿಭದ್ರತಾ ಪಡೆ ಬಂದಿತು. ನಮ್ಮ ಪೊಲೀಸ್ನವರೂ ಕೂಡ ಅಲ್ಲಿಗೆ ಹೋಗಿದ್ದಾರೆ. ಎಲ್ಲಿ ವೀರಪ್ಪನ್? ದೇವರೇ ಕಾಪಾಡಬೇಕು. ಈ ಸರ್ಕಾರದವರು ಅದಕ್ಕೆ ಏನು ಹೇಳುತ್ತಾರೆ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಅದರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ, ನಮ್ಮ ಅಧಿಕಾರಿಗಳು ಅಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ನಾವು ಸ್ವಲ್ಪ ಮಾತನಾಡಿದರೆ ಡಿಮಾರಲೈಸ್ ಆಗುತ್ತದೆ. ಅದಕ್ಕಾಗಿ ದಯವಿಟ್ಟು ಹೆಚ್ಚು ಚರ್ಚೆ ಮಾಡುವುದು ಬೇಡ. ನಮ್ಮ ಅಧಿಕಾರಿಗಳು ಪ್ರಾಣದ ಭಯಬಿಟ್ಟು ಅವರು ಏನು ಮಾಡುತ್ತಿದ್ದಾರೆಂಬುದು ತಮಗೂ ಗೊತ್ತು. ಬಹಳ ಹತ್ತಿರದಲ್ಲಿದ್ದೇವೆ. ವಿಷಯ ಗೊತ್ತಿದ್ದು ಅದನ್ನು ನಾವು ಹೆಚ್ಚು ವಿಸ್ತಾರ ಮಾಡಲಿಕ್ಕೆ ಹೋದರೆ ಏನಾಗುತ್ತದೆಂದು ತಮಗೆ ಗೊತ್ತಿದೆ.

ಶ್ರೀ ವಾಟಾಳ್ನಾಗರಾಜ್ : ಒಪ್ಪಿದೆ. ತಮ್ಮ ವ್ಯವಸ್ಥೆ ಏನು ಮಾಡಿದ್ದೀರಿ, ಆ ಅಧಿಕಾರಿಗಳ ಬಗ್ಗೆಯಾಗಲಿ, ಇನ್ನೊಬ್ಬರ ಬಗ್ಗೆಯಾಗಲಿ ನನ್ನದೇನೂ ತಕರಾರಿಲ್ಲ. ನಾನು ಅಧಿಕಾರಿಗಳ ಬಗ್ಗೆ ನಿಜವಾಗಿಯೂ ಅಭಿನಂದನೆ ಸಲ್ಲಿಸುತ್ತೇನೆ. ಅವರ ಶ್ರಮಕ್ಕೆ ಅವರ ಕೆಲಸಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ, ಆದರೆ ತಾವು ಕೊಟ್ಟ ಭರವಸೆ ಏನಾಯಿತು ಎಂದು ಕೇಳುತ್ತಿದ್ದೇನೆ. ಅಷ್ಟೇ ಹೊರತು ಅದರ ಬಗ್ಗೆ ಬೇರೆ ಏನೂ ನಾನು ಮಾತನಾಡುತ್ತಿಲ್ಲ.

12.40 ಪಿ.ಎಂ.

ಸ್ವಾಮಿ, ತಮ್ಮ ಸರ್ಕಾರ ಬಂತು, ತಮ್ಮದು ಕನ್ನಡದ ಬಗ್ಗೆ ಕಳಕಳಿ ಇರತಕ್ಕ ಸರ್ಕಾರ. ಇದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ತಾವು ಸಂಸದೀಯ ಸಚಿವರಾಗಿ ಕನ್ನಡದ ಬಗ್ಗೆ ಅಪಾರವಾದ ಕೆಲಸ ಮಾಡಬೇಕೆಂಬ ಚಿಂತನೆ ಇಟ್ಟುಕೊಂಡು ತಾವು ಅಧಿಕಾರಕ್ಕೆ ಬಂದನಂತರ ನಾನು ಅನೇಕ ಬಾರಿ ಇಲ್ಲಿ ಕನ್ನಡದ ಬಗ್ಗೆ ತಮ್ಮ ಹತ್ತಿರ ಸುಧೀರ್ಘವಾಗಿ ಒತ್ತಾಯ ಮಾಡಿ ಕೇಳಿದೆ. ಏಪ್ರಿಲ್ ಒಂದನೇ ತಾರೀಖಿನಿಂದ

ಕರ್ನಾಟಕ ರಾಜ್ಯದಲ್ಲಿ ಸಮಗ್ರ ಆಡಳಿತ ಸಂಪೂರ್ಣವಾಗಿ ಕನ್ನಡದಲ್ಲಿ ಇದೆ ಎಂದು ತಾವು ಹೇಳಿದ್ದೀರಿ. ಸಮಗ್ರ ಆಡಳಿತ ಕನ್ನಡದಲ್ಲಿ, ಯಾವತ್ತು? ಏಪ್ರಿಲ್ ತಿಂಗಳಿನಲ್ಲಿ. ನಾನು ಏನು ಹೇಳಿದೆ, ಏಪ್ರಿಲ್ ಒಂದು, ಕನ್ನಡಿಗರನ್ನು ಮೂರ್ಖರನ್ನಾಗಿ ಮಾಡುತ್ತಿದ್ದೀರಿ ಎಂದು ಮುಖ್ಯಮಂತ್ರಿಗಳಿಗೆ ಹೇಳಿದೆ. ಆಗ ಇಲ್ಲ, ಇಲ್ಲ, ಇಂಗ್ಲೀಷರು ಮೂರ್ಖರು, ಅದು ಇಂಗ್ಲೀಷರ ದಿನ. ಕನ್ನಡಿಗರು ಮೂರ್ಖರಲ್ಲ, ನೀವೇ ಕನ್ನಡಿಗರಿಗೆ ಅಗೌರವ ಮಾಡುತ್ತಿದ್ದೀರಿ ಎಂದು ತಾವು ಹೇಳಿದಿರಿ. ನಿಮ್ಮ ಹೃದಯ ಮುಟ್ಟಿ ಹೇಳಿ, ಎಷ್ಟರಮಟ್ಟಿಗೆ ನೀವು ಕನ್ನಡ ಜಾರಿ ಮಾಡಿದ್ದೀರಿ? ಏಪ್ರಿಲ್ ಒಂದನೇ ತಾರೀಖು ವಿಧಾನಸಸೌಧದ 4 ಬಾಗಿಲುಗಳಲ್ಲಿ ನಿಮ್ಮ ಫೋಟೋಗಳು. ಅವು ಮಾಸುತ್ತಿವೆ. ಕಪ್ಪು ಹಿಡಿದಿವೆ, ಕನ್ನಡ ಆಡಳಿತ ಭಾಷೆ ಆಗಿಲ್ಲ. ಮತ್ತೆ ಕನ್ನಡ ಜಾಗೃತಿ ದಿನಾಚರಣೆ ಎಂದು ದೀಪ ಹಚ್ಚಿದಿರಿ. ಹೊರಗಡೆ ನಾನು ಇದು ಬುರುಡೆ ಅಂದೆ. ನನ್ನನ್ನು ದಸ್ತಗಿರಿ ಮಾಡಿದಸಿದಿರಿ. ಇವತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ವರದಿ ಆಗಿದೆ. ನಿಮ್ಮ ನಿಮ್ಮ ದ್ವಂದ್ವ ವ್ಯವಹಾರದಲ್ಲಿ ಕನ್ನಡದ ಅಭಿಮಾನವನ್ನು ಮರೆತಿದ್ದೀರಿ. ರಾಜಶೇಖರ ಮೂರ್ತಿಯವರಿಗೂ ತಾವು ಒಂದು ಪತ್ರ ಬರೆದಿದ್ದೀರೆಂದು ನನಗೆ ತಿಳಿದು ಬಂದಿದೆ. ತಾವು ಆ ಪತ್ರವನ್ನು ಆಂಗ್ಲ ಭಾಷೆಯಲ್ಲಿ ಬರೆದಿದ್ದೀರಿ ನಾನು ಅದನ್ನು ಓದಿದೆ. ಇನ್ನು ಎಷ್ಟರಮಟ್ಟಿಗೆ ನಿಮ್ಮ ರಾಜಕೀಯ ಗೊಂದಲದಲ್ಲಿ ನಿಮ್ಮ ಅಧಿಕಾರದ ದ್ವಂದ್ವ ನೀತಿಯಲ್ಲಿ ಕನ್ನಡವನ್ನು ತಬ್ಬಲಿ ಮಾಡಿದರಲ್ಲ; ಹೀಗೆ ಮಾಡಬಹುದೆ ಹೇಳಿ. ನಿಮಗೆ ಎಷ್ಟು ಅಭಿಮಾನ ಕನ್ನಡದ ಬಗ್ಗೆ ಇದೆ. ನಿಮ್ಮ ಆತ್ಮ ಮುಟ್ಟಿ ನೋಡಿ ಹೇಳಿ. ನಾಳೆಯಿಂದ ಕನ್ನಡ ಕಡತವಲ್ಲದೆ ಇಂಗ್ಲೀಷ್ ಕಡತಗಳನ್ನು ಮುಟ್ಟುವುದಿಲ್ಲವೆಂದು ಹೇಳಿದಿರಿ. ಯಾವ ಶಬ್ದ ಸ್ವಾಮಿ? ನೀವು ಇಷ್ಟು ಹೇಳಿದಮೇಲೆ ನಿಮ್ಮ ಲೋಕಸಭಾ ಆಯೋಗದ ವರದಿ ಇಂಗ್ಲೀಷ್ ನಲ್ಲಿ ಬಂದಿದೆ. ಇದನ್ನು ನಾನು ಹರಿಯುವುದಿಲ್ಲ.

ಏಕೆಂದರೆ ನಮ್ಮ ಕೌಜಲಗಿಯವರು, ಮಾಧುಸ್ವಾಮಿಯವರು ಹರಿಯಬೇಡಿ ಎಂದು ಬಹಳ ನೋವುಪಡುತ್ತಾರೆ. ಆದುದರಿಂದ ಅದನ್ನು ನಾನು ಈ ಬಾವಿಗೆ ಎಸೆಯುತ್ತೇನೆ. ಕರ್ನಾಟಕ ರಾಜ್ಯಪತ್ರ, ಪ್ರತಿ ಪುಟಪುಟವೂ ಸಂಪೂರ್ಣ ಇಂಗ್ಲೀಷ್. ಇದನ್ನು ಬಾವಿಗೆ ಎಸೆಯುತ್ತೇನೆ. ತುಮಕೂರು ಜಿಲ್ಲಾ ಪರಿಷತ್ತಿನ ವರದಿ ಹಾಗೂ ಕೊಡಗು ಜಿಲ್ಲಾ ಪರಿಷತ್ತಿನ ವರದಿಗಳನ್ನು ಸಹ ಬಾವಿಗೆ ಎಸೆಯುತ್ತೇನೆ. ಇದೆಲ್ಲ ನೀವು ಕನ್ನಡವನ್ನು ಮರೆತಿದ್ದೀರಿ ಎಂಬುದಕ್ಕೆ ಸಾಕ್ಷಿ. ನೀವು ಅದರ ವಿರುದ್ಧ ಇದ್ದೀರೆಂದು ಹೇಳುವುದಿಲ್ಲ. ಜಿಲ್ಲಾ ಪರಿಷತ್ತು, ಮೈಸೂರು - ಇಂಗ್ಲೀಷ್ ಜಿಲ್ಲಾ ಪರಿಷತ್ತು, ಉತ್ತರ ಕನ್ನಡ - ಇಂಗ್ಲೀಷ್; ಜಿಲ್ಲಾಪರಿಷತ್ತು, ಬಿಜಾಪುರ-ಇಂಗ್ಲೀಷ್, ಜಿಲ್ಲಾಪರಿಷತ್ತು, ಧಾರವಾಡ-ಇಂಗ್ಲಿಷ್, ಜಿಲ್ಲಾ ಪರಿಷತ್ತು, ಕೋಲಾರ- ಇಂಗ್ಲೀಷ್, ಜಿಲ್ಲಾ ಪರಿಷತ್ತು, ತುಮಕೂರು - ಇಂಗ್ಲೀಷ್. ನಿಮ್ಮ ಕನ್ನಡದ ಅಭಿಮಾನ ದೇಶಕ್ಕೆ ಗೊತ್ತಾಗಲೆಂದು ಈ ಎಲ್ಲಾ ವರದಿಗಳನ್ನು ಬಾವಿಗೆ ಎಸೆಯುತ್ತೇನೆ. ಇದು ಜಾಗೃತಿ ದಿನಾಚರಣೆ, ಕನ್ನಡದ ಜಾಗೃತಿ ದಿನಾಚರಣೆ ನಿಮ್ಮದು ಉತ್ತುಂಗ ಶಿಖರಕ್ಕೆ ಹೋಗಲಿ, ನಿಮ್ಮ ಹೆಸರು ಚಿರಾಯುವಾಗಿ ಉಳಿಯಲಿ, ಈ ರೀತಿ ಕನ್ನಡದ ಅಭಿಮಾನದಲ್ಲಿ. ಹಣಕಾಸು ಸಂಸ್ಥೆಯ ವರದಿ-ಇಂಗ್ಲೀಷ್‌ನಲ್ಲಿ. ಇದು ನಿಮ್ಮ ಕೈಯಲ್ಲಿರುವ ಇಲಾಖೆ. ಇದನ್ನು ಬಾವಿಗೆ ಎಸೆಯುತ್ತೇನೆ. ಅದಲ್ಲದೆ ನಿಮ್ಮ ಕನ್ನಡ ಆಡಳಿತ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನೋಡಿ ಸ್ವಾಮಿ. ಕನ್ನಡ ಮಾಧ್ಯಮ ಶಾಲೆಗಳ ಉಪಾಧ್ಯಾಯರುಗಳಿಗೆ ಸಂಬಳ ಕೊಡದೆ 9-10 ವರ್ಷಗಳಿಂದ, ಎಷ್ಟು ಕಾಗದಗಳನ್ನು ಬರೆದಿದ್ದಾರೆ ನೋಡಿ. ಸುಮಾರು 1000 ಕಾಗದಗಳಿವೆ. ಇದನ್ನು ಬಾವಿಗೆ ತೂರುತ್ತೇನೆ. ಕನ್ನಡದ ಬಡ ಉಪಾಧ್ಯಾಯರನ್ನು ನೀವು ನೋಡುತ್ತಿರತಕ್ಕ ಪರಿಸ್ಥಿತಿ ಇದು. ಕನ್ನಡ ಉಪಾಧ್ಯಾಯರಿಗೆ 9 ವರ್ಷಗಳಿಂದ ಸಂಬಳ ಕೊಟ್ಟಿಲ್ಲ, ಕನ್ನಡ ಶಾಲೆಗಳು ಹೇಗಿವೆ ಎಂದರೆ ದನದ ದೊಡ್ಡಿ; ಕೊಟ್ಟಿಗೆ ಆಗಿವೆ. ಇವೆಲ್ಲ ನನಗೆ ಕಳುಹಿಸಿರತಕ್ಕ ಕಾಗದಗಳು.

ತಾವು ಇದನ್ನೆಲ್ಲಾ ತರಿಸಿಕೊಂಡು ದಯಮಾಡಿ ನೋಡಿ. ನನ್ನ ಕನ್ನಡದ ಬಗ್ಗೆ ನಿಮಗೆ ಅಭಿಮಾನ ಇದೆ. ತಮ್ಮನ್ನು ನಾನು ಆಕ್ಷೇಪಣೆ ಮಾಡುತ್ತಾ ಇಲ್ಲ. ಯಾವುದೋ ಒಂದು ನಿಮ್ಮ ರೈಲು ತಪ್ಪುದಾರಿಯಲ್ಲಿ ಹೋಗುತ್ತಿದೆ. ಎಲ್ಲಿ ಹೋಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇದು ಕನ್ನಡದ ಪರಿಸ್ಥಿತಿ. ಇದು ಕನ್ನಡ ಉಪಾಧ್ಯಾಯರಿಂದ ಬಂದ ಒಂದು ಪತ್ರ. ಮಂಡ್ಯಾ ಜಿಲ್ಲೆ ನಾಗಮಂಗಲ ತಾಲ್ಲೂಕು, ಪ್ರೌಢ ಶಾಲೆಯ ಒಬ್ಬ ಉಪಾಧ್ಯಾಯ ಲೋಕೇಶ್ ಎನ್ನುವವರ ಪತ್ರ ಇದು. ಇಂತಹ ಅನೇಕರು ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಶಾಲೆ ಅನುದಾನಕ್ಕೆ ಒಳಪಡದೇ ಇದ್ದರೆ ಅವರಿಗೆ ಸಿಗುವುದಿಲ್ಲ. ಮತ್ತೆ ತಾವು ಕುಳಿತುಕೊಂಡರೆ ಒಂದು ಮಾತು ಹೇಳುತ್ತೇನೆ. ಬಹುಶಃ ನಾವು ಏನು ಮಾಡಿದ್ದೇವೆ ಎಂದು ನೋಡಬೇಕು. ಬಹುಶಃ ಜಾಗೃತಿ ವರ್ಷ ಪ್ರಾರಂಭ ಆಗುವುದಕ್ಕಿಂತಲೂ ಮೊದಲೇ ಮುದ್ರಣ ಆದ ಪುಸ್ತಕಗಳನ್ನು ತಾವು ತೋರಿಸುತ್ತಿದ್ದೀರಿ. ಏಕೆಂದರೆ, ಕಳೆದ ವರ್ಷದ ವರದಿಗಳನ್ನು ತಂದು ತೋರುತ್ತಿದ್ದೀರಿ. ಈ ವರ್ಷದ ವರದಿಯನ್ನು ತಾವು ತಂದರೆ ಒಪ್ಪಿಕೊಳ್ಳಬಹುದು. ಕಳೆದ ವರ್ಷದ ದಾಖಲೆ ತಂದರೆ ಕಷ್ಟ ಆಗುತ್ತದೆ, ಪರ್ವಾಯಿಲ್ಲ; ಆಮೇಲೆ ನಾವು ಮಾತನಾಡೋಣ. ಎರಡನೆಯದಾಗಿ, ಎಲ್ಲಾ ಶಾಲೆಗಳು ಅನುದಾನಕ್ಕೆ ಒಳಪಡುವುದಿಲ್ಲ. ಈಗ ಎಲ್ಲಾ ಅನುದಾನರಹಿತವಾಗೇ ಮಂಜೂರು ಆಗುತ್ತವೆ. 1983ನೇ ಇಸವಿಯಿಂದ ಯಾವ ಶಾಲೆಗಳೂ ಅನುದಾನಕ್ಕೆ ಒಳಪಟ್ಟಿಲ್ಲ. ವರ್ಷೇ ವರ್ಷೇ ಸಂಪನ್ಮೂಲಕ್ಕೆ ಒಳಪಟ್ಟು ಅನುದಾನ ಸಹಿತ ಎಂದು ಮಾಡಲಾಗುತ್ತದೆ. ಅನುದಾನ ಸಿಗದ ಶಾಲೆಯ ಉಪಾಧ್ಯಾಯರಿಗೆ ಹೇಗೆ ಸಂಬಳ ಸಿಗುತ್ತದೆ? ಅನುದಾನಕ್ಕೆ ಒಳಪಟ್ಟ ಶಾಲೆಗೆ ಸಂಬಳ 9 ವರ್ಷದಿಂದ ಬಾಕಿ ಇದ್ದರೆ ತಾವು ಹೇಳುವುದು ಸರಿ.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) : ಮೊದಲೇ 7 ವರ್ಷ ಅನುದಾನ ಇಲ್ಲ ಎಂದು ಸ್ಯಾಂಕ್ಷನ್ ಆರ್ಡರ್‌ನಲ್ಲೇ ಇರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಮಗೆ ವಿಚಾರವನ್ನು ಸಮಗ್ರವಾಗಿ ತಿಳಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಆ ಉಪಾಧ್ಯಾಯರು ಅನುದಾನದ ಬಗ್ಗೆ ಇವರಿಗೆ ಪತ್ರ ಬರೆದಿದ್ದಾರೆ. ಆ ಬಗ್ಗೆ ಇವರು ಸರ್ಕಾರಕ್ಕೆ ಪತ್ರ ಬರೆದು ಅದನ್ನು ಕಳುಹಿಸಿಕೊಟ್ಟರೆ ಸರ್ಕಾರ ಅದನ್ನು ಪರಿಶೀಲಿಸಿ ಏನಾದರೂ ತೀರ್ಮಾನ ಮಾಡುತ್ತಾ ಇತ್ತು.

ಶ್ರೀ ವಾಟಾಳ್ ನಾಗರಾಜ್ : ತಿಮ್ಮಪ್ಪನವರು ಯಾವಾಗಲೂ ದಾರಿ ತಪ್ಪಿಸುವುದೇ ಆಗಿದೆ. ನಾನೂ ಅವರೂ 20 ವರ್ಷಗಳ ಸ್ನೇಹಿತರು. ಇಲ್ಲಿ ನಮ್ಮಕಡೆ ಇದ್ದಾಗಲೂ ದಾರಿ ತಪ್ಪಿಸುವುದು,ಅಲ್ಲೂ ದಾರಿ ತಪ್ಪುವುದು. 'ಇದರಿಂದ ಬಹಳ ಕಷ್ಟ ಆಗುತ್ತದೆ ನಮಗೆ.

ಶ್ರೀ ಕಾಗೋಡು ತಿಮ್ಮಪ್ಪ : ತಮ್ಮ ಶಾಲೆಗೆ ಅನುದಾನ ಬಂದಿಲ್ಲ ಅದನ್ನು ಸರ್ಕಾರದ ಗಮನಕ್ಕೆ ತನ್ನಿ ಎಂದು ಅವರು ಪತ್ರ ಬರೆದಿದ್ದಾರೆ. ಇಂತಿಂತಹವರು ಪತ್ರಬರೆದಿದ್ದಾರೆಂದು ಆ ಪತ್ರಗಳ ಸಮೇತ ನಿಮ್ಮ ಪತ್ರವನ್ನು ಸರ್ಕಾರಕ್ಕೆ ಬರೆದು, ಅನುದಾನ ಇಲ್ಲದೇ ಸಂಬಳ ಕೊಟ್ಟಿಲ್ಲ, ಸಂಬಳ ಕೊಡುವ ತೀರ್ಮಾನ ಮಾಡಿ ಎಂದು ಸರ್ಕಾರಕ್ಕೆ ಬರೆದಿದ್ದರೆ ಸರ್ಕಾರ ಪರಿಶೀಲನೆ ಮಮಾಡುತ್ತಿತ್ತು. ಆ ಕೆಲಸ ಮಾಡುವ ಬದಲಾಗಿ ಅವನ್ನೆಲ್ಲಾ ತೆಗೆದು ಬಾವಿಯ ಒಳಗೆ ಹಾಕಿದರೆ....

ಶ್ರೀ ವಾಟಾಳ್ ನಾಗರಾಜ್ : ಸರ್ಕಾರಕ್ಕೆ ಗೌಪ್ಯವಾಗಿ ಬರೆಯತಕ್ಕ ಪತ್ರ ಅಲ್ಲ ಅಧ್ಯಕ್ಷರೇ. ಇದು ಎಲ್ಲರಿಗೂ ಗೊತ್ತಾಗಲಿ. ನಿಮ್ಮ ಹಣೇಬರಹ ಗೊತ್ತಾಗಲಿ ಎಂದು ಹೇಳಿ ಈ ಬಾವಿಗೆ ಹಾಕುತ್ತಿದ್ದೇನೆ. ನಿಮ್ಮ ಹಣೆಬರಹ ಓದಬೇಕೇ?

ಅಧ್ಯಕ್ಷರು : ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಇನ್ನು 10 ನಿಮಿಷದಲ್ಲಿ ಮುಗಿಸುತ್ತೇನೆ. ಇನ್ನು ಬೆಲೆ ಏರಿಕೆ ವಿಷಯವನ್ನು ಬಹಳ ಲಘುವಾಗಿ ತೆಗೆದುಕೊಳ್ಳುವುದಲ್ಲ. ಸರ್ಕಾರ ನಡೆಸುತ್ತಿರುವ ಈ ಪಕ್ಷ ಬೆಲೆ ಏರಿಕೆ ಬಲೆ ನಿಯಂತ್ರಣವನ್ನು ತರುವುದಕ್ಕೆ ಬರುವುದಿಲ್ಲವೆನ್ನುವುದಾದರೆ ಈ ಸರ್ಕಾರ ಆಡಳಿತದಲ್ಲಿ ಇರುವುದಕ್ಕೆ ಯೋಗ್ಯತೆ ಇದೆಯೇ ಎಂದು ತಮಗೆ ಕೇಳುತ್ತಿದ್ದೇನೆ. ಜನಸಾಮಾನ್ಯರ, ಬಡವರ ಚಿಂತನೆಯ ಕೆಲವು ಬೆಲೆಗಳನ್ನು ತಮಗೆ ಉದ್ಧರಿಸಿ ಹೇಳುತ್ತೇನೆ. ಅಕ್ಕಿಯ ಬೆಲೆ ಕೆ.ಜಿ.ಗೆ 12 ರೂಪಾಯಿ.

ಶ್ರೀ ಎಸ್. ಇಸಾಮಿಯ : ಇಲ್ಲ ಸ್ವಾಮಿ. ಅಷ್ಟು ಇಲ್ಲ. ನಾವು ಅದನ್ನು ಬೆಳೆಯುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಏನು 3 ರೂಪಾಯಿ ಇದೆಯೇ? ಕೂತುಕೊಳ್ಳಿ.

ನಮ್ಮ ಸ್ನೇಹಿತರಾದ ಇಸಾಮಿಯವರೆ ತಾವು ದಯವಿಟ್ಟು ಕುಳಿತುಕೊಳ್ಳಿ. ನೀವು ಭತ್ತ ಬೆಳೆಯುತ್ತೀರಿ, ಕುಳಿತುಕೊಳ್ಳಿ. ನನ್ನ ಹತ್ತಿರ ವರದಿಯಿದೆ. ಈ ಸರ್ಕಾರ ಬೆಲೆಏರಿಕೆಯನ್ನು ತಡೆಗಟ್ಟುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ . ಮಾಹಿತಿ ನನ್ನ ಹತ್ತಿರವಿದೆ. ಅದನ್ನು ತಮ್ಮ ಮುಂದೆ ಪ್ರಕಟಿಸುತ್ತೇನೆ. ಅವರು ಇಲ್ಲವೆಂದು ಹೇಳಲಿ. ನಾಳೆ ಬಂದು ಕೆ.ಜಿ. ಅಕ್ಕಿಗೆ 1 ರೂಪಾಯಿಯಂತೆ ಮಾನ್ಯ ನಂಜಪ್ಪನವರು ಮಾರುತ್ತಾರೆ ಅಂದರೆ ಅದನ್ನು ಯಾರು ಬೇಡವೆಂದು ಹೇಳುತ್ತಾರೆ?

ಡಾ॥ ಎನ್.ಬಿ. ನಂಜಪ್ಪ : ಈ ಬೆಲೆ ನಿಯಂತ್ರಣ ಸ್ಟೇಟ್ ಸಬ್ಜೆಕ್ಟೆ ?

ಅಧ್ಯಕ್ಷರು :ನಂಜಪ್ಪನವರೇ ತಾವು ಕೂಡ್ರಿ.

ಶ್ರೀ ವಾಟಾಳ್ನಾಗರಾಜ್ : ಇದು ಚನ್ನರಾಯಪಟ್ಟಣದ ಪುರಸಭೆಯಲ್ಲ.

ಅಧ್ಯಕ್ಷರು : ಮಾನ್ಯ ನಂಜಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಜಾಸ್ತಿ ಬೆಲೆ ಇದೆಯೆಂದು ನಾನ ಹೇಳುತ್ತಿದ್ದೇನೆ. ಅದು ಇಲ್ಲ 1 ರೂಪಾಯಿಗೆ 1 ಕೆ.ಜಿ. ಅಕ್ಕಿ ದೊರೆಯುತ್ತದೆಂದು ನೀವು ಹೇಳಿ; ನನ್ನದೇನು ಅಭ್ಯಂತರವಿಲ್ಲ. ರಾಗಿ 1 ಕೆ.ಜಿ.ಗೆ 4 ರೂಪಾಯಿ, ಜೋಳ ಒಂದು ಕೆ.ಜಿ.ಗೆ. 5ರೂಪಾಯಿ. ಇದರ ಬಗ್ಗೆ ಏಕೆ ಸ್ವಾಮಿ ಮಾತನಾಡುತ್ತೀರಿ; ಮಾತನಾಡುವುದಕ್ಕೆ ನಿಮಗೆ ಯೋಗ್ಯತೆ ಇದೆಯೇ?

ಅಧ್ಯಕ್ಷರು : ಮಾನ್ಯ ನಂಜಪ್ಪನವರೇ ದಯವಿಟ್ಟು ತಾವು ಕುಳಿತುಕೊಳ್ಳಿ.

ಡಾ: ಎನ್.ಬಿ. ನಂಜಪ್ಪ : ಒಂದು ಕ್ವಿಂಟಾಲ್ ರಾಗಿಗೆ 230 ರೂಪಾಯಿನಂತೆ ಎಷ್ಟು ಚೀಲಬೇಕು, ನಾನು ಕೊಡಿಸುತ್ತೇನೆ. ತಾವು ಪರ್ಚೇಸ್ ಮಾಡುವುದಕ್ಕೆ ರೆಡಿ ಇದ್ದೀರಾ? ಸುಮ್ಮನೆ ಇಲ್ಲಿ ಕುಳಿತುಕೊಂಡು ಬಾಯಿಗೆ ಬಂದಹಾಗೆ ಮಾತನಾಡಿದರೆ ಹೇಗೆ ರೈತ ಬದುಕಬೇಕೆಂದು ಒಂದು ಕಡೆ ಹೇಳುತ್ತೀರಿ. ಇಲ್ಲಿ ಹೇಳುತ್ತೀರಿ, ಒಂದು ಕೆ.ಜಿ. ಅಕ್ಕಿಗೆ 12 ರೂಪಾಯಿಯೆಂದು. 12 ರೂಪಾಯಿಗೆ ಒಂದು ಕೆ.ಜಿ.ಯಂತೆ ಅಕ್ಕಿಯನ್ನು ಮಾರದಿದ್ದರೆ ರೈತ ಇವತ್ತು ಬದುಕುವುದಕ್ಕೆ ಆಗುತ್ತದೆಯೇ? ರಸಗೊಬ್ಬರದ ಬೆಲೆ, ಕೂಲಿ ಜಾಸ್ತಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ರೈತನಿಂದ ಕೊಂಡಂತಹ ದವಸಧಾನ್ಯಗಳಿಗೆ ಕಡಿಮೆ ಹಣ ಕೊಟ್ಟು ಒಂದಕ್ಕೆ ಎರಡರಷ್ಟು ಬೆಲೆಗೆ ಮಾರತಕ್ಕ ವಿಚಾರವನ್ನು ಹೇಳುತ್ತಿದ್ದೇನೆ. ರೈತ ಕೊನೆಯವರೆಗೂ ಕಂಗಾಲಾಗಿದ್ದಾನೆ. ರೈತನ ಬಗ್ಗೆ ಈ ಸರ್ಕಾರ ಮೊಸಳೆ ಕಣ್ಣೀರು ಸುರಿಸುತ್ತಿದೆ. ಬೆಲೆ ಏರಿಕೆಯಿಂದ ರೈತನಿಗೆ ಲಾಭ ಎಲ್ಲಿ ಸಿಕ್ಕಿದೆ? ರೈತನ ಪರಿಸ್ಥಿತಿ ಏನು? ತಾವು ರೈತರನ್ನು ಒಂದು ರೀತಿಯಲ್ಲಿ ಕೊಲ್ಲುತ್ತಿದ್ದೀರಿ.

ರೈತನನ್ನು ಕರ್ಮಕೂಪಕ್ಕೆ ತಳ್ಳುತ್ತಿದ್ದೀರಿ. ರೈತನ ಬಗ್ಗೆ ಈ ಸರ್ಕಾರಕ್ಕೆ ಕಳಕಳಿಯಿಲ್ಲ. ಮೂರು ವರ್ಷಗಳಿಂದ ಈ ಸದನದಲ್ಲಿ ಹೇಳುತ್ತಿದ್ದೇನೆ. ಆದರೂ ರೈತರ ಬಗ್ಗೆ ನಿಮಗೆ ಕಳಕಳಿಯಿಲ್ಲ. ಹೋಟೆಲ್ ತಿಂಡಿ ಬೆಲೆಯನ್ನು ನಿಯಂತ್ರಣ ಮಾಡುವುದಕ್ಕೆ ಈ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ನಾನು ತಮಗೆ ಹೇಳುತ್ತಿದ್ದೇನೆ, ಒಂದು ಲೋಟ ಕಾಫಿಯ ಬೆಲೆ 3 ರೂಪಾಯಿ. ಇಲ್ಲೇ ಮೊಗಸಾಲೆಯಲ್ಲಿ ಒಂದು ಕಾಫಿಗೆ 2.50 ಪೈಸೆ. ನಮ್ಮ ಪಕ್ಕದಲ್ಲಿಯೇ ಒಂದು ಕಾಫಿಯ ಬೆಲೆ ಎರಡೂವರೆ ರೂಪಾಯಿ ಆದರೆ ಹೇಗೆ? ಎರಡು ಕಡುಬು ಒಂದು ಕಡೆ 6 ರೂಪಾಯಿ. ಜನಸಾಮಾನ್ಯರ ಪರಿಸ್ಥಿತಿ ನಿಮಗೆ ಅರ್ಥವಾಗಿದೆಯೇ? ವಡೆ, ಇಡ್ಲಿ, ಮಸಾಲೆದೋಸೆ ಎಲ್ಲವನ್ನೂ ಹೋಟೆಲಿನಿಂದ ಕಟ್ಟಿಸಿಕೊಂಡು ಬಂದಿದ್ದೇನೆ. (ತಿಂಡಿ ಪೊಟ್ಟಣಗಳನ್ನು ಸಭೆಯಲ್ಲಿ ತೋರಿಸಿದರು) ನಾನು ಸುಮ್ಮನೆ ಮಾತನಾಡುತ್ತಿಲ್ಲ. ನಾನು ಬೆಳಿಗ್ಗೆ ಹೋಗಿ ಇವರು ಈ ಮಾತು ಹೇಳುತ್ತಾರೆಂದುಕೊಂಡು ಇದನ್ನೆಲ್ಲಾ ತಂದಿದ್ದೇನೆ. ವಡೆ ಇಡ್ಲಿ 12 ರೂಪಾಯಿ, ಮಸಾಲೆದೋಸೆ 8 ರೂಪಾಯಿ, ಎಲ್ಲಾದರೂ ಉಂಟೇ ಸ್ವಾಮಿ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಯಾವ ಹೋಟೆಲಿನಲ್ಲಿ?

ಶ್ರೀ ವಾಟಾಳ್ ನಾಗರಾಜ್ : ಪಕ್ಕದಲ್ಲಿರುವ ಕ್ಯಾನ್ಟೀನ್ನಲ್ಲಿ ಒಂದು ಪೊಂಗಲ್ ಬೆಲೆ ಎಷ್ಟು ಸ್ವಾಮಿ? ಮಾನ್ಯ ಸಿಂಧ್ಯಾರವರ ಪಕ್ಷದವರು ಹೇಳುವುದೆಲ್ಲಾ ಸತ್ಯ ಏನು ಮಾಡುವುದಕ್ಕಾಗುತ್ತದೆ? ನಿಮ್ಮ ಪಕ್ಷದವರು ಹೇಳುವುದೆಲ್ಲಾ ಸತ್ಯವೆಂದು ಹೇಳುತ್ತೀರಿ; ಆಯಿತು ಅದನ್ನು ಬಿಡೋಣ.

ಶ್ರೀ ಎಂ. ಮಹದೇವ್ : ಮಾನ್ಯ ವಾಟಾಳ್ನಾಗರಾಜ್ರವರೇ, ನೀವು ಬೇರೆಯದನ್ನೆಲ್ಲಾ ಬಾಯಿಗೆ ಹಾಕಿದಿರಿ; ವಡೆ 6 ರೂಪಾಯಿ ಎಂದು ಹೇಳಿದಿರಿ; ಅದನ್ನು ಮಾತ್ರ ಬಾವಿಗೆ ಹಾಕಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಕಾಂಗ್ರೆಸ್ ಪಕ್ಷದಿಂದ ಯಾರು ಹೊರಗೆ ಹಾಕಿಸಿಕೊಂಡಿದ್ದಾರೆ, ಅವರಿಗೆ ತಿನ್ನಿಸಬೇಕೆಂದು ಹಾಗೆಯೇ ಇಟ್ಟುಕೊಂಡಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್ (ಯೋಜನಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಎಲ್ಲಿ ಸಾಮಾನ್ಯ ಜನತೆ ಈ ಪದಾರ್ಥಗಳನ್ನು ಉಪಯೋಗಿಸುತ್ತಾರೆ, ಅಲ್ಲಿ, ಮಾನ್ಯಸದಸ್ಯರು ಹೇಳುವ ಮಟ್ಟದಲ್ಲಿ ಬೆಲೆಗಳು ಇಲ್ಲ, ಅವರು ಹೇಳತಕ್ಕಂಥಾದ್ದು ಹೈಯರ್ ಕ್ವಾಲಿಟಿಯೊಳಗೆ ಅವರು ಟ್ಯಾಕ್ಸ್, ಮತ್ತೊಂದು ಎಲ್ಲಾ ಸೇರಿಸಿ ಹಾಕುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಯಾವತ್ತೂ ಬಡವರ ಹೋಟೆಲ್ ತಿಂಡಿ ತಿಂದಿಲ್ಲ, ಅವರು ಏನಿದ್ದರೂ ದೊಡ್ಡ ಹವಾನಿಯಂತ್ರಣ ಹೋಟೆಲಿನಲ್ಲಿ ಕುಳಿತುಕೊಂಡು ತಿಂದವರು. ಸಣ್ಣ ಖನಿಜದಿಂದ ಬರತಕ್ಕಂಥ ನೀರನ್ನು ಶೀಷೆಯಲ್ಲಿ ತರುತ್ತಾರೆ, ಇಂತಹ ಒಂದು ಬಾಟಲು ನೀರಿಗೆ ಇಪ್ಪತ್ತು ರೂಪಾಯಿ, ಒಂದು ಬಾಟಲ್ ಸೋಡಾಕ್ಕೆ 6 ರೂಪಾಯಿ, ಒಂದು ಊಟಕ್ಕೆ 25 ರೂಪಾಯಿ; ಇದು

ಎಲ್ಲಾದರೂ ಉಂಟೇ ಸ್ವಾಮಿ? ಈ ರೀತಿಯಾದರೆ, ಸಾಮಾನ್ಯ ಜನತೆ ಏನಾಗಬೇಕು? ಇವುಗಳನ್ನು ನಿಯಂತ್ರಣ ಮಾಡುವುದಕ್ಕೆ ನಿಮ್ಮ ಸರ್ಕಾರ ಕೈಗೊಂಡಿರತಕ್ಕ ಕ್ರಮಗಳು ಏನು? ಈವರೆಗೆ ಸಸ್ಯಾಹಾರಿಗಳ ಬಗ್ಗೆ ಹೇಳಿದೆ; ಮಾನ್ಯ ನಂಜಪ್ಪನವರು ಮುನಿಸಿಕೊಳ್ಳಬಹುದು. ಇಲ್ಲಿ ನಿಮಗಾಗಿ ಮಾಂಸಾಹಾರಿಗಳ ಪಟ್ಟಿಯನ್ನು ತಂದಿದ್ದೇನೆ. ಬೇಕೆಂದರೆ ಅದನ್ನೂ ಹೇಳುತ್ತೇನೆ. ಮತ್ತೊಂದು ಇದರ ಉದ್ದೇಶ ಹೇಳುತ್ತಿದ್ದೇನೆ. ಏನೆಂದರೆ, ಮಾನ್ಯ ಮಂಜುನಾಥ್‌ರವರೂ ನನ್ನ ವಾದವನ್ನು ನಿಜವಾಗಿಯೂ ಒಪ್ಪುತ್ತಾರೆ. ಆದರೆ ಅವರು, ಕಾಂಗ್ರೆಸ್ ಪಕ್ಷದಲ್ಲಿರುವುದರಿಂದ, ಯಾವಾಗಲೂ ತಮ್ಮ ಪಕ್ಷವನ್ನು ಉಳಿಸಬೇಕೆಂದು, ಮೊದಲಿನಿಂದಲೂ ಆಸ್ತೆಯಿಂದ ಇರತಕ್ಕವರು. ಎಂತಹ ಸಂದರ್ಭದಲ್ಲಿಯೂ ಅವರು ಅವರ ಪಕ್ಷದ ಜೊತೆಯಲ್ಲಿರಬೇಕು. ಅವರ ಜೊತೆಯಲ್ಲಿ ಪ್ರತಿಸಾರಿಯೂ ಮಂತ್ರಿಗಳಾಗಬೇಕು. ಯಾವುದೇ ಸರ್ಕಾರ ಬರಲಿ, ಮಂತ್ರಿಗಳಾಗಬೇಕೆನ್ನುವವರು. ನಾನು ಅವರ ಚಾತುರ್ಯವನ್ನು ಒಪ್ಪುತ್ತೇನೆ. ಒಂದು ಪ್ರಶ್ನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮದ್ಯಪಾನದವರು ನಮ್ಮನ್ನು ಮರೆತರು ಎಂದು ಹೇಳಬಾರದು. ಒಂದು ಬಾಟಲು ಬೀರಿಗೆ 45 ರೂಪಾಯಿಗಳೆಂದರೆ ಇದನ್ನು ನೀವು ಒಪ್ಪುತ್ತೀರಾ, ನೀವು ಯಾರೂ ಇದನ್ನು ಒಪ್ಪುವುದಿಲ್ಲ. ತಾವೇ ಹೇಳಿ, ನನ್ನದೇನೂ ಅಭ್ಯಂತರವಿಲ್ಲ. ವಿಸ್ಕಿ ಒಂದು ಪೆಗ್ 72 ರೂಪಾಯಿ, ಬ್ರಾಂದಿ ಒಂದು ಪೆಗ್ 32 ರೂಪಾಯಿ. ಜಿನ್ 25 ರೂಪಾಯಿ, ರಮ್ 25 ರೂಪಾಯಿ, ಅವರ ಹಣೆಬರಹ ಏನು ಸ್ವಾಮಿ. ನಾನಂತೂ ಸಂಪೂರ್ಣ ಪಾನನಿರೋಧ ಜಾರಿಯಾಗಬೇಕು, ಪಾನನಿರೋಧ ಯಶಸ್ವಿಯಾಗಬೇಕೆಂದು ಹೇಳುವವನು. ನಾನು ಕುಡಿಯುವುದಿಲ್ಲವೆಂದರೆ, ಬೇರೆಯವರನ್ನೂ ನೀವು ಕುಡಿಯುವುದು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ? ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಸಂಪೂರ್ಣವಾಗಿ ಕುಡಿಯುವುದಿಲ್ಲ.. ಕಾಫಿ ಕುಡಿಯುವುದಿಲ್ಲ. ಟೀ ಕುಡಿಯುವುದಿಲ್ಲ, ಬೀಡಿ ಸೇದುವುದಿಲ್ಲ. ಸಿಗರೇಟ್ ಸೇದುವುದಿಲ್ಲ. ನಮ್ಮ ವೆಂಕಟೇಶ್‌ರವರು ಹೇಳಿದ ಹಾಗೆ ಹಾಲು ಮಾತ್ರ ಕುಡಿಯುತ್ತೇನೆ;ಇದು ಅವರಿಗೆ ಗೊತ್ತಿದೆ. ಆದ್ದರಿಂದ, ನಾನು ತಮಗೆ ಹೇಳುತ್ತಿದ್ದೇನೆ, ಈ ರೀತಿಯ ಯಾವುದೇ ಅಭ್ಯಾಸಗಳು ನನಗೆ ಬರಲಿಲ್ಲ. ನಿಮ್ಮ ಜೊತೆ ಸೇರಿದ್ದರೆ ಚೆನ್ನಾಗಿರುತ್ತಿತ್ತು. ಅಂತಹ ಅಭ್ಯಾಸಗಳು ಯಾವುವೂ ನನಗೆ ಬರಲಿಲ್ಲ. ಹೀಗಾಗೆ ಇದು ಅತ್ಯಂತ ನೋವಿನ ಪ್ರಸಂಗವಾಗಿದೆ. ಈ ಸರ್ಕಾರಗಳ ಬಗ್ಗೆ, ನಮ್ಮ ನಾಡಿನ ಹಿರಿಯ ಕವಿ, ಬರಹಗಾರ, ಧೀಮಂತ, ಶ್ರೇಷ್ಠ,ಡಿ.ವಿ.ಜಿ.ಯವರು ಬರೆದ ಮಂಕುತಿಮ್ಮನ ಕಗ್ಗ ಎಂಬುದು ಈ ಯುಗದ, ಮಹಾದೊಡ್ಡ ವಿದ್ವತ್ಪೂರ್ಣವಾದ ಕಾವ್ಯವೆಂಬುದರಲ್ಲಿ ಎರಡನೇ ಅಭಿಪ್ರಾಯ ಇಲ್ಲ.

"ಸರ್ಕಾರ, ಹರಿಗೋಲು, ತೆರೆ ಸುಳಿಗಳು, ಅತ್ತಿತ್ತ,
ಸುರೆ ಕುಡಿದವರು ಕೆಲರು, ಹುಟ್ಟುಹಾಕುವರು, ಬಿರುಗಾಳಿ
ಬೀಸುವುದು, ಜನರೆದ್ದು ಕುಣಿಯುವುದು, ಹುರುಳುವುದೇನಿಹುದು ಅಚ್ಚರಿ"

ಈ ಮಾತನ್ನು ಹೇಳಿ, ಇಂತಹ ಸರ್ಕಾರಗಳ ಬಗ್ಗೆ, ರಾಜಕಾರಣದ ಬಗ್ಗೆ ಅವರು ವಿಡಂಬನೆಯ ಮೂಲಕ ಬಹಳ, ಅತ್ಯಂತ ಸುಂದರವಾದ ವಿಚಾರಗಳನ್ನು ಹೇಳಿದ್ದಾರೆ.

"ಬದುಕಿದರೆ ನಾಯಕರು, ಏಕನೋ ಅನೇಕರೋ,
ಇದಿಯೋ, ಪೌರುಷವೋ, ದುರುಮವೋ, ಅಂಗಬಲವೋ,
ಕುದುರುವುದು ಅದೆಂತು, ಈ ಅವ್ಯವಸ್ಥೆಯ ಪಾಡು,
ಹದಿಬುದಿಯೇ ಗತಿಯೇನು"

ಇದು ಸರ್ಕಾರಕ್ಕೆ ಸಂಬಂಧಪಟ್ಟಂತೆ, ಹೊಂದಾಣಿಕೆಯಾಗುವಂಥ ಎಂತಹ ಸುಂದರವಾದ ಬರಹದಲ್ಲಿ ಇದೆ. ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ. ಈ ಸರ್ಕಾರ ಸಂಪೂರ್ಣವಾಗಿ ದಾರಿ ತಪ್ಪಿದೆ.

ತಮ್ಮ ಆಯವ್ಯಯದಲ್ಲಿ ಏನೇನು ಭರವಸೆಗಳನ್ನು ಜನರಿಗೆ ನಿಡಿದ್ದರೋ ಆ ಭರವಸೆಗಳನ್ನು ಈಡೇರಿಸುವಲ್ಲಿ ಸಂಪೂರ್ಣವಾಗಿ, ಸಮಗ್ರವಾಗಿ ವಿಫಲರಾಗಿದ್ದಾರೆ. ಇವತ್ತು ಅಬಕಾರಿ ನೀತಿ ಬಗ್ಗೆ ಒಂದೇ ಒಂದೇ ಮಾತು ಹೇಳುತ್ತೇನೆ. ಇವರು ಏನು ಅದರಲ್ಲಿ ಹೇಳಿದ್ದಾರೆ ಎಂದರೆ,

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ವಾಟಾಳ್ ನಾಗರಾಜ್ರವರು ಮಂಕುತಿಮ್ಮನ ಕಗ್ಗ ಓದಿ ಹೇಳಿದರು. ಅದರಲ್ಲಿ ಇರುವುದು ಸರ್ಕಾರಕ್ಕೆ ಮಾತ್ರ ಅಲ್ಲ, ಅದು ಎಲ್ಲಾ ಜನರಿಗೂ ಸಂಬಂಧಪಟ್ಟ ಹಾಗೆ ಹೇಳಿರುವುದು.

ಶ್ರೀ ವಾಟಾಳ್ ನಾಗರಾಜ್ : ಹೌದು, ಎಲ್ಲರಿಗೂ ಸೇರಿ ಅದನ್ನು ಹೇಳಲಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಮೇಲೆ ಅಧ್ಯಕ್ಷರೆ, ಅಬಕಾರಿ ನೀತಿಯಲ್ಲಿ, ಸಾರ್ವಜನಿಕ ಸ್ಥಳಗಳಾದ, ದೇವಸ್ಥಾನಗಳ ಪಕ್ಕಗಳಲ್ಲಿ, ಶಾಲಾ ಕಾಲೇಜುಗಳ ಪಕ್ಕದಲ್ಲಿ ಮದ್ಯಪಾನ ಅಂಗಡಿಗಳು ಇರಬಾರದೆಂದು ಇದೆ. ಇದರ ಬಗ್ಗೆ ಸ್ಪಷ್ಟವಾದ ಆದೇಶ ಮತ್ತು ಕಾನೂನು ಕೂಡ ಇದೆ. ಈ ಬಗ್ಗೆ ಮದ್ಯಪಾನದ ವ್ಯಾಪಾರಸ್ಥರು ಶ್ರೇಷ್ಠ ನ್ಯಾಯಾಲಯಕ್ಕೆ ಹೋದರು. ಶ್ರೇಷ್ಠ ನ್ಯಾಯಾಲಯದಲ್ಲಿ, ಸರ್ಕಾರದವರು ಮಾಡಿರುವುದನ್ನು ಎತ್ತಿ ಹಿಡಿದರು. ಇವತ್ತು ನೀವು ಎಲ್ಲಾ ಮದ್ಯಪಾನದ ಅಂಗಡಿಗಳ ಪರವಾನಿಗೆಯನ್ನ ನವೀಕರಣ ಮಾಡುವಾಗ, ಇಂತಿಂಥ ಕಡೆಗಳಲ್ಲಿ ಮದ್ಯಪಾನ ಅಂಗಡಿಗಳು ಇರಬಾರದೆಂದು ಹೇಳಿ ಆದೇಶ ಮಾಡಿದ್ದೀರಾ? ನೀವು ಮಾಡಿಲ್ಲ, ಎಲ್ಲಾ ಅಂಗಡಿಗಳೂ ಇದ್ದಲ್ಲಿಯೇ ಇವೆ. ಮದ್ಯಪಾನ ಅಂಗಡಿಗಳು, ಶಾಲಾ ಕಾಲೇಜುಗಳ ಹತ್ತಿರ, ದೇವಸ್ಥಾನಗಳ ಹತ್ತಿರ, ಧರ್ಮ ಛತ್ರಗಳ ಹತ್ತಿರ ಹೀಗೆ ಎಲ್ಲಾ ಕಡೆ ಇವೆ. ಈ ಎಲ್ಲಾ ವಿಚಾರ ನೋಡಿದಾಗ ನನಗನಿಸುತ್ತದೆ, ನಿಜವಾಗಿ ಸರ್ಕಾರ ಹೇಳುವುದೊಂದು ಮಾಡುವುದೊಂದು. ಇವರು ಜನರಿಗೆ ಹೇಳುವುದೊಂದು ಆಡಳಿತವನ್ನು ಮಾಡುವುದೊಂದು ರೀತಿ ಆಗಿದೆ. ಇವರ ಆಡಳಿತವು ಸಂಪೂರ್ಣವಾಗಿ ಇವರ ಈ ದ್ವಂದ್ವ ನೀತಿಯಿಂದಾಗಿ ಕುಸಿದುಬಿದ್ದಿದೆ. ಆಮೇಲೆ ವರ್ಗಾವರ್ಗಿ ವಿಚಾರದಲ್ಲಿ ಹೇಳಬೇಕೆಂದರೆ ಈಗಲೂ ವರ್ಗಾವಣೆಗಳನ್ನು ಮಾಡುತ್ತಿದ್ದಾರೆ. ಯಾರನ್ನು ಬೇಕಾದರೂ ಎಲ್ಲಿಗೆ ಬೇಕಾದರೂ ವರ್ಗಾವಣೆ ಮಾಡುತ್ತಿದ್ದಾರೆ. ವರ್ಗಾವಣೆ ವಿಷಯದಲ್ಲಿ ನಾವು ದಿವಂಗತ ಗುಂಡೂರಾಯರನ್ನು ನೆನೆದುಕೊಳ್ಳಬೇಕು. ವರ್ಗಾವರ್ಗಿ ಬಗ್ಗೆ ಸ್ಪಷ್ಟವಾದ ನೀತಿಯನ್ನು ಅವರು ಮಾಡಿದ್ದರು. ಆ ತರಹ ಸ್ಪಷ್ಟವಾದ ನೀತಿಯನ್ನು ವರ್ಗಾವರ್ಗಿ ವಿಚಾರದಲ್ಲಿ ಇವರೂ ಮಾಡಲಿ. ಸ್ಪಷ್ಟವಾದ ನೀತಿ ಮಾಡಿದರೆ ಮಾತ್ರ ಇದು ಸರಿಹೋಗುತ್ತದೆ. ಇಲ್ಲವೆಂದರೆ ವರ್ಗಾವರ್ಗಿಯನ್ನು ವರ್ಷವಿಡೀ ಮಾಡುತ್ತಲೇ ಇರುತ್ತಾರೆ. ಆಮೇಲೆ ಇವರು ಕೆರೆ ಕಲ್ಯಾಣ, ಉದ್ಯೋಗ ಜ್ಯೋತಿ, ಸಾಗರದೀಪ, ಬೆಳ್ಳಿ ಬೆಳಕು, ಬೀದಿ ಭಾಗ್ಯ ಯೋಜನೆಗಳನ್ನು ಮಾಡಿದ್ದಾರೆ. ಇವರಿಗಿಂಥ ಮೊದಲು ಮಾನ್ಯ ಬಂಗಾರಪ್ಪನವರು ಆಶ್ರಯ, ಅಕ್ಷಯ, ಆರಾಧನ, ಶುಶ್ರೂಷ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದರು. ಅದು ಒಂದು ಭೂತ, ಇದು ಒಂದು ಪ್ರೇತ. ಎಲ್ಲಿಗೆ ಹೋಗಬೇಕು ಜನರು? ಎಷ್ಟು ಜನರನ್ನು ಇದುವರೆಗೆ ವೈದ್ಯರುಗಳು ತಪಾಸಣೆ ಮಾಡಿದ್ದಾರೆ? ಇರತಕ್ಕಂಥ ಆಸ್ಪತ್ರೆಗಳಲ್ಲೇ ವೈದ್ಯರುಗಳಿಲ್ಲ. ಇನ್ನು ಜನಗಳನ್ನೆಲ್ಲಾ ಹುಡುಕಿ ಅವರುಗಳನ್ನು ನಿಲ್ಲಿಸಿ ತಪಾಸಣೆ ಮಾಡುವುದು ಸಾಧ್ಯವೆ? ಇದು ನಿಜವಾಗಿ ನಗೆಪಾಟಲಿನ ವಿಷಯವಾಗಿದೆ. ಇದಕ್ಕೆ ಯಾರು ಕಾರಣ? ಮೂರು ಮುಕ್ಕಾಲು ವರ್ಷಗಳಿಂದ ಆಡಳಿತ ನಡೆಸುತ್ತಿರುವ ಈ ಕಾಂಗ್ರೆಸ್ ಸರ್ಕಾರವೇ

ಇದಕ್ಕೆಲ್ಲಾ ಕಾರಣವೆಂದು ನಾ ಘಂಟಾಘೋಷವಾಗಿ ಹೇಳುತ್ತೇನೆ. ತಮ್ಮ ಸರ್ಕಾರ ಯಾವುದೇ ನಿಮಿಷದಲ್ಲೂ ಉಳಿಯುವುದಕ್ಕೆ ಯಾವ ಅರ್ಹತೆಯ ಇಲ್ಲ. ನಾವ ತಂದಿರತಕ್ಕಂಥ ಅವಿಶ್ವಾಸ ನಿರ್ಣಯವನ್ನು ನೀವು ಸಂಪೂರ್ಣವಾಗಿ ಒಪ್ಪಿಕೊಂಡು ರಾಜೀನಾಮೆಯನ್ನು ಕೊಡಬೇಕು. ಏನೋ, ಕಾಂಗ್ರೆಸ್ ಸರ್ಕಾರದ ಮುಖ್ಯ ಸಚೇತಕರು ಎಲ್ಲಾ ಶಾಸಕರುಗಳಿಗೂ ವಿಪ್ ಕೊಟ್ಟು ಎಲ್ಲರೂ ಇಲ್ಲೇ ಇರಬೇಕು, ವೀರಪ್ಪಮೊಯಿಲಿಯವರ ಪರವಾಗಿ ಮತ ಹಾಕಬೇಕೆಂದು ಹೇಳಿದ್ದಾರೆ. ನಾನು ಕೇಳುತ್ತೇನ ನೀವೆಲ್ಲಾ ಒಂದೇ ಆಗಿದ್ದೀರಾ?

ಶ್ರೀ ಕೆ. ಹೆಚ್. ರಂಗನಾಥ್ : ನೀವಂತೂ ಒಬ್ಬರೇ ಇರುವುದು. ನಿಮಗೆ ಯಾವ ವಿಪ್ ಬೇಕಾಗಿಲ್ಲ. ನಾವು ಬಹಳ ಜನರು ಇರುವುದರಿಂದ ಎಲ್ಲರೂ ಇರಬೇಕೆಂದು ವಿಪ್ ಕೊಟ್ಟಿರುತ್ತಾರೆ, ಅಷ್ಟೇ.

ಶ್ರೀ ವಾಟಾಳ್ ನಾಗರಾಜ್ : ನಾನು ಒಬ್ಬ ಇದ್ದರೂ ನಿಮ್ಮ 185 ಜನರಿಗಿಂತಲೂ ಹೆಚ್ಚು. ಇದನ್ನು ಕೇಳಿ ಮಾನ್ಯ ಘೋರ್ಪಡೆಯವರು ನಗುತ್ತಿದ್ದಾರೆ. ಅವರು ನಗುವುದನ್ನು ನೋಡಿದರೆ ನನ್ನ ಮಾತಿಗೆ ಅವರ ಒಪ್ಪಿಗೆ ಇದೆ ಎಂದಾಯಿತು. ನೀವು ಏಕೆ ಅಷ್ಟು ಕಷ್ಟಪಡುತ್ತೀರಿ, ನಾಳೆ ದಿವಸ ನಾವು 80 ಜನ ಸೇರಿರುತ್ತೇವೆ, 90 ಜನ ಸೇರುತ್ತೇವೆ, 100 ಜನ ಸೇರುತ್ತೇವೆ, ನಾಳೆ ಬೆಳಿಗ್ಗೆ ಹೋಗುತ್ತೇವೆ ಎನ್ನುವ ಬದಲು ನಮ್ಮ ಜೊತೆಯಲ್ಲಿ ನೀವು ಸೇರಿಕೊಂಡರೆ ಒಂದು ನಿಮಿಷದಲ್ಲಿ ಎಲ್ಲಾ ಮುಗಿಯುತ್ತದೆ. ಈ ಸರ್ಕಾರದ ಮೇಲೆ ವಿರೋಧ ಇದೆ, ಈ ಮುಖ್ಯಮಂತ್ರಿಗಳನ್ನು ಇಳಿಸಬೇಕು ಎನ್ನತಕ್ಕಂಥ ಒಂದು ಪ್ರಾಮಾಣಿಕ ಚಿಂತನೆ ನಿಮಗಿದ್ದರೆ ಇವತ್ತು ನಾವು ತಂದಿರತಕ್ಕಂಥ ಅವಿಶ್ವಾಸ ನಿರ್ಣಯಕ್ಕೆ ಸಂಪೂರ್ಣವಾದ ಬೆಂಬಲವನ್ನು ನೀವು ಕೊಡುವುದರ ಮೂಲಕ ಆಸೆಯನ್ನು ಈಡೇರಿಸಿಕೊಳ್ಳಿ. ನಮ್ಮ ಈ ಅವಿಶ್ವಾಸ ನಿರ್ಣಯಕ್ಕೆ ತಮ್ಮೆಲ್ಲರ ಬಹುಮತವನ್ನು ನಾವು ಕೋರುತ್ತೇವೆ. ನಾನು ಸ್ಪಷ್ಟವಾಗಿ ಮತ್ತು ನೇರವಾಗಿ ಹೇಳುತ್ತೇನೆ. ಈ ಸರ್ಕಾರ ಉಳಿಯಬಾರದು. ನಿಮ್ಮೆಲ್ಲರ ಒಮ್ಮತದಿಂದ ಇವತ್ತು ಸರ್ಕಾರ ಉಳಿಯಬಹುದು. ಆದರೆ ಜನರ ಮಧ್ಯೆ, ನಾಲ್ಕೂವರೆ ಕೋಟಿ ಕನ್ನಡಿಗರ ಮಧ್ಯೆ ನಿಮ್ಮ ಸರ್ಕಾರ ಇವತ್ತು ಉಳಿದಿಲ್ಲ. ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇನ್ನೂ ಮುಂದೆ ನಾವು ಹೋಗಿ ಹೇಳುವುದಾದರೆ, ಕೇಂದ್ರದ ಕೈಗೊಂಬೆ ನಿಮ್ಮ ಸರ್ಕಾರ, ಕೇಂದ್ರದ ಸೂತ್ರದ ಗೊಂಬೆ ನಿಮ್ಮ ಸರ್ಕಾರ. ಕೇಂದ್ರದಿಂದ ಬರಬೇಕಾದ ಅನೇಕ ಸವಲತ್ತುಗಳನ್ನು ಪಡೆಯುವುದರಲ್ಲಿ ನೀವು ವಿಫಲರಾಗಿದ್ದೀರಿ. ಕಾವೇರಿ ಬಗ್ಗೆ ಮಾತನಾಡುವಲ್ಲಿ ನೀವು ವಿಫಲರಾಗಿದ್ದೀರಿ. ಉಕ್ಕು ಕಾರ್ಖಾನೆ ಪಡೆಯುವ ಬಗ್ಗೆ ವಿಫಲರಾಗಿದ್ದೀರಿ. ನಮಗೆ ಬರಬೇಕಾದ ಅನೇಕ ಬೇಡಿಕೆಗಳ ಬಗ್ಗೆ ಕೇಂದ್ರದ ಜೊತೆಯಲ್ಲಿ ಮಾತನಾಡುವುದಕ್ಕೆ ನಿಮಗೆ ಮುಖ ಇಲ್ಲ. ಈ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆದಿದೆ ಎನ್ನತಕ್ಕಂಥ ಮಾತನ್ನು ನೇರವಾಗಿ ಹೇಳುವುದಕ್ಕಾಗುವುದಿಲ್ಲ ಆದರೆ ನಿಮ್ಮ ಸರ್ಕಾರ ಕುಸಿದು ಬಿದ್ದುಹೋಗಿದೆ ಆದುದರಿಂದ ನೀವು ರಾಜೀನಾಮೆಯನ್ನು ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್ ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೇ, ನಾನು ಹೇಳಬೇಕಾದ ವಿಷಯಗಳನ್ನೆಲ್ಲಾ ನಮ್ಮ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ನಾನಾದರೂ ಗ್ರಾಮಾಂತರ ಜನತೆ ಈ ಸರ್ಕಾರದಿಂದ ಎಷ್ಟರಮಟ್ಟಿನ ಪ್ರಯೋಜನ ಪಡೆದಿದ್ದಾರೆ ಮತ್ತು ಎಷ್ಟರಮಟ್ಟಿನ ವಿಶ್ವಾಸವನ್ನು ಇಟ್ಟುಕೊಳ್ಳಬಹುದೆಂಬ ಬಗ್ಗೆ 4 ಮಾತುಗಳನ್ನಾಡುತ್ತೇನೆ. ಇವತ್ತು ನಾವು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದೇವೆ. ಇದರ ಬಗ್ಗೆ ನಮ್ಮ ಮುಖಂಡರು ಈಗಾಗಲೇ ಹೇಳಿದ್ದಾರೆ. ಈ ನಿರ್ಣಯದ

ಮಂಡನೆಯಾದ ಸರ್ಕಾರವನ್ನು ಸೋಲಿಸುವುದಕ್ಕಾಗುವುದಿಲ್ಲವೆಂದು ನಾವು ಒಪ್ಪಿಕೊಂಡಿದ್ದೇವೆ. ಆದರೆ ನಿಮ್ಮ ವೈಫಲ್ಯಗಳನ್ನು ಹೇಳುವುದಕ್ಕೆ ಒಂದು ಅವಕಾಶ ಅಷ್ಟೇ ಇದು; ಹಿಂದಿನ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಹೋದಮೇಲೆ ಸನ್ಮಾನ್ಯ ಮೊಯಿಲಿಯವರು ಒಂದು ಬಜೆಟ್ ಭಾಷಣವನ್ನು ಫೆಬ್ರವರಿ ತಿಂಗಳಲ್ಲಿ ಓದಿದರು. ಅವರು ಹೇಳಿದ್ದನ್ನು ನೋಡಿ ಇನ್ನು ಮೇಲಾದರೂ ದೀನದಲಿತರಿಗೆ, ಮೈ ಮೇಲೆ ಬಟ್ಟೆ ಇಲ್ಲದವರಿಗೆ, ವಾಸಕ್ಕೆ ತಲೆ ಮೇಲೆ ಸೂರು ಇಲ್ಲದೆ ಇರುವವರಿಗೆ ಅನುಕೂಲವಾಗಬಹುದೆಂದು ಅಂದುಕೊಂಡಿದ್ದೆವು. ಅವರು ಒಂದು ಕಡೆ ಈ ರೀತಿ ಹೇಳಿದ್ದರು.

"Of the 4.27 lakh siteless familes in the State as on 1/1/1993, 2 lakhs will be given free sites in 1993-94 and for which a budget provision of Rs. 10 crores has been made. The balance will be covered the year after. Of the targe of 2.35 lakh houses to be constructed in 1991-92, only 1579 were now completed up to December 1992. After review, it is now proposed that 1.06 lakh houses at a total cost of Rs. 1,60,50,000 will be constructed by June, 1993 and further one lakh houses will be taken up during 1993-94". ಎಂದು;

1.10 ಪಿ.ಎಂ.

ನಾನು ಒಂದು ಪ್ರಶ್ನೆಯನ್ನು ತಮಗೆ ಕೇಳಬಯಸುತ್ತೇನೆ. ನೀವುಗಳು ಜನರಿಗೆ ನಿರ್ಗತಿಕ ಮನೆಗಳನ್ನು ಒದಗಿಸಿಕೊಡುತ್ತೇವೆ ಎಂದು ಹೇಳಿದ್ದೀರಲ್ಲ? ಎಷ್ಟರಮಟ್ಟಿಗೆ ಈ ಆಶ್ವಾಸನೆಯನ್ನು ಕಳೆದ ಐದು ತಿಂಗಳುಗಳಲ್ಲಿ ನೀವು ನೆರವೇರಿಸಿದ್ದೀರಿ? ಜೂನ್ ತಿಂಗಳವರೆಗೆ 1 ಲಕ್ಷ ಮನೆಗಳನ್ನು ಕಟ್ಟಿಸಿ ಕೊಡುತ್ತೇವೆ ಎಂದು ಹೇಳಿದ್ದೀರಲ್ಲ? ಹೋಗಲಿ ಆರು ಸಾವಿರ ಮನೆಗಳನ್ನಾದರೂ ನೀವು ಕಟ್ಟಿದ್ದೀರಾ? ನನ್ನ ತಾಲ್ಲೂಕಿನ ಮಟ್ಟಿಗೆ ಹೇಳವುದಾದರೆ, 30ನೇ ತಾರೀಖು ಬಿಡಿಓ ರಿಂದ ಒಂದು ರಿಪೋರ್ಟನ್ನು ನಾನು ತಂದಿದ್ದೇನೆ. ನಮ್ಮಲ್ಲಿ ಒಂದು ಮನೆಗೂ ಕೂಡ ಹಣವು ಬಿಡುಗಡೆಯಾಗಿಲ್ಲ. ಜವಾಹರ್ ರೋಜ್ಗಾರ್ ಯೋಜನೆಯಡಿಯಲ್ಲಿ 2 ಲಕ್ಷ 55 ಸಾವಿರ ರೂ.ಗಳು ರಿಲೀಸ್ ಆಗಿದ್ದು, ಹಣ ಮಾತ್ರ ಖರ್ಚಾಗಿಲ್ಲ ಎಲ್ಲಾ ಮಂಡಳಿಗಳಿಗೆ ಹಣ ವಿತರಿಸಿದ್ದೇವೆ ಎಂದು ಹೇಳುತ್ತಾರೆ. ಆ ಮೇಲೆ ಆಶ್ರಯ ಯೋಜನೆಗೆ ಆರು ಲಕ್ಷ ರೂಪಾಯಿಗಳು ರಿಲೀಸ್ ಆಗಿದ್ದು ಖರ್ಚಾಗಿಲ್ಲ ಕ್ರಮ ಕೈಗೊಂಡಿದೆ. ಎನ್ನುತ್ತಾರೆ. ಆಶ್ರಯದಲ್ಲಿ ಮಧುರೆ ಹೋಬಳಿಗೆ 50 ಸಾವಿರ ರೂಪಾಯಿಗಳು ರಿಲೀಸ್ ಆಗಿದ್ದು ಖರ್ಚಾಗಿಲ್ಲ. ಡಾಕ್ಟರ್ ಅಂಬೇಡ್ಕರ್ ಜನ್ಮಶತಾಬ್ದಿ ಅಂಗವಾಗಿ 7 ಲಕ್ಷ ರೂಪಾಯಿಗಳು ರಿಲೀಸ್ ಆಗಿದ್ದು, ಖರ್ಚಾಗಿಲ್ಲ, ಇದು ಎರಡು ವರ್ಷಗಳ ಹಿಂದೆ ಆಗಬೇಕಾದುದು. ಕ್ರಮ ಕೈಗೊಂಡಿರುತ್ತದೆ ಎನ್ನುತ್ತಾರೆ. ಐಆರ್‌ಡಿಪಿ ಯಡಿಯಲ್ಲಿ 4 ಲಕ್ಷ 94 ಸಾವಿರ ರಿಲೀಸ್ ಆಗಿದೆ, ವಿತರಿಸಿರುತ್ತದೆ. ಆದರೆ ಖರ್ಚಾಗಿಲ್ಲ. ನಾನು ಅವರನ್ನು ಏತಕ್ಕಾಗಿ ಈ ಹಣ ಖರ್ಚಾಗಿಲ್ಲ ಅಂದರೆ ಹಣ ರಿಲೀಸ್ ಆಗಿದ್ದರೂ ಕೂಡ ಟ್ರೆಜರಿಯಿಂದ ಆನರ್ ಮಾಡುತ್ತಾ ಇಲ್ಲ ಎಂದು ಹೇಳಿದರು. ನಾನು ಕೂಡ ಆಶ್ರಯ ಸಮಿತಿಯ ಅಧ್ಯಕ್ಷನಾಗಿ ನನಗೆ ನಾಚಿಕೆಯಾಗುತ್ತದೆ. ನಾನು ಏಕೆ ಅದಕ್ಕೆ ಅಧ್ಯಕ್ಷರಾಗಿ ಇರಬೇಕು? ಜನರು ಬಂದು ನನ್ನನ್ನು ಕೇಳುತ್ತಾರೆ. ನಾನು ವಿರೋಧ ಪಕ್ಷದ ಶಾಸಕನಾಗಿರುವುದರಿಂದ ನನಗೆ ಮೋಸ ಮಾಡುತ್ತಿರಬಹುದು ಎಂದು ಅಂದುಕೊಂಡಿದ್ದೆ. ಆಗಸ್ಟ್ 3ನೇ ತಾರೀಖಿನಂದು. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಈ ಬಗ್ಗೆ ಒಂದು ವಿಚಾರ ಬಂದಿತ್ತು. ಅದು ಈ ರೀತಿ ಇದೆ.

"WHEN DREAMS DIE."

"Ashraya, the very name of the scheme meant Shelter and it was with the intention of providing housing to the poor that this programme was launched by the State Government and the underprivileged dear to dream of homes of their own. But barely a year down the road and all dreams lie shattered. In Karajagi village of Haveri Taluka, the work was started on 50 houses under the scheme in April last year. Today the work has come to a complete standstill. Only one of the 50 houses under construction is ready for occupation..."

Sir, out of 50 houses so far only one house is ready for occupation.

'4 Houses stand without evens roof. 21 houses stand half-complete and only 12 have a plinth. In the entire taluka, this is the only village where the Ashraya Scheme had been initiated and the people were absolutely disheartened when this also came to an abrupt end. A young social worker and Dharwad District Youth Congress Committee Member Sri Pardeshi met the Housing Minister Sandra and requested him to intervene so that the construction could start immediately. A Memorandum was also submitted to the Chief Minister but nothing has changed and complete houses stand and marked at the poor who dear to dream and as the same 'Dreams Die Hard."

Are you worth calling yourself a Government.

ಸರಕಾರ ಎಂದು ಹೇಳಿಸಿಕೊಳ್ಳುವುದಕ್ಕೆ ಯಾವ ನೈತಿಕ ಹಕ್ಕು ನಿಮಗೆ ಇದೆ? ಹೀಗಾದರೆ ಜನರು ನಿಮ್ಮ ಮೇಲೆ ಏನು ವಿಶ್ವಾಸವನ್ನು ಇಟ್ಟುಕೊಳ್ಳುತ್ತಾರೆ? ಇಲ್ಲಿ ಇವೊತ್ತು ನೀವು ಅವಿಶ್ವಾಸ ನಿರ್ಣಯವನ್ನು ಸಮರ್ಥಿಸಿಕೊಂಡು ಗೆದ್ದುಕೊಂಡು ಹೋಗಬಹುದು. ಆದರೆ ಜನರು ನಿಮ್ಮ ಬಗ್ಗೆ ಏನು ಯೋಚನೆ ಮಾಡುತ್ತಾ ಇದ್ದಾರೆ? ಸಾಂಡ್ರಾರವರು ಇವೊತ್ತು ನ್ಯಾಷನಲ್ ಪಾಲಿಟಿಕ್ಸ್ ಮಾಡುತ್ತಿದ್ದಾರೆ, ಯಾರ್ಯಾರೋ ಮಂತ್ರಿಗಳನ್ನು ಡಿಸ್‌ಮಿಸ್ ಮಾಡಬೇಕು ಎಂದೆಲ್ಲಾ ಹೇಳುತ್ತಿದ್ದಾರೆ. ಮೊದಲು ಅವರ ಖಾತೆಯ ಮನೆಗಳನ್ನು ಕಟ್ಟಿಸಿಕೊಡಲು ಯೋಚನೆ ಮಾಡದೆ ದೊಡ್ಡ ಲೀಡರ್ ಆಗಿ ಮಂತ್ರಿಗಳನ್ನು ಡಿಸ್ಮಿಸ್ ಮಾಡಲು ಹೊರಟಿದ್ದಾರೆ. ಅವರು ದೊಡ್ಡ ಲೀಡರ್ ಆಗಲಿ, ನಮಗೆ ಸಂತೋಷ. ಆದರೆ ಅವರ ಕಾರ್ಯಕ್ರಮಗಳು ಏನಾಗುತ್ತಿದೆ? ಇಂಥ ತಲೆಯ ಮೇಲೆ ಸೂರು ಇಲ್ಲದಿರುವ ಜನರು ನಿಮ್ಮನ್ನು ನಂಬಿಕೊಂಡಿರುವ ಜನರು, ಎಷ್ಟರಮಟ್ಟಿಗೆ ನಿಮ್ಮಲ್ಲಿ ವಿಶ್ವಾಸವನ್ನು ವ್ಯಕ್ತ ಮಾಡುತ್ತಾರೆ? ಇದನ್ನು ಯೋಚನೆ ಮಾಡಬೇಕು. ಜನರಿಗೆ ನಿಮ್ಮ ಮೇಲೆ ವಿಶ್ವಾಸವಿಲ್ಲದ ಮೇಲೆ ನೀವೇಕೆ ಅಲ್ಲಿ ಇರುತ್ತೀರಿ? ಇದು ಬರೇ 30 ಜನರ ಅವಿಶ್ವಾಸ ಮಾತ್ರವಲ್ಲ, ರಾಜ್ಯದ ಜನರೇ ನಿಮ್ಮ ಮೇಲೆ ಅವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಎಂದರೆ ನಿಮಗೆ ಅಧಿಕಾರದಲ್ಲಿ ಮುಂದುವರಿಯುವ ಹಕ್ಕಿಲ್ಲ.

ಶ್ರೀ ಕೆ. ಶಿವಮೂರ್ತಿ : ತಮ್ಮ ಕಾಲದಲ್ಲಿ ಜನತಾ ಮನೆಗಳನ್ನು ಕಟ್ಟಿದ್ದರಲ್ಲ ಇವತ್ತಿಗೂ ಅದರ ದುಡ್ಡು ಕೊಟ್ಟಿಲ್ಲ, ಪಾಪ ಆ ಬಡವರು ಇವತ್ತಿಗೂ ಅಲೆಯುತ್ತಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಈಗ ನಿಮ್ಮ ಟೈಂ ಬಂದಿದೆ, ನೀವು ಅದನ್ನು ಕೊಡಬೇಕು, ಈಗ ಅವಿಶ್ವಾಸ ಮಂಡಿಸಿರುವುದು ನಮ್ಮ ಸರ್ಕಾರದ ಮೇಲಲ್ಲ. ನಿಮ್ಮ ಕೆಲಸಕ್ಕೆ ಬರದ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿರುವುದು. ಅದರ ಬಗ್ಗೆ ಮಾತಾಡಿ ನೀವೆಷ್ಟು ಸಾರಿ ಎದ್ದರೂ ನಿಮಗೇನೂ ಸಿಕ್ಕುವುದಿಲ್ಲ, ಸುಮ್ಮನೆ ನೀವು ಯಾಕೆ ಮಾತನಾಡುತ್ತೀರಿ? ನಿನ್ನೆಯೇ ನಾನು ಹೇಳಿದೆ, ನಿಮ್ಮನ್ನು ಯಾವ ದೇವರೂ ನಂಬೋಕಿಲ್ಲ ಎಂದು ಆಮೇಲೆ ಇದಿಷ್ಟೇ ಅಲ್ಲ, ಬಹಳ ಜನ ನಮ್ಮ ಶಾಸಕಮಿತ್ರರನ್ನು ಕೇಳಿದೆ, ಏನಪ್ಪಾ ಆಶ್ರಯ ಗತಿ ಏನಾಗುತ್ತಿದೆ ಅಂತ. ನಿಮಗಾಗಿರೋ ಗತಿಯೇ ನಮಗೂ ಎಂದು ಹೇಳಿದರು. ನಿಮ್ಮಲ್ಲಿ ಕಾಸಿದೆ ಎಂದು ಹೇಳ್ತೀರಿ, ಕಾಸಿದ್ದರೆ ಕೆಲಸಗಳು ಏಕೆ ಆಗುತ್ತಿಲ್ಲ? ಯಾರಾದ್ರೂ ಇದರ ಬಗ್ಗೆ ಹೇಳಬೇಕಲ್ಲಾ, ಉತ್ತರ ಕೊಡಿ. ಆಮೇಲೆ ಅಂಬೇಡ್ಕರ್ ಶತಾಬ್ದಿ, ಅವರಿಗೇಕೆ ಕೆಟ್ಟ ಹೆಸರು ತರ್ತೀರಿ ಸ್ವಾಮಿ, ಅವರ ಹೆಸರು ಏಕೆ ಹೇಳ್ತೀರಿ? ಆ ಶತಾಬ್ದಿಯೊಳಗೆ ತಾಲ್ಲೂಕಿಗೆ 50-60 ಮನೆಗಳನ್ನು ಕೊಟ್ಟಿದ್ದೀರಿ. ಇವತ್ತಿಗೂ ಒಂದು ಮನೆ ಕೊಟ್ಟಿಲ್ಲ. ಇಲ್ಲಿಯವರೆಗೆ ಹಣ ರಿಲೀಸ್ ಮಾಡಿಲ್ಲ. ಈ ಎರಡು ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಎಲ್ಲೋ ಸ್ವರ್ಗದಲ್ಲಿರುವ ಪುಣ್ಯಾತ್ಮರನ್ನು ತಂದು ಏಕೆ ಅನ್ಯಾಯ ಮಾಡ್ತಿದ್ದೀರಿ?ದಯವಿಟ್ಟು ಇದನ್ನು ನಿಲ್ಲಿಸಿ ಸ್ವಾಮಿ. ಆಮೇಲೆ ನಿಮ್ಮದೊಂದು ಸ್ಕೀಂ ಇದೆಯಲ್ಲಾ ವಿಶ್ವ, ಇದೆಲ್ಲಾ ಫ್ರಾಡ್, ಪಕ್ಕ ಢೋಂಗಿ, ನನ್ನದೇ ತಾಲ್ಲೂಕು ಆಯಾ ಶಾಸಕರು ಇನ್ಯಾಗುರೇಟ್ ಮಾಡಿರಿ ಎಂದು ಬಂಗಾರಪ್ಪನವರು ಇದ್ದಾಗ ನಮಗೆಲ್ಲಾ ಒಂದು ಲೆಟರ್ ಬರೆದಿದ್ದರು. ನಾನು ಯೋಜನೆ ಮಾಡಿದೆ. ಏನೋ ಗ್ರಾಮಾಂತರ ಪ್ರದೇಶದಲ್ಲಿ ವ್ಯವಸಾಯಕ್ಕೆ ಬಹಳ ಕಷ್ಟವಾಗಿದೆ, ಮಳೆ ಬರುವುದಿಲ್ಲ, ಈ ಮಳೆ ಕೃಷಿ ನಂಬಿಕೊಂಡು ಕುಳಿತರೆ ಜನ ಬದುಕುವುದಿಲ್ಲ. ಸಣ್ಣ ಪುಟ್ಟ ಕೈಗಾರಿಕೆಗಳನ್ನು ಮಾಡಿಕೊಳ್ಳಲಿ, ಏನಾದರೂ ಅನುಕೂಲವಾಗುತ್ತದೆ ಎಂದು ನಾನು ಹೋಗಿ ಮೆಳೆಕೋಟೆಯೊಳಗೆ ಅದನ್ನು ಇನ್ಯಾಗುರೇಟ್ ಮಾಡಿ ಅವರಿಗೆ ಈ ಸ್ಕೀಂ ಸಕ್ಸೆಸ್ ಫುಲ್ಲಾಗಲಿ, ಇದಕ್ಕೆ ಪೂರ್ಣ ಬೆಂಬಲ ಕೊಡ್ತೀನಿ ಎಂದು ಹೇಳಿಬಂದೆ. 23 ತಿಂಗಳಾಯಿತು.ಮೆಳೆಕೋಟೆಯೊಳಗೆ ಶುರುಮಾಡಿದೆನಲ್ಲಾ, ಅಲ್ಲಿ ಕುಂಬಾರರಿಗೆ ಒಂದಷ್ಟು ದುಡ್ಡು ಕೊಡಿ ಎಂದು ಹೇಳಿದ್ದೆವು. ಅದು ಇವತ್ತಿನವರೆಗೂ ಸಿಗಲಿಲ್ಲ. ಈ 23 ತಿಂಗಳೊಳಗೆ 46 ಜನಕ್ಕೆ ಲೋನ್ ಸ್ಯಾಂಕ್ಷನ್ ಮಾಡಿದ್ದಾರೆ. ಅದರಲ್ಲಿ 16.17 ಲಕ್ಷ ರೂ ಲೋನ್, ಸಬ್ಸಿಡಿ 67 ಸಾವಿರ ರೂ. ಯಾರಿಗೆ? ವೀವರ್ ಹಾಗೂ 3 ಜನ ಕುಂಬಾರರಿಗೆ ಕೊಟ್ಟಿದ್ದಾರೆ, ಮಿಕ್ಕಿದ್ದೆಲ್ಲಾ ಪವರ್ ಲೂಮ್ಸ್ ಸ್ವಾಮಿ, ಪವರ್ ಲೂಮ್ಸ್‌ಗೆ ಸಾಲ ಇವರು ಹೇಳದಿದ್ದರೂ ಕೊಡುತ್ತಾರೆ ಹೇಳಿದರೂ ಕೊಡುತ್ತಾರೆ. ಏನ್‌ಎಫ್‌ಎಸ್ ಲೋನ್ ಎಂದು (ನಾನ್ ಫಾರ್ಮಿಂಗ್ ಸ್ಕೀಂಮ್) ನಲ್ಲಿ ಒಂದು ಲೋನ್ ಬಂದಿದೆ. ಅದನ್ನು ಅಪೆಕ್ಸ್ ಬ್ಯಾಂಕ್ನಲ್ಲೂ ಕೊಡುತ್ತಾರೆ, ಜಿಲ್ಲಾಬ್ಯಾಂಕ್ ನಲ್ಲೂ ಕೊಡುತ್ತಾರೆ. ನೀವು ಅಲ್ಲಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಉಪಯೋಗಿಸಿಕೊಂಡು ಅವರಿಗೆ ಲೋನ್ ಕೊಡಿಸಿದ್ದೀರಿ, ಇದಕ್ಕೇಕೆ ವಿಶ್ವ ಎಂದು ಕರೆದಿರಿ? ಏನು ಪ್ರೊಡಕ್ಷನ್ ಜಾಸ್ತಿ ಮಾಡಿದಿರಿ? ಅಲ್ಲಿ ಈಗ 9 ಸಾವಿರ ಪವರ್ ಲೂಂಗಳಿವೆ, ಇನ್ನೂ 20Ë30 ಜಾಸ್ತಿಯಾದರೆ ಏನಾದಂತಾಯಿತು? ಆದ್ದರಿಂದ ಇಂಥ ಢೋಂಗಿ ಸ್ಕೀಮ್ ಗಳನ್ನು ಜನತೆಗೆ ಹೇಳಿ ಅವರಿಗೆ ಮೋಸ ಮಾಡಬೇಡಿ. ಅವರ ವಿಶ್ವಾಸ ನಿಮ್ಮ ಮೇಲಿಲ್ಲ ಎಂದು ನಾನಿಲ್ಲಿ ಹೇಳುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ : ತಾವು ಕೊಟ್ಟಿದ್ದರಲ್ಲಾ ತಾಳಿಭಾಗ್ಯ ಏನಾಯಿತು ಅದು? ಎಲ್ಲಾ ಸ್ಕೀಮ್ಸ್ ನ್ನು ಫ್ರಾಡ್ ಎಂದು ಹೇಳ್ತಿರಲ್ಲಾ?

ಶ್ರೀ ಆರ್.ಎಲ್. ಜಾಲಪ್ಪ : ನೀವೇನೂ ಎಲ್ಲರ ವಕ್ತಾರರೇ, ನಿಮಗೇನಾಗಿದೆ?

ಶ್ರೀ ಕೆ. ಶಿವಮೂರ್ತಿ : ನಾನು ಅದನ್ನೇ ನಿಮ್ಮನ್ನು ಕೇಳುತ್ತಿದ್ದೇನೆ ತಮಗೇನಾಗಿದೆ ಎಂದು ನಾನು ನಿನ್ನೆಯಿಂದ ನೋಡುತ್ತಿದ್ದೇನೆ. ಕೇಳುತ್ತಾ ಇದ್ದೇನೆ ತಮಗೇನಾಗಿದೆ ಎಂದು.

ಶ್ರೀ ಆರ್. ಜಾಲಪ್ಪ : ಕುಳಿತುಕೊಳ್ಳಿ, ನನಗೆಲ್ಲಾ ಸರಿಯಾಗಿದೆ. ನಾನು ಯಾರಿಗೂ ಚಾಕೂ ಹಾಕಿಲ್ಲ.

ಶ್ರೀ ಕೆ. ಶಿವಮೂರ್ತಿ : ಅಲ್ಲ, ಅವರು ಪದೇಪದೇ ಫ್ರಾಡ್ ಎಂದು ಹೇಳುತ್ತಾರೆ. ಅದು ಯಾವುದು ಫ್ರಾಡ್ ಎಂಬುದನ್ನು ಹೇಳಲಿ ಅವರ ನಾಲಿಗೆ ತುದಿಮೇಲೆ ಆ ಪದ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಪುಟ 34ರಲ್ಲಿ ಒಂದು ಹೇಳಿದ್ದಾರೆ.

ಏನೆಂದರೆ "All vacancies of the post of teachers at both primrny and secondary level with be filled up. It is felt that the Akshya scheme has not really helped to increase enrolment or reduce the drop out rote. I therefore propose to re the Akshya to include a package of integrated activities with these compouants" ಎಂದು ಡಿಕ್ಷನರಿಯಲ್ಲಿರುವ ಹೆಸರುಗಳನ್ನೆಲ್ಲಾ ಇಲ್ಲಿ ಹೇಳಿದ್ದಾರೆ. ಆಹಾರ ವಸ್ತುಧಾರ, ಪುಸ್ತಕಾಲಯ ವಿದ್ಯಾವರಣ ಯಾತ್ರಾ, ಮನೋರಂಜನ ಕಡೆಗೆ ಸಿಕ್ಕೋದು ನಮ್ಮ ಮಕ್ಕಳಿಗೆ ಈ ಯಾತ್ರಾನೇ ಎಂದು ಕಾಣಿಸುತ್ತದೆ. ಇನ್ನೇನೂ ಸಿಗೋದಿಲ್ಲ. ಇದರ ಬಗ್ಗೆ ಮೊನ್ನೆ ಸಚಿವರು ಮಾತನಾಡುವಾಗ 5 ಕೋಟಿ ಆಗಲೇ ರಿಲೀಸ್ ಮಾಡಿದ್ದೇನೆ ಎಂದು ಹೇಳಿದರು.

5 ರೂ ಸಹ ಇನ್ನೂ ಎಲ್ಲಿಗೂ ಬಂದಿಲ್ಲ. ಅದರ ಜೊತೆಗೆ ಇನ್ನೂ ಒಂದು ಹೇಳಿದ್ದೀರಿ, ಈ ಸಲ 10 ಸಾವಿರ ಸ್ಕೂಲ್ ಕಟ್ಟಡಗಳನ್ನು ನಾವು ಕಟ್ಟಿಸುತ್ತೇವೆ, 2 ಸಾವಿರದ ವರ್ಷಕ್ಕೆ ಒಂದು ಕ್ಲಾಸಿಗೆ ಒಂದು ರೂಂ. 93-94ರಲ್ಲಿ 10 ಸಾವಿರ ಸ್ಕೂಲ್ ರೂಂಗಳನ್ನು ಕಟ್ಟಿಸುತ್ತೇವೆಂದು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿ 10 ಕೋಟಿ ಅದಕ್ಕೆ ಇಟ್ಟಿದ್ದೇವೆ ಎಂದು ಹೇಳಿದ್ದೀರಿ. ಅಂದರೆ ಒಂದು ಸ್ಕೂಲ್ ರೂಂಗೆ ಇವತ್ತು 45 ರಿಂದ 50 ಸಾವಿರ ರೂ ಆಗುತ್ತದೆ. ನೀವು ಕೊಟ್ಟಿರುವುದು 10 ಸಾವಿರ ರೂ. ತಾವು ಫಿಲಾಂಥ್ರಸ್ಟಿಂದವರಿಂದ ಇವರಿಂದ ದುಡ್ಡು ವಸೂಲು ಮಾಡುತ್ತೇವೆ ಎಂದು ಹೇಳಿದ್ದೀರಿ. ನಾನು ಮಾನ್ಯ ಮಂತ್ರಿಗಳಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಯಾವ ಫಿಲಾಂಥ್ರಫಿಸ್ಟೂ ಸಹ ಕೊಡುವುದಿಲ್ಲ. ಅದೇನಿದ್ದರೂ ದಾವಣಗೆರೆಯಿಂದ ಆಚೆಗೆ ಅಲ್ಲಿ ಇಲ್ಲಿ ಸ್ವಲ್ಪ ಕೊಡಬಹುದು. ನಮ್ಮಲ್ಲಿ ಸಿಕ್ಕುವುದಿಲ್ಲ. ಫಿಲಾಂಥ್ರಫಿಸ್ಟಿಂದ ವಸೂಲಿ ಮಾಡಿ ಕಟ್ಟುತ್ತೇವೆಂದರೆ ಇನ್ನು 10 ವರ್ಷವಾದರೂ ಈ ರೂಮುಗಳನ್ನು ನೀವು ಕಂಪ್ಲೀಟ್ ಮಾಡುವುದಿಲ್ಲ. ಇನ್ನು ಹೈಯರ್ ಎಜುಕೇಷನ್‌ಗೆ 209 ಕೋಟಿ ರೂ. ಸಬ್ಸಿಡೈಸ್ ಮಾಡ್ತೀರಿ, ಅಲ್ಲಿ ಹೇಳೋದಿಲ್ಲ ಕೇಳೋರಿಲ್ಲ. ಆ ಬಡವರ ಮಕ್ಕಳಿಗೆ ತಲೆ ಮೇಲೆ ಅವರಿಗೆ ಸೂರಿಲ್ಲ, ಕೊಡಲು ಒಂದು ಮಣೆ ಇಲ್ಲ, ಮೇಲೆ ಬಿದ್ದುಹೋಗುವ ಸೂರು, ಕ್ರಾಕ್ ಬಂದಿರುವ ಗೋಡೆಗಳು ನಾಲ್ಕು ಕ್ಲಾಸ್ಗಳನ್ನು ಒಂದು ರೂಮಿನಲ್ಲಿ ನಡೆಸುತ್ತಾರೆ, 4 ಕ್ಲಾಸನ್ನು ಒಬ್ಬರೇ ಟೀಚರ್ ನಡೆಸುತ್ತಾರೆ. 10 ಸಾವಿರ ರೂಂಗಳನ್ನು ಈ ವರ್ಷ ನಿಮ್ಮ ಕೈಲಿ ಕಟ್ಟಿಸುವುದಕ್ಕೆ ಆಗುವುದಿಲ್ಲ. ಇದೆಲ್ಲಾ ಡೋಂಗಿ, ನಮಗೆ ಸುಳ್ಳು ಹೇಳಿದ್ದೀರಿ. ಏಕೆಂದರೆ 10 ಕೋಟಿ ಇದಕ್ಕೆ ಇಡುತ್ತೇವೆ ಎಂದು ಹೇಳಿ 10 ಸಾವಿರ ರೂ.ಗಳನ್ನು ಒಂದೊಂದು ರೂಮಿಗೆ ಪ್ರೋವೈಡ್ ಮಾಡಿ ಮಿಕ್ಕ 40 ಸಾವಿರ

ರೂಗಳನ್ನು ಫಿಲಾಂಥ್ರಪಿಸ್ಟಿಂದ ವಸೂಲು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಯಾರು ಕೊಡುತ್ತಾರೆ ಸ್ವಾಮಿ? ಅದೆಲ್ಲಾ ದಾವಣಗೆರೆಯಿಂದ ಆ ಕಡೆ ಕೊಡೋದು. ಈ ಕಡೆ ಇಲ್ಲ, ಇದು ಅಂಥಹ ಫಿಲಾಂಥ್ರಫಿಸ್ಟಳಿಂದ ವಸೂಲಿ ಮಾಡಿ ಮಾಡುವ ಕೆಲಸವಲ್ಲ. ನೀವು ಕಟ್ಟಿಸುವುದಿಲ್ಲ. ನಮ್ಮ ಹಳ್ಳಿ ಮಕ್ಕಳಿಗೆ ಏನೂ ಗತಿಯಿಲ್ಲ, ನಮ್ಮ ಹಳ್ಳಿಯ ಮಕ್ಕಳಿಗೆ ಹೇಳೋರಿಲ್ಲ ಕೇಳೋರಿಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ : (ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಚಿವರು) : ಈಗ 25 ಸಾವಿರ ರೂ. ಒಂದು ಕೊಠಡಿಗೆ ನಾವು ಕೊಡುತ್ತಾ ಇದ್ದೇವೆ. ಮತ್ತೆ ಜಿಲ್ಲಾ ಪರಿಷತ್ತಿನಿಂದ ಸ್ವಲ್ಪ ಹಣವನ್ನು ಒದಗಿಸುತ್ತಿದ್ದಾರೆ ಇದೆರಡೂ ಸೇರಿದರೆ 45 ಸಾವಿರ ರೂ.ತನಕ ನಾವು ಕೊಟ್ಟ ಮೇಲೆ ಇನ್ನೂ ಹೆಚ್ಚಿನ ಹಣ ಏನು ಬೇಕಾಗುತ್ತದೆ ಅದನ್ನು ವಂತಿಗೆ ಮೂಲಕ ಕಲೆಕ್ಟ್ ಮಾಡಿ ಕಟ್ಟಿಸಬೇಕೆಂದು ಒಂದು ನಿರ್ಧಾರಕ್ಕೆ ಬಂದಿದ್ದೇವೆ.

ಶ್ರೀ ಪಿ.ಸಿ. ಸಿದ್ದನಗೌಡರ್ : ದಯವಿಟ್ಟು ಜಿಲ್ಲಾಪರಿಷತ್ತಿನಿಂದ ಯಾವ ಹೆಡ್ಡಿಂದ ಕೊಡುವುದು ಎಂಬುದನ್ನು ಹೇಳುತ್ತೀರಾ?

ಶ್ರೀ ಎಂ. ವೈ ಘೋರ್ಪಡೆ : (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ಸಚಿವರು : ನೋಡಿ, ಈ ಶಾಲಾ ಕಟ್ಟಡವನ್ನು 25 ಸಾವಿರದಲ್ಲಿ ಕಟ್ಟಿಸಲಿಕ್ಕೆ ಬರುವುದಿಲ್ಲ ಎಂಬುದು ನಮಗೂ ಗೊತ್ತು. ಅದು 45,50 ಸಾವಿರ ಆಗುತ್ತದೆ. ಕೆಲವರು 60 ಸಾವಿರ ಅಂತಲೂ ಹೇಳಬಹುದು. ಕೇಳಿದಷ್ಟು ಕೊಡಲಿಕ್ಕೆ ಆಗುವುದಿಲ್ಲ. ಆದರೆ ಸರ್ಕಾರದವರು ಒಂದು ಸ್ಕೂಲ್ ರೂಮಿಗೆ 25 ಸಾವಿರ ಕೊಡುತ್ತಾ ಇದ್ದರೆ, ಅದಕ್ಕೂ ಜಾಸ್ತಿ ಹಣ ಬೇಕಾಗುತ್ತದೆ ಎಂದು ನಮಗೆ ಗೊತ್ತಿದೆ. ಅದನ್ನು ಜೆಆರ್ ವೈನಿಂದ ಕೊಡಿಸಲಿಕ್ಕೆ ಸಾಧ್ಯವಾಗುತ್ತಿದೆ. ಅದಕ್ಕೂ ಒಂದು ಮಿತಿ ಇರಬೇಕು ಎಂದು ಮಂತ್ರಿಗಳು ಹೇಳುತ್ತಿದ್ದಾರೆ. 70 ಸಾವಿರ ಆಗುತ್ತದೆ ಎಂದು ಅಲ್ಲ. 45 ಸಾವಿರ 50 ಸಾವಿರ, ಹೀಗೆ ಆ ಭಾಗದಲ್ಲಿ ಎಷ್ಟು ಅನಿವಾರ್ಯ ಖರ್ಚುಮಾಡಬೇಕಾಗಿರುವುದು ಎಂಬುದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ 25 ಸಾವಿರ ಅಲ್ಲದೆ ಅದಕ್ಕೆ ಬೇಕಾದ ಹಣವನ್ನು ಜೆಆರ್‌ವೈನಿಂದ ಕೊಡಬೇಕು ಎಂಬುದೇ ನಮ್ಮ ಧೋರಣೆ.

ಶ್ರೀ ಪಿ.ಸಿ.ಸಿದ್ಧನಗೌಡರ್ : ನಿಮ್ಮ ಬಳ್ಳಾರಿ ಜಿಲ್ಲೆಯೊಳಗೆ ಬ್ಲಾಕ್ ಸಾಯಿಲ್ಗೆ 80 ಸಾವಿರ ಬೇಕು. ಆದ್ದರಿಂದ ಇದರ ಬಗ್ಗೆ ವಿವರಣೆ ಬೇಕು.

(ಗೊಂದಲ)

ಶ್ರೀಎಂ. ವೈ. ಘೋರ್ಪಡೆ : ಬಳ್ಳಾರಿ ಜಿಲ್ಲೆಯ ಬಗ್ಗೆ ಹೇಳುತ್ತಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಇದೇ ವರ್ಷ 1760 ಸ್ಕೂಲ್ ರೂಮ್ಗಳನ್ನು ರಿಪೇರಿ ಮಾಡಿ ಮುಗಿಸುತ್ತೇವೆ ಮತ್ತು 500 ಕ್ಕೂ ಮೇಲ್ಪಟ್ಟು ಹೊಸ ಸ್ಕೂಲ್ ರೂಮ್ಗಳನ್ನು ಖಂಡಿತವಾಗಿಯೂ ನಾವು ಕಟ್ಟಿಸುತ್ತಿದ್ದೇವೆ.

ಶ್ರೀ ಬಿ.ಹೆಚ್.ಬನ್ನಿಕೋಡ್ : ಇದು ಬಹಳ ಗಹನವಾದ ವಿಷಯ ಇದೆ. ವಿವರಣೆ ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು : ಪುನಃ ಪುನಃ ಪ್ರಶ್ನೆ ಕೇಳಿದರೆ ಹೇಗೆ? ವಿವರಣೆಯ ಅವಶ್ಯಕತೆ ಈಗ ಇಲ್ಲ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಪಂಚಾಯಿತಿಗಳಿಗೆ ಕೊಟ್ಟಂಥ ಹಣವನ್ನು ಇದಕ್ಕಾಗಿ ಉಪಯೋಗ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ತಮಗೆ ಅವಕಾಶ ಬಂದಾಗ ಹೇಳಿ.

(ಗೊಂದಲ)

ಶ್ರೀ ಆರ್.ಎಲ್.ಜಾಲಪ್ಪ : ಮಾನ್ಯ ಮಂತ್ರಿಗಳಾದ ಘೋರ್ಪಡೆಯವರು ಬಳ್ಳಾರಿಯಲ್ಲಿ 1760 ಸ್ಕೂಲ್ ಬಿಲ್ಡಿಂಗ್ಗಳನ್ನು ರಿಪೇರಿ ಮಾಡಿದ್ದೇವೆಂದು ಹೇಳಿದರು. ಹಾಗೆಯೇ ಯಾವ ಯಾವ ಜಿಲ್ಲೆಯೊಳಗೆ ಎಷ್ಟೆಷ್ಟು ರಿಪೇರಿ ಮಾಡಿದ್ದೀರಿ ಎಂಬುದನ್ನು ದಯವಿಟ್ಟು ತಾವು ಉತ್ತರವನ್ನು ಕೊಡುವಾಗ ಹೇಳುತ್ತೀರಾ?

ಶ್ರೀ ಎಂ. ಘೋರ್ಪಡೆ : ವಿಲೇಜ್ ವೈಸ್ ಮಾಡಿದ್ದೇನೆ. 1760 ಸ್ಕೂಲ್ ರೂಮ್ಗಳನ್ನು ರಿಪೇರಿಯನ್ನು ಎಲ್ಲೆಲ್ಲಿ ಮಾಡಿದ್ದೇವೆ ಎನ್ನುವುದನ್ನು ನಾನು ತಕ್ಷಣ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಬೇರೆ ಜಿಲ್ಲೆಗಳ ಗತಿ ಏನು? ತಾವು ಮಂತ್ರಿಗಳಾಗಿದ್ದೀರಿ. ತಾವು ಹೇಳಿದರೂ ನಡೆಯುತ್ತದೆ. ಹೇಳದಿದ್ದರೂ ನಡೆಯುತ್ತದೆ. ಆದರೆ ನಮ್ಮಂಥ ವರ ಗತಿಯೇನು ಸ್ವಾಮಿ?

ಶ್ರೀ ಎಂ.ವೈ.ಘೋರ್ಪಡೆ : ಏಳು ಜಿಲ್ಲೆಗಳಿಗೆ ನಾನು ಸ್ವತಃ ಹೋಗಿದ್ದೇನೆ. ಆ ಏಳೂ ಜಿಲ್ಲೆಯಲ್ಲಿ ಇದೇ ಕಾರ್ಯಕ್ರಮ ಆಗುತ್ತಿದೆ.

ಶ್ರೀ ಆರ್.ಎಲ್.ಜಾಲಪ್ಪ : ನಮ್ಮ ಜಿಲ್ಲೆಯಲ್ಲೂ ಸ್ವಲ್ಪ ಬಂದುನೋಡಿ. ಮೊನ್ನೆ ತಾನೇ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಫೈಲ್ ಮಾಡಿದ್ದಾರೆ. ಎಲ್ಲಾ ಸ್ಕೂಲುಗಳು ಬಿದ್ದುಹೋಗಿರುವ ಫೋಟೊಗಳನ್ನೆಲ್ಲಾ ತಂದು ತೋರಿಸಿದ್ದಾರೆ. ಬಂದು ಸ್ವಲ್ಪ ಅದನ್ನು ನೋಡಿ.

ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿ : ಈಗ 45 ಸಾವಿರಕ್ಕೆ ನಾವೇನೂ ಲಿಮಿಟ್ ಮಾಡುವುದಿಲ್ಲ. ಲೋಕಲ್ ಕಂಡೀಷನ್ಸ್ ಇರುತ್ತವೆ, ಕರಿಮಣ್ಣು ಇರುವ ಕಡೆಗೆ ನಾವು ಐದು ಸಾವಿರ ರೂಪಾಯಿಗಳನ್ನು ಜಾಸ್ತಿ ಸಹಾ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಮತ್ತು ಅಲ್ಲಿಂದ ವಂತಿಗೆ ಸ್ವಲ್ಪ ಬಂದರೆ ತಾರಸಿ ಹಾಕುವುದಕ್ಕೂ ಸಹಾ ಅವಕಾಶ ಇದೆ.

ಶ್ರೀ ವಿ.ಸಿ. ಸಿದ್ದನಗೌಡರ್ : ತಾವು ಉಸ್ತುವಾರಿ ಸಚಿವರಾಗಿ ಮೊನ್ನೆ ಕ್ಯಾಬಿನೆಟ್ ನಲ್ಲಿ ಕೇಳಿ ಹೇಳುತ್ತೇನೆ ಎಂದು ಹೇಳಿದಿರಿ. ಈಗ ತಾವು ಆದೇಶ ಕೊಟ್ಟರೆ ಒಳ್ಳೆಯದು. ಲೋಕಲ್ ಕಂಡೀಷನ್ಸ್ ಮೇಲೆ ಬಿಲ್ಡಿಂಗ್ ಗಳನ್ನು ಕಟ್ಟುತ್ತೇವೆ ಎಂದು ಹೇಳಿಬಿಡಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸತ್ಯಕ್ಕೆ ದೂರವಾದ ಮಾತನ್ನು ಹೇಳುತ್ತಿದ್ದೀರಿ. ಶಾಲೆಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಹಣವನ್ನು ಕೊಡುತ್ತಿದ್ದರು. ವರ್ಷಕ್ಕೆ 20 ಕಟ್ಟಿಸಲಿ 30 ಕಟ್ಟಿಸಲಿ ನೀವು ಒಂದೊಂದು ಸಾವಿರ ಬಿಲ್ಡಿಂಗ್ಸ್ ಕಟ್ಟಿಸುತ್ತೇವೆ ಎಂದು ಹೇಳಿ ಇವತ್ತು ಆಯವ್ಯಯದಲ್ಲಿ ಹಣವನ್ನೇ ಇಟ್ಟಿಲ್ಲ. ಹತ್ತು ಸಾವಿರ ಒಂದು ಕೊಠಡಿಗೆ ಇಟ್ಟು ಉಳಿದ 40 ಸಾವಿರ ರೂಪಾಯಿಗಳನ್ನು ಗ್ರಾಮೀಣಾಭಿವೃದ್ಧಿಗೆ ಅಲ್ಲಿಯ ಅವಶ್ಯಕತೆಗಳಿಗೆ ಇಟ್ಟಂಥ ಹಣವನ್ನು ಇದಕ್ಕೆ ಹಾಕಿ ಕ್ರಿಯಾ ಯೋಜನೆಯನ್ನೇ ಇವತ್ತು

ಸಂಪೂರ್ಣವಾಗಿ ನಾಶಮಾಡುತ್ತಿದ್ದೀರಿ. ಹಳ್ಳಿಯ ಅಭಿವೃದ್ಧಿ ಕುಂಠಿತವಾಗುತ್ತಿದೆ. ಇದನ್ನು ಬಿಟ್ಟು ನಿಮ್ಮ ಆಯವ್ಯಯದಲ್ಲಿ ಎಷ್ಟು ಹಣ ಇದೆ, ಅಷ್ಟು ಹಣದಲ್ಲಿ ರೂಮುಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿ ಯಾರೂ ದೇಣಿಗೆ ಕೊಡುವುದಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಮಂತ್ರಿಗಳಿಗೆ ಜ್ಞಾಪಕ ಇರಬಹುದು. 15 ದಿವಸಗಳ ಹಿಂದೆ ತಾವು ಒಂದು ಕಡೆ ಸ್ಟೇಟ್ ಮೆಂಟ್ನಲ್ಲಿ ಇದನ್ನೇ ಹೇಳಿದ್ದೀರಿ. ನಾವು ಹತ್ತು ಸಾವಿರ ಕೊಠಡಿಗಳನ್ನು ಕಟ್ಟಿಸುತ್ತೇವೆ. ಸರ್ಕಾರದಿಂದ ಹತ್ತು ಕೋಟಿ ರೂಪಾಯಿ ನಾವು ಇಟ್ಟಿದ್ದೇವೆ. ಜೊತೆಗೆ ಪಬ್ಲಿಕ್ ಕಾಂಟ್ರಿಬ್ಯೂಷನ್ ಅನ್ನು ಫಿಲಾಂಥ್ರ ಫಿಸ್ಟ್ನಿಂದ ತೆಗೆದುಕೊಂಡು ಕಂಪ್ಲೀಟ್ ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. 45 ಸಾವಿರ ಕೊಡುತ್ತೇವೆ ಎಂದು ಎಲ್ಲಿಯೂ ಹೇಳಲಿಲ್ಲ. 45 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಎಲ್ಲಿದೆ? ಯಾವ ಬಜೆಟ್ನಲ್ಲಿ ಇದಕ್ಕಾಗಿ ಹಣವನ್ನು ಇಟ್ಟಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ಖಜಾನೆ ಖಾಲಿಯಾಗಿಲ್ಲ, ಕೆಲವರು ಜೇಬುಗಳು ಖಾಲಿಯಾಗಿರಬಹುದು ಎಂದು ಹೇಳಿದ್ದಾರಲ್ಲಾ, ಖಜಾನೆ ಖಾಲಿಯಾಗಿರುವ ಬಗ್ಗೆ ಈಗ ಬರುತ್ತೇನೆ, ಎರಡು ನಿಮಿಷ ನಿಧಾನ ಮಾಡಿ. "ಕಾಸಿಲ್ಲ ದುಡ್ಡಿಲ್ಲ, ಕಡೇ ಅಂಗಡೀಲಿ ವ್ಯಾಪಾರ" ಎಂದು ಹೇಳಿ ಇಲ್ಲಿ ತೆಗೆದುಕೊಂಡು ಬಂದು ಭರವಸೆಗಳನ್ನು ಕೊಟ್ಟು ಡಿಕ್ಷನರೀಲಿ ಇದೆಯೋ ಇಲ್ಲವೋ ಅಂತಹ ಪದಗಳನ್ನೆಲ್ಲಾ ಹಾಕಿದ್ದಾರೆ. ಉದ್ಯೋಗಜ್ಯೋತಿ, ಕರೆ ಕಲ್ಯಾಣ, ಇತ್ಯಾದಿ ಮೈನರ್ ಇರಿಗೇಷನ್ ಹಾಗೂ ಮಾಗಡಿ ಸಬ್ ಡಿವಿಜನ್ಗೆ ಹತ್ತು ಲಕ್ಷ ಕೊಟ್ಟಿದ್ದೀರಿ. ಅಲ್ಲಿ 107 ಕೆರೆಗಳಿವೆ. ಆ ಕೆರೆಗಳಿಗೆ ತೂಬುಗಳು ಇಲ್ಲ. ಕೆರೆಗಳು ಸಿಲ್ಟ್‌ಫ್ ಆಗಿವೆ. ಆಮೇಲೆ ಕೋಡಿಗಳು ಇಲ್ಲ. ಹತ್ತು ಲಕ್ಷ ಏನು ಸ್ವಾಮಿ? ಇವರ ಎಸ್ಟಾಬ್ಲಿಷ್‌ಮೆಂಟ್ ಛಾರ್ಜ್ ಸೇರಿಸಿಕೊಂಡು ಹತ್ತು ಲಕ್ಷ 107 ಕೆರೆಗಳಿವೆ. ಕೆರೆ ಕಲ್ಯಾಣ ಎಂದು ಹೇಳುತ್ತೀರಿ. ಕೆರೆ ಕಲ್ಯಾಣ, ಸಂಪದ, ಸಾಗರ ದೀಪ, ಬೆಳ್ಳಿಬೆಳಕು, ಆಶಾಕಿರಣ ಏನು ಇದು? ಎಲ್ಲಿ ಹುಡುಕಿಕೊಂಡು ಬಂದಿರಿ? ಇದನ್ನೆಲ್ಲಾ ನಿಮಗೆ ಹೇಳಿರುವವರು ಯಾರು? ಯಾವ ಅಧಿಕಾರಿ ಇವೆಲ್ಲಾ ಬರೆಯಿರಿ ಎಂದು ನಿಮಗೆ ಹೇಳಿ ಕೊನೆಯ ಪಕ್ಷ ಹತ್ತು ಭಾಗ ಆದರೂ ಇದರಲ್ಲಿ ಮಾಡಿ. ನನ್ನಂತಹವನೇ ಮಂತ್ರಿಯಾಗಿದ್ದರೆ ಹರಿದು ಬಿಸಾಕಿ ಮನೆಗೆ ಹೋಗುತ್ತಿದ್ದೆ ನಾನು. ನಾನು ಮಂತ್ರಿಯಾಗಿ ಕಂಟಿನ್ಯೂ ಆಗುತ್ತಿರಲಿಲ್ಲ. ಇದರ ಜೊತೆಗೆ ಅರಸು ಜನ್ಮ ದಿನೋತ್ಸವ ಬೇರೆ ಮಾಡಿದ್ದೀರಿ. ಆ ಪುಣ್ಯಾತ್ಮ ಎಲ್ಲೋ ಸತ್ತು ಸ್ವರ್ಗದಲ್ಲಿದ್ದಾನೆ. ಅವನನ್ನು ಏಕೆ ತಿರುಗಿ ಎಳೆದುಕೊಂಡು ಬಂದಿರಿ ಇಲ್ಲಿಗೆ? ಸರ್ಕಾರ ಸಹ ಅರಸು ದಿನೋತ್ಸವ ಮಾಡುವುದಕ್ಕೆ ಶುರು ಮಾಡಿದೆ, ನಿಮ್ಮ ಪಾರ್ಟಿ ಆಫೀಸ್ ನಲ್ಲಿಯೂ ಸಹ ಅರಸು ದಿನೋತ್ಸವ ಅರೆ ಇದೇನು ಎಂದು ನನಗೆ ಗಾಭರಿ ಆಯಿತು. ಏನು ಹೆಚ್ಚು ಕಡಿಮೆ ಆಯಿತಾ ಅಥವಾ ಪ್ರಳಯ ಆಯಿತೋ ಎಂದು. ಯಾವ ಅರಸು ಅವರು ಅಧಿಕಾರ ಕಳೆದುಕೊಳ್ಳುವುದಕ್ಕೆ ಕಾರಣಕರ್ತರಾಗಿದ್ದರೋ ಯಾವ ಅರಸು ಅವರು ಶ್ರೀಮತಿ ಇಂದಿರಾಗಾಂಧಿ ಅವರಿಗೆ ಚಿಕ್ಕಮಗಳೂರಿನಲ್ಲಿ ಪುನರ್ ಜನ್ಮವನ್ನು ರಾಜಕೀಯ ಜೀವನದಲ್ಲಿ ಕೊಟ್ಟರೋ ಅವರು ಅಧಿಕಾರ ಕಳೆದುಕೊಂಡು ಸಾಯುವವರೆಗೆ ಒಂದು ಒಳ್ಳೆಯ ಮಾತನ್ನು ಅವರ ಬಗ್ಗೆ ಆಡುವ ಜನ ಇವತ್ತು ಅವರನ್ನು ಕೊಂಡಾಡುವುದಕ್ಕೆ ಹೊರಟಿದ್ದೀರಿ. ಕೆಪಿಸಿಸಿ ಆಫೀಸ್‌ನಲ್ಲಿ ಅಲ್ಲ ಅವರ ಫೋಟೋ ಇರಬೇಕಾದುದು. ಶ್ರೀಮತಿ ಗಾಂಧಿ ಅವರ ಮನೆಯಲ್ಲಿ ಅರಸು ಅವರ ಫೋಟೋ ಇರಬೇಕಿತ್ತು. ಅವರಿಗೆ ಪುನರ್ ಜನ್ಮ ಕೊಟ್ಟಿದ್ದಕ್ಕೆ. ನಿಮ್ಮ ಎಐಸಿಸಿ ಆಫೀಸಿನಲ್ಲಿ ಅವರ ಫೋಟೋ ಇರಬೇಕಿತ್ತು. ಈಗ ಅವರನ್ನು ಪೂಜೆ ಮಾಡುವುದಕ್ಕೆ ಹೊರಟಿದ್ದೀರಿ. ದಯಮಾಡಿ ಇದನ್ನು ಈ ವರ್ಷಕ್ಕೆ ಮುಗಿಸಿ. ಅವರ ಹೆಸರನ್ನು ತೆಗೆದುಕೊಂಡು ಬಂದು ಅನ್ಯಾಯ ಮಾಡಬೇಡಿ. ಇದು ನನಗೆ ಗೊತ್ತಾಯಿತು, ನೀವು ಏಕೆ ಮಾಡುತ್ತಿದ್ದೀರಿ ಎಂದು. ಸನ್ಮಾನ್ಯ ವಿ.ಪಿ.ಸಿಂಗ್ ಅವರು 27 ಪರ್ಸೆಂಟ್ ರಿಸರ್ವೇಷನ್ ಇರಬೇಕು ಎಂದು ಮಸೂದೆ ತಂದಾಗ ಅದನ್ನುಸುಪ್ರೀಂಕೋರ್ಟ್ ಎತ್ತಿ ಹಿಡಿದಾಗ, ಮೇಲೆ ಎಲ್ಲಾ ಪಾರ್ಟಿಯವರೂ ಬ್ಯಾಕ್ ವರ್ಡ್ ತಂದಾಗ ಅದನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಾಗ ಮೇಲೆ ಎಲ್ಲಾ

ಪಾರ್ಟಿಯವರೂ ಬ್ಯಾಕ್ ವರ್ಡ್ ಕ್ಲಾಸ್‌ನವರನ್ನು ಉದ್ಧಾರ ಮಾಡುವುದಕ್ಕೆ ಹೊರಟಿದ್ದೀರಿ. ಏನಾಯಿತೋ ಪಾಪ ಅವರಿಗೆ ಗ್ರಹಚಾರ. ಇನ್ನು ನೆಕಟ್ಸ್ ಅವರಿಗೆ ಏನೇನು ಮಾಡುತ್ತೀರೋ ಗೊತ್ತಾಗುತ್ತಿಲ್ಲ. ಈಗ ಉದ್ಧಾರ ಮಾಡುವುದಕ್ಕೆ ಹೊರಟಿದ್ದೀರಿ. ಇದು ರಾಜಕೀಯ ಸ್ಟಂಟೇ ವಿನಹಃ ನಿಮ್ಮ ಆತ್ಮಸಾಕ್ಷಿಯಾಗಿ ಇದನ್ನು ಮಾಡಿದ್ದು ಅಲ್ಲ. ಇದನ್ನು ನಾನು ಎಲ್ಲಿ ಬೇಕಾದರೂ ಘಂಟಾ ಘೋಷವಾಗಿ ಹೇಳಬಲ್ಲೆ. ದಯವಿಟ್ಟು ಕೆಲವರಾದರೂ ಹಿರಿಯರು ಇದ್ದೀರಿ. ಜವಾಬ್ದಾರಿ ಇರುವವರು ಇದ್ದೀರಿ, ಆತ್ಮ ಇರುವವರು ಇದ್ದೀರಿ ಅವರ ಹೆಸರನ್ನು ಉಪಯೋಗಿಸಿಕೊಂಡು ದೀನದಲಿತರಿಗೆ ಮೋಸ ಮಾಡುವುದು ಬೇಡ. ಸ್ವಾಮಿ ಒಂದಿಷ್ಟು ಸ್ಕೀಮನ್ನು ಇವರಿಗಾಗಿ ಹಾಕಿದ್ದೀರಿ. ಒಂದೆರಡು ನಿಮಿಷ ಹೇಳುತ್ತೇನೆ. ನಾನೇನೂ ಅನವಶ್ಯಕವಾಗಿ ಹೇಳುತ್ತಿಲ್ಲ. ಯಾರಾದರೂ ಮಂತ್ರಿಗಳು ಅನಾವಶ್ಯಕವಾಗಿ ಹೇಳುತ್ತಿದ್ದೇನೆ ಎಂದರೆ ನಾನು ಕುಳಿತುಕೊಂಡು ಬಿಡುತ್ತೇನೆ. ಒಂದು ನಿಮಿಷ ದಯವಿಟ್ಟು ಕೇಳಿ. ಇದೇ ಸದನದಲ್ಲಿ ಸನ್ಮಾನ್ಯ ಮೊಯಿಲಿಯವರು ಏನೇ ಆಗಲಿ, ಜೂನ್ ಕಡೆಯ ಒಳಗಾಗಿ ಚೆನ್ನಪ್ಪರೆಡ್ಡಿ ಕಮೀಷನ್ ರಿಪೋರ್ಟ್‌ನ್ನು ಜಾರಿಗೆ ತರುತ್ತೇನೆ ಎಂದು ಹೇಳಿದ್ದಾರೆ. ಅದಾಗಿ ಮಾರನೇ ದಿವಸ ಲೆಜಿಸ್ಲೇಚರ್ ಪಾರ್ಟಿ ಮೀಟಿಂಗ್ ನಲ್ಲಿ ಜೂನ್ ಒಳಗೆ ಕನ್ಸಿಡರ್ ಮಾಡುತ್ತೇನೆಂದು ಹೇಳಿದ್ದೇನೆಂದು ಹೇಳಿದರು. ನಾನು ಅವತ್ತು ಕೋಲಾರದಲ್ಲಿದ್ದೆ. ತಕ್ಷಣ ಓಡಿ ಬಂದು ಒಂದು ಪ್ರಿವಿಲೇಜ್ ಮೋಷನ್ ಹಾಕಿದೆ. ಸದನಕ್ಕೆ ಮೋಸ ಮಾಡುತ್ತಾ ಇದ್ದೀರಾ ಲೆಜಿಸ್ಲೇಚರ್ ಪಾರ್ಟಿಗೆ ಮೋಸ ಮಾಡುತ್ತಿದ್ದೀರಾ ಎಂದು.

ಆಗ ಈ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಏನೆಂದರೆ, ಇಲ್ಲ, ನಾನು ಹೇಳಿದ ಹಾಗೆ ಜೂನ್ 30 ರೊಳಗೆ ಜಾರಿಗೆ ಕೊಡುತ್ತೇನೆ ಎಂದು ಈಗ ಏನು ಹೇಳುತ್ತಾರೆಂದರೆ ರೆಡ್ಡಿ ವರದಿ ಜಾರಿ ಪ್ರಯತ್ನ ಎಂದು. ಜಾರಿಗೆ ಕೊಡುತ್ತೇವೆಂದಲ್ಲ, ಜಾರಿ ಪ್ರಯತ್ನ ಇದು ಒಬ್ಬ ಆಡಳಿತಗಾರರು ಹಾಗೂ ಮುಖ್ಯಮಂತ್ರಿಗಳ ಮಾತು ನಿಮ್ಮ ಮಾತಿನ ಮೇಲೆ ನಿಗಾ ಇಲ್ಲ. ಇದರಿಂದ ಹಿ ಹ್ಯಾಸ್ ಬಿಕಂ ಕ್ಯಾಮ್ಲೆಟ್ (ಯಾರೂ ಅವರನ್ನು ನಂಬುದಿಲ್ಲ, ಅವರೂ ಯಾರನ್ನೂ ನಂಬುವುದಿಲ್ಲ. ಅವರ ಎದುರಿಗೆ ಹೇಳಿದರೂ ಮಾಡುವುದಿಲ್ಲ. ಇದೆಲ್ಲಾ ಹೋಗಲಿ, ಜನ ವಿಶ್ವಾಸ ಕಳೆದುಕೊಂಡಿದ್ದರೆ ಹೋಗಲಿ, ನಾವು ವಿಶ್ವಾಸ ಕಳೆದುಕೊಂಡಿದ್ದಾರೆ. ಹೋಗಲಿ. ನಿಮ್ಮ ಪಕ್ಷದವರೇ ವಿಶ್ವಾಸ ಕಳೆದುಕೊಂಡಿದ್ದಾರಲ್ಲಾ, ಹೇಗೆ ನಡೆಸುತ್ತೀರಿ ಸರ್ಕಾರವನ್ನು, ಏಕೆ ನಡೆಸುತ್ತೀರಿ. ಜನ ನಿಮ್ಮ ಮೇಲೆ ವಿಶ್ವಾಸ ಇಟ್ಟಿದ್ದಾರೋ ಇಲ್ಲವೋ ಹೋಗಿ ನೋಡೋಣ. ಇನ್ನೊಂದು ಹೇಳುತ್ತೇನೆ. ಬೇಕಾದಷ್ಟು ಸ್ಕೀಮ್ ಗಳನ್ನು ಕುರಿತು ಹೇಳಿದ್ದಾರೆ. ಪಟ್ಟಭದ್ರರನ್ನು ನುಚ್ಚು ನೂರು ಮಾಡುವೆ ಎಂದು ಹೇಳಿದ್ದಾರೆ ಶೋಷಣೆಯಿಂದ ಕುಂದಿರುವ ಹಿಂದುಳಿದ ವರ್ಗದ ಜನರ ಭುಜಗಳಿಗೆ ಹಾಗೂ ಮೆದುಳಿಗೆ ಶಕ್ತಿ ತುಂಬಬೇಕಾಗಿದೆ. ಈ ಕಾಯಿದೆಗಳನ್ನು ತಡೆಯಲು ಯತ್ನಿಸುವ ಪಟ್ಟಭದ್ರ ಹಿತಾಸಕ್ತಿಗಳನ್ನು ಒಡೆದು ನುಚ್ಚುನೂರು ಮಾಡಿ ವರದಿ ಜಾರಿಗೆ ಯತ್ನಿಸುತ್ತೇನೆ ಎಂದು ಪಣ ತೊಟ್ಟವರಂತೆ ಮೊಯಿಲಿ ನುಡಿದರು. ಉತ್ತರದ ಪೌರುಷ ಎಷ್ಟು ಚೆನ್ನಾಗಿದೆ, ಕೇಳುವುದಕ್ಕೆ ಎಷ್ಟು ಸುಂದರವಾಗಿದೆ. ಬ್ಯಾಕ್ ವರ್ಡ್ ಕ್ಲಾಸ್ ನವರೆಲ್ಲಾ ದೀನದಲಿತರೆಲ್ಲಾ ಉದ್ಧಾರವಾಗಿ ಹೋದರು. ಈ ಹೆಂಡದ ಕಂಟ್ರಾಕ್ಟ್ ನಿಂತ ಮೇಲೆ ಒಂದು ಹತ್ತು ಹದಿನೈದು 20 ಸಾವಿರ ಜನ ಕೆಲಸ ಕಳೆದು ಕೊಂಡದರಲ್ಲಾ, ಅವರಿಗೆ ನಾನು ಕೆಲಸ ಒದಗಿಸುತ್ತೇನೆ ಎಂದು ಹೇಳಿದ್ದಾರೆ. ನಿಮ್ಮನ್ನು ನಂಬಿಕೊಂಡರೆ ನಿಮ್ಮ ಸರ್ಕಾರ ನಡೆಯುವ ಸ್ಥಿತಿನೋಡಿದರೆ ಅವರು ನೇಣು ಹಾಕಿಕೊಂಡು ಸಾಯಬೇಕು. ಇನ್ನು ಸಹಕಾರ ಸಹಕಾರ ಇಲಾಖೆ. ದುರದೃಷ್ಟವಶಾತ್ ಸಹಕಾರ ಮಂತ್ರಿಗಳು ಇಲ್ಲಿ ಇಲ್ಲ. ಮುಖ್ಯಮಂತ್ರಿಗಳೂ ಇಲ್ಲಿ ಇಲ್ಲ. ಈ ಕರ್ನಾಟಕ ರಾಜ್ಯದಲ್ಲಿ ಸಹಕಾರ ಇಲಾಖೆ ಇದೆಯೇನು? "ಸಹಕಾರ ರತ್ನ" ಎಂದು ಹಿಂದಿನ ಸಹಕಾರಿ ಮಂತ್ರಿಗಳಿಗೆ ಟೈಟಲ್ ಕೊಡಬೇಕು. ಹಿಂದಿನ ಮಾನ್ಯ ಮುಖ್ಯಮಂತ್ರಿಗಳಿಗೂ ಟೈಟಲ್ ಕೊಡಬೇಕು. ಅಂತಹ ಒಂದು ರತ್ನವನ್ನು ತಂದು ಇಲ್ಲಿ ಸಹಕಾರಿ

ಮಂತ್ರಿಗಳಾಗಿ ಮಾಡಿದರಲ್ಲಾ ಅವರಿಗೂ ಕೊಡಬೇಕು. ಈಗಿನ ಮುಖ್ಯಮಂತ್ರಿಗಳಿಗೂ ಕೊಡಬೇಕು. ಮಂತ್ರಿಗಳಿಗೂ ಇಂಟರೆಸ್ಟ್ ಇಲ್ಲ. ಇವರೆಲ್ಲಾ ರೆವಿನ್ಯೂ, ಎಜುಕೇಷನ್ ಮಂತ್ರಿಗಳಾಗಿ ಐಎಎಸ್ ಆಫೀಸರ್ ಗಳನ್ನು ಕಂಟ್ರೋಲ್ ಮಾಡಿದವರು ಪಾಪ ಇಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾಂಡ್ ಅವರನ್ನು ಡೆಪ್ಯುಟಿ ರಿಜಿಸ್ಟ್ರಾರ್ ಅವರನ್ನು ಕಂಟ್ರೋಲ್ ಮಾಡುವುದಕ್ಕೆ ಅವರಿಗೆ ಪಾಪ ಎನಿಸುತ್ತದೆ, ಸಣ್ಣದು ಎನಿಸುತ್ತದೆ.

ಇದರ ಬಗ್ಗೆ ಅವರು ಯೋಚಿಸುವುದಿಲ್ಲ. ಸ್ವಾಮಿ ಬಹಳ ಪರಿಣಾಮಕಾರಿಯಾಗಿ ಮಾಡಿರುವ ಕೆಲಸವೇನೆಂದರೆ, ಸಹಕಾರಿ ಕಾಯ್ದೆಯ ಸೆಕ್ಷನ್ 121ರ ಮೇಲೆ ವ್ಯಭಿಚಾರ ಮಾಡಿರುವುದನ್ನು ಬಿಟ್ಟರೆ ಇನ್ನೇನೂ ಮಾಡಿಲ್ಲ. ಒಂದೊಂದು ಸಂಸ್ಥೆಯ ಚುನಾವಣೆಯನ್ನು ಸಹ ಇವರು ನಾಲ್ಕೈದು ಬಾರಿ ಮುಂದೂಡಿದ್ದಾರೆ. ಹತ್ತು ಗಂಟೆಗೆ ಚುನಾವಣೆ ಇದ್ದರೆ, ಮಂತ್ರಿಗಳ ಕಛೇರಿಗೆ 9 ಗಂಟೆಗೆ ಹೋಗಿ ಚುನಾವಣೆ ರದ್ದು ಮಾಡಿದ್ದೇವೆಂದು ಒಂದು ಆರ್ಡರ್ ತೆಗೆದುಕೊಂಡು ರಿಟರ್ನಿಂಗ್ ಆಫೀಸರ್ (ಚುನಾವಣಾಧಿಕಾರಿ) ಅವರನ್ನೂ ಜೊತೆಯಲ್ಲಿ ಕರೆದುಕೊಂಡು ಬರುತ್ತಾರೆ. ಪಿ.ಎಲ್.ಡಿ.ಬಿ. ಚುನಾವಣೆಯನ್ನು ನಾಲ್ಕು ಸಲ ರದ್ದು ಮಾಡಿದ್ದಾರೆ. ಜಿಲ್ಲಾ ಬ್ಯಾಂಕ್ ಗಳದ್ದು ಒಂದೂ ಎಲೆಕ್ಷನ್ ಆಗಿಲ್ಲ, ಶುಗರ್ ಫ್ಯಾಕ್ಟರಿಯ ಎಲೆಕ್ಷನ್ ಆಗಲಿಲ್ಲ, ನೀವು ಏನು ಮಾಡಬೇಕೆಂದಿದ್ದೀರಿ? ಸಹಕಾರ ಮಂತ್ರಿಗಳ ಕೆಲಸವೇನು? ಅವರಿಗೆ ಒಂದು ಗೂಟದ ಕಾರು, ಅದಕ್ಕೊಂದು ಭಾವುಟ ಒಂದು ಮನೆ ಇಷ್ಟು ಸಾಕೇ? ಸನ್ಮಾನ್ಯ ಶ್ರೀ ಕೆ. ಎಚ್.ರಂಗನಾಥ್ ರವರು ಹಿಂದೆ ಸಹಕಾರ ಮಂತ್ರಿಗಳಾಗಿದ್ದರು. ಅವರು ತಮ್ಮ ಆತ್ಮಸಾಕ್ಷಿಯಾಗಿ ಕಳೆದ ಮೂರೂವರೆ ವರ್ಷಗಳಲ್ಲಿ ಸಹಕಾರಿ ರಂಗ ಏನಾಗಿದೆ? ಎಂದು ಹೇಳಲಿ, ಸ್ವಾಮಿ, ನಾನು ಸಹ ಹತ್ತುರು ವರ್ಷಗಳಿಂದ ಈ ಸಹಕಾರಿ ರಂಗದಲ್ಲಿ ದುಡಿದಿದ್ದೇವೆ, ಸಹಕಾರಿ ರಂಗವನ್ನು ಸಾಕಷ್ಟು ಬಲಪಡಿಸಬೇಕೆಂದು ಶ್ರಮಿಸಿದ್ದೇವೆ. ಒಂದು ಕಾಲದಲ್ಲಿ ಕರ್ನಾಟಕದ ಸಹಕಾರ ಆಂದೋಲನಕ್ಕೆ ರಾಷ್ಟ್ರಮಟ್ಟದಲ್ಲಿ ಬಹಳ ದೊಡ್ಡ ಹೆಸರಿತ್ತು. ಆಗ ಯೂನಿಯನ್ ಪ್ರೆಸಿಡೆಂಟ್ ಮತ್ತು ಹೌಸಿಂಗ್ ಫೆಡರೇಶನ್ ಪ್ರೆಸಿಡೆಂಟರು ನಮ್ಮವರಾಗಿದ್ದರು, ಎನ್.ಸಿ.ಡಿ.ಸಿ. ಸದಸ್ಯರಲ್ಲದೆ ಇನ್ನೂ ಅನೇಕರು ನಮ್ಮವರಾಗಿದ್ದರು. ಇವೊತ್ತು ಏನಾಗಿದೆಯೆಂದರೆ ಮೂರು ಕಾಸಿನ ಬೆಲೆಯು ನಿಮಗಿಲ್ಲ. ಇವೊತ್ತು ಸಹಕಾರಿ ರಂಗ ದುಸ್ಥಿತಗೀಡಾಗಿರುವುದನ್ನು ಸರಿಪಡಿಸಲು ಇನ್ನೂ 50 ವರ್ಷವಾದರೂ ಸಾಕಾಗುವುದಿಲ್ಲ. ಸಹಕಾರಿ ಕಾಯ್ದೆಗೆ ತಿದ್ದುಪಡಿ ಮಾಡುತ್ತಿದ್ದೇವೆಂದು ಸಹಕಾರ ಮಂತ್ರಿಗಳು ಹೇಳುತ್ತಾರೆ. ಈಗಿರುವ ಕಾಯ್ದೆಯಲ್ಲಿ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲವೇ? ಈ ಕಾಯ್ದೆಯ ಸೆಕ್ಷನ್ 121 ಮಾತ್ರ ನಿಮ್ಮ ಕಣ್ಣಿಗೆ ಕಾಣಿಸುತ್ತದೆಯೇ ವಿನಾ ಬೇರೇನೂ ಕಾಣಿಸುವುದಿಲ್ಲ ಅಲ್ಲವೇ? ನಾನು ಒಂದು ಉದಾಹರಣೆ ಹೇಳುತ್ತೇನೆ. ಬೆಂಗಳೂರಿನ ಜಿಲ್ಲಾ ಸಹಕಾರಿ ಕೇಂದ್ರದ ಬ್ಯಾಂಕೊಂದು ಬಹಳ ಅಧಃಪತನಕ್ಕೀಡಾಗಿದ್ದ ಸಂದರ್ಭದಲ್ಲಿ ನಾನು ಅಧ್ಯಕ್ಷನಾಗಿದ್ದೆ. ಆಗ ಮಾನ್ಯ ರಂಗನಾಥ್ ರವರು ಮಂತ್ರಿಗಳಾಗಿದ್ದರು. ಜಿಲ್ಲಾ ಬ್ಯಾಂಕ್ ನಲ್ಲಿ ನಾನು ಹೇಗೆ ಕೆಲಸ ಮಾಡಿದ್ದೇನೆಂದು ಅವರಿಗೆ ಗೊತ್ತಿದೆ. ಜಿಲ್ಲಾ ಬ್ಯಾಂಕನ್ನು ಯಾರೂ ನಂಬುತ್ತಿರಲಿಲ್ಲ. ಆಗ ನಾನು ಪಡಬಾರದ ಹಿಂಸೆ ಪಟ್ಟು, ವಸೂಲಿಗೆ ಜಿಲ್ಲಾದ್ಯಂತ ಪ್ರವಾಸ ಮಾಡಿ ಮೂರು ಕಾಸಿನ ಟಿ.ಎ.ಡಿ.ಎ. ತೆಗೆದುಕೊಳ್ಳದೆ ಮನೆಯಿಂದ ಇಡ್ಲಿ ಕಟ್ಟಿಕೊಂಡು ಹೋಗಿ ಅದನ್ನು ತಿಂದುಕೊಂಡು ಸಾಕಷ್ಟು ಕೆಲಸ ಮಾಡಿ ಜಿಲ್ಲಾ ಬ್ಯಾಂಕನ್ನು ಸರಿದಾರಿಗೆ ತಂದೆವು ತಂದನಂತರ ಆ ಬ್ಯಾಂಕಿಗೆ ಬೇರೊಬ್ಬ ಅಧ್ಯಕ್ಷರು ಬಂದನಂತರ ಜಿಲ್ಲಾ ಬ್ಯಾಂಕ್ ಒಂದು ಕೋಟಿ ರೂಪಾಯಿಗಳ ನಷ್ಟ ಅನುಭವಿಸಿತು. ನಾನು ಮಂತ್ರಿಯಾದಾಗ ಅದನ್ನು ಸೂಪರ್ ಸೀಡ್ ಮಾಡಿ ಒಂದು ಹಂತಕ್ಕೆ ತಂದ ಬಳಿಕ ಸುಮಾರು 40-50 ಕೋಟಿ ರೂಪಾಯಿಗಳ ಡಿಪಾಸಿಟ್ ಆಯಿತು. ಎರಡು

ವರ್ಷದ ಹಿಂದೆ ಆ ಜಿಲ್ಲಾ ಬ್ಯಾಂಕಿಗೆ ಒಬ್ಬರು ಅಧ್ಯಕ್ಷರು ಬಂದರು. ಅವರು ಏನು ಮಾಡಿದರು? ತಾವು ಸೂಪರ್ ಸೀಡ್ ಮಾಡಿದಿರಿ. ಈ ವಿಷಯವನ್ನು ನಾನು ಎರಡು ಬಾರಿ ಮುಖ್ಯಮಂತ್ರಿಗಳಿಗೆ, ಮತ್ತು ಸಹಕಾರ ಮಂತ್ರಿಗಳಾದ ಮಲ್ಲಿಕಾರ್ಜುನ ಖರ್ಗೆಯವರಿಗೆ ಹೇಳಿದೆ. ಏನೆಂದರೆ, ಬ್ಯಾಂಕಿನಲ್ಲಿಟ್ಟಿರುವ ಡಿಪಾಸಿಟರ್ಸ್ ದುಡ್ಡೆಲ್ಲಾ ಹಾಳಾಗಿದೆ, ಇದಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ಅವರ ಆಸ್ತಿಯನ್ನು ಜಪ್ತಿ ಮಾಡಿಸಿ ಎಂದು ಈ ಬಗ್ಗೆ ಮಾಡಿದಿರಿ? ಇದಕ್ಕೆ ತಾವು ಉತ್ತರ ಕೊಡುವಾಗ ಹೇಳಬೇಕು. ನಾನು ಸಹಕಾರ ಮಂತ್ರಿಯಾಗಿದ್ದಾಗ ಎಷ್ಟು ಬಾರಿ ಸಹಕಾರಿ ಕಾಯ್ದೆಯ 121ನೇ ಸೆಕ್ಷನ್ ಅನ್ನು ಉಪಯೋಗಿಸಿದ್ದೇನೆ ತಾವು ಮಂತ್ರಿಗಳಾಗಿದ್ದಾಗ ಕಳೆದ ಮೂರೂವರೆ ವರ್ಷಗಳಲ್ಲಿ ಎಷ್ಟು ಬಾರಿ ಉಪಯೋಗಿಸಿದ್ದೀರಿ? ಸೆಕ್ಷನ್ 121 ಎಂದರೆ suspending the Constitution ಇದ್ದಂತೆ ಎಲ್ಲಾ ಕಾನೂನನ್ನು ಬದಿಗೊತ್ತಿ ಏನು ಬೇಕಾದರೂ ಆರ್ಡರ್ ಮಾಡಬಹುದು. ಜಿಲ್ಲಾ ಬ್ಯಾಂಕಿನ ಬಗ್ಗೆ ಕೆಲವು ವಿಷಯಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಪ್ರಯತ್ನಿಸುತ್ತೇನೆ. ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸುಮಾರು 25 ಕೋಟಿ ರೂಪಾಯಿಗಳಷ್ಟು ಸಾಲ ಕೊಟ್ಟಿದ್ದಾರೆ. ಈ ಬಗ್ಗೆ ಮಂತ್ರಿಗಳ ಕಛೇರಿಯಿಂದ ನಿರ್ದೇಶನ ಹೋಗಿದೆ. ಆಗ ರಿಜಿಸ್ಟ್ರಾರ್ ರವರು ಜಿಲ್ಲಾ ಬ್ಯಾಂಕುಗಳ ಅಧ್ಯಕ್ಷರು ಗಳಿಗೆ ಕಾಗದ ಬರೆದು ಸಾಲ ಕೊಡಿ ಎಂದು ಹೇಳಿದ್ದಾರೆ. ಹೌಸಿಂಗ್ ಸೊಸೈಟಿಗಳಿಗೆ ಸಾಲ ಕೊಡದಿರುವುದು ಜಿಲ್ಲಾ ಬ್ಯಾಂಕ್ ಗಳ ಆದ್ಯ ಕರ್ತವ್ಯ ಆದರೂ ಸಾಲ ಕೊಟ್ಟಿದ್ದಾರೆ. ಈ ಕುರಿತ ಮಾಹಿತಿ ನನ್ನ ಹತ್ತಿರ ಇದೆ. ಅದನ್ನು ಕೊಡುತ್ತೇನೆ. ಈ ವ್ಯವಹಾರದಲ್ಲಿ ಹಣ ಕೈ ಬದಲಾಗಿದೆ. ಇದರಲ್ಲಿ ಇನ್ನೂ ಕೆಲವು ಆಶ್ಚರ್ಯ ಸಂಗತಿಗಳಿವೆ. 1975-76 ರಿಂದ ಅಲಸೂರು ಹೌಸಿಂಗ್ ಬಿಲ್ಡಿಂಗ್ ಸೊಸೈಟಿ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವ್ಯವಹಾರ ಯಾವಾಗ ನಡೆದಿದೆಯೆಂದು ದಿನಾಂಕವನ್ನು ನಮೂದಿಸಿ ಹೇಳಿ. ಇಲ್ಲದಿದ್ದರೆ, ಗೊಂದಲವುಂಟಾಗಿ ನನ್ನಿಂದ ಆದೇಶ ಹೋಗಿದೆಯೆಂದು ಅರ್ಥ ಬರುತ್ತದೆ.

ಶ್ರೀ ಆರ್.ಎಲ್.ಜಾಲಪ್ಪ : ಹಿಂದಿದ್ದಂಥ ಸಹಕಾರ ಮಂತ್ರಿಗಳಿಗೂ, ತಮಗೆಲ್ಲರಿಗೂ 'ಸಹಕಾರ ರತ್ನ' ಕೊಡಬೇಕೆಂದು ನಾನು ಆಗಲೇ ಹೇಳಿದೆ.

1.40 ಪಿ.ಎಂ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಜಿಲ್ಲಾ ಬ್ಯಾಂಕು ಗಳಿದ್ದಾವಲ್ಲಾ, ಅವುಗಳು ಹೌಸಿಂಗ್ ಸೊಸೈಟಿಗೆ ಸಾಲವನ್ನು ಕೊಡುವ ಅವಕಾಶವಿದೆಯೋ? ಅದು ನಮಗೆ ಗೊತ್ತಿಲ್ಲ, ಆದ್ದರಿಂದ ಅದರ ಬಗ್ಗೆ ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಹಿಂದೆ ನೀವು ಕೊಟ್ಟಿರಬಹುದು. ಆದ್ದರಿಂದ ಅವರೂ ಸಹ ಹಿಂದೆ ಕೊಟ್ಟಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ನಾನು ಇನ್ನೂ 2-3 ವಿಷಯಗಳನ್ನು ಹೇಳುತ್ತೇನೆ. 1975 ರಿಂದ 1989Ë90ರವರೆಗೆ Ulsoor House Building Co-operative Society ಕೆಲಸ ಮಾಡಲಿಲ್ಲ. ಅದು ಡಿಫಂಕ್ಟ್ ಸೊಸೈಟಿ. ಅವರ ಹತ್ತಿರ ಬೈಲಾ ಇಲ್ಲ. ರಿಜಿಸ್ಟ್ರೇಷನ್ ಪತ್ರ ಇಲ್ಲ. ಒಂದೇ ಒಂದು ದಿನದಲ್ಲಿ ಅಷ್ಟೂದಿನಗಳ ಆಡಿಟ್ ನ್ನು ಮಾಡಿಬಿಟ್ಟರು. ಏಕೆಂದರೆ ಕೆಲಸ ಮಾಡಿರಲಿಲ್ಲವಲ್ಲಾ ಆಡಿಟ್ ಸರ್ಟಿಫಿಕೇಟನ್ನು ಕೊಟ್ಟುಬಿಟ್ಟರು. ಆದರೆ ಆಡಿಟ್ ನಲ್ಲಿ ಕ್ಲಾಸಿಫಿಕೇಷನ್ ಹಾಕಬೇಕಾಗಿತ್ತು. ಎ.ಬಿ.ಸಿ.ಡಿ

ಮುಂತಾಗಿ ಕ್ಲಾಸಿಫಿಕೇಷನ್ ಹಾಕಬೇಕಾಗಿತ್ತು. 'ಡಿ' ಕ್ಲಾಸಿಫಿಕೇಷನ್ ಬಂದವರಿಗೆ ಯಾವುದೇ ವಿಧವಾದಂಥ ಸಾಲವನ್ನು ಕೊಡುವಂತೆಲ್ಲ. ಯಾವ ಸೊಸೈಟಿಯ ಹತ್ತಿರ ಬೈಲಾ ಇಲ್ಲವೋ, ಯಾರ ಹತ್ತಿರ ರಿಜಿಸ್ಟ್ರೇಷನ್ ಪತ್ರ ಇಲ್ಲವೋ ಅಂಥವರು ಜಿಲ್ಲಾ ಬ್ಯಾಂಕಿನಲ್ಲಿ ಸದಸ್ಯತ್ವವನ್ನು ಪಡೆಯಲು ತೊಂದರೆಯಾಗುತ್ತದೆಂದು, Deputy Registrar, Rural Deputy Registar ಅವನೊಬ್ಬ ದೊಡ್ಡ ಕಳ್ಳ, ಮತ್ತು Joint Registrar ರನ್ನು ಕಟ್ಟಿಕೊಂಡು ಒಂದು ಅಮೆಂಡ್ ಮೆಂಟ್ನು ಮಾಡಿ ಅದನ್ನು ಜಿಲ್ಲಾಬ್ಯಾಂಕಿಗೆ ಕೊಟ್ಟು ಸದಸ್ಯತ್ವವನ್ನು ಪಡೆದಿದ್ದಾರೆ. ಅದಾದನಂತರ, ಸದಸ್ಯರಿಗೆ ತಲಾ ಒಂದು ಲಕ್ಷ ರೂಪಾಯಿಗಳನ್ನು ಅವರ ಮನೆಯ ಬಣ್ಣವನ್ನು ಹೊಡೆಯಲು,ಸುಣ್ಣವನ್ನು ಬಳಿಯಲು ಸಾಲವಾಗಿ ತೆಗೆದುಕೊಂಡಿದ್ದಾರೆ. ಅಂದರೆ ಒಬ್ಬೊಬ್ಬ ಸದಸ್ಯರಿಗೆ ಒಂದು ಲಕ್ಷ ಸಾಲವಂತೆ? ಈ ರೀತಿ ಒಂದು ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದರೆ. ಆವತ್ತು Effective Membership ಇದ್ದದ್ದು 270 ಜನರಿಗೆಂದು ಅದಾದನಂತರ ಇನ್ನೊಂದು ತಮಾಷೆಯ ವಿಷಯವೇನೆಂದರೆ 17-1-92 ರಲ್ಲಿ ಸಾಲಕ್ಕೆ ಅರ್ಜಿಯನ್ನು ಹಾಕುತ್ತಾರೆ, 18-1-92 ರಲ್ಲಿ ಅದಕ್ಕೆ ಸೂಪರ್ ವೈಸರ್ ಶಿಫಾರಸ್ಸನ್ನು ಮಾಡುತ್ತಾರೆ. 20-1-92ರಲ್ಲಿ ಮ್ಯಾನೇಜರ್ ಶಿಫಾರಸ್ಸು ಮಾಡುತ್ತಾರೆ, 21-1-92ರಲ್ಲಿ ಒಂದು ಕೋಟಿ ರೂಪಾಯಿ ಸಾಲ Just four days ನಲ್ಲಿ ಮಂಜೂರಾಗುತ್ತದೆ. ಕೇವಲ ನಾಲ್ಕು ದಿನಗಳಲ್ಲಿ ಇದು ನಡೆಯುತ್ತದೆ. ಅವರಿಗೆ 50 ಲಕ್ಷ, ಇವರಿಗೆ 50 ಲಕ್ಷ. ನಾವುಗಳು ಇದರ ಬಗ್ಗೆ ತಮಗೆ ಹೇಳಿದ್ದೆವಲ್ಲ ತಾವು ಏನು ಮಾಡಿದ್ದೀರಿ? What is the action that you have taken? I charge that you have connived with them. I charge this government.

(Interruptions)

Sri M. Mallikarjuna kharge : I am sorry. I take strong objection...

Sri R.L. Jalappa : You should have taken action.

(Interruptions)

Sri Mallikarjuna kharge : I have taken action. I have superseded that society and appointed the Administrator Don't tell that.

Sri R.L. Jalappa : That does not require....

(Interruptions)

Sri M.Mallikarjuna kharge : Don't threaten me. like that your Party fellow who is the Chairman of the D.C.C. bank, colluded and cheated and you are blaming me..

(Interruptions)

Sri. R.L. Jalappa : Don't talk all these things...

Sri M. Mallikarjuna Kharge : I cannot tolerate..

(Interruptions)

Sri R.L. Jalappa : I have gone on record, on the same Floor.

(Interruption)

Sri R.L. Jalappa : I have not yielded... I charge. I stand by that.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಬಾಯಿಗೆ ಬಂದಂತೆ ಮಾತನಾಡಬೇಡಿ ಆ ರೀತಿ ಮಾತನಾಡುವುದು ನಿಮ್ಮೊಬ್ಬರಿಗೆ ಏನು ಗೊತ್ತಿರುವುದು? ನೀವೇನೋ ಹಿರಿಯರು, ವಿಷಯ ತಿಳಿದಿದ್ದೀರೆಂದು ಕರೆದು ಮಾತನಾಡಿ ತಮ್ಮ ಸಲಹೆಗಳನ್ನು ಪಡೆಯಬೇಕೆಂದು ಕೊಂಡಿದ್ದಾರೆ ನಮ್ಮನ್ನೇ ಇದರಲ್ಲಿ ಶಾಮೀಲಾಗಿದ್ದೀರೆಂದು ಹೇಳುತ್ತೀರಿ. ಕಾನೂನಿನ ಪ್ರಕಾರ, ನಮ್ಮ ಹಕ್ಕಿನ ಅಡಿಯಲ್ಲಿ ಏನೇನು ಮಾಡಬೇಕಾಗಿತ್ತೋ ಅದನ್ನು ಮಾಡಿದ್ದೇವೆ. ಅದಕ್ಕೆ ಆಡಳಿತಾಧಿಕಾರಿಗಳನ್ನು ಹಾಕಿದ್ದೇವೆ.

(Interruptions)

ಶ್ರೀ ಸಿ. ಬೈರೇಗೌಡ : ನಿಮ್ಮ ಪಾರ್ಟಿಯವರು ಅದರ ಅಧ್ಯಕ್ಷರಾಗಿದ್ದರು ಎಂದು ಹೇಳಿದಿರಿ. ಹಾಗಾದರೆ ನಿಮ್ಮ ಪಾರ್ಟಿಯವರಾದರೆ ಅವರ ಮೇಲೆ ಕ್ರಮ ಬೇಡ ನಮ್ಮ ಪಾರ್ಟಿಯವರಾದರೆ ಮಾತ್ರ ಕ್ರಮ ತೆಗೆದುಕೊಳ್ಳುವುದು ಎಂದು ಅರ್ಥವೇ ಅದರ ಅರ್ಥ ಏನು? ಯಾವ ಅರ್ಥದಲ್ಲಿ ಹೇಳಿದ್ದೀರಿ?

(Interruptions)

ಇದರಲ್ಲಿ ಆ ಪಾರ್ಟ್ ಈ ಪಾರ್ಟಿ ಎಂದು ಏನೂ ಇಲ್ಲ. ಯಾವನೇ ಆಯೋಗ್ಯ ಆ ಕೆಲಸ ಮಾಡಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅವನನ್ನೇಕೆ ಬಿಡುತ್ತೀರಿ? ಅವರು ಯೋಗ್ಯರಲ್ಲ ಆದ್ದರಿಂದಲೇ ಕ್ರಮ ತೆಗೆದುಕೊಳ್ಳಿ ಎಂದು ಅವರು ಹೇಳಿರತಕ್ಕಂಥಾದ್ದು. ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಕಲ್ಯೂಡೆಡ್ ಎಂದು ಹೇಳಬೇಕಾಗಿದೆ. ಆದ್ದರಿಂದಲೇ ಅವರು ಹೇಳಿದ್ದು.

Sri R.L. Jalappa : Let me stand corrected.

ಕಳೆದ ಬಡ್ಜೆಟ್ ಅಧಿವೇಶನದಲ್ಲಿ ನಾನು ಹೇಳಿದ್ದೇನೆ. I am ashamed.

(interuptions)

Sri R.L. Jalappa : When you cannot shoot, you want to beat with the Butt of the Gun.ರೆಕಾರ್ಡ್ ತರಿಸಿ ನೋಡಿ. ನಮ್ಮ ಪಕ್ಷದ ಅಧ್ಯಕ್ಷ ಎಂದರೆ ನಮಗೆ ನಾಚಿಕೆಯಾಗುತ್ತದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೆ. ಹೋದ ಬಡ್ಜೆಟ್ ಸ್ಪೀಚನ್ನು ತರಿಸಿ ನೋಡಿ. 23 ಲಕ್ಷಕ್ಕೆ ಮನೆ ಕೊಂಡು ಕೊಂಡಿದ್ದಾರೆಂದು ಹೇಳಿದೆ. ನಾನು ಡಾಕ್ಯುಮೆಂಟ್ಸ್ ಕೊಡುತ್ತೇನೆಂದು ಹೇಳಿದ್ದೆ. ಆದರೆ ಯಾರ ಕ್ರಮ ಗಳನ್ನು ಕೈಗೊಳ್ಳಲಿಲ್ಲ. ಅದರ ಕಾಪಿಯನ್ನು ಮಾನ್ಯ ಅಧ್ಯಕ್ಷರಿಗೆ ಕೊಡುತ್ತೇನೆ. ಇಲ್ಲಿ ಇದೆ ನೋಡಿ.

(ಪ್ರತಿಯನ್ನು ಮಾನ್ಯ ಅಧ್ಯಕ್ಷರಿಗೆ ಕಳಿಸಿದರು.

Sri S.M. Krishna : He has taken action.

Sri R.L. Jallappa : What action? This was taken much earlier than I spoke. Supersessionwas make much earlier to mes raising the issue the Assembly.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಕೌಂಟ್ಸ್ ರಿಲೀಸ್ ಮಾಡಿದ್ದೇನೆ ಸೂಪರ್ ಸೀಡ್ ಮಾಡಿ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಿದ್ದೇನೆ. ಈಗ 64ರಲ್ಲಿ ವಿಚಾರಣೆ ನಡೆದಿದೆ. ನೀನು ತೆಗೆದುಕೊಂಡಿದ್ದ ಎಂದು ಅವನ ಷರಡು ಹಿಡಿದು

ಹೊಡೆಯುವುದಕ್ಕಾಗುತ್ತದಯೇ? ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ. Don't unnecessarily blame others who have taken sincere action.

ಶ್ರೀ ಆರ್.ಎಲ್. ಜಾಲಪ್ಪ : ನಿಯಮ 64ರ ವಿಚಾರಣೆಯನ್ನು ಬೇಗ ಮಾಡಿಸಬೇಕು.

SRI K.H. RANGANATH : Enquiry under Section 64 is going on.

SRI R.L. JALAPPA : How Long?

SRI S.M. KRISHNA : What else can be done under the act?

SRI R.L. JALAPPA : Enquiry under Section 64 should be completed within one month. March to August-five months are over.

ಶ್ರೀ ಎಸ್. ಎಂ. ಕೃಷ್ಣ : ಆಫೀಸಿರ್‌ಗಳ ಲ್ಯಾಪ್ಸ್ ಇರಬಹುದು. But as Minister.

SRI R.L.JALAPPA : When crores of Rupees have been swallowed and swindled, and when public deposits are swindled, is it not his duty?

SRI K.H. RANGANATH : He is guided by the Rules and Regulations under the Act. ವಿಚಾರಣಾಧಿಕಾರಿ ಮಾಡಿರುತ್ತಾರೆ. Enquiry Officer will have to get the records. It may take one month or it may take two months.

ಶ್ರೀ ಆರ್.ಎಲ್. ಜಾಲಪ್ಪ : ವಿಚಾರಣಾ ಅಧಿಕಾರಿ ನೇಮಕಾತಿಗಳ ಬಗ್ಗೆ ವರದಿ ಕೊಟ್ಟಿದ್ದಾರೆ. ಆ ವರದಿ ಮೇಲೆ ಸೂಪರ್ ಸೀಡ್ ಮಾಡಿದ್ದರೂ ಸಹ ಇನ್ನೂ ವಿಚಾರಣೆ ಪೂರ್ಣ ಆಗಿಲ್ಲ. That has to be completed early. That should have been completed by this time.

SRI K.H.RANANATH : It is a matter of opinion.

ಶ್ರೀ ಆರ್. ಎಲ್. ಜಾಲಪ್ಪ : ಇದೊಂದೇ ಸೊಸೈಟಿಯಲ್ಲ. ಇಂಥಾದ್ದು ಹಲವಾರು ಇವೆ. ಇಷ್ಟು ಹೊತ್ತಿಗೆ ಆ ಅಧಿಕಾರಿಯನ್ನು ಸಸ್ಪೆಂಡಿನಲ್ಲಿಡಬೇಕಾಗಿತ್ತು. ಇದು ಪ್ರೈಮಾಫೀಸಿ ಕೇಸು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ನೀತಿ ನೋಡಿದರೆ ನನಗೆ

ಶ್ರೀ ಆರ್.ಎಲ್.ಜಾಲಪ್ಪ : ರೆಕಾರ್ಡ್ ತರಿಸಿ ನೋಡಿ. I have got great respect for you. I am only sorry. We have toiled very much to build the institution.

ಲೆಟರ್ ತರಿಸಿ ನೋಡಿ. ಒಂದು ಬೋರ್ಡ್ ಮೀಟಿಂಗ್‌ನಲ್ಲಿ ಒಂದು ಮಸಾಲೆ ದೋಸೆ ತರಿಲಿಲ್ಲ. ಈಗ ಬೋರ್ಡ್ ಮೀಟಿಂಗ್‌ನಲ್ಲಿ ಪಲಾವ್ ತರಿಸಿಕೊಂಡು ತಿನ್ನುತ್ತಾರೆ ಇವರು. ಎಲ್ಲಾ ಮಾಡಿ ಮುಳುಗಿಸಿ ಹೊರಟು ಹೋದರಲ್ಲಾ 50 ಸಾವಿರದಿಂದ 1,5000 ದವರೆಗೆ ನೇಮಕಾತಿಯಲ್ಲಿ ದುಡ್ಡು ಬರಲಿಲ್ಲವೆಂದು ಅದರಲ್ಲಿ ಅರ್ಧಭರ್ತಿ ಮಾಡಿ 44 ಜನ ಕ್ವಾಲಿಫಿಕೇಷನ್ ಇಲ್ಲದವರನ್ನು ನೇಮಕ ಮಾಡಿದರು. ಈಗ ನೀವು ಕೂತುಕೊಂಡು ಏನು ಮಾಡುತ್ತಿದ್ದೀರಿ? ನಿಮ್ಮ ಮೇಲೆ ನಾನೇನು ಚಾರ್ಜ್ಮಾಡಬೇಕು ಹೇಳಿ. ಅಲ್ಲಿ ಡೆಪಾಸಿಟ್ ಮಾಡಿದವರ ಮನೆ ಹಾಳಾಗಿ ಹೋಗಿ ಬಿಟ್ಟಿತಲ್ಲಾ?

ಶ್ರೀ ಕೆ.ಹೆಚ್. ರಂಗನಾಥ್ : ತಾವು ಹೇಳಿದ ಪ್ರಕಾರ ಅಕ್ಟೋಬರ್ 1992ರಲ್ಲಿ ಇದು ಆಗಿರುವುದು. ನೀವು ಇದು 4 ದಿವಸದಲ್ಲಾಯಿತು ಎಂದು ಪ್ರಸ್ತಾಪ ಮಾಡುತ್ತಿದ್ದೀರಿ. The Hon'ble Minister was not the Minister for Co-operation at that time.

SRI R.L. JALAPPA : Iam not telling that he was the Minister for Co-operateion at that time. But after that, what is the action that he has taken?

SRI K.H. RANGANATH : To make a charge, that " you have colluded" with them is most uncharitable.

SRI R.L. JALLAPPA : I am making the charge that for the last five months, you are not taking taking any active action.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಭಾಧ್ಯಕ್ಷರೇ, ನಾನು ಹೇಳುವುದೇನೆಂದರೆ, ರೋಸ್ಟರ್ ಫಾಲೋ ಮಾಡಿಲ್ಲವೆಂದು ನಾನೇ ಅದನ್ನು ಕ್ಯಾನ್ಸಲ್ ಮಾಡಿಸಿ, ನೀವು ಇದನ್ನು ಅವರಿಗೆ ಕೊಡಬೇಡಿ ಎಂದು ಹೇಳಿದೆ. ಏಕೆಂದರೆ ನಾನು ಇದನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ ಅವರನ್ನು ಅಪಾಯಿಂಟ್ ಮಾಡಿ, ಡ್ಯೂಟಿ ಮೇಲೆ ತೆಗೆದುಕೊಂಡಿದ್ದರು. ಆಗ ನಾನು ಹೇಳಿದೆ, ಡ್ಯೂಟಿ ಮೇಲೆ ತೆಗೆದುಕೊಂಡರೂ ಕೂಡ ಹೊಸ ಕಾನೂನಿನ ಪ್ರಕಾರ ರೋಸ್ಟರ್ ಯಾರು ಫಾಲೋ ಮಾಡುವುದಿಲ್ಲ, ಅವರು ಶಿಕ್ಷೆಗೆ ಅರ್ಹರಾಗುತ್ತಾರೆ. ಅದಕ್ಕಾಗಿ ಅವರನ್ನೆಲ್ಲಾ ತೆಗೆಯಬೇಕೆಂದು ಹೇಳಿ, ನಾನೇ ಸ್ವತಃ ಬರೆದು, ಫೋನ್ ಮಾಡಿ ನಮ್ಮ ರಿಜಿಸ್ಟ್ರಾರ್ ಅವರಿಗೆ ನಾವು ಇದನ್ನು ಕಟ್ಟುನಿಟ್ಟಾಗಿ ಫಾಲೋ ಮಾಡಬೇಕೆಂದು ಹೇಳಿದಾಗ ಪಾಪ, ಅವರು ಸಹ ಸರ್ಕ್ಯೂಲಸ್ ಕಳುಹಿಸಿದ್ದಾರೆ. ಆಗ ಅಲ್ಲಿಗೆ ಸಂಬಂಧಪಟ್ಟವರು ಬಂದರು. ಅವರನ್ನು ಟರ್ಮಿನೇಟ್ ಮಾಡದೆ, ಕೊನೆಗೆ ಅವರು ಕೋರ್ಟಿಗೆ ಹೋಗಿ, ಈಗ ಮ್ಯಾಟರ್ ಕೋರ್ಟಿನಲ್ಲಿ ಪೆಂಡಿಂಗ್ ಇದೆ. ಈಗ ನೀವು ಮಾಡಲಿಲ್ಲ ಎಂದರೆ ಕೋರ್ಟಿನಲ್ಲಿ ಇದ್ದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ ಹೇಳಿ? ನೌಕರಿ ಬಗ್ಗೆ ನಾವು ರೋಸ್ಟರ್ ನಂತೆ ಕ್ರಮ ತೆಗೆದುಕೊಂಡಿದ್ದೇವೆ. Account freeze ಮಾಡಿಸಿ Administrator ಹಾಕಿದ್ದೇವೆ, ನಿಯಮ 64ರಂತೆ ಕಂಟಿನ್ಯೂ ಮಾಡಿಸಿದ್ದೇವೆ. ಇದನ್ನು ಬಿಟ್ಟು ಇನ್ನು ಯಾವುದಾದರೂ ಜಾಸ್ತಿ ಮಾಹಿತಿ ಇದ್ದರೆ ಕೊಡಿ. ನನಗೆ ಕೋಆಪರೇಷನ್ ಬಗ್ಗೆ ಜಾಸ್ತಿ ಮಾಹಿತಿ ಇಲ್ಲ. ಈ ಖಾತೆ ವಹಿಸಿಕೊಂಡ ಮೇಲೆ ಸ್ವಲ್ಪ ಓದಿ ತಿಳಿದುಕೊಂಡಿದ್ದೇನೆ. ನಿಮ್ಮಂಥವರು ಹೇಳಿದ್ದನ್ನು ಕೇಳಿ ಮಾಡುತ್ತಿದ್ದೇನೆ. ಇದಕ್ಕೆ ಸ್ವಲ್ಪ ಬೇರೆ ಬೇರೆ ಕಾನೂನು ಕ್ರಮಗಳು ಇದ್ದರೆ ಹಾಗೂ ತಕ್ಷಣ ಅವರನ್ನು ಶೂಲಕ್ಕೆ ಏರಿಸುವಂತಹ ಕಾನೂನು ಇದ್ದರೆ ತಿಳಿಸಿ, ಬೇಕಾದರೆ ನಾಳೆಯೇ ಈ ಸದನದಲ್ಲಿ ನಾನು ಅವರನ್ನು ತಂದು ಶೂಲಕ್ಕೆ ಏರಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಇದರಲ್ಲಿ ಕೆಲವು ಕ್ರಿಮಿನಲ್ ಕೇಸಸ್ ಆಗಿವೆ. ಹಣವನ್ನು ಲಪಟಾಯಿಸಿ ಕ್ರಿಮಿನಲ್ ಅಫೆನ್ಸ್ ಆಗಿವೆ. ಇದು 64ನೇ ನಿಯಮದ ಪ್ರಕಾರ ಮುಂದುವರೆಯುವಂಥದ್ದು ನಿಧಾನವಾಗುತ್ತದೆ. ಅವರಿಗೆ ನೋಟೀಸ್ ಕಳುಹಿಸಬೇಕು. ಅವರಿಂದ ಉತ್ತರ ತೆಗೆದುಕೊಳ್ಳಬೇಕು. ಇದೆಲ್ಲಾ ನಿಧಾನವಾಗುತ್ತದೆ. ಅದಕ್ಕಿಂತ ಬೇರೆ ರೀತಿ ವಿಚಾರ ಮಾಡುವಂತಹ ಅವಕಾಶವಿದೆ. ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿಸಿ, 15 ದಿವಸಗಳಲ್ಲಿ ಅಥವಾ ಒಂದು ತಿಂಗಳಲ್ಲಿ ವರದಿಯನ್ನು ತರಿಸಬಹುದು. ಇದರಲ್ಲಿ ಯಾರು 20-25 ಕೋಟಿ ರೂಪಾಯಿಗಳನ್ನು ತಿಂದು ನೀರು ಕುಡಿದಿದ್ದಾರೋ ಅಂಥವರ ಬಗ್ಗೆ ಎನ್‌ಕ್ವೈಯರಿ ಮಾಡಿಸಿ ಅವರನ್ನು ಶಿಕ್ಷಿಸುವಂತಹ ಕ್ರಮ ತೆಗೆದುಕೊಳ್ಳಿ. ಅದನ್ನು

ಬಿಟ್ಟು ಸುಮ್ಮನೆ ಕುಳಿತರೆ ಆಗುವುದಿಲ್ಲ. ಸಿಓಡಿ ಎನ್ಕ್ವೈಯರಿ ಮಾಡಿಸಿ, ಇಷ್ಟೇ ಅವಧಿಯಲ್ಲಿ ವರದಿ ಕೊಡಬೇಕೆಂದು ಹೇಳಿ, ಮತ್ತು ಒಂದು ಇಂಟ್ರೀಮ್ ವರದಿಯನ್ನು ಕೂಡ ಅವರಿಂದ ತೆಗೆದುಕೊಳ್ಳಿ. ನಂತರ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಿ, ಏಕೆಂದರೆ 20-25 ಕೋಟಿ ರೂಪಾಯಿಗಳು ಎನ್ನುವುದು ಸಣ್ಣ ಮಾತಲ್ಲ.

ಅವರಿಂದ ತೆಗೆದುಕೊಳ್ಳಿ; ನಂತರ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಿ; ಏಕೆಂದರೆ 20-25 ಕೋಟಿ ರೂಪಾಯಿಗಳು ಎನ್ನುವುದು ಸಣ್ಣ ಮಾತಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾನೂನಿನ ಪ್ರಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ. ಸಿ.ಓ.ಡಿ. ಬಗ್ಗೆಯೂ ಹೇಳಿದ್ದೀರಿ; ಅದರಿಂದ ಪರಿಹಾರ ಆಗುತ್ತದೆಂದರೆ ಅದಕ್ಕೂ ಕಳುಹಿಸಿಕೊಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮೊದಲು ಅವರ ಆಸ್ತಿಯನ್ನು ಸೀಜ್ ಮಾಡಿ; ಮೊದಲು ಅವರ ಆಸ್ತಿ ಎಷ್ಟಿತ್ತು, ಈಗ ಎಷ್ಟಿದೆ ಎಂಬುದನ್ನು ನೋಡಿ, ಈಗ 75-50 ಸೈಟ್ನಲ್ಲಿರುವ ಒಂದು ಮನೆಯನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ 23 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಡಾಕ್ಯುಮೆಂಟ್ಸ್ ಅನ್ನು ನಿಮಗೆ ಪ್ರೊಡ್ಯೂಸ್ ಮಾಡಿದ್ದೇನೆ. ನಾಲ್ಕೂವರೆ ಲಕ್ಷ ರೂಪಾಯಿಗಳು ರಿಜಿಸ್ಟ್ರೇಷನ್ ಫೀ ಇದೆ. The site itself now costs about Rs. 25 to 30 lakhs. ಇನ್ನೊಂದು ಸೆಷನ್ 69 ಪ್ರಕಾರ attach the property and suspend the Officer. ಸಸ್ಪೆಂಷನ್ ಜೊತೆಗೆ ಅದು ಫಾಲೊ ಅಪ್ ಆಗಬೇಕು. ನಾನು ಕಳೆದ ಆಯವ್ಯಯ ಭಾಷಣದಲ್ಲಿ ಇದನ್ನೆಲ್ಲಾ ಹೇಳಿದ್ದೇನೆ; ತಮ್ಮ ಜೊತೆಯಲ್ಲಿ ಕುಳಿತು ಮಾತನಾಡಿದ್ದೇನೆ. ಮುಖ್ಯಮಂತ್ರಿಗಳಿಗೂ ಎರಡು ಸಲ ಹೇಳಿದ್ದೇನೆ. ತಾವು ಏನೂ ಆ್ಯಕ್ಷನ್ ತೆಗೆದುಕೊಳ್ಳಲಿಲ್ಲವೆಂದರೆ shall I not charge you, Sir? ದಯವಿಟ್ಟು ಹೇಳಿ. ಖರ್ಗೆಯವರೇ, ನಾವು ನೀವು ಹಳೆಯ ಸ್ನೇಹಿತರು; ತಾವು ನನಗೆ ಅಸಮಾಧಾನ ಬರುವಂತಹ ಕೆಲಸ ಏನೂ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ನೇಹಿತರು ಎನ್ನುವುದು, ಇಲ್ಲಿ ಬಯ್ಯುವುದು.

ಶ್ರೀ ಆರ್.ಎಲ್. ಜಾಲಪ್ಪ : ನಮ್ಮಪ್ಪನಾದರೂ ಬೈಯುತ್ತೇನೆ. This is in the interest of the farmers of the entire district, not myself. I am not borrowing anything at all. ರೈತರು ಬದುಕಬೇಕಲ್ಲಾ; ಡಿಫಾಸಿಟ್ ಮಾಡಿರುವವರು ಇರಬೇಕಲ್ಲಾ; ಡಿಫಾಸಿಟರ್ಸ್‌ಗೆ ಇದೆಲ್ಲಾ ಗೊತ್ತಾದರೆ ಬ್ಯಾಂಕ್ ಗತಿ ಏನು? ಅದಕ್ಕಾಗಿ ನಾನು ನೋಡಿ ಎಂದು ಹೇಳುವುದು.

ಶ್ರೀ ಎಂ. ಮಹದೇವ್ : ನೀವು ಅಕ್ಕಿನೂ ಬೇಕು, ಅಕ್ಕನೂ ಬೇಕು ಎಂದರೆ ಆಗುವುದಿಲ್ಲ. ಇಲ್ಲಿ ಸ್ನೇಹನೂ ಬೇಕು ಅಲ್ಲಿ ರೈತರ ಇಂಟರೆಸ್ಟ್ ಬೇಕು ಎಂದು ಮಾತನಾಡಿದರೆ ಹೇಗೆ?

ಶ್ರೀ ಆರ್.ಎಲ್. ಜಾಲಪ್ಪ : ಇನ್ನು ಯಾವ ತರಹ ಮಾತನಾಡಬೇಕು? ಈಗ ಆ ಪತ್ರ ತಮ್ಮ ಕೈಗೆ ಬಂದಿದೆಯೇ?

ಅಧ್ಯಕ್ಷರು : ಬಂದಿದೆ.

ಶ್ರೀ ಆರ್.ಎಲ್. ಜಾಲಪ್ಪ : ನೀವು ತೆಗೆದುಕೊಳ್ಳದಿದ್ದರೆ ನನಗೆ ಏನೂ ಲುಕ್ಸಾನ್ ಇಲ್ಲ, ನಾನು ಸಂತೆಗೆ ಹೋಗುತ್ತೇನೆ, ಸಂತೆಯಲ್ಲೂ ಹೇಳುತ್ತೇನೆ. ನೀವು ಈ ತರಹ ವರ್ತಿಸಿದರೆ, I know how to attack you. It this the way that a member of the Cabinet behaves? Do you deserve to be in the Cabinet? I

am sorry. ಬಂದಿದೆಯೇ ಸ್ವಾಮಿ ಎಂದರೆ ಅಲ್ಲಿಗೆ ಕಳುಹಿಸಿ ಎಂದು ಹೇಳುತ್ತಾರೆ. ಬಂದಿಲ್ಲ ಅಂದರೆ ಇನ್ನೊಂದು ಕಾಪಿಯನ್ನು ಕೊಡುತ್ತೇನೆ.

ಆಮೇಲೆ ಎ.ಪಿ.ಎಂ. ಸಿ.ಗಳ ಸ್ಥಿತಿ ಏನಿದೆ, ಇದು ಪಟ್ಟಾಭದ್ರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ನಮ್ಮ ಸರ್ಕಾರ, ಈಗಿನ ಸರ್ಕಾರ ಕಂಕಣಬದ್ಧವಾಗಿ ನಿಂತು ದಿನವೂ ಲಕ್ಷಾಂತರ ರೈತರ ಶೋಷಣೆ ಮಾಡಿಸುತ್ತಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಒಂದು ಕಾನೂನನ್ನು ಜಾರಿಗೆ ತಂದೆವು. ಏನೆಂದರೆ ರೈತ ತನ್ನ ಮಾಲನ್ನು ಮಾರ್ಕೆಟ್‌ಗೆ ಯಾರ್ಡ್‌ಗೆ ತಂದಮೇಲೆ ಅವರಿಂದ ಕಮಿಷನ್. ವಸೂಲು ಮಾಡಕೂಡದು. ಯಾವುದೇ ಖರ್ಚನ್ನು ವಸೂಲು ಮಾಡಕೂಡದು. ಅದನ್ನು ಏನಾದರೂ ವಸೂಲು ಮಾಡುವುದಾದರೆ ಕೊಳ್ಳುವವನಿಂದ ವಸೂಲು ಮಾಡಬೇಕು ಎಂದು ಒಂದು ಆಕ್ಟ್ ತಂದೆ. ಮೂರು ದಿವಸ ನನಗೆ ನನ್ನ ಪಕ್ಷದಲ್ಲಿ ಗ್ರಿಲ್ ಮಾಡಿದರು ಕೊನೆಗೆ ಈ ಸಭೆಗೆ ಬಂದಾಗ ಸನ್ಮಾನ್ಯ ಕೆ.ಹೆಚ್. ಪಾಟೀಲ್‌ರವರು ಇಲ್ಲಿ ಕುಳಿತಿದ್ದವರು ಎದ್ದು ಹೇಳಿದರು. ನಾವು 30 ವರ್ಷಗಳಿಂದ ಈ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡುವುದಕ್ಕೆ ಆಗಿರಲಿಲ್ಲ. ಇಂತಹ ಒಂದು ಬೋಲ್ಡ್ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಆಗಿರಲಿಲ್ಲ. ಮಂತ್ರಿಗಳು ತಮ್ಮ ಸ್ಥಾನ ಹೋದರೂ ಚಿಂತೆ ಇಲ್ಲ ಎಂದು ಈ ಒಂದು ತಿದ್ದುಪಡಿ ತಂದಿದ್ದಾರೆ. ಈ ತಿದ್ದುಪಡಿಯನ್ನು ಯುನಾನಿಮಸ್ ಆಗಿ ನಾವು ಒಪ್ಪಿಕೊಳ್ಳಬೇಕು, ಇದರ ಬಗ್ಗೆ ಡಿಸ್‌ಕಷನ್ ಬೇಡ ಎಂದು ಈ ಸದನದಲ್ಲಿ ಹೇಳಿದರು. ಮತ್ತು ಯುನಾನಿಮಸ್ ಆಗಿ ಅದನ್ನು ಒಪ್ಪಿಕೊಂಡರು. ಮಾನ್ಯ ರಂಗನಾಥ ಅವರೇ, ನಾನು ಎಪಿಎಂಸಿ ಆಕ್ಟ್ ಬಗ್ಗೆ ಮಾತನಾಡುತ್ತಿದ್ದೇನೆ. ಎಪಿಎಂಸಿ ಆಕ್ಟ್‌ನ್ನು ನಾವು ಸರ್ಕಾರದಲ್ಲಿ ಇದ್ದಾಗ ರೈತ ತನ್ನ ಮಾಲನ್ನು ಮಾರುವುದಕ್ಕೆ ಎಪಿಎಂಸಿ ಯಾರ್ಡ್‌ಗೆ ತಂದರೆ ಅವನಿಂದ ಕಮಿಷನ್ ತೆಗೆದುಕೊಳ್ಳಬಾರದು, ಎಂದು ಮಾಡಿದೆವು, ಮೊದಲು 10 ಪರ್ಸೆಂಟ್ ತೆಗೆದುಕೊಳ್ಳುತ್ತಿದ್ದರು. ಯಾವುದೇ ಖರ್ಚನ್ನು ಅವನಿಂದ ತೆಗೆದುಕೊಳ್ಳಬಾರದು. ತೂಕ ಅಥವಾ ಇನ್ನಾವುದೇ ಖರ್ಚಾಗಿರಲಿ ಅದು. ಇದೆಲ್ಲವನ್ನೂ ಕೊಳ್ಳುವವನಿಂದ ತೆಗೆದುಕೊಳ್ಳಬೇಕು ಎಂದು ಒಂದು ಆಕ್ಟ್ ತಂದೆವು. ಅದನ್ನು ಇಲ್ಲಿ ಒಪ್ಪಿಕೊಂಡರು. ಇವತ್ತು ಏನಾಗಿದೆ, ಕೋಟ್ಯಾಂತರ ರೂಪಾಯಿಗಳಷ್ಟು ದಿನವಹಿ ರೈತನ ಶೋಷಣೆಯಾಗುತ್ತಿದೆ. ರೈತನ ರಕ್ತ ಹೋಗುತ್ತಿದೆ, ಒಬ್ಬ ಸಚಿವರೂ ಅದರ ಬಗ್ಗೆ ಗಮನ ಕೊಡುವುದಿಲ್ಲ. ಏಕೆಂದರೆ ಪಟ್ಟಭದ್ರಹಿತಾಸಕ್ತಿಗಳಿಗೆ ನೀವು ನಿಮ್ಮನ್ನು ಮಾರಿಕೊಂಡಿದ್ದೀರಿ. ಇಲ್ಲದಿದ್ದರೆ ಎಲೆಕ್ಷನ್ ಎಂದೋ ಮಾಡುತ್ತಿದ್ದೀರಿ, ಯಾರಾದರೂ ಬರಲಿ, ನಮ್ಮ ಪಾರ್ಟಿ ಬರಲಿ, ನಿಮ್ಮ ಪಾರ್ಟಿ ಬರಲಿ, ಒಬ್ಬ ನಾನ್ ಅಫೀಷಿಯಲ್ ಪ್ರೆಸಿಡೆಂಟ್ ಇದ್ದರೆ ಅಲ್ಲಿ ಮೆಂಬರ್ ಇದ್ದರೆ ಅವರಿಗೆ ಜವಾಬ್ದಾರಿ ಇರುತ್ತದೆ. ಚೆಕ್ ಮಾಡುತ್ತಾರೆ. ರೈತರ ಹಿತ ಕಾಯುತ್ತಾರೆ. ಈ ಅಧಿಕಾರಿಗಳು ಏನು ರೈತರ ಹಿತ ಕಾಯುವುದು? ಅವರಿಗೆ ಏನೂ ಬೇಕಾಗಿಲ್ಲ. ಎಲ್ಲೋ ಆಡಳಿತಾಧಿಕಾರಿ ಇರುತ್ತಾರೆ, ಸೆಕ್ರೆಟರಿ ಇರುತ್ತಾರೆ, ಅವರು ಮಜವಾಗಿ ಇರುತ್ತಾರೆ, ಬಹಳ ಚೆನ್ನಾಗಿ ಮಾಡಿಕೊಂಡು ಹೋಗುತ್ತಾರೆ. ಕೋಟಿಗಟ್ಟಲೆ ಇಡೀ ರಾಜ್ಯದಲ್ಲಿ ನೀವು ಶೋಷಣೆ ಮಾಡುತ್ತಿದ್ದೀರಲ್ಲಾ, ಅದಕ್ಕೆ ಅಲೋ ಮಾಡಿದ್ದೀರಲ್ಲಾ ಇದು ಸರ್ಕಾರವೇ ಸ್ವಾಮಿ? ನಾನು ಹೋದ ಸಾರಿ ಒಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಟ್ಟರು. ಏನೆಂದರೆ ಕರ್ನಾಟಕ ಕೃಷಿ ಉತ್ಪನ್ನ ಕಾಯಿದೆ 66ಕ್ಕೆ 91 ಕರ್ನಾಟಕ ಕಾಯಿದೆ ಸಂಖ್ಯೆ 118 ರ ಮೂಲಕ ತಿದ್ದುಪಡಿ ಮಾಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ನಿಯಮಾವಳಿ 1968ರ ಚುನಾವಣೆಗೆ ಸಂಬಂಧಿಸಿದ ನಿಯಮಗಳಿಂದ ತಿದ್ದುಪಡಿ ಮಾಡುವ ಬಗ್ಗೆ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಿದ್ದು ಸದರಿ ನಿಯಮಾವಳಿಗಳನ್ನು ತಿದ್ದುವವರಿಗೆ ಸಾರ್ವಜನಿಕರಿಂದ ಆಕ್ಷೇಪಣೆ ಬಂದನಂತರ ಪರಿಶೀಲನೆ ಅನಂತರ ಅಂತಿಮ ಸೂಚನೆ ಹೊರಡಿಸಬೇಕಾಗಿರುತ್ತದೆ. ಅದೂ ಅಲ್ಲದೆ ಸದರಿ ಕಾಯಿದೆ ಪ್ರಕರಣಕ್ಕೆ ತಿದ್ದುಪಡಿ ಮಾಡಿರುವ ಪ್ರಯುಕ್ತ ಕೆಲವೊಂದು ಮಾರುಕಟ್ಟೆ ಸಮಿತಿಗಳ ಕ್ಷೇತ್ರದಲ್ಲಿ ಬದಲಾವಣೆಯನ್ನು ಮಾಡುವುದು ಸಹ ಸರ್ಕಾರದ ಪರಿಶೀಲನೆಯಲ್ಲಿದ್ದು ಈ ಎಲ್ಲಾ ಪ್ರತಿಕ್ರಿಯೆಗಳು ಮುಗಿದ ನಂತರ ಈ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಚುನಾವಣೆ

ಮಾಡಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. The same reply was given to me on 18.3.91. ಮಾನ್ಯ ಕೆ. ಹೆಚ್. ಪಾಟೀಲರು ಇದ್ದಾಗ ಅಮೆಂಡ್‌ಮೆಂಟ್ ಮಾಡಿದರು. ತಿರುಗಿ ಇನ್ನು ಏನು ಅದಕ್ಕೆ ಅಮೆಂಡ್‌ಮೆಂಟ್. ಶ್ರೀ ಕೆ.ಹೆಚ್. ಪಾಟೀಲರು ಇದ್ದಾಗ ಮಾಡಿದ ಒಂದು ಮಹಾತ್ಕಾರ್ಯ ಏನೆಂದರೆ ನಾನ್ ಅಫಿಷಿಯಲ್‌ಗಳನ್ನು ತೆಗೆದು ಹಾಕಿದರು. ಒಬ್ಬ ಲೇಡಿ ಇರಬೇಕು ಎಂದು ಮಾಡಿದರು. ಬಹುಶಃ ಇವರಿಗೆ ಅದು ಹಿಡಿಸಲಿಲ್ಲ. ಬಹುಶಃ ನಾನ್ ಅಫೀಷಿಯಲ್‌ದನ್ನೂ ಇಂಟ್ರಡ್ಯೂಸ್ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಏನು ಕ್ರಮ ಮಾಡುತ್ತೀರೋ ಮಾಡಿ. ಅದನ್ನು ನಾನ್ ಅಫೀಷಿಯಲ್ ಕೈಗೆ ಕೊಡಿ.

ಶ್ರೀ ಮದನ್ ಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) ಇದನ್ನೆಲ್ಲಾ ಬೈಫರ್‌ಕೇಟ್ ಮಾಡುವುದರಿಂದ.

ಶ್ರೀ ಆರ್.ಎಲ್. ಜಾಲಪ್ಪ : ಸ್ವಾಮಿ, ಇದೆಲ್ಲಾ ಎಷ್ಟು ದಿವಸ ಆಗುತ್ತದೆ? ಬೈಫರ್‌ಕೇಟ್ ಮಾಡಿಕೊಳ್ಳಬಹುದು. ಏನೂ ಪ್ರಪಂಚ ಮುಳುಗಿ ಹೋಗುವುದಿಲ್ಲ. ಹಿಂದೆ ಎಲ್ಲಾ ನಡೆಯಲಿಲ್ಲವೇ? ಸುಮ್ಮನೆ ಕಳ್ಳ ನೆಪ ಬೇಡ ಸ್ವಾಮಿ, ನೀವೂ ರೈತರು ಅಲ್ಲವೇ? ರೈತರ ಹಿತಾಸಕ್ತಿ ಕಾಪಾಡುತ್ತಿದ್ದೀರಾ? 10 ಪರ್ಸೆಂಟ್ ಇವತ್ತು ರೈತರಿಂದ ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ಕಾನೂನಿಗೆ ಬೆಲೆ ಇಲ್ಲದ ಹಾಗೆ ಆಗಿದೆ. ನೀವು ಲಕ್ಷಾಂತರ ಜನರ ಶೋಷಣೆ ಮಾಡುತ್ತಿದ್ದೀರಿ. ಇವರೆಲ್ಲಾ ನಿಮ್ಮಲ್ಲಿ ವಿಶ್ವಾಸ ಇಡಬೇಕೇನು? ದಯವಿಟ್ಟು ಯೋಚನೆ ಮಾಡಿ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಬೈಫರ್‌ಕೇಟ್ ಎಷ್ಟು ಮಾಡಿದ್ದೀರಿ ರಾಜ್ಯದಲ್ಲಿ? ಎಲ್ಲಾ ಎಪಿಎಂಸಿ ಬೈಫರ್‌ಕೇಟ್ ಮಾಡಿದರೆ ಎಪಿಎಂಸಿ ಚುನಾವಣೆ ಮಾಡುವುದಕ್ಕೆ ನಿಮಗೆ ಧೈರ್ಯ ಇಲ್ಲ. ಅಧಿಕಾರಿಗಳನ್ನು ನೇಮಿಸಿ ಮಾಡುತ್ತಿದ್ದೀರಿ. ಅಧಿಕಾರಿಗಳ ಮೂಲಕ ನೀವು ರಾಜ್ಯ ಆಳುತ್ತಿದ್ದೀರಿ.

ಇನ್ನು ಲಾ ಅಂಡ್ ಆರ್ಡರ್ ಬಗ್ಗೆ ನಮ್ಮ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದ್ದಾರೆ. ಒಂದೇ ಒಂದು ವಿಷಯ ನಾನು ಹೇಳುತ್ತೇನೆ. ತಾರೀಖು, 19.5.1993ರಂದು ಬೆಂಗಳೂರು ನಾರ್ತ್‌ಗೆ ಚುನಾವಣೆಯಾಯಿತು. ಈ ಬೆಂಗಳೂರು ಉತ್ತರ ತಾಲ್ಲೂಕಿನ ಗಂಟಗಾನ ಹಳ್ಳಿ ಎಂಬ ಒಂದು ಊರಿನಲ್ಲಿ ರಾಮಭದ್ರಯ್ಯ ಎಂಬುವವರು ನಮ್ಮ ಪಕ್ಷಕ್ಕೆ ಕೆಲಸ ಮಾಡಿದರು. ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಮ್ಮ ಪಕ್ಷದ ಅಧ್ಯಕ್ಷರು, ಇದನ್ನು ಸ್ವಲ್ಪ ಕೇಳಬೇಕು. ಮಾನ್ಯ ಉಪಮುಖ್ಯ ಮಂತ್ರಿಗಳು ದಯಮಾಡಿ. 19.5.1993ರಲ್ಲಿ ಚುನಾವಣೆಗಳಾಯಿತು. ರಾಮಭದ್ರಯ್ಯ ಎಂಬುವರು ನಮ್ಮ ಪರವಾಗಿ ಕೆಲಸ ಮಾಡಿದರು. ನಿಮ್ಮ ಪಕ್ಷದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಕ್ಷರು ಅವರ ಮನೆ ಮುಂದೆ ಗೋಡೆ ಕಟ್ಟಿಬಿಟ್ಟರು. ಯಾರು ಈಚೆಗೆ ಬರಲಿಕ್ಕಾಗದಂತೆ ಗೋಡೆ ಹಾಕಿಬಿಟ್ಟರು. ಬರಬೇಕಾದರೆ ಏಣಿ ಹಾಕಿಕೊಂಡು ಹತ್ತಬೇಕು, ಏಣಿ ಹಾಕಿಕೊಂಡು ಇಳಿಯಬೇಕು. ಇಲ್ಲದೆ ಹೋದರೆ ಹೆಂಗಸರು ಮಕ್ಕಳು ಯಾರು ಬರುವಂತೆಯೇ ಇಲ್ಲ, ಅಲ್ಲಿಯೇ ಇರಬೇಕು. ಅಲ್ಲೇ ಇದ್ದರು. ನನಗೆ 20ನೇ ತಾರೀಖು ಸಾಯಂಕಾಲ ಗೊತ್ತಾಯಿತು ಈ ವಿಚಾರ. ನಾನು ಮುಖ್ಯ ಕಾರ್ಯದರ್ಶಿಗಳಾದ ಸನ್ಮಾನ್ಯ ಲಿನ್‌ರವರನ್ನು ಕಾಂಟಾಕ್ಟ್ ಮಾಡಿದೆ. ಡಿ.ಐ.ಜಿ. ಯವರನ್ನು ಕಾಂಟಾಕ್ಟ್ ಮಾಡಿದೆ. ಇದೇನು ಅನಾಹುತ ಇಂಥ ಒಂದು ದೌರ್ಜನ್ಯ ನಡೆಯುತ್ತಿದೆ. ಮನೆಯಿಂದ ಅವರು ಈಚೆಗೆ ಬರಲು ವ್ಯವಸ್ಥೆ ಮೊದಲು ಮಾಡಿ ಎಂದು ಹೇಳಿದೆ. ಅವರು ಪ್ರಾಮ್ಪ್ಟ್ ಆಗಿ ಆಕ್ಷನ್ ತೆಗೆದುಕೊಂಡು 21ನೇ ತಾರೀಖು ಸಾಯಂಕಾಲ 4-00 ಗಂಟೆಗೆ ಬಿಡುಗಡೆ ಮಾಡಿದರು.

ಗೋಡೆ ಕಿತ್ತು ಹಾಕಿಸಿದರು. ಆದರೆ ಅವನ ಮೇಲೆ ಚಾರ್ಜ್ ಶೀಟ್ ಹಾಕಲಿಲ್ಲ. ಎಫ್. ಐ.ಆರ್. ಏತಕ್ಕೆ ಫೈಲ್ ಮಾಡಲಿಲ್ಲ? ಇದು ನಿಮ್ಮ ಸರ್ಕಾರವೇ? ಒಂದು

ಕೆಲಸ ಮಾಡಿ, ಅಮೇರಿಕಾದಲ್ಲಿ ಸ್ಪಾಯಿಲ್ ಸಿಸ್ಟಮ್ ಎಂದು ಇದೆಯಲ್ಲಾ, ಅದನ್ನು ಇಂಟ್ರಡ್ಯೂಸ್ ಮಾಡಿ. ಸಬ್ ಇನ್‌ಸ್ಪೆಕ್ಟರ್ ಎಲ್ಲಾ ನಿಮ್ಮವರನ್ನು ಹಾಕಿ ಬಿಡಿ. ನಡೆಯಲಿ, ಅದು ಎಷ್ಟು ದಿವಸ ನಡೆಯುತ್ತದೋ ನಡೆಸೋಣ. ನಾನು ಆ ರೀತಿ ಕೆಲಸ ಮಾಡಿಲ್ಲ, ಸ್ವಾಮಿ. ನಾನು ತಪ್ಪು ಮಾಡಿರುವವನು ಯಾರೇ ಇರಲಿ ಅವನಿಗೆ ತಕ್ಕ ಶಿಕ್ಷೆಯನ್ನು ಕೊಟ್ಟಿದ್ದೇನೆ. ನನಗೆ ಅದನ್ನು ಹೇಳಬೇಡಿ. ದಯವಿಟ್ಟು ಅದರಿಂದಲೇ ರಶೀದ್ ಕೇಸ್ ಬಂದಾಗ 5 ಜನರ ಬಗ್ಗೆ ಕೂಡ ನಾನು ಡಿಫೆಂಡ್ ಮಾಡಲಿಲ್ಲ. ನನಗೆ ಗೊತ್ತಿದೆ, ನಾನು ಏನು ಮಾಡಿದ್ದೇನೆಂದು. ಅದನ್ನು ಹೇಳಿಕೊಳ್ಳುವುದು ಬೇಡ. ನನ್ನ ಕೈಲಾದದ್ದನ್ನು ಮಾಡಿದ್ದೇನೆ. ನನಗೆ ಏನು ಸಾಧ್ಯವೋ ಅದನ್ನು ಮಾಡಿದ್ದೇನೆ. ನಾನೇನೂ ಕೆಟ್ಟ ಹೆಸರನ್ನು ತೆಗೆದುಕೊಂಡು ಹೋಗಿಲ್ಲ, ಯಾರನ್ನೂ ನಾನು ಶೀಲ್ಡ್ ಮಾಡಿಲ್ಲ. ಅದೇ ರಾಮಭದ್ರಯ್ಯ ತನ್ನ ಜಮೀನಿನಲ್ಲಿ ಬೆಳೆ ಇಟ್ಟಿದ್ದರೆ 5 ಟ್ರಾಕ್ಟರ್ ಗಳನ್ನು ತೆಗೆದುಕೊಂಡು ಹೋಗಿ ಎರಡು ಗಂಟೆಗಳಿಗೆಲ್ಲಾ ಎಲ್ಲವನ್ನು ಉತ್ತಿಸಿಬಿಟ್ಟರು. ಇದನ್ನು ಮುಖ್ಯ ಮಂತ್ರಿಗಳಿಗೆ ತಿಳಿಸಿದರು, ಎಲ್ಲರಿಗೂ ತಿಳಿಸಿದರು. ಏತಕ್ಕೆ ಅವನ ಮೇಲೆ ಎಫ್.ಐ.ಆರ್. ಹಾಕಲಿಲ್ಲ? ಚಾರ್ಜ್ ಶೀಟ್ ಹಾಕಲಿಲ್ಲ? ಇದನ್ನು ನೀವು ಕಾನೂನು ಎಂದು ಹೇಳುತ್ತೀರೇನು? ಇದನ್ನು ಲಾಫುಲ್ ಗೌವರ್ನಮೆಂಟ್ ಎಂದು ಹೇಳುತ್ತೀರೇನು? ಇದಕ್ಕೆ ಸರ್ಕಾರವೆಂದು ಹೇಳುತ್ತೀರೇನು? ಈ ರೀತಿಯಾದರೆ ಯಾವ ಜನ ನಿಮ್ಮ ಮೇಲೆ ವಿಶ್ವಾಸ ಇಡುತ್ತಾರೆ? ಬಹಳ ಮುಖ್ಯವಾದ ಇನ್ನೊಂದು ಮಾತನ್ನು ಹೇಳಬೇಕೆಂದಿದ್ದೇನೆ. ಎಷ್ಟು ಹೇಳಿದರೂ ಅಷ್ಟೇನೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಸ್ಟೇಟ್ ಮೆಂಟ್ ಮಾಡಿದರು. ಅದೇನೆಂದರೆ ಡಿಸಿಡೆಂಟ್ಸ್ ಆಕ್ಟಿವಿಟೀಸ್ ಬಗ್ಗೆ ಹೇಳುವಾಗ ನಮ್ಮ ಸರ್ಕಾರ ಖಜಾನೆ ಖಾಲಿಯಾಗಿಲ್ಲ, ಕೆಲವರ ಜೇಬುಗಳು ಖಾಲಿಯಾಗಿರಬೇಕು ಎಂದು ಹೇಳಿದರು. ಅಂದರೆ ಡಿಸಿಡೆಂಟ್ಸ್ ಮಂತ್ರಿಗಳು, ಡಿಸೆಂಡೆಟ್ಸ್ ಎಂ.ಎಲ್.ಎ. ಗಳು ಎಲ್ಲರೂ ಕರಪ್ಟ್ ಪೀಪಲ್ಸ್ ಎಂದು ಅವರ ಅರ್ಥವೇನೋ? ಇದು ಅವರವರ ವ್ಯವಹಾರ, ಅವರೇನು ಬೇಕಾದರೂ ಮಾಡಿಕೊಳ್ಳಲಿ. 1991ರಲ್ಲಿ 12 ಸಾವಿರ ಮನೆಗಳು ನಮ್ಮ ತಾಲ್ಲೂಕಿನಲ್ಲಿ ಬಿದ್ದು ಹೋದವು. ಅಕ್ಟೋಬರ್, ನವೆಂಬರ್ ನಲ್ಲಿ ಬಂದ ಮಳೆಯಿಂದಾಗಿ ಸುಮಾರು 5 ಸಾವಿರ ಮನೆಗಳು ಕಂಪ್ಲೀಟ್ ನಿರ್ನಾಮವಾದವು. ಎಲ್ಲರೂ ಬಂದು ನೋಡಿದರು. ಮಾನ್ಯ ಚಿಕ್ಕೇಗೌಡರು ಬಂದು ನೋಡಿದರು. ಎ.ಕೆ. ಎಂ. ನಾಯಕ್ ಬಂದು ನೋಡಿದರು. ಮತ್ತು ಸೆಂಟ್ರಲ್ ಗೌವರ್ನಮೆಂಟ್ ಮಂತ್ರಿಗಳೂ ಸಹ ಬಂದು ನೋಡಿದರು, ಆದರೆ ಮೂರು ಕಾಸಿನ ಪ್ರಯೋಜನವಾಗಲಿಲ್ಲ. ಅವರಿಗೆ 300-400 ಪರಿಹಾರವೆಂದು ಏನೋ ಭಿಕ್ಷಾಟನೆ ತರಹ ಕೊಟ್ಟರು. ಈ ಭಿಕ್ಷಾಟನೆಯ ಸೆಕೆಂಡ್ ಇನ್ ಸ್ಟಾಲ್ ಮೆಂಟ್ ಕೊಟ್ಟರಲ್ಲಾ, ಅದು ಕೊಟ್ಟ ತಾರೀಖು 22-10-92ರಲ್ಲಿ, ಆ ಚೆಕ್‌ಗಳು ಏನಾಗಿವೆ ಎಂದು ಮಾನ್ಯ ಉಪ ಮುಖ್ಯ ಮಂತ್ರಿಗಳು ನೋಡಿ ವಾಪಸ್ಸು ನನಗೇ ಕೊಡಲಿ. ಅವರಿಗೆ ತೆಗೆದುಕೊಂಡು ಹೋಗಿ ನಾನು ವಾಪಸ್ಸು ಕೊಡಬೇಕು. ಬ್ಯಾಂಕ್ ನವರು ಎಂಡಾರ್ಸ್ಮೆಂಟ್ ಕೊಡುತ್ತಾರೆ, ಕಡೆಗೆ ನಾನು ಹೇಳಿದೆ, ಬ್ಯಾಂಕ್ ನವರ ಹತ್ತಿರ ಬರೆಸಿಕೊಂಡು ಬನ್ನಿ ಎಂದಾಗ 24-8-1993ರಲ್ಲಿ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದಿರುವುದರಿಂದ ಪಾವತಿಸಲಾಗುವುದಿಲ್ಲ ಎಂದು ಬರೆದುಕೊಟ್ಟಿದ್ದಾರೆ. ಅದರಲ್ಲಿ 20 ಚೆಕ್ಕುಗಳಿವೆ. ಹೀಗೆ ಕೊಡಬೇಕಾದುದು ಒಂದು ಲಕ್ಷ ಇದೆ.

(ಚೆಕ್‌ಗಳನ್ನು ಅಧ್ಯಕ್ಷರ ಕಡೆಗೆ ಕಳುಹಿಸಿಕೊಟ್ಟರು)

ಏತಕ್ಕೆ ಈ ರೀತಿ ಮಾಡುತ್ತಿದ್ದೀರಿ? ನಮ್ಮನ್ನು ನೀವು ಜನ ಎಂದು ತಿಳಿದುಕೊಂಡಿರುತ್ತೀರೋ ಅಥವಾ ದನಗಳೆಂದು ತಿಳಿದುಕೊಂಡಿರುತ್ತೀರೋ? ನಮಗೇನು ಆತ್ಮಾಭಿಮಾನವಿಲ್ಲವೆಂದು ತಿಳಿದುಕೊಂಡಿದ್ದೀರಾ? ಮೂರು ಜನರಿಗೆ ಮಾತ್ರ 1 ಲಕ್ಷ 20 ಸಾವಿರ ರೂಪಾಯಿ ಚೆಕ್ ಕೊಟ್ಟಿದ್ದಾರೆ. ಮಿಕ್ಕಿದ್ದೆಲ್ಲಾ 50 ರೂ. 100 ರೂ.

200 ರೂ. ಇಷ್ಟು ಕೊಡುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ನಿಮ್ಮ ಸರ್ಕಾರಕ್ಕೆ ಏನಾಗಿದೆ, ಬಡವರ ಗತಿ ಏನು? ಅವರಿಗೆ ಮನೆಯಿಲ್ಲ, ಮೇಲೆ ಸೂರು ಇಲ್ಲ, ಮಕ್ಕಳ ಮೈಮೇಲೆ ಬಟ್ಟೆಯಿಲ್ಲ, ಹೊಟ್ಟೆಗೆ ಹಿಟ್ಟಿಲ್ಲ, ಅಂತಹವರ ಮೇಲೆ ಚೆಲ್ಲಾಟ ಮಾಡುತ್ತೀರೇನು?

Do you call yourself a Government. Are you worth running the government? I am sorry. You must have self - respect. If you have got any conscience, you must quit.

ಇನ್ನು ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಹೇಳಬೇಕಾದರೆ ಬೇಕಾದಷ್ಟು ಇದೆ. ರೋಜ್ ಗಾರ್ ಯೋಜನೆಯಲ್ಲಿ ಎಲ್ಲಾ ಹಂಚಿಕೆ. ಸೆಕ್ರೆಟರಿಗಳು, ಅಡ್ಮಿನಿಸ್ಟ್ರೇಟರ್ಸ್ ಅವರು ಹಂಚಿಕೊಂಡು ತಿಂದುಕೊಂಡು ಕಂದಾಯ ವಸೂಲಿ ಮಾಡುವುದಿಲ್ಲ. ಐದು ರೂಪಾಯಿ ಕೆಲಸ ಮಾಡುವುದಿಲ್ಲ. 500 ರೂಪಾಯಿ ಬಿಲ್ ತೆಗೆದುಕೊಳ್ಳುತ್ತಾರೆ. ರೋಜ್ ಗಾರ್ ಯೋಜನೆ ಬಹಳ ಚೆನ್ನಾಗಿ ನಡೆಯುತ್ತಿದೆ. ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಯೋಜನೆ ಬಹಳ ಚೆನ್ನಾಗಿ ನಡೆಯುತ್ತಿದೆ. 50 ಪರ್ಸೆಂಟ್ ಕೂಡ ವ್ಯಯ ಆಗುವುದಿಲ್ಲ, ಎಲ್ಲವನ್ನು ಹಂಚಿಕೊಂಡು ಬಹಳ ಚೆನ್ನಾಗಿದ್ದಾರೆ. ರಾಮರಾಜ್ಯ ನಿಮ್ಮದು. ಯಾರು ಏನು ಬೇಕಾದರೂ ಮಾಡಿಕೊಂಡು ಹೋಗಬಹುದು, ಹೋಗಲಿ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಜಾಲಪ್ಪನವರು ಪ್ರಸ್ತಾವಿಕ ಭಾಷಣ ಮಾಡುತ್ತಿದ್ದಾರೆ, ಚೆನ್ನಾಗಿ ಮಾತನಾಡುತ್ತಿದ್ದಾರೆ . ಈಗ 2.05 ಆಯಿತು. ಇನ್ನು ಎಷ್ಟು ಹೊತ್ತು ಕೂರಬೇಕೆಂದು ಹೇಳುತ್ತೀರಾ?

ಶ್ರೀ ಆರ್. ಎಲ್. ಜಾಲಪ್ಪ : ಇನ್ನು ನಮ್ಮ ಪಕ್ಷದ ನಾಯಕರ ಸಲಹೆಯನ್ನು ಆಡಳಿತ ಪಕ್ಷದವರು ತೆಗೆದುಕೊಳ್ಳುತ್ತಿದ್ದಾರೆಂಬ ದೂರಿದೆ. ನಮ್ಮ ಪಕ್ಷದ ಸರ್ಕಾರಕ್ಕಿಂತ ಇದು ಒಳ್ಳೆಯ ಸರ್ಕಾರವೇನು ಸ್ವಾಮಿ? ನಮ್ಮವರು ಏನಾದರೂ ಸಲಹೆ ಕೊಟ್ಟಿದ್ದರೆ ಹೀಗೆ ನಡೆಯುತ್ತಿತ್ತೇ ಸರ್ಕಾರ? ನೀವು ಇಷ್ಟೊಂದು ಜನ ಡಿಸಿಡೆಂಟ್ಸ್ ಆಗುತ್ತಿದ್ದಿರಾ? ಆಗುತ್ತಿರಲಿಲ್ಲ. ಕಡೆಯದಾಗಿ ಕ್ಯಾಪಿಟೇಷನ್ ಫೀ ಬಗ್ಗೆ ವಿವರವಾಗಿ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಆದರೂ ಒಂದು ಮಾತು ಹೇಳಬೇಕಾಗುತ್ತದೆ. ಮೊಯಿಲಿಯವರು ದುಷ್ಟ ಶಕ್ತಿಗಳು ನಮ್ಮನ್ನು ಕ್ಯಾಪಿಟೇಷನ್ ಲಾಬಿ ಆಡಳಿತದಿಂದ ಕಿತ್ತುಹಾಕಬೇಕೆಂದು ಪ್ರಯತ್ನಪಡುತ್ತಿದ್ದಾರೆಂದು ಅವರು ಅಲ್ಲಿ ಹೇಳುತ್ತಾರೆ. ಡೆಲ್ಲಿಯಲ್ಲಿ ಅವರು ಹೇಳಿಕೊಂಡು ಬರುತ್ತಾರೆ. ನೀವು ಡಿಸಿಡೆಂಟ್ಸ್ ಹೇಳುತ್ತೀರಿ, ದುಡ್ಡು ಕೊಟ್ಟಿದ್ದೇವೆ. ಮೊಯಿಲಿಯವರಿಗೆ ಎಂದು ಅವರು ಹೇಳುತ್ತಾರೆ. ನೀವು ಇಬ್ಬರೂ ಸೇರಿ ನಮ್ಮ ಮೇಲೆ ಏತಕ್ಕೆ ಬೀಳುತ್ತೀರಿ? ವಸ್ತು ಸ್ಥಿತಿ ಹೇಳಬೇಕಾದರೆ ಅಡ್ವೊಕೇಟ್‌ಗಳಿಗೆ ದುಡ್ಡು ಕೊಡುವುದಕ್ಕೆ ಇಲ್ಲದೆ ಇರುವುದರಿಂದ 6 ಜನ ಅಡ್ವೊಕೇಟ್‌ಗಳನ್ನ ಅಪಾಯಿಂಟ್ ಮಾಡಿದರೆ 3 ಜನ ಬರುತ್ತಾರೆ. 3 ಜನ ದುಡ್ಡು ಕೊಡುವುದಿಲ್ಲ ಎಂದು ಬರುವುದಿಲ್ಲ. ಆ ಪರಿಸ್ಥಿತಿ ನಿಮಗೆ ಇದೆ. ನೀವು ಫೀ ಜಾಸ್ತಿ ಮಾಡದಿದ್ದರೆ ಸುಪ್ರೀಂ ಕೋರ್ಟಿನಿಂದ ಜಾಸ್ತಿ ಮಾಡಿಸಿಕೊಂಡು ಬರುತ್ತಾರೆ. ನಾವು ಕೇಳುತ್ತಿರುವುದು ಪ್ರೈಮರಿಯಾಗಿ. ನಾವು ಯಾರ ಜವಾನರು ಅಲ್ಲ, ಆಡಳಿತ ನಡೆಸುವವರು ನಮಗೆ ಸರ್ಟನ್ ಪರ್ಸೆಂಟೇಜ್ ಅಡ್ಮಿಷನ್ನಿಗೆ ಅವಕಾಶ ಇರಬೇಕು ಎಂದು ಹೇಳುತ್ತಾರೆ. ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಮೊಯಿಲಿಯವರಿಗೆ. ಅವರಿಗೆ ದುಡ್ಡು ಏತಕ್ಕೆ ಕೊಡಬೇಕು. ನೀವು ನೀವು ಏನು ಬೇಕಾದರೂ ಕಿತ್ತಾಡಿಕೊಳ್ಳಿ. ಒಬ್ಬರ ತಲೆ ಒಬ್ಬರು ಹಿಡಿದುಕೊಂಡು ಹೊಡೆದಾಡಿಕೊಂಡ್ರಲ್ಲ, ಮೊನ್ನೆ ಹಾಗೆ ಏನು ಬೇಕಾದರೂ ಮಾಡಿಕೊಳ್ಳಿ. ದೇವರ ದಯೆಯಿಂದ ಅದು ಚೆನ್ನಾಗಿ ನಡೆಯಲಿ ಎಂದು ನಾನು ಆಶೀರ್ವಾದ ಮಾಡುತ್ತೇನೆ. ನಮ್ಮನ್ನು ತೆಗೆದುಕೊಂಡು ಹೋಗಿ ಬಯಲಿಗೆ ಎಳೆಯಬೇಡಿ. ನಮ್ಮ ಮರ್ಯಾದೆ

ಕಳೆಯಬೇಡಿ. ನಮ್ಮ ತೇಜೋವಧೆ ಮಾಡಬೇಡಿ. ದುಷ್ಟಕೂಟ ಎಂಬ ಅಭಿಪ್ರಾಯವನ್ನು ಜನರ ಮುಂದೆ ತರಬೇಡಿ ಎಂದು ಇಷ್ಟು ಹೇಳಿ, ನಿಮ್ಮ ಸಪೋರ್ಟ್ ನಾವೇನು ಎಕ್ಸ್‌ಪೆಕ್ಟ್ ಮಾಡುವುದಿಲ್ಲ. ನಿಮಗೆ ಆತ್ಮಸಾಕ್ಷಿ ಇದೆ ಎಂದು ನಾವು ಅಂದುಕೊಂಡಿಲ್ಲ. ಅದು ಯಾವತ್ತೂ ಇರಲಿಲ್ಲ. ಒಂದು ಸಾರಿ ಇತ್ತು. ಅದು ಗೈಡೆಡ್ ಆತ್ಮಸಾಕ್ಷಿ. ಶ್ರೀಮತಿ ಇಂದಿರಾಗಾಂಧಿಯವರು ಸಂಜೀವರೆಡ್ಡಿಯವರನ್ನ ನಿಲ್ಲಿಸಿ ಬೇರೆಯವರಿಗೆ ಓಟು ಕೊಡಿಸಿದರಲ್ಲಾ ಅದು. ನಿಮಗೆ ಆತ್ಮಸಾಕ್ಷಿ ಇದೆ ಎಂದು ನಾವು ಅಂದುಕೊಳ್ಳುವುದಿಲ್ಲ. ನಿಮ್ಮಿಂದ ನಾವು ಅದನ್ನು ಎಕ್ಸ್‌ಪೆಕ್ಟ್ ಮಾಡುವುದಿಲ್ಲ.

ಶ್ರೀ ಎಂ. ಮಹದೇವ್ : ನಮಗೆ ಆತ್ಮಸಾಕ್ಷಿ ಇದೆ. ಆದರೆ ನಿಮಗೆ ಆತ್ಮನೇ ಇಲ್ಲವೇ?

ಶ್ರೀ ಆರ್.ಎಲ್. ಜಾಲಪ್ಪ : ನಿಮ್ಮಲ್ಲಿ ಅದು ಇಲ್ಲ. ನಿಮಗೆ ಆತ್ಮನೇ ಇಲ್ಲ. ಆತ್ಮ ಇದ್ದರೆ ತಾನೆ ಸಾಕ್ಷಿ ಇರುವುದು. ನಿಮಗೆ ಆತ್ಮ ಇಲ್ಲವೆಂದು ಒಪ್ಪಿಕೊಳ್ಳೋಣ. ನಿಮ್ಮಿಂದ ನಾವು ಬೆಂಬಲ ಎಕ್ಸ್‌ಪೆಕ್ಟ್ ಮಾಡುವುದಿಲ್ಲ. ಅದು ಸಾಧ್ಯವೂ ಇಲ್ಲ. ನೀವು ಯಾರೂ ಬೆಂಬಲ ಕೊಡುವುದಿಲ್ಲ ಎಂದು ನಮಗೆ ಗೊತ್ತಿದೆ. ಪಾರ್ಟಿ ಸಿಸ್ಟಂನಲ್ಲಿ ನೀವು ನೀವು ಕಿತ್ತಾಡಬಹುದೇ ವಿನಹ ನೋ ಕಾನ್ ಫಿಡೆನ್ಸ್ ಮೋಷನ್ ತಂದಾಗ ನಮ್ಮ ಪರವಾಗಿ ಯಾರಾದರೂ ಓಟು ಮಾಡುತ್ತೇವೆಂದರೆ ಅದು ಫೂಲಿಷ್ ನೆಸ್. ಆ ತರಹೇ ಯೋಚನೆ ನಮಗೆ ಇಲ್ಲ. ಅದನ್ನು ನಾವು ಇಟ್ಟುಕೊಂಡಿಲ್ಲ. ಇಷ್ಟು ಹೇಳಿ ಏನು ವಿರೋಧ ಪಕ್ಷದ ನಾಯಕರು ಈ ಒಂದು ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆ ಅದಕ್ಕೆ ಪೂರ್ಣವಾಗ ಸಹಮತವನ್ನು ವ್ಯಕ್ತಪಡಿಸುತ್ತೇನೆ. ನಾವು ಸಂಖ್ಯಾಬಲದಿಂದ ನಿಮ್ಮನ್ನು ಸೋಲಿಸುವುದಕ್ಕಾಗುವುದಿಲ್ಲ. ನೀತಿ ಅಥವಾ ರಾಜ್ಯದ ಅಭಿವೃದ್ಧಿ ಬಗ್ಗೆ ತಮಗೆ ಗಮನ ಇದ್ದರೆ ದಯವಿಟ್ಟು ತಮ್ಮ ಜಾಗ ಖಾಲಿ ಮಾಡಿ. ಎಲೆಕ್ಷನ್ ನಡೆಯಲಿ. ಪುನಃ ನೀವೇ ಬಂದರೆ ಸಂತೋಷ. Your success in the last election is disastrous to this country and to this State and disgraceful to the democratic principles of the citizens.

ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

2.10 ಪಿ.ಎಂ.

+ ಶ್ರೀ ವೀರೇಂದ್ರ ಪಾಟೀಲ್ (ಚಿಂಚೋಳಿ) : ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಗೆ ಬಂದು ಇವತ್ತು ಮಾತನಾಡುವ ಕಾರ್ಯಕ್ರಮ ಇರಲಿಲ್ಲ. ಆದರೆ ನಿನ್ನೆ ಈ ಸಭೆಯಲ್ಲಿ ಏನು ನಡೆಯಿತು ಅದನ್ನು ಇವತ್ತು ಪತ್ರಿಕೆಯಲ್ಲಿ ನೋಡಿ ನಾನು ಈ ಸಭೆಗೆ ಬರಲಾರದೇ ಹೋದರೆ ಕರ್ತವ್ಯಚ್ಯುತಿಯಾಗುತ್ತದೆಂದು ತಿಳಿದುಕೊಂಡು ನಾನು ಇಲ್ಲಿಗೆ ಬಂದಿದ್ದೇನೆ. ಈ ಸಭೆಯಲ್ಲಿ ನಾವೆಲ್ಲರೂ ಈ ಕಡೆ ಕುಳಿತಿರಲಿ ಅಥವಾ ಆ ಕಡೆ ಕುಳಿತಿರಲಿ, ಇದು ಆಕಸ್ಮಿಕ ಎಂದು ನಾವು ತಿಳಿದುಕೊಂಡಿದ್ದೇವೆ. ಈ ಕಡೆ ಕೂತಿರುವವರು ಆ ಕಡೆ ಕೂರಬಹುದು. ಆ ಕಡೆ ಕುತಿರುವವವರು ಈ ಕಡೆಕೂರಬಹುದು ಮತ್ತು ಈ ಸಭೆಯ ಸದಸ್ಯರು ಯಾರೂ ಹಿರಿಯರು ಅಥವಾ ಕಿರಿಯರು ಅಲ್ಲ. ಈ ಸಭೆಗೆ ಬಂದಮೇಲೆ ನಾವೆಲ್ಲರು ಸಮಾನಸ್ಥರು ಎನ್ನುವ ವಿಚಾರಕ್ಕೆ ಬರಬೇಕಾದುದು ಬಹಳ ಅವಶ್ಯಕವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಏಕೆ ಈ ವಿಚಾರ ಹೇಳುತ್ತಿದ್ದೇನೆಂದರೆ, ಸದನದ ಈ ಕಡೆ ಇರಲಿ, ಆ ಕಡೆ ಇರಲಿ, ನಾವು ಏನಾದರೂ ತಪ್ಪು ಮಾಡಿದರೆ ಏನಪ್ಪ ಅವರು ಸೀನಿಯರ್ ಇದ್ದಾರೆ, ಅವರ ಮೇಲೆ ಏನು ಹೇಳೋದು ಎನ್ನುವ ವಿಚಾರ ನಮ್ಮಲ್ಲಿ ಇರಬಾರದು. ಬಹುಶಃ ಆ ವಿಚಾರ ನಮ್ಮ ತಲೆಯಲ್ಲಿ ಬಂದರೆ ಈ ಸದನದ ನಮ್ಮ ಸದಸ್ಯತ್ವವೇ ಕೊನೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ನಾನು ಈ ವಿಚಾರ ಹೇಳುವ

ಉದ್ದೇಶ ಇಷ್ಟೇ. ಈ ಸದನಕ್ಕೆ ಮೊದಲ ಸಲ ಬಂದಿರುವವರು ಅನೇಕ ಜನ ಇದ್ದಾರೆ. ಮತ್ತು ಅನೇಕ ಜನ 10-15 ವರ್ಷಗಳಿಂದ ಈ ಸದನ ಆ ಸದನಗಳಲ್ಲಿ ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ. ನಾನು ಅವರಲ್ಲಿ ವಿನಂತಿ ಮಾಡುವುದು ಇಷ್ಟೇ; ಈ ಸದನದಲ್ಲಿ ಯಾರೇ ತಪ್ಪು ಮಾಡಲಿ, ನಾನೇ ತಪ್ಪು ಮಾಡಲಿ ಅಥವಾ ಮತ್ತೆ ಯಾರೇ ತಪ್ಪು ಮಾಡಲಿ ಪಾರ್ಟಿ ಪಕ್ಷ ನೋಡಲಾರದಂತೆ ನೀವು ಹೇಳುವುದು ನಿಜ ಅಲ್ಲವೆಂದು ಹೇಳುವ ಮನೋಸ್ಥೈರ್ಯ, ನಮ್ಮಲ್ಲಿ ಮಾರಲ್ ಕರೇಜ್ ಬರಬೇಕಾದುದು ಬಹಳ ಅವಶ್ಯಕ ಎಂದು ನಾನ ತಿಳಿದುಕೊಂಡಿದ್ದೇನೆ. ನಾನು ಈಗಾಗಲೇ ಹೇಳಿದಹಾಗೆ ಈ ಸಭೆಗೆ ಬರಬೇಕು ಎನ್ನುವ ವಿಚಾರ ನನ್ನದು ಇರಲಿಲ್ಲ, ಆದರೆ ನಿನ್ನೆ ಈ ಸಭೆಯಲ್ಲಿ ಏನು ನಡೀತು ಎನ್ನುವುದು ಇವತ್ತಿನ ಪತ್ರಿಕೆಯಲ್ಲಿ ನೋಡಿ ನನ್ನ ಮನಸ್ಸಿಗೆ ನೋವು ಉಂಟಾಯಿತು. ಇದು ಏನು ನೋ-ಕಾನ್ಫಿಡೆನ್ಸ್ ಅಂಟಿ ಗೌರ್ನಮೆಂಟ್ ಚರ್ಚೆಮಾಡುತ್ತಿದ್ದಾರೋ ಅಥವಾ ನೋ ಕಾನ್ಫಿಡೆನ್ಸ್ ವೀರೇಂದ್ರಪಾಟೀಲ್ ಚರ್ಚೆ ಮಾಡುತ್ತಿದ್ದಾರೋ ಎಂದು ನನ್ನ ಮನಸ್ಸಿನಲ್ಲಿ ಆ ಒಂದು ವಿಚಾರ ಉದ್ಭವವಾಯಿತು.

ಏಕೆಂದರೆ ಇವತ್ತು ನಾನು ಓದಿದಹಾಗೆ ನೀವೂ ಕೂಡ ಪತ್ರಿಕೆಗಳನ್ನು ಓದಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮಾನ್ ಹೆಗ್ಡೆಯವರು ನೋಕಾನ್ಫಿಡೆನ್ಸ್‌ಗೆ ಸಂಬಂಧಪಡಲಾರದಂತಹ ಅನೇಕ ವಿಚಾರಗಳನ್ನು ಇಲ್ಲಿ ಹೇಳಿದ್ದಾರೆನ್ನುವುದು ನಾನು ಪತ್ರಿಕೆಗಳಿಂದ ತಿಳಿದುಕೊಂಡಿದ್ದೇನೆ. ಅವರು ಹೇಳಿದ್ದು ಏನೂ ಹೊಸದು ಅಲ್ಲ. ಅವರು ಹೇಳಿದ ವಿಚಾರ ಏನೂ ಮೊದಲನೇ ಸಲ ಹೇಳಿದ್ದಾರೆಂದು ಅಲ್ಲ. ವಿಧಾನಸಭೆಯ ಹೊರಗಡೆಯೂ ಹೇಳಿದ್ದಾರೆ. ಅದಕ್ಕೆ ನಾನು ಕಾಂಟ್ರಡಿಕ್ಟ್ ಮಾಡಿದ್ದೇನೆ. ಅವರು ಹೇಳಿದ್ದು ತಪ್ಪು ಎಂದು ನಾನು ಅನೇಕ ಸಲ ಹೇಳಿದ್ದೇನೆ.

ಆದರೂ ಅವರು ಅದನ್ನೇ ಹೇಳುತ್ತಾ ಹೋಗುತ್ತಿದ್ದಾರೆ. ಇದು ಏನು ತೋರಿಸುತ್ತದೆ ದೆಂದರೆ, ಒಂದು ಸುಳ್ಳು ನೂರು ಸಲ ಹೇಳಿದರೆ ನಿಜವಾಗುತ್ತದೆನ್ನುವಂತಹದ್ದು ಇದೆಯೆಂದು ತೋರಿಸುತ್ತದೆ. ಇದು ಆಗಬಾರದು. ಸುಳ್ಳು ಸುಳ್ಳೇ. ನೂರು ಸಲ ಹೇಳಲಿ, ನೂರೆಂಟು ಸಲ ಹೇಳಲಿ, ಇನ್ನೂರು ಸಲ ಹೇಳಲಿ, ಸುಳ್ಳು ಸುಳ್ಳೇ ಆಗಬೇಕೇ ಹೊರತಾಗಿ ಸುಳ್ಳು ನಿಜವಾಗಬಾರದು ಎಂದು ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಈ ದಿನ ನಾನು ಪತ್ರಿಕೆಯನ್ನು ಓದಿದೆ. ನಾನು ಅದರ ಬಗ್ಗೆ ಮುಂದೆ ಹೇಳಬೇಕೆನ್ನುವ ವಿಚಾರ ಇತ್ತು. ಆದರೆ ಈಗ ಹೇಳುತ್ತಿದ್ದೇನೆ. ಈ ಸದನದ ಗಾರ್ಡಿಯನ್ ಈ ಸದನದ ಮಾಸ್ಟರ್ ಸ್ಪೀಕರ್ ಹೊರತಾಗಿ ಲೀಡರ್ ಅಲ್ಲ. ನಾನು ಸಹ ಲೀಡರ್ ಇದ್ದೆ ಈ ಸದನದಲ್ಲಿ. 8 ತಿಂಗಳು ನಾನು ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಲೀಡರ್ ಆಫ್ ದಿ ಹೌಸ್ ಆಗಿ ಕೆಲಸ ಮಾಡಿದ್ದೇನೆ. ಆದರೆ ಈ ಸದನದಲ್ಲಿ ಯಾವ ವಿಚಾರ ಎತ್ತಬೇಕು, ಎಷ್ಟು ಹೊತ್ತು ಮಾತನಾಡಬೇಕು ಎಷ್ಟು ದಿವಸ ಮಾತನಾಡಬೇಕು ಎನ್ನುವ ನಿರ್ಣಯ ಮಾಡುವುದೆಲ್ಲಾ ಅಧ್ಯಕ್ಷರೇ ಹೊರತಾಗಿ ನಾವು ಯಾರೂ ನಿರ್ಣಯ ಮಾಡುವಹಾಗೆ ಇಲ್ಲ. ಇದು ಗೊತ್ತಿದ್ದೂ ಕಡ ಈ ಸದನದಲ್ಲಿ ನಾನು ಮೂರು ದಿವಸ ಹಾಳುಮಾಡಿದೆಯೆಂದು ಮಾನ್ಯ ಹೆಗಡೆಯವರು ನನ್ನ ಮೇಲೆ ಚಾರ್ಜ್ ಮಾಡಿದರು. ಆ ವೇಳೆಗೆ ನೀವೆಲ್ಲರೂ ಸುಮ್ಮನಿದ್ದೀರಿ. ಅದು ಒಳ್ಳೆಯದೆ. ಅದು ನಿಜವಾದ ಚಾರ್ಜ್ ಈ ಸದನದಲ್ಲಿ ನಾನು 8 ತಿಂಗಳು ಮುಖ್ಯಮಂತ್ರಿಯಾಗಿ ಮತ್ತು ಸದನದ ನಾಯಕನಾಗಿದ್ದಾಗ ನಾನು ಹೇಳಿದ ಹಾಗೆ ಈ ಸದನ ನಡೆಯುತ್ತಿತ್ತೇ ಅಥವಾ ಆಗಿನ ಸ್ಪೀಕರ್ ಹೇಳಿದಹಾಗೆ ಸದನ ನಡೆಯುತ್ತಿತ್ತೇ ಎನ್ನುವುದನ್ನು ತಾವು ನನಗೆ ಹೇಳಬೇಕು. ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಪ್ರಥಮತಃ ನಿಜವಾಗಿದ್ದರೆ ನಿಜವೆಂದು ಹೇಳಬೇಕು. ಸುಳ್ಳು ಇದ್ದರೆ ಸುಳ್ಳು ಎಂದು ಹೇಳಬೇಕು. ಆದರೆ ನಿಮ್ಮ ಪಾರ್ಟಿಯವರು ಏನೇ ಹೇಳಲಿ ಅದೆಲ್ಲ

ನಿಜ. ಎರಡನೇ ಪಾರ್ಟಿಯವರು ಏನೇ ಹೇಳಲಿ ಸುಳ್ಳು ಎಂದು ಹೇಳುವಂತಹ ಭಾವನೆಯಿಂದ ನಾವೇನಾದರೂ ಕೆಲಸ ಮಾಡಿದರೆ ಬಹುಶಃ ಇದೇ ಕೊನೆಯೆಂದು ನನಗನಿಸುತ್ತದೆ. ಪಾರ್ಟಿ ನೋಡಬಾರದು. ನಾವು ನೋಡಬೇಕಾದ್ದು ನಿಜವೇ ಅಥವಾ ಸುಳ್ಳೇ ಎಂದು ನೋಡಬೇಕೇ ಹೊರತಾಗಿ ಯಾವ ಪಾರ್ಟಿಯವರಾದರೆ ಏನು ಎಂದು ನೋಡದೆ ನಾವು ಸ್ಪಷ್ಟವಾಗಿ ಹೇಳಬೇಕು. ಇದು ನಿಜವಲ್ಲ ಇದು ಸುಳ್ಳು ಇದೆಯೆಂದು ಹೇಳಬೇಕೇ ಹೊರತು ಅಸತ್ಯ ಎಂದೂ ಮಾತನಾಡಬಾರದು. ಇದು ಒಂದು ಗುಡಿ ಇದ್ದಹಾಗೆ. ಈ ಗುಡಿಯಲ್ಲಿ ಅಸತ್ಯವನ್ನು ಮಾತನಾಡಬಾರದೆಂದು ಹೇಳುವಂತಹ ಮನೋಧೈರ್ಯ ನಮ್ಮಲ್ಲಿ ಪ್ರತಿಯೊಬ್ಬರಲ್ಲಿ ಬೆಳೆದುಕೊಂಡು ಬರಬೇಕು.

ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ, ಏನೆಂದರೆ ಈ ಸದನದಲ್ಲಿ ಶ್ರೀಮಾನ್ ಹೆಗಡೆಯವರು ಎರಡು ವಿಚಾರ ಏನು ಹೇಳಿದರು, ಅವೇನೂ ಹೊಸವು ಅಲ್ಲ. ಹೊರಗಡೆ ಸಹ ಹೇಳುತ್ತಾ ಬಂದಿದ್ದಾರೆ. ಇಲ್ಲೂ ಕೂಡ ಹೇಳಿದ್ದಾರೆ. ರೆಕಾರ್ಡ್ ಆಗಲಿಲ್ಲವೆಂದು ನಾನು ಬಂದೆ ಹೊರತಾಗಿ ಭಾಷಣಮಾಡಬೇಕು ಭಾಷಣಪ್ರಿಯನಾಗಬೇಕೆನ್ನುವ ವಿಚಾರದಿಂದ ನಾನು ಬರಲಿಲ್ಲ. ಈಗ ಅವರು ಒಂದು ವಿಚಾರವನ್ನು ಹೇಳಿದರು. ನಾನು ಮುಖ್ಯಮಂತ್ರಿ ಇದ್ದಾಗ ತಮಿಳುನಾಡಿನ ಮುಖ್ಯಮಂತ್ರಿ ಜೊತೆಗೆ ಅಸಭ್ಯ ವರ್ತನೆ ಮಾಡುವ ಪರಿಸ್ಥಿತಿ ಉಂಟಾಯಿತು ಎಂದು ಹೇಳಿದರು. ಅಸಭ್ಯ ವರ್ತನೆ ಅಂದರೇನು? ನಾನು ಏನು ಮಾಡಿದ್ದೇನೆ? ಯಾವರೀತಿಯಿಂದ ಅಸಭ್ಯತನ ತೋರಿಸಿದೆ ಎನ್ನುವಂತಹ ನಿಜ ಹೇಳಬೇಕಾದ್ದು ಅವರ ಕರ್ತವ್ಯವಿದೆ. ಕೇಂದ್ರದವರು ಕರೆದ ಮೀಟಿಂಗ್‌ಗೆ ಹೋದರೆ ಅದು ಅಸಭ್ಯತನವೇ? ಮದ್ರಾಸ್ ಮೀಟಿಂಗ್‌ಗೆ ಹೋದರೆ ಅಸಭ್ಯತನವೇ ಅಥವಾ ಅವರು ನೀರು ಬೇಡಲಿಕ್ಕೆ ಬಂದರೆ ನೀರು ಕೊಟ್ಟರೆ ಅದು ಅಸಭ್ಯತನವೇ? ಯಾವುದು ಅಸಭ್ಯತನವೆಂದು ನಾನು ಕೇಳುತ್ತೇನೆ. ನೀವು ಹೇಳಬೇಕು ಇವತ್ತು. ಏಕೆಂದರೆ ಇವತ್ತು ವಿರೋಧ ಪಕ್ಷದಲ್ಲಿರುವವರು ಜನತಾ ಮತ್ತು ಜನತಾದಳದಲ್ಲಿ ಕೂತವರು ಅನೇಕ ನನ್ನ ಸ್ನೇಹಿತರು ಇದ್ದೀರಿ. ನಾನು ಅವರಲ್ಲಿ ಕೇಳುತ್ತಿದ್ದೇನೆ. ನಾನೇನು ತಪ್ಪು ಮಾಡಿದ್ದೇನೆ. 5 ಟಿಎಂಸಿ ನೀರು ಕೊಡಲಿಲ್ಲವೆಂದು ಹೇಳಿದರು. ಈ ಬಗ್ಗೆ ಹೇಳಬೇಕಾದ ವಿಷಯವನ್ನು ನಾನು ಅನೇಕ ಸಲ ಹೇಳಿದ್ದೇನೆ. ಈಗ ಏನಿದ್ದರೂ ಮಾನ್ಯ ಮೊಯಿಲಿಯವರು ಹೇಳಬೇಕು; ಇಲ್ಲ ಮಾನ್ಯ ಕೃಷ್ಣರವರು ಹೇಳಬೇಕು. ನಾನು ಹೇಳಿದ್ದು ಸರಿಯಾಗಿದೆಯೇ ಇಲ್ಲವೋ ನಾನು ನೀರು ಕೊಟ್ಟಿದ್ದೇನೆಯೋ ಇಲ್ಲವೋ ಒಂದು ವೇಳೆಗೆ ನಾನು ನೀರು ಕೊಡಲಿಲ್ಲವೆನ್ನುವುದು ನಿಮ್ಮ ಚಿತ್ತವಿದ್ದರೆ ನೀವೆಲ್ಲರೂ ರಾಜೀನಾಮೆ ಕೊಡಿಯೆಂದು ಕೇಳುತ್ತೀರಾ? ನಾನುಕೇಳುತ್ತೇನೆ. ಒಂದು ವೇಳೆಗೆ ನೀರು ಕೊಡಲಿಲ್ಲವೆನ್ನುವುದು ಸಿದ್ಧವಾದರೆ ನಾನು ರಾಜೀನಾಮೆ ಕೊಟ್ಟು ಹೊರಟುಹೋಗುತ್ತೇನೆ.

ಆದರೆ, ನೀರು ಕೊಟ್ಟಿದೆ ಎಂಬುದು ಸಿದ್ಧವಾದರೆ ನೀವು ರಾಜೀನಾಮೆ ಕೊಡುತ್ತೀರಾ ಅಥವಾ ಅವರಿಂದ ರಾಜಿನಾಮೆ ಕೊಡಿಸುವುದಕ್ಕೆ ತಯಾರಿದ್ದೀರಾ? ಇದನ್ನು ಜನರ ಮುಂದೆ ಸ್ಪಷ್ಟವಾಗಿ ಹೇಳಬೇಕು. ಯಾರೇ ತಪ್ಪು ಮಾಡಿರಲಿ, ನಾನೇ ತಪ್ಪು ಮಾಡಿರಲಿ, ಅವರೇ ತಪ್ಪು ಮಾಡಿರಲಿ, ನೀವು ತಪ್ಪು ಮಾಡಿದ್ದೀರಿ, ಈ ರೀತಿ ಹೇಳಬಾರದಿತ್ತು ಎಂದು ಹೇಳತಕ್ಕಂಥ ಅವಶ್ಯಕತೆ ಇತ್ತು. ನಿಮಗೆ ಹೇಳಬೇಕಾದರೆ, ತಮಿಳುನಾಡಿನ ಲೋಕೋಪಯೋಗಿ ಮಂತ್ರಿಗಳು ಇಲ್ಲಿಗೆ ಬಂದಿದ್ದರು. ಅವರು ಬಂದಿದ್ದು ನನಗೆ ಗೊತ್ತೇ ಇಲ್ಲ. ಆ ವೇಳೆಗೆ, ನಾನು ಉತ್ತರ ಕರ್ನಾಟಕದಲ್ಲಿ ಪ್ರವಾಸ ಮಾಡುತ್ತಾ ಇದ್ದೆ. ಜನತಾದಳದ ಸದಸ್ಯರಿಗೆ ನಾನು ಕೇಳುತ್ತೇನೆ. ನಾನು ಬೆಂಗಳೂರಿನಲ್ಲಿ ಇಲ್ಲದೇ, ಅವರ ಭೇಟಿ ಯಾವ ರೀತಿ ಆಗುತ್ತದೆ. ಬೆಂಗಳೂರಿನಲ್ಲಿ ಇದ್ದರೆ, ಭೇಟಿ ಆಗಿತ್ತು ಎಂದು ಹೇಳಬಹುದು, ಬೆಂಗಳೂರಿನಲ್ಲಿ ಇಲ್ಲದೇ ಇದ್ದಾಗ ಭೇಟಿ ಯಾವ ರೀತಿಯಾಗುತ್ತದೆ? ಅಸಭ್ಯತನ ಅಂದರೆ ಏನು ಎನ್ನುವುದು ಗೊತ್ತಾಗುವುದಿಲ್ಲ.ಅಲ್ಲಿನ ಲೋಕೋಪಯೋಗಿ ಸಚಿವರು ಬಂದ ಕಾಲಕ್ಕೆ, ಇಲ್ಲಿನ ನನ್ನ

ಕಾಲದ ಲೋಕೋಪಯೋಗಿ ಸಚಿವರು ಹೋಗಿ ಅವರಿಗೆ ಸತ್ಕಾರ ಮಾಡಿದ್ದಾರೆ. ಅಂದಮೇಲೆ ಅಸಭ್ಯತನ ಹೇಗಾಯಿತು ಎಂದು ನನಗನಿಸುವುದಿಲ್ಲ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ, ಅನೇಕ ಸಲ ಈ ಬಗ್ಗೆ ಹೇಳಿದ್ದೇನೆ, ಹೊರಗಡೆಯೂ ಹೇಳಿದ್ದೇನೆ, ಈ ಮನೆಯಲ್ಲಿಯೂ ಹೇಳಿದ್ದೇನೆ. ಇದೇ ವಿಚಾರವನ್ನು ಮತ್ತೆ ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ ಮತ್ತು ಈ ಸದನದ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲಿಂದ ಕಾವೇರಿ ನೀರಿನ ಬಗ್ಗೆ, ಕಾವೇರಿ ವಿವಾದದ ಬಗ್ಗೆ, ನಾನು ಮೊದಲಿನಿಂದಲೂ ಟ್ರಿಬ್ಯುನಲ್‌ಗೆ ಹೋಗಬಾರದೆಂದು ಹೇಳುತ್ತಾ ಇದ್ದೆ. ಮೊದಲಿನ ಸಭೆಯನ್ನು ಜನತಾದಳದವರು ಕರೆದರು. ಆ ವೇಳೆಗೆ, ಕಾವೇರಿ ಎಲ್ಲಿದೆಯೋ ಗೊತ್ತಿಲ್ಲ, ಕೃಷ್ಣಾ ಎಲ್ಲಿದೆಯೋ ಗೊತ್ತಿಲ್ಲ.

ನಮಗೆಲ್ಲರಿಗೂ ಒಳಗೆ ಕರೆದುಕೊಂಡು ಹೋದರು. ನನಗೆ ಮತ್ತು ಸಂಬಂಧಪಟ್ಟ ಮುಖ್ಯಮಂತ್ರಿಗಳಿಗೂ ಒಳಗೆ ಕರೆದುಕೊಂಡು ಹೋಗಿ ಇದರ ಬಗ್ಗೆ ಏನಾದರೂ ಮಾಡಬೇಕು, ಬಹಳ ದಿವಸಗಳಿಂದ ಜಗಳ ನಡೆದಿದೆ ಎಂದು ಹೇಳಿದರು. ಆ ವೇಳೆಗೆ ಸೆಂಟ್ರಲ್ ವಾಟರ್ ಕಮೀಷನ್ ಚೇರ್ಮನ್ ಕೂಡ ಸಭೆಯಲ್ಲಿದ್ದರು. ನಾನು ಅವರಿಗೆ ಕೇಳಿದೆ, ನಿಮ್ಮಲ್ಲಿ ರೆಕಾರ್ಡ್ಸ್ ಇದೆಯೇ ಎಂದು. ರೆಕಾರ್ಡ್ಸ್ ಮಾಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲವೆಂದು ಸೆಂಟ್ರಲ್ ವಾಟರ್ ಕಮೀಷನ್ ಚೇರ್ಮನ್ ಹೇಳುತ್ತಾರೆ, ನಮಗೆ ರಾಜ್ಯದವರು ಕೊಟ್ಟ ರೆಕಾರ್ಡ್ ಇದೆ, ನಾವೇನೂ ಈ ರೆಕಾರ್ಡ್ ಸಿದ್ಧಮಾಡಿಕೊಂಡಿಲ್ಲವೆಂದು ಹೇಳಿದರು. ಅವರಿಗೆ ನಾನು ಹೇಳಿದೆ, ಮೊದಲು ನೀವು ಹೋಗಿ ಫ್ಯಾಕ್ಟ್ ಫೈಂಡಿಂಗ್ ಕಮೀಷನ್ ಮಾಡಿಕೊಳ್ಳಿ ಎಂದು ಹೇಳಿದೆ. ಅದು ಬಂದಮೇಲೆ ನಿರ್ಣಯ ಮಾಡಿ. ಅದರ ಕೆಲಸ ಏನು, ನೆಗೋಷಿಯೇಷನ್‌ನಿಂದ ಸರಿ ಮಾಡಬಹುದೇ ಅಥವಾ ಕೋರ್ಟಿಗೆ ಹೋಗಬಹುದೇ, ಟ್ರಿಬ್ಯುನಲ್‌ಗೆ ಹೋಗಬಹುದೇ ಎನ್ನುವುದು ಅನಂತರ ಪ್ರಶ್ನೆ ಬರುತ್ತದೆ. ಮೊದಲು ಫ್ಯಾಕ್ಟ್ ಫೈಂಡಿಂಗ್ ಕಮೀಷನ್ ಮಾಡಿಕೊಳ್ಳಿ ಎಂದು ಹೇಳಿದೆ. ಅವರು, ಇದೆಲ್ಲಾ ಮಾಡಬೇಕಾದರೆ, ಟೈಮ್ ಹಿಡಿಯುತ್ತದೆ, ನಾವೇ ಇದನ್ನು ನಿಖಾಲೆ ಮಾಡಬೇಕೆಂದು ಹೇಳಿದರು. ಅದಕ್ಕೆ ನಾನು ಹೇಳಿದೆ, ಪ್ರೊಸೀಜರ್ ನಿಗದಿ ಮಾಡಬೇಕು, ನಾವು ಯಾವ ರೀತಿಯಿಂದಲೂ ತಪ್ಪಿಸಿಕೊಳ್ಳಬೇಕೆ ದು ಇಲ್ಲ. ಸುಪ್ರೀಂ ಕೋರ್ಟಿಗೆ ಈ ಪ್ರಶ್ನೆ ಬರುವುದಕ್ಕೆ ಮೊದಲು, ಮದ್ರಾಸಿನಲ್ಲಿ ಮತ್ತೊಂದು ಸಲ ಸಭೆ ಸೇರೋಣ. ನಮಗೂ, ನಿಮಗೂ ವ್ಯತ್ಯಾಸ ಸ್ವಲ್ಪ ಇದೆ. ಅದರ ಸಲುವಾಗಿ, ನಾವು ಅಕ್ರಾಸ್ ದಿ ಟೇಬಲ್ ಸರಿ ಮಾಡಬಹುದು. ಇದಕ್ಕೆ ಏಕೆ ಟ್ರಿಬ್ಯುನಲ್‌ಗೆ ಹೋಗಬೇಕು, ಇದರ ಸಲುವಾಗಿ ಮದ್ರಾಸಿನಲ್ಲಿ ಇನ್ನೊಂದು ಸಭೆ ಕರೆಯಿರಿ ಎಂದು ಹೇಳಿದೆ, ಆ ಸಬೆಯಲ್ಲಿಯೇ, ಮುಂದಿನ ಮೀಟಿಂಗ್ ದಿನಾಂಕವೂ ನಿಗದಿಯಾಯಿತು. ನಾನು ಇಲ್ಲಿಂದ, ಮದ್ರಾಸಿಗೆ ರೈಲಿನಲ್ಲಿ ಹೋದೆ. ಅವತ್ತಿನ ದಿವಸ ಯೂನಿಯನ್ ಮಿನಿಸ್ಟರೇ ಇಲ್ಲ; ಅವರು ಬರುವುದನ್ನು ಕ್ಯಾನ್ಸಲ್ ಮಾಡಿದ್ದಾರೆಂದು ಹೇಳಿದರು. ನಾನು ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳು ಕುಳಿತು ಅನೇಕ ವಿಚಾರಗಳನ್ನು ಮಾತನಾಡಿದೆವು, ಅದೆಲ್ಲವನ್ನೂ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿಂದ, ಮೊನ್ನೆ ಕಾವೇರಿ ಬಗ್ಗೆ ಮಾತನಾಡುತ್ತಾ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹೇಳಿದರು. ಸುಪ್ರೀಂ ಕೋರ್ಟ್‌ನವರು ಈ ರೀತಿಯ ತೀರ್ಮಾನವನ್ನು ಕೊಟ್ಟರು, ಇದರ ಸಲುವಾಗಿ, ಕೇಂದ್ರ ಸರ್ಕಾರದ ವಿ.ಪಿ.ಸಿಂಗ್ ಸರ್ಕಾರವೂ ಹೊರಟುಹೋಯಿತು ಎಂದು ಹೇಳಿದರು. ನಾನು ಕೇಳುವುದು, ನೀವು ಸುಪ್ರೀಂ ಕೋರ್ಟ್ ತೀರ್ಮಾನವನ್ನು ಓದಬೇಕು, ಸುಪ್ರೀಂ ಕೋರ್ಟ್ ಮುಂದೆ, ಕೇಂದ್ರ ಸರ್ಕಾರದವರು ಏನು ಹೇಳಿಕೆ ಕೊಟ್ಟಿದ್ದಾರೆ. ಅದನ್ನು ಇನ್ನೊಮ್ಮೆ ನೋಡಿ. ಯಾರು ಸುಪ್ರೀಂ ಕೋರ್ಟ್‌ನಲ್ಲಿ ಆ ರೀತಿ ಹೇಳಿದ್ದಾರೆ ಮತ್ತು ಸುಪ್ರೀಂ ಕೋರ್ಟಿನದ್ದು ತಪ್ಪೋ ಅಥವಾ ಕೇಂದ್ರಸರ್ಕಾರದ ತಪ್ಪೋ ಎಂಬುದು ನಿಮಗೆ ಗೊತ್ತಾಗುತ್ತದೆ ಎಂಬುದನ್ನು ಜನತಾದಳದ ಸದಸ್ಯರಿಗೆ ಹೇಳುತ್ತಿದ್ದೇನೆ.

ಸುಪ್ರೀಂ ಕೋರ್ಟ್ ತೀರ್ಮಾನ ಓದಿ. ಸುಪ್ರೀಂ ಕೋರ್ಟ್‌ನಲ್ಲಿ ಕೇಂದ್ರ ಸರ್ಕಾರದವರು 1990 ರಲ್ಲಿ ಅಂಡರ್ ಟೇಕಿಂಗ್ ಕೊಟ್ಟಿದ್ದು ನಿಮಗೇ ಗೊತ್ತಾಗುತ್ತದೆ. ಹೆಗಡೆಯವರು ಹೇಳಿದ್ದು ನಿಜಾನೋ ಅಥವಾ ಅಸತ್ಯವೋ ಎಂಬುದು ನಿಮಗೆ ಗೊತ್ತಾಗುತ್ತದೆ. ನಾನು ಏಕೆ ಈ ವಿಚಾರ ಹೇಳುತ್ತಿದ್ದೇನೆಂದರೆ, ನಮ್ಮ ಪಾರ್ಟಿಯವರು ಸರಿ ಮಾಡಿದರು ಎರಡನೇ ಪಾರ್ಟಿಯವರು ತಪ್ಪು ಮಾಡಿದರೆಂದು ಹೇಳುವ ಪ್ರವೃತ್ತಿ ಹೋಗಬೇಕು. ನಾನು ಹೋದ ಸಲ ಇದೇ ಜಾಗದಲ್ಲಿ ಕೂತು ಇದೇ ಸದನದಲ್ಲಿ ಹೇಳಿದ್ದೇನೆ. ಕರ್ನಾಟಕವನ್ನು ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ. ಅದಕ್ಕಾಗಿ ಜನ ನಮ್ಮ ಕಡೆ ನೋಡುತ್ತಾರೆಯೇ ಹೊರತು ದೆಹಲಿಯವರು ಕಡೆ ನೋಡುವುದಿಲ್ಲ. ನಾನು ಹೋದ ಸಾರಿ ಮಾಡಿದ ಸ್ಪೀಚನ್ನು ತರಿಸಿ ನೋಡಿದರೆ ನಿಮಗೇ ಗೊತ್ತಾಗುತ್ತದೆ. ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ಯಾರೇ ತಪ್ಪು ಮಾಡಿರಲಿ, ಅದು ತಪ್ಪಾಗಿದೆ ಎಂದು ಹೇಳುವ ಧೈರ್ಯ ಬರಬೇಕು. ಈ ವಿ.ಸಿ. ಶುಕ್ಲಾ, ಅವರು ಎಲ್ಲಾ ಪಾರ್ಟಿ ತಿರುಗಿ ಹೋದರು. ಇವತ್ತು ಯಾವ ಪಾರ್ಟಿಯಲ್ಲಿ ಇದ್ದಾರೋ ಗೊತ್ತಿಲ್ಲ. ಅವರನ್ನ ಅಟ್ಯಾಕ್ ಮಾಡಿದೆನೋ ಇಲ್ಲವೋ ಎಂದು ನನ್ನ ಸ್ಪೀಚನ್ನು ಓದಿಕೊಂಡು ನೀವು ನಿರ್ಣಯ ಮಾಡಿ. ನಾನು ಅವರನ್ನು ಏಕೆ ಅಟ್ಯಾಕ್ ಮಾಡಿದೆ? ಏಕೆಂದರೆ ಅವರು ತಪ್ಪು ಮಾಡಿದರೆಂದು ಅವರನ್ನು ಅಟ್ಯಾಕ್ ಮಾಡಿದೆ. ಅವರು ಕರ್ನಾಟಕಕ್ಕೆ ಬಂದು ಒಂದು ಹೇಳಿದರು, ತಮಿಳುನಾಡಿಗೆ ಹೋಗಿ ಒಂದು ಹೇಳಿದರು. ಈ ರೀತಿಯಾಗಿ ಈ ಕೇಸನ್ನು ಕಾಂಪ್ಲಿಕೇಟ್ ಮಾಡಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದು ಏನನ್ನು ತೋರಿಸುತ್ತದೆ? ಯಾರೇ ಇವತ್ತು ಕರ್ನಾಟಕಕ್ಕೆ ಅನ್ಯಾಯ ಮಾಡಲಿಕ್ಕೆ ಹೊರಟರೆ, ಅವರು ನಮ್ಮ ಪಾರ್ಟಿಯವರು ಇರಲಿ ಅಥವಾ ಎರಡನೇ ಪಾರ್ಟಿಯವರು ಇರಲಿ, ನೋಡ್ರಿ ಇದು ತಪ್ಪಾಗಿದೆ ಎಂದು ಹೇಳುವ ಶಕ್ತಿಯನ್ನೂ ನಮ್ಮ ಹತ್ತಿರ ಬೆಳೆಸಿಕೊಳ್ಳಬೇಕೆಂದು ನಾನು ಈ ವಿಚಾರವನ್ನು ಹೇಳುತ್ತಿದ್ದೇನೆ. ನಾನು ಬಂದಮೇಲೆ ತಮಿಳುನಾಡು ಪಿಡಬ್ಲ್ಯೂಡಿ ಮಿನಿಸ್ಟರ್‌ನ್ನು ಕರೆದು ನಿಮಗೆ ಎಷ್ಟು ಟಿಎಂಸಿ ಎಫ್‌ಟಿ ನೀರು ಬೇಕು ಎಂದು ಕೇಳಿದೆ. 5 ಟಿಎಂಸಿ ಎಫ್‌ಟಿ ನೀರು ಬೇಕು ಕೊಡ್ರಿ ಎಂದು ಅವರು ಕೇಳಿದರು. ನಾನು 5 ಟಿಎಂಸಿ ಎಫ್‌ಟಿ ನೀರು ಕೊಟ್ಟೆ. ಅದು ರೆಕಾರ್ಡ್‌ನಲ್ಲಿ ಇದೆಯೇ ಇಲ್ಲವೇ ಎಂಬುದನ್ನು ನೀವು ನೋಡಿಕೊಳ್ಳಿ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಒಂದು ವೇಳೆ ಅಂಕಿ ಅಂಶದ ಪ್ರಕಾರ ನೀರು ಬಿಡದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಒಂದು ವೇಳೆ 5 ಟಿಎಂಸಿ ಎಫ್‌ಟಿ ನೀರು ಬಿಡುತ್ತೇನೆಂದು ಹೇಳಿದ್ದು ನಿಜ ಇದ್ದರೆ ಹಾಗೂ ಯಾರು 5 ಟಿಎಂಸಿ ಎಫ್‌ಟಿ ಅಷ್ಟು ನೀರು ಬಿಟ್ಟಿಲ್ಲವೆಂದು ಆರೋಪ ಮಾಡಿರುವ ಹೆಗಡೆಯವರು ರಾಜೀನಾಮೆ ಕೊಡಬೇಕು. ನೀರು ಬಿಟ್ಟಿದ್ದೇನೆಂದು ಎಷ್ಟು ಸಲ ಹೇಳಬೇಕು. ಅನೇಕ ಜನ ಜನತಾದಳದವರು, ಈ ಬಗ್ಗೆ ಬಾಯಿ ಮುಚ್ಚಿಕೊಂಡು ಸುಮ್ಮನಿದರೂ ಶ್ರೀಮಾನ್ ಹೆಗಡೆಯವರು ಒಬ್ಬರೇ ನೀರು ಬಿಟ್ಟಿಲ್ಲ ಎಂದು ಹೇಳುತ್ತಿದ್ದಾರೆ. ನೀರು ಬಿಟ್ಟಿದ್ದೇನೆಯೇ ಇಲ್ಲವೇ ಎಂದು ನಾನು ಹೇಳಬಾರದು. ಇದನ್ನು ಶ್ರೀಮಾನ್ ಕೃಷ್ಣಾ ಆಗಲಿ ಶ್ರೀಮಾನ್ ಮೊಯಿಲಿಯವರು ಹೇಳುವುದು ಉತ್ತಮವೆಂದು ನನಗನಿಸುತ್ತದೆ. ತಮ್ಮ ರಿಪ್ಲೈನಲ್ಲಿ ಇದನ್ನು ಹೇಳಬೇಕೆಂದು ನಾನು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಡೆಲ್ಲಿಗೆ ವಿರೋಧ ಪಕ್ಷದ ಎಲ್ಲಾ ನಾಯಕರನ್ನು ಕರೆದುಕೊಂಡು ಹೋಗಿದ್ದೆ. ಮತ್ತು ನಮ್ಮ ಪಕ್ಷದ ಮುಖ್ಯ ನಾಯಕರುಗಳಿಗೂ ಕರೆದುಕೊಂಡು ಹೋಗಿದ್ದೆ. ಪ್ರಧಾನ ಮಂತ್ರಿಗಳ ಮನೆಗೆ ಹೋಗಿ ಭೇಟಿ ಆಗಿದ್ದೆವು. ಭೇಟಿಯಾಗುವ ಮೊದಲು ಎಲ್ಲಾ ನಾಯಕರಿಗೂ ನಾನು ಒಂದು ಮಾತನ್ನು ಹೇಳಿದ್ದೆ.

ನೋಡ್ರಿ, ಇದನ್ನು ಟ್ರಿಬ್ಯೂನಲ್‌ಗೆ ಒಪ್ಪಿಸಬೇಕೆಂದು ಕೇಂದ್ರ ಸರ್ಕಾರದವರು ನಿರ್ಧಾರ ಮಾಡಿದ ಹಾಗೆ ಕಾಣಿಸುತ್ತದೆ. ಅದಕ್ಕಾಗಿ ಅದು ಬೇಡವೆಂದು ಹೆಚ್ಚು ಒತ್ತಾಯ ಮಾಡಬೇಕೆಂದು ಜನತಾದಳದ ಸದಸ್ಯರುಗಳಿಗೆ ಹೇಳಿದ್ದೆ. ಏಕೆಂದರೆ, ಆಗ ಜನತಾದಳ ಮತ್ತು ನ್ಯಾಷನಲ್ ಫ್ರಂಟ್ ಸರ್ಕಾರ ಕೇಂದ್ರದಲ್ಲಿತ್ತು.

ನೀವು ಏನಾದರೂ ಹೇಳಿದರೆ ಬಹುಶಃ ಪ್ರಧಾನ ಮಂತ್ರಿಗಳು ಒಪ್ಪಬಹುದು ಇಲ್ಲವೆಂದರೆ ಒಪ್ಪುವ ಹಾಗಿಲ್ಲವೆಂದು ಹೇಳಿದ್ದೆ. ಅವತ್ತು ವಿರೋಧ ಪಕ್ಷದಲ್ಲಿ ಇಂಡಿಪೆಂಡೆಂಟ್‌ನವರು ಸಹ ಇದ್ದರು ಹಾಗೂ ಬಿಜೆಪಿನವರು ಇದ್ದರು. ಅವರೆಲ್ಲರನ್ನೂ ಕರೆದುಕೊಂಡು ಹೋಗಿದ್ದೆ. ನಾನು ಹೋದ ಸಲ ಕಾವೇರಿ ಬಗ್ಗೆ ಹೇಳುವ ಮೊದಲು 'Cauvery is a State issue. Therefore, don't make it a party issue. Take the entire Opposition into confidence.'

ನಾನು ಇದನ್ನು ಹೇಳಿದ್ದೇನೆ. ಏಕೆ ಹೇಳಿದೆ ಎಂದರೆ ಇದು ಸ್ಟೇಟ್ ಇಷ್ಯೂ. ಯಾವ ರೀತಿ ನಮ್ಮ ಹಿತ ರಕ್ಷಣೆ ಮಾಡುತ್ತಾರೆಂದು ಜನ ಜಾಗರೂಕತೆಯಿಂದ ನೋಡುತ್ತಿರುವುದರಿಂದ ಇದರ ಬಗ್ಗೆ ನಾವೂ ಜಾಗರೂಕತೆಯಿಂದ ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈಗ ಕಾವೇರಿ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇನ್ನು ಈ ಫೋನ್ ಟ್ಯಾಪಿಂಗ್ ಬಗ್ಗೆ ಬರುತ್ತೇನೆ. ಏಕೆಂದರೆ, ಅವರು ಹೇಳಿದ್ದ ಒಂದು ಕಾವೇರಿ ಡಿಸ್ಪ್ಯೂಟ್ ಬಗ್ಗೆ ಎರಡನೆಯದು ಫೋನ್ ಟ್ಯಾಪಿಂಗ್ ಬಗ್ಗೆ ಫೋನ್ ಟ್ಯಾಪಿಂಗ್ ಬಗ್ಗೆ ಹೇಳಬೇಕಾದರೆ ಫೋನ್ ಟ್ಯಾಪಿಂಗ್ ವಿಷಯ ಇಲ್ಲಿ ನಡೆದಾಗ ನಾನು ಪಾರ್ಲಿಮೆಂಟ್‌ನಲ್ಲಿ ಸದಸ್ಯನಾಗಿದ್ದೆ. ಪಾರ್ಲಿಮೆಂಟ್‌ನಲ್ಲಿ ಮಂತ್ರಿಯೂ ಆಗಿರಲಿಲ್ಲ. ಆ ವೇಳೆಗೆ ಇಲ್ಲಿ ಫೋನ್ ಟ್ಯಾಪಿಂಗ್ ಆಗಿತ್ತು. ಫೋನ್ ಟ್ಯಾಪಿಂಗ್ ಬಗ್ಗೆ 3 ದಿನ ಇಲ್ಲಿ ಕಾಲಹರಣವಾಯಿತು. ಇದರ ಬಗ್ಗೆ ಸದನದ ಕಾಲಹರಣ ಮಾಡುವ ಅಧಿಕಾರ ಮುಖ್ಯ ಮಂತ್ರಿಗಳಿಗಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಏಕೆಂದರೆ ಸದನದ ಗಾರ್ಡಿಯನ್ ಆಗಿ ಸ್ಪೀಕರ್ ಇರುತ್ತಾರೆ. ಸದನದಲ್ಲಿ ಯಾವ ವಿಷಯ ಚರ್ಚೆಗೆ ಬರಬೇಕು ಎಷ್ಟೆಷ್ಟು ಮಾತನಾಡಬೇಕೆಂದು ಅವರು ನಿರ್ಣಯ ಮಾಡುತ್ತಾರೆಯೇ ವಿನಹ ನಾವು ನಿರ್ಣಯ ಮಾಡುವ ಹಾಗಿಲ್ಲ. ಮತ್ತು ಅವರು ಯೋಗ್ಯ ನಿರ್ಣಯ ಮಾಡುವುದಕ್ಕೆ ಬಿಸಿನೆಸ್ ಅಡ್ವೈಸರಿ ಕಮಿಟಿ ಇರುತ್ತದೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ತೀರ್ಮಾನ ಮಾಡುತ್ತಾರೆ. ಆದ್ದರಿಂದ ಈ ಸದನದಲ್ಲಿ 3 ದಿನಗಳ ಕಾಲ ಕಾಲಹರಣ ಮಾಡಿದ್ದು ಯೋಗ್ಯವಲ್ಲವೆಂದು ನನಗನಿಸುತ್ತದೆ. ಅಲ್ಲಿಂದ ನಾನು ಜನತಾದಳ ಸದದಸ್ಯರಿಗೆ ಈ ವಿಚಾರವನ್ನು ಹೇಳುತ್ತಿದ್ದೆ. ಶ್ರೀಮಾನ್ ಹೆಗಡೆಯವರು ನಿನ್ನೆ ಭಾಷಣ ಮಾಡುವ ಮುಂದೆ ಏನು ಹೇಳಿದ್ದಾರೆಂದರೆ, ನಾನು ರೆಕಾರ್ಡ್ ತಿದ್ದಿದೆ ಎನ್ನುವ ಮಾತನ್ನು ಹೇಳಿದ್ದಾರೆ.

ನಿಮಗೆ ಎಲ್ಲರ ಬಾಯಿ ಮುಚ್ಚಿಸುವುದಕ್ಕೆ ಗೊತ್ತು. ಪಾಟೀಲರ ಮೇಲೆ ಇದನ್ನ ಹೇಳಬಾರದು ಎನ್ನುವಂಥ ಮಾತನ್ನು ಹೇಳುವುದಕ್ಕೆ ನಿಮಗೆ ಯಾರಿಗೆ ಧೈರ್ಯ ಬರಲಿಲ್ಲವಾ? ನಾನು ಕೇಳುತ್ತೇನೆ, ಇದು ತೇಜೋವಧೆ ಅಲ್ಲವೇ? ರೆಕಾರ್ಡ್ ತಿದ್ದಿದ್ದಾರೆ ಎನ್ನುವುದು Is it not an attack on my character? Is it not character assassination? 1952ರಿಂದ ನಾನು ಪಾರ್ಲಿಮೆಂಟಿನಲ್ಲೇ ಇದ್ದೆ. ನಾನು ಒಂದೇ ಸಲ ಸೋತಿದ್ದು. ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹೇಳುತ್ತೇನೆ, ಪಾಪ, ರಾಜೀವ್ ಗಾಂಧಿಯವರು ಸತ್ತು ಹೋಗಿದ್ದಾರೆ, ಇವತ್ತು ಇಲ್ಲ.

ಪ್ರೊ|| ಎಂ. ಡಿ. ನಂಜುಂಡಸ್ವಾಮಿ : ತಾವುಗಳು ಇಲ್ಲದೇ ಇರುವಾಗ ನಿಮ್ಮ ಬಗ್ಗೆ ಮಾತನಾಡಬಾರದು, ಎಂಬ ಬಗ್ಗೆ ಪ್ರಶ್ನೆಯನ್ನು ನಾನೊಬ್ಬನೇ ಎತ್ತಿದ್ದು. ಮಾನ್ಯ ವೀರೇಂದ್ರ ಪಾಟೀಲರು ಯಾರೂ ಆ ಬಗ್ಗೆ ಪ್ರಶ್ನೆ ಎತ್ತಿಲ್ಲವಲ್ಲಾ? ಯಾಕೆ ಎಂದು ಕೇಳಿದ್ದಕ್ಕೆ ಈ ಮಾತನ್ನು ಹೇಳಿದೆ. ನಾನು ಆ ಪ್ರಶ್ನೆ ಎತ್ತಿದ್ದೆ ಎಂದು ಅವರಿಗೆ ತಿಳಿಸುತ್ತಾ ಇದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್ : ನಾನು ಕೂಡ ಆ ಪ್ರಶ್ನೆಯನ್ನ ಎತ್ತಿದ್ದೆ. ತಮ್ಮ ಗಮನಕ್ಕೆ ತಂದಿದ್ದೆ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್ : ಅಂಥ ಸಂದರ್ಭದಲ್ಲಿ ನೀವು ಯಾಕೆ ಸುಮ್ಮನೆ ಕುಳಿತಿದ್ದೀರಿ ಎಂದು ಕೇಳಿದ್ದೇನೆ ಅಷ್ಟೆ....

ಶ್ರೀ ರಾಮಕೃಷ್ಣ ಹೆಗಡೆ : ಒಬ್ಬ ನಾಲ್ಕನೇ ದರ್ಜೆ ಜವಾನನ ಬಗ್ಗೆ ಸಹ ಹೀಗೆ ಹೇಳುವುದಿಲ್ಲ, ಆದರೆ ಒಬ್ಬ ಮುಖ್ಯಮಂತ್ರಿಯ ತೇಜೋವಧೆ ಮಾಡುತ್ತಿದ್ದಾರೆ ಎಂದಾಗ ನೀವೆಲ್ಲಾ ಬಾಯಿಗೆ ಬೀಗ ಹಾಕಿ ಕುಳಿತುಕೊಂಡಿದ್ದೀರಿ? ಆವಾಗ ನಿಮ್ಮ ರಾಯಲ್ಟಿ ಎಲ್ಲಿತ್ತು? ಕುಳಿತುಕೊಳ್ಳಿ.

SRI M. MAHA DEV : Who are you to question? It is none of your business. You cannot question it. You have no right to question it. Who are you to question it? You are unnecessarily assassinating the character. It is shame on your part.

(Interruption)

ಶ್ರೀ ಕೆ. ಕೇಶವಮೂರ್ತಿ : ನಿನ್ನೆ ರಾಮಕೃಷ್ಣ ಹೆಗಡೆಯವರು ಒಂದು ಸುಳ್ಳನ್ನು ಸದನಕ್ಕೆ ಹೇಳಿದ್ದಾರೆ. ವೀರೇಂದ್ರ ಪಾಟೀಲರು ಉತ್ತರ ಕೊಡಬೇಕಾದರೆ ನಾನು ಇರಲಿಲ್ಲ ಎಂದು ಹೇಳಿದ್ದರು. ಅದು ರೆಕಾರ್ಡ್‌ನಲ್ಲಿ ಇದೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ : ಅವರೇ ಇದ್ದಾರೆ, ಅವರ ಪರವಾಗಿ ನೀವು ಹೇಳಬೇಕಾಗಿಲ್ಲ. ಯಾವ ದಿವಸ ಅವರು ಈ ಶಬ್ದವನ್ನು ಉಪಯೋಗಿಸಿದರು, ಬಾರ್‌ಕೋಲ್‌ನಿಂದ ಹೊಡೆಸಿಕೊಳ್ಳುವುದು, ಚಪ್ಪಲಿಯಿಂದ ಹೊಡೆಸಿಕೊಳ್ಳುವುದು, ಉಳ್ಳಾಗಡ್ಡಿ ತಿನ್ನುವುದು, ಇವುಗಳನ್ನು ನಾನು ಇದ್ದಾಗ ಮಾತನಾಡಿದ್ದಾರೆಯೇ?

(ಗೊಂದಲ)

ಅವರನ್ನು ಡಿಸ್‌ಮಿಸ್ ಮಾಡಿದರಲ್ಲಾ? ಆಗ ನೀವೆಲ್ಲಾ ಎಲ್ಲಿ ಹೋಗಿದ್ದೀರಿ ?

(ಗೊಂದಲ)

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಅಧ್ಯಕ್ಷರು ಎದ್ದು ನಿಂತಾಗ ತಾವುಗಳು ಕುಳಿತುಕೊಳ್ಳಬೇಕೆಂಬುದು ಒಂದು ಸೌಜನ್ಯವಾದರೂ ಬೇಡವೇ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿರಿ.

ಶ್ರೀ ರಾಮಕೃಷ್ಣ ಹೆಗಡೆ : ಇವೊತ್ತು ವೀರೇಂದ್ರ ಪಾಟೀಲರ ಬಗ್ಗೆ ನಿಮಗೆಲ್ಲಾ ಪ್ರೀತಿ ಉಕ್ಕಿ ಬರುತ್ತಾ ಇದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ವೀರೇಂದ್ರ ಪಾಟೀಲರಿಗೆ ಮಾತನಾಡಲು ಅವಕಾಶ ಕೊಡಿ. ಅವರು ಮಾತನಾಡಲಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ವೀರೇಂದ್ರ ಪಾಟೀಲರು ಮಾತನಾಡುವಾಗ ನಾವು ಸಮಾಧಾನದಿಂದ ಕೇಳುತ್ತಾ ಇದ್ದೇವೆ. ನಾವು ಯಾವುದೇ ಅಡಚಣೆಯನ್ನು ಮಾಡಲಿಲ್ಲ. ಯಾಕೆಂದರೆ ನಾವು ಅವರು ಏನು ಹೇಳುತ್ತಿದ್ದಾರೆ ಎಂಬುದನ್ನು ಕೇಳಬೇಕಾಗುತ್ತದೆ. ನಾವು ಏನು ಮಾತನಾಡಬೇಕು ಅದನ್ನು ಅನಂತರ ಮಾತನಾಡುತ್ತೇನೆ.

ಆದರೆ ಈಗ ಹೆಗಡೆಜೀಯವರು ಏನು ಹೇಳಿದರು, ಮಾನ್ಯ ವೀರೇಂದ್ರ ಪಾಟೀಲರ ಮೇಲೆ ಇದ್ದಕ್ಕಿದ್ದ ಹಾಗೆ ಪ್ರೀತಿ ಏಕೆ ಬಂತು? ಮೊಯಿಲಿಯವರು ಬೀಳುತ್ತಾರೆ ಎಂದೇ? ಹಾಗಿದ್ದರೆ ವೀರೇಂದ್ರ ಪಾಟೀಲರನ್ನು ಡಿಸ್‌ಮಿಸ್ ಮಾಡಿದಾಗ ಇವರೆಲ್ಲಾ ಎಲ್ಲಿಗೆ ಹೋಗಿದ್ದರು?

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. Please resume your seat.

(ಗೊಂದಲ)

2.40 ಪಿ.ಎಂ

ಶ್ರೀ ರಾಮಕೃಷ್ಣ ಹೆಗಡೆ : ಯಾವಾಗ ವೀರೇಂದ್ರಪಾಟೀಲರನ್ನು ರಾಜೀವ್ಗಾಂಧಿಯವರು ಏರ್‌ಪೋರ್ಟ್‌ನಲ್ಲಿ ಡಿಸ್ಮಿಸ್ ಮಾಡಿದ್ದೇನೆ ಎಂದು ಹೇಳಿದ ಮೇಲೆ ಇವರು ನನಗೆ ಶಾಸಕಾಂಗ ಪಕ್ಷದ ಬೆಂಬಲ ಇದೆ ಎಂದು ಹೇಳಿದರು. ಆಗ ಎಲ್ಲಿ ಹೋಗಿದ್ದಿರಿ ನೀವು? ಅವರು ಹೇಳಿದರು ತಮಗೆ ಶಾಸಕಾರ ಪಕ್ಷದ ಬೆಂಬಲ ಇದೆ, ಅದರ ತೀರ್ಮಾನವಾಗಲಿ ಎಂದರು.

(ಗೊಂದಲ)

ಅವರು ತಕ್ಷಣ ರಾಜೀನಾಮೆ ಕೊಡಲಿಲ್ಲ. ಮಾನಮರ್ಯಾದೆ ಇದೆಯೇ ನಿಮಗೆ?

(ಗೊಂದಲ)

ಉಪಾಧ್ಯಕ್ಷರು : ನೀವು ಮುಂದುವರೆಸಿ ವೀರೇಂದ್ರಪಾಟೀಲರೇ.

ಶ್ರೀ ವೀರೇಂದ್ರ ಪಾಟೀಲ್ : ನಾನು ಮುಖ್ಯಮಂತ್ರಿಯಾದಾಗ ಫೋನ್ ಟ್ಯಾಪಿಂಗ್ ಬಗ್ಗೆ ಚರ್ಚೆಯಾಗಿದೆ. ಇವತ್ತು ಬಹುಶಃ ಚರ್ಚೆಯನ್ನು ರೆಕಾರ್ಡ್‌ನಲ್ಲಿ ಸೇರಿಸಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಫೋನ್ ಡಿಸ್ಕಷನ್ ಬಗ್ಗೆ ನಾನು ಡಿಸ್ಕಷನ್ ಬೇಕು, ಯಾರು ಡಿಸ್ಕಷನ್ ಕೇಳಿದರು, ಎಂದು ಆ ಪೇಪರ್ ಹೇಳುತ್ತದೆ ಹೊರತಾಗಿ ನಾನು ಹೇಳಬೇಕಾದ ಅವಶ್ಯಕತೆ ಇಲ್ಲ, ನನಗೆ ನೆನಪಿದ್ದಂತೆ ನಾನೇನೂ ಡಿಸ್ಕಷನ್‌ಗೆ ಬೇಡಲಿಲ್ಲ. ಫೋನ್ ಟ್ಯಾಪಿಂಗ್ ಬಗ್ಗೆ ಇಲ್ಲಿ ಡಿಸ್ಕಷನ್ ಆಗಬೇಕೂಂತ ನಾನು ಕೇಳಲಿಲ್ಲ, ಯಾರು ಕೇಳಿದ್ದಾರೆ? ನನಗೆ ಗೊತ್ತಿಲ್ಲ, ಏಕೆಂದರೆ ಇದು ಮೂರು ವರ್ಷದ ಮೊದಲಿನ ಮಾತು; ನೆನಪಿಡುವುದು ಬಹಳ ಕಷ್ಟ. ಶ್ರೀಮಾನ್ ಹೆಗಡೆಯವರು ಹೇಳಿದರು, ಫೋನ್ ಟ್ಯಾಪಿಂಗ್ ಬಗ್ಗೆ ಚರ್ಚೆ ಮಾಡಿ ಮೂರು ದಿನ ಈ ಸದನದ ಸಮಯ ಹಾಳು ಮಾಡಿದರು ಅಂತ. ನಾನು ಚರ್ಚೆ ಕೇಳಲಿಲ್ಲ, ಸಭೆಯ ರೆಕಾರ್ಡಿದೆ, ತರಿಸಿ ನೋಡಿ, ಯಾರು ಚರ್ಚೆ ಬೇಡಿದರು, ವಿರೋಧಪಕ್ಷದವರು ಬೇಡಿದರೋ ಅಥವಾ ಬೇರೆಯವರು ಬೇಡಿದರೋ ಎಂದು ರೆಕಾರ್ಡ್‌ನಲ್ಲಿ ಸಿಗುತ್ತದೆ ನಿಮಗೆ. ಫೋನ್ ಟ್ಯಾಪಿಂಗ್ ಬಗ್ಗೆ ನಾನೇನು ಮುಖ್ಯಮಂತ್ರಿಯಾಗಿದ್ದಾಗ ನಾನು ಅಡ್ಮಿನಿಸ್ಟ್ರೇಟರ್ ಆಗಿ ಒಂದು ವಿಚಾರ ಹೇಳಿದ್ದೆ: ಯಾರೇ ತಪ್ಪು ಮಾಡಿರಲಿ, ನಾನು ಮುಖ್ಯಮಂತ್ರಿ, ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಹೊರತಾಗಿ ನಮಗೆ ಗೊತ್ತಿಲ್ಲ, ನಾವು ಮಾಡಿಲ್ಲ, ಏನೂ ಇಲ್ಲ ನಮ್ಮ ಆಫೀಸರೇ ಮಾಡಿರಬಹುದು ಎಂಬುದಕ್ಕೆ ನಮ್ಮ ಭಾಗದ ಒಂದು ಕಥೆ ಹೇಳಿದೆನೆ ಹೊರತಾಗಿ, ಇನ್ನ್ಯಾತಕ್ಕೂ ಅಲ್ಲ, ನಮ್ಮ ಭಾಗದ ಹಳ್ಳಿಹಳ್ಳಿಯಲ್ಲಿ ಆ ಕಥೆ ಹೇಳ್ತಾರೆ. ಅದಕ್ಕೆ ನಾನು ಹೇಳಿದ್ದೆ, ಯಾರೇ ಮಾಡಲಿ, ನಾನು ಮುಖ್ಯಮಂತ್ರಿ ಇದ್ದೇನಿ, ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದರೆ ಮುಗಿದೇಹೋಗುತ್ತಿತ್ತು; ಮತ್ತೆ ಚರ್ಚೆ ಆಗುತ್ತಿರಲಿಲ್ಲ, ಒಂದು ಕಡೆ ಏನು ಹೇಳಿದರು ಎಂದರೆ ನಾನೇ ಜವಾಬ್ದಾರಿ ತೆಗೆದುಕೊಂಡು ರಾಜೀನಾಮೆ ಕೊಟ್ಟಿದ್ದೇನೆಂದು;

ಆ ಮೇಲೆ ತಾವು ಮಾಡಿದ್ದಲ್ಲ, ಆಫೀಸರೇ ಮಾಡಿದ್ದು ಎಂದರು. ಆಫೀಸರುಗಳು ನಿಮ್ಮ ಕಲೀಗ್ಸ್ ಮೇಲೆ ಟ್ರ್ಯಾಪ್ ಮಾಡಬೇಕಾದರೆ ಕಾರಣ ಬೇಕಲ್ಲಾ? ಏನಪ್ಪ ಅವನು ಇಂಟೆಲಿಜೆಂಟ್ ಆಫೀಸರ್ ಇದ್ದಾನೆ.

ಶ್ರೀ ರಾಮಕೃಷ್ಣ ಹೆಗಡೆ : ಒಂದ್ನಿಮಿಷ. ನಾನು ಆಫೀಸರ್ ಮಾಡಿದ್ದಾರೆ ಎಂದು ಹೇಳಲಿಲ್ಲ. ಬೇರೆ ಯಾರ ಮೇಲೂ ತಪ್ಪನ್ನು ಹಾಕಲಿಲ್ಲ. ನಾನು ಏನು ಹೇಳಿದೆ ಅಂದರೆ ಯಾರೇ ಮಾಡಿರಲಿ ಅದರ ನೈತಿಕ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ ಮತ್ತು ಅದಕ್ಕಾಗಿ ನಾನು ರಾಜೀನಾಮೆ ಕೊಡ್ತೀನಿ ಎಂದು ಹೇಳಿದೆ. ನೀವೂ ಮುಖ್ಯಮಂತ್ರಿಯಾಗಿದ್ದಿರಿ, ನಮ್ಮ ಪಕ್ಷದವರಲ್ಲ ಈ ಚರ್ಚೆ ತೆಗೆದವರು; ನಿಮ್ಮ ಪಕ್ಷದವರು, ನಿಮ್ಮ ಇನಸ್ಟ್ರಕ್ಷನ್ ಮೇಲೆ, ಮೇಲಿನವರ ಇನಸ್ಟ್ರಕ್ಷನ್ ಮೇರೆಗೆ ಚಿದಂಬರಂ ಆವತ್ತು ಬಂದು ಹಾಜರಿದ್ದರು, ಆ ಹೊತ್ತಿನಲ್ಲಿ ಚರ್ಚೆ ತೆಗೆದರು. ಆಗ ನೀವೇನು ಮಾಡಿದಿರಿ? 26ನೇ ತಾರೀಖಿಗೆ ಚೀಫ್ ಸೆಕ್ರೆಟರಿಗೆ ಪತ್ರ ಬರೆದು ಅವರಿಬ್ಬರಿಂದ ಪತ್ರ ತರಿಸಿಕೊಂಡಿರಿ. ಇದಕ್ಕಿಂತ ಬೇರೆ ದ್ರೋಹ ಇನ್ನಾವುದೂ ಇಲ್ಲ. ಅವನ್ನು ಆ ಫೈಲಲ್ಲಿ ಸೇರಿಸಿದಿರಿ ನೀವು. ನಾನು ನಿಮ್ಮಿಂದ ಇದನ್ನು ಬಯಸಿರಲಿಲ್ಲ. ಯಾವಾಗ ಹೀಗೆಂದು ಗೊತ್ತಾಯಿತೋ ಆಗ ನಾನೆಂದೆ, 40 ವರ್ಷದ ನಮ್ಮ ಸ್ನೇಹ ಏನಿದೆ, ರಾಜಕೀಯ ಬರ್ತದೆ ಹೋಗ್ತದೆ, ನೀವು ಮುಖ್ಯಮಂತ್ರಿ ಆಗಬಹುದು, ನಾನು ಆಗಬಹುದು, ಅದಲ್ಲ, ಏನೊಂದು ಮಾನವೀಯ ಸಂಬಂಧ ಇದೆಯಲ್ಲಾ ಅದನ್ನು ನೀವು ಸಂಪೂರ್ಣ ತೊಡೆದುಹಾಕಿಬಿಟ್ಟಿರಿ ಎಂದು;

ಶ್ರೀ ಬಿಎಸ್ ಯಡಿಯೂರಪ್ಪ : ಇವರ ಫ್ರೆಂಡ್‌ಷಿಪ್ ಆತ್ಮೀಯತೆ ಇದ್ದರೆ ಮಾಡಬಾರದು ಮಾಡಿದ್ದನ್ನೆಲ್ಲಾ ಮುಚ್ಚಿಹಾಕಬೇಕೇನು?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ : ಮಾನ್ಯ ಯಡಿಯೂರಪ್ಪನವರು ಬಹುಶಃ ನಾನು ಏನು ಹೇಳಿದೆ ಎಂಬುದನ್ನು ತಿಳಿದುಕೊಳ್ಳಲಿಲ್ಲ. ಮಾಡಬಾರದ್ದು ನಾನು ಮಾಡಿದ್ದರೆ ಶಿಕ್ಷೆ ಮಾಡಿ; ಜೈಲಿಗೆ ಕಳಿಸಿ, ಐಪಿಸಿ ಪ್ರಕಾರ ಗರಿಷ್ಠ ಶಿಕ್ಷೆ ಏನಿದೆಯೋ ಅದನ್ನು ಮಾಡಿ ಅಂತ ಹೇಳ್ತೇನೆ. ನನ್ನನ್ನು ನಾನು ಇದರಿಂದ ಹೊರತುಪಡಿಸಿಕೊಂಡಿಲ್ಲ. ಆದರೆ ಬೇರೆಯವರನ್ನು ಖುಷಿಪಡಿಸುವುದಕ್ಕೆ, ಇಲ್ಲಿ ಆ ವಿಚಾರ ಮುಗಿದುಹೋಗಿತ್ತಲ್ಲ, ನಾನು ರಾಜೀನಾಮೆ ಕೊಟ್ಟು ಹೊರಟುಹೋಗಿದ್ದೆನಲ್ಲ, ಅದಾದಮೇಲೆ ಅದನ್ನು ಇಲ್ಲಿ ಯಾವ ಪಕ್ಷದವರು ಚರ್ಚೆಗೆ ತಂದರು? ನಮ್ಮ ಪಕ್ಷದವರು ತಂದರಾ? ನಮಗೆ ಗೊತ್ತಿಲ್ಲ ಅಂತ ಹೇಳಿದಿರಿ; ಅವತ್ತು ಪಿ. ಚಿದಂಬರಂ ಬಂದಿರಲಿಲ್ಲವಾ; ಎರಡು ದಿವಸ ಇರಲಿಲ್ಲವಾ? ಮತ್ತೊಬ್ಬ ಮಂತ್ರಿ ಬಂದಿರಲಿಲ್ಲವಾ, ಇಲ್ಲಿ ಎರಡು ದಿವಸ ಇರಲಿಲ್ಲವಾ? ಆ ಹೊತ್ತಿನಲ್ಲಿ ನೀವು ಚೀಫ್ ಸೆಕ್ರೆಟರಿಗೆ ಪತ್ರ ಬರೆದು ಇಂಥವರಿಂದ ಪತ್ರ ತರಿಸಿ ಎಂದು ಹೇಳಿ ತರಿಸಿ ಆ ಎರಡೂ ಪತ್ರಗಳನ್ನು ಸೇರಿಸಲಿಲ್ಲವಾ ಫೈಲಿನಲ್ಲಿ. ಶ್ರೀ ಚಂದ್ರೇಗೌಡರು ಇದ್ದಾರೆ, ಶ್ರೀ ನಾಣಯ್ಯನವರಿದ್ದಾರೆ, ಬಿಜೆಪಿಯವರು ಹೀಗೆ ಎಲ್ಲರನ್ನೂ ಸೇರಿಸಿ ಈ ಸದನದ ಕಮಿಟಿಯಾಯಿತು. ಆ ಕಮಿಟಿಯವರು ಆ ದಿವಸ ಹೌದು, ಪೇಜ್ ನಂಬರನ್ನು ಬದಲಾಯಿಸಿದ್ದೀರಿ ಎಂದು ಹೇಳಲಿಲ್ಲವೇ? ಇದು ದ್ರೋಹವಲ್ಲವೇ? ನಾನು ಹೇಳ್ತೀನಿ ಕೇಳಿ. ಇದರಲ್ಲಿ ರಾಜಕೀಯ ವ್ಯಾಪಾರ ಇಲ್ಲ. ನನ್ನದು ಅವರ ಸ್ನೇಹ ವೈಯಕ್ತಿಕವಾದದ್ದು; ಆ ಮೇಲೆ ರಾಜಕೀಯ ಸ್ನೇಹ. 1962ರ ಇಸವಿಯಲ್ಲಿ ನಾವು ಕಾಶ್ಮೀರದಲ್ಲಿದ್ದಾಗ ಶ್ರೀನಗರದಲ್ಲಿ ರಾಂಪುರಿಯವರು ಮತ್ತೊಬ್ಬರಿದ್ದರು, ಆವಾಗಲೇ ನಾನು ಹೇಳಿದೆ, ನಿಜಲಿಂಗಪ್ಪನವರು ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯವರೆಗೆ ಅವರು ಮುಖ್ಯಮಂತ್ರಿ ಅದಾದ ಮೇಲೆ ನಿಮ್ಮನ್ನು ಮುಖ್ಯಮಂತ್ರಿ ಮಾಡ್ತೇವೆ ಎಂದು ನಾವು ಹೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಮಾನ್ಯ ರಾಮಕೃಷ್ಣಹೆಗಡೆಯವರ ಬಗ್ಗೆ ಹಾಗೂ ವೀರೇಂದ್ರಪಾಟೀಲರ ಬಗ್ಗೆ ಸಂಪೂರ್ಣ ಗೌರವ ಇದೆ. ಅವರ ಆತ್ಮೀಯ ಸ್ನೇಹದ ಮಧ್ಯೆ ನಾನು ಪ್ರವೇಶ ಮಾಡುತ್ತಿಲ್ಲ. ನಾನು ಏನು ಹೇಳೋಕೆ ಹೊರಟೆ ಎಂದರೆ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿ ಯಾವುದೇ ಆತ್ಮೀಯತೆ ಸ್ನೇಹ ಇದ್ದರೂ ಸಹ ಒಬ್ಬ ಮುಖ್ಯಮಂತ್ರಿಯಾಗಿ ತಮ್ಮ ಕರ್ತವ್ಯ ನಿರ್ವಹಿಸಿದ್ದಾರೆ. ಅದನ್ನು ನಾವು ಪ್ರಶಂಸೆ ಮಾಡಬೇಕೇ ಹೊರತು ಅದನ್ನು ಅಪಾರ್ಥ ಮಾಡಬಾರದು. ಎರಡನೆಯದು ಆ ಪೇಜ್‌ಗಳನ್ನು ನಾವು ನೋಡಿಕೊಂಡು ಬಂದೆವು ನಾವೂ ಸ್ಪೀಕರ್ ರೂಮಿಗೆ ಹೋದಾಗ ನಾವೂ ಹೇಳಿದ್ದೇವೆ, ಪೇಜ್‌ಗಳನ್ನು ಬದಲಾವಣೆ ಮಾಡಿದ್ದೀರಿ ಎಂದು. ನಾವು ಹೋಗಿದ್ದೆವು. ಪೇಜ್‌ಗಳು ಬದಲಾವಣೆ ಆಗಿದ್ದುದ್ದು ನಿಜ. ಆ ದಾಖಲೆಗಳ ಬಗ್ಗೆ ಇಲ್ಲಿ ಚರ್ಚೆ ಮಾಡಿದ್ದೇವೆ. ಆದರೆ ಒಂದು ಪ್ರಶಂಸೆ ಮಾಡಬೇಕಾದ್ದು ಏನೆಂದರೆ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದ ಏಳೆಂಟು ತಿಂಗಳಲ್ಲಿ ಕಾನೂನು ಬಾಹಿರವಾಗಿ ಯಾವುದೇ ಕೆಲಸ ಅವರು ಮಾಡಿಲ್ಲ ಎಂದು ಸದನದ ಒಳಗೆ ನಾವು ಹೇಳಿದ್ದೇವೆ. ಪೇಜ್ ಬದಲಾವಣೆ ಮಾಡಿದ್ದರೆ ಅದಕ್ಕೆ ನಾವು ಛೀಮಾರಿ ಹಾಕಿದ್ದೇವೆ.

(ಗೊಂದಲ)

ಉಪಾಧ್ಯಕ್ಷರು: ಯಡಿಯೂರಪ್ಪನವರೇ, ನೀವು ಕುಳಿತುಕೊಳ್ಳಿ.

ಶ್ರೀ ವೀರೇಂದ್ರಪಾಟೀಲ್ : ಮಾನ್ಯ ಸಭಾಧ್ಯಕ್ಷರೇ, ಇದರ ಬಗ್ಗೆ ನಾನು ಹೆಚ್ಚಿಗೆ ಹೇಳೋದಕ್ಕೆ ಹೋಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ನಿಮಿಷ, ನಾನೂ ರೆಕಾರ್ಡಿನಲ್ಲಿರಲು ಹೇಳಬೇಕು. ನನ್ನ ಹೆಸರು ಎಲ್ಲರೂ ಹೇಳಿದ್ದಾರೆ. ನಾನು ವಿರೋಧಪಕ್ಷದ ನಾಯಕನಾಗಿ ಚರ್ಚೆ ಆರಂಭಿಸುವ ಮುನ್ನ ಹೇಳಿದ್ದೆ. ಏನೆಂದರೆ ಅದರ ಬಗ್ಗೆ ಯಾರಿಗೂ ಸಂಶಯ ಇಲ್ಲವೆಂದು; ನಾನು ಆ ದಿವಸ ಕೂಡ ತಾವು ಅಲ್ಲಿ ಸಭಾನಾಯಕರಾಗಿದ್ದಾಗಲೂ ಕೂಡ if you want to be out of suspicion ಇವೆಲ್ಲದರ ಬಗ್ಗೆ ಚರ್ಚೆ ಸಂಶಯದಿಂದ ಪ್ರಾರಂಭವಾಗಿತ್ತು ಆವತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಪೇಜುಗಳನ್ನು ನೋಡಿದ್ದು ಬಂಗಾರಪ್ಪನವರ ಕಾಲದಲ್ಲಿ; ಇದು ರೆಕಾರ್ಡ್‌ಗೆ ಹೋಗಲಿ ಸರಿಯಾಗಿ. ನಾವು ಟೆಲಿಫೋನ್ ಟ್ಯಾಪಿಂಗ್‌ನ ಫೈಲ್ ನೋಡಿದಂಥದ್ದು ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗಲೇ ಹೊರತು ಸನ್ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗಲ್ಲ. ಅದನ್ನು ನಾನು ಸ್ಪಷ್ಟಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈ ದೂರವಾಣಿ ಕದ್ದಾಲಿಕೆ ಬಗ್ಗೆ ಈ ಕಡತಗಳನ್ನು ನೋಡಿದಂಥ ಕಾಲ ಯಾವುದು? ವೀರೇಂದ್ರಪಾಟೀಲರ ಕಾಲವಲ್ಲ. ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಈ ಸದನದಲ್ಲಿ ಮತ್ತೊಂದು ಸಲ ಚರ್ಚೆಗೆ ಬಂತು. ನಿಮ್ಮ ಕಾಲದಲ್ಲೂ ಈ ಫೋನ್ ಕದ್ದಾಲಿಕೆ ಆಗಿದೆ ಎಂದಾಗ ನೀವು ನೋಡಿ ಎಂದು ಹೇಳಿ ಒಳಗಡೆ ಅಧ್ಯಕ್ಷರ ಕೊಠಡಿಯಲ್ಲಿ ಆವತ್ತು ಅಧಿಕಾರಿಗಳಾಗಿದ್ದಂಥ ಶ್ರೀನಿವಾಸಲು ಅವರು ಬಂದಿದ್ದರು. ಅಲ್ಲಿ ನೋಡಿದ್ದು. ಯಡಿಯೂರಪ್ಪನವರು ಮತ್ತು ಇವರು ವೀರೇಂದ್ರಪಾಟೀಲರ ಕಾಲದಲ್ಲಿ ಕಡತಗಳನ್ನು ನೋಡುವುದಕ್ಕೆ ಅವಕಾಶವಾಗಲಿಲ್ಲ ಎಂಬುದು ಸ್ಪಷ್ಟವಾಗಿದೆ. ಅದು ಅವರವರ ವೈಯಕ್ತಿಕವಾದ ಆರೋಪಣೆಗಳು ಮತ್ತು ದೋಷಾರೋಪಣೆಗಳ ಬಗ್ಗೆ ನಾನು ಹೇಳುತ್ತಿದ್ದೇನೆ, ಅವತ್ತಿನ ದಿವಸ ನಾವ್ಯಾರೂ ಕಡತಗಳನ್ನು ನೋಡಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವೆಲ್ಲಾ ನೋಡಿದೆವಲ್ಲಾ.

ಶ್ರೀ ವಾಟಾಳ್ ನಾಗರಾಜ್ :ಅದೇ ಯಾವಾಗ ನೋಡಿದ್ದು?

ಶ್ರೀ ಪಿ.ಜಿ.ಆರ್. ಸಿಂಧ್ಯ : ನೋಡಿದೆವು ಒಟ್ಟಿನಲ್ಲಿ. ಜ್ಞಾಪಕ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನೋಡಿದೆವು ಒಟ್ಟಿನಲ್ಲಿ ಎಂದರೆ ಬಂಗಾರಪ್ಪನವರ ಕಾಲದಲ್ಲಿ ನೋಡಿದೆವು ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಟೆಲಿಫೋನ್ discussion ಆಗಿದ್ದು ಯಾವಾಗ?

ಶ್ರೀ ವಾಟಾಳ್ ನಾಗರಾಜ್ : ಬಂಗಾರಪ್ಪನವರ ಕಾಲದಲ್ಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವಾಗ?

ಶ್ರೀ ವಾಟಾಳ್ ನಾಗರಾಜ್ : ಬಂಗಾರಪ್ಪನವರ ಕಾಲದಲ್ಲಿ ನೋಡಿದ್ದು. ಅದರಲ್ಲೇನೂ ಅನುಮಾನ ಇಲ್ಲ. ಇದಕ್ಕೆ ಕಾರಣ ಏನು ಎಂದರೆ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿರುವಾಗ ದೂರವಾಣಿ ಕದ್ದಾಲಿಕೆ ನಿಮ್ಮ ಸರ್ಕಾರದಿಂದಲೂ ನಡೆಯುತ್ತಿದೆ ಎಂದು ಇಲ್ಲಿಂದ ಆರೋಪಣೆ ಬಂತು. ಬಂದಾಗ ಬಂಗಾರಪ್ಪನವರು ಏನು ಮಾಡಿದರು, ಅಂದರೆ, ರೆಕಾರ್ಡ್ ಎಲ್ಲಾ ಅಧ್ಯಕ್ಷರ ಕೊಠಡಿಗೆ ಕಳುಹಿಸುತ್ತೇನೆ. ನೀವು ಅಲ್ಲಿ ನೋಡಬಹುದು ಅಂದರು. ಇದಕ್ಕೆ ಅಧ್ಯಕ್ಷರೂ ಕೂಡ ಸಾಕ್ಷಿ. ಆಗ ಅಧ್ಯಕ್ಷರಾಗಿದ್ದಂಥ ಶ್ರೀಮಾನ್ ಎಸ್.ಎಂ. ಕೃಷ್ಣ ಅವರು ಅವರ ಕುರ್ಚಿಯಲ್ಲಿ ಮೌನವಾಗಿ ಕುಳಿತುಕೊಂಡು ಎಲ್ಲಾ ನೋಡುತ್ತಿದ್ದೆವು. ಆಗ ಚಂದ್ರೇಗೌಡರು, ಇದು ಯಾವುದೋ ನನ್ನದೂ ಎರಡು ಫೋನ್ ಬಂದುಬಿಟ್ಟಿದೆಯೆಲ್ಲಾ ಎಂದು ಹೇಳಿದರು. ನಾವು ವೀರೇಂದ್ರಪಾಟೀಲರು ತಿದ್ದಿದ್ದಾರೆ ಎಂದು ನಾವು ಯಾರು ಅನ್ನುವುದಕ್ಕೆ ಅದು ಅಷ್ಟು ದೂರಕ್ಕೆ ಹೋಗತಕ್ಕಂಥ ವ್ಯವಸ್ಥೆ ಆಗಬಾರದು. ಅದು ಸರಿಯಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ವಾಟಾಳ್‌ನಾಗರಾಜ್‌ರವರ ಧ್ವನಿ ದೊಡ್ಡದು ಇದೆ, ಹೇಳಿಬಿಡುತ್ತಾರೆ. ನಾನು ನಿಂತಿದ್ದೆ ಮಧ್ಯೆ. ಇದು ಯಾರ ಕಾಲದಲ್ಲಿ ಆಯಿತು, ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದರು, ಆ ಮೇಲೆ ಬಂಗಾರಪ್ಪನವರು ಬಂದರು. ಈಗ ವೀರಪ್ಪಮೊಯಿಲಿಯವರು ಬಂದಿದ್ದಾರೆ. ಮುಂದೆ ಯಾರು ಬರುತ್ತಾರೋ ಗೊತ್ತಿಲ್ಲ. ನಮಗೆ ಮುಖ್ಯಮಂತ್ರಿ ಯಾರು ಇದ್ದರು ಎನ್ನುವುದು ಮುಖ್ಯವಲ್ಲ. ನಾವು ದಾಖಲೆಗಳನ್ನು ನೋಡಿದ್ದು ಅಧ್ಯಕ್ಷರ ಕೊಠಡಿಯಲ್ಲಿ. ಅದಕ್ಕೆ ಕಾಲ ಯಾವುದು, ಅದಕ್ಕೆಲ್ಲಾ ಜಾತಕ ಎಲ್ಲಾ ನೋಡಿಸಿಕೊಂಡು ಬಂದು ಹೇಳುವುದಕ್ಕೆ ಇಲ್ಲಿ ನಾನು ತಯಾರಾಗಿಲ್ಲ. ಆಗಿನ ಅಧ್ಯಕ್ಷರು ಇವತ್ತು ಉಪಮುಖ್ಯಮಂತ್ರಿಗಳು. ದಯವಿಟ್ಟು ಅದಕ್ಕಾದರೂ ಒಂದು ಪಾವಿತ್ರ್ಯತೆಯನ್ನು ಇಟ್ಟುಕೊಳ್ಳಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ : ತಾವು ಕೂಡ ಹೆಗಡೆಯವರ ರೀತಿಯಲ್ಲಿ ಸುಳ್ಳು ಸುಳ್ಳೇ ಮಾತನಾಡುತ್ತಿದ್ದೀರಲ್ಲಾ; ತಾವೇನೋ ಕರೆಕ್ಟ್ ಆಗಿ ಮಾತನಾಡುತ್ತೀರಿ ಎಂದು ತಿಳಿದುಕೊಂಡಿದ್ದೆವು.

ಶ್ರೀ ಎಂ. ಮಹದೇವ್ : ಯಾರ ಕಾಲದಲ್ಲಿ ಫೈಲನ್ನು ನೋಡಿದರು. ಅದನ್ನು ನಿರ್ದಿಷ್ಟವಾಗಿ ಹೇಳುವುದಕ್ಕೆ ವಿರೋಧ ಪಕ್ಷಗಳು ತಯಾರಿಲ್ಲ. ಮಾನ್ಯ ಹೆಗಡೆಯವರೇ ತಯಾರಿಲ್ಲ. It is a shame on the part of Opposition Party. ನೀವು ಸದನವನ್ನು ತಪ್ಪು ದಾರಿಗೆ ಎಳೆದಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ : ಈ ರೀತಿಯಾದರೆ, ನಾನು ಈ ಸದನದಲ್ಲಿ ಕೆಲಸ ಮಾಡುವುದಕ್ಕೆ ಸಿದ್ದನಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ತಾವು ಸ್ವಲ್ಪ ಯೀಲ್ಡ್ ಆದರೆ ಒಳ್ಳೆಯದು.

SRI D.B. CHANDRE GOWDA : When I am on my legs, the Member should know his limitations. He should not behave like this. ನಿನ್ನೆ ಕೂಡ ಇದೇ ಕೆಲಸವಾಗಿದೆ. ಯಾವಾಗ ಬೇಕಾದರೂ ಎದ್ದು ನಿಂತುಕೊಳ್ಳಬಹುದೇ?ಯಾರು ಬೇಕಾದರೂ ಎದ್ದು ಮಾತನಾಡಬಹುದೇ? What is this going on in the House?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಹದೇವ್ ಅವರೇ, ಇದೇನು ಸಿಎಲ್‌ಪಿ ಮೀಟಿಂಗ್ ಎಂದು ತಿಳಿದುಕೊಂಡಿದ್ದೀರಾ?

(interruption)

ಬೇಕಾದ್ದು ಮಾತನಾಡುತ್ತೀರಿ. He is on his legs. Allow him to speak.

(ಗೊಂದಲ)

ಉಪಾಧ್ಯಕ್ಷರು : ಬನ್ನಿಕೋಡ್ ಅವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಚಂದ್ರೇಗೌಡರು ಮಾತನಾಡುತ್ತಿದ್ದಾರೆ.

(ಗೊಂದಲ)

SRI D.B. CHANDRE GOWDA : I am guided by the Chair.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ತಾವು ಸ್ವಲ್ಪ ಆಸೀನರಾದರೆ, ತಾವು ಸ್ವಲ್ಪ ಒಪ್ಪಿದರೆ, ಹೇಳುತ್ತೇನೆ. ನಾನು ಇಲ್ಲಿ ಸ್ವಲ್ಪ ಗಾಬರಿ ಆಗಿ ಕುಳಿತುಕೊಂಡಿದ್ದೇನೆ. ಈ ಅವಿಶ್ವಾಸ ನಿರ್ಣಯ ಇವತ್ತು ಮಂಡನೆ ಮಾಡಿದ್ದು ನನ್ನ ಮಿನಿಸ್ಟ್ರಿ ಮೇಲೋ, ಅಥವಾ ವೀರೇಂದ್ರ ಪಾಟೀಲ್ ಮಿನಿಸ್ಟ್ರಿ ಮೇಲೋ ಎಂಬುದು ಅರ್ಥವಾಗುತ್ತಾ ಇಲ್ಲ. ಈಗ ಚರ್ಚೆ ಆಗತಕ್ಕದ್ದಕ್ಕೂ ಈ ಸದನದ ಮುಂದೆ ಇರತಕ್ಕ ವಿಚಾರಕ್ಕೂ, ಆಗತಕ್ಕ ಚರ್ಚೆಯ ವಿಷಯಕ್ಕೂ ಬಾದರಾಯಣ ಸಂಬಂಧ ಇರಬಹುದು ಅಷ್ಟೇ; ಅದರ ಸಂಬಂಧ ಕೂಡ ಇಲ್ಲ. ಆದ್ದರಿಂದ ದಯಮಾಡಿ ಈ ಚರ್ಚೆಯನ್ನು ಇತಿಮಿತಿಗೆ ತರುವುದು ಒಳ್ಳೆಯದು. ಏಕೆಂದರೆ ಇದೂ ಕೂಡ ಊಹಾಪೋಹದ ಮೇಲೆಯೇ ಚರ್ಚೆ ನಡೆದಿದೆ. ಯಾರ ಕಾಲದಲ್ಲಿ ಏನು ಎತ್ತ ಯಾವುದೂ ನಮಗೆ ಗೊತ್ತಾಗುವುದಿಲ್ಲ. ಆದ್ದರಿಂದ ಸರಿಯಾದಂತಹ ಆಧಾರ ಯಾರ ಮುಂದೆ ಕೂಡ ಇಲ್ಲ. When certain allegations are made, it should be based upon certain documents. Of course, facts. ಏಕೆಂದು ಹೇಳಿದರೆ ಬಂಗಾರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ಆಗಿತ್ತು ಎಂದು ಕೆಲವರು, ಆಮೇಲೆ ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿ ಆಗಿದ್ದಾಗ ಆಗಿತ್ತು ಎಂದು ಮತ್ತೆ ಕೆಲವರು ಹೇಳುತ್ತಿದ್ದಾರೆ. ದಯಮಾಡಿ ಈ ಸಂಶಯ ಇರುವುದರಿಂದ ಆಧಾರ ಇಲ್ಲದೆ ಡಾಕ್ಯುಮೆಂಟ್ಸ್ ಇಲ್ಲದೆ ಇಂಥಹ ಘನವಾದ ವಿಚಾರವನ್ನು ಪ್ರಸ್ತಾಪ ಮಾಡಬಾರದು. ಮಾನ್ಯ ವಿರೋಧ ಪಕ್ಷದ ನಾಯಕರು he committed a fraud ಎಂದು ಹೇಳಿದರು ಇಂತಹ ಆಪಾದನೆಗಳನ್ನು ಮಾಡುವಾಗ ಬಹುಶಃ ನೀವು ಸರಿಯಾದಂಥ ದಾಖಲೆಗಳು ನಿಮ್ಮ ಎದುರಿಗೆ ಇಲ್ಲದೆ ನೀವು ಈ ಆರೋಪಗಳನ್ನು ಮಾಡುವುದರಿಂದ ಯಾರಿಗೂ ಪ್ರಯೋಜನ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ : ಒಂದು ವಿಷಯ. ಇಲ್ಲಿ ಊಹಾಪೋಹಕ್ಕೆ ಅವಕಾಶ ಇಲ್ಲ. ಅಲ್ಲಿ ಅವರು ಗಲಾಟೆ ಮಾಡುತ್ತಿದ್ದಾರೆ ಎಂದು ಹೇಳಿ ಸ್ವಲ್ಪ ಗೊಂದಲ ಆಗಿದೆ ಅಷ್ಟೇ. ಈ ಫೈಲ್ ನೋಡಿದ್ದು ಮಾನ್ಯ ಬಂಗಾರಪ್ಪನವರು ಮಾನ್ಯ ಮುಖ್ಯಮಂತ್ರಿಗಳು ಆಗಿದ್ದಾಗ ದಾಖಲೆಗಳು ಬದಲಾವಣೆ ಆಗಿದ್ದು ಅಥವಾ ಮ್ಯಾನಿಪ್ಯುಲೇಟ್ ಮಾಡಿದ್ದು ಮಾನ್ಯ ವೀರೇಂದ್ರ ಪಾಟೀಲರು ಮಾನ್ಯ ಮುಖ್ಯಮಂತ್ರಿಗಳು ಆಗಿದ್ದಾಗ.

SRI M. VEERAPPA MOILY : I am very sorry. This is not sustainable.

ಶ್ರೀ ರಾಮಕೃಷ್ಣ ಹೆಗಡೆ : ಇದರ ಬಗ್ಗೆ ರೆಕಾರ್ಡ್ ಇದೆ.

SRI M. VEERAPPA MOILY : How can you say?

(Interruptions)

ಶ್ರೀ ಬಸವರಾಜ ರಾಯರೆಡ್ಡಿ : ರೆಕಾರ್ಡ್ ಇದೆ, ಫೈಲ್ ಇದೆ. ಅದನ್ನು ನೋಡಿದರೆ ಗೊತ್ತಾಗುವುದಿಲ್ಲವೇ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ : ಇದು ಊಹಾಪೋಹ ಅಲ್ಲ. ಇದೇ ಮನೆಯಲ್ಲಿ ಈ ಕಡತದಲ್ಲಿ ಆ ಫೈಲ್‌ನಲ್ಲಿ ಎರಡು ಪೇಜ್‌ನ್ನು ಹೊಸದಾಗಿ ಇನ್ಸರ್ಟ್ ಮಾಡಿದ್ದಾರೆ ಎಂದು ಮೊದಲಿನಿಂದಲೂ ಇತ್ತು. ಆವಾಗ ಗಲಾಟೆ ಆದ ಮೇಲೆ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳು ಆಗಿದ್ದಾಗ, ಈ ಸದನದಲ್ಲಿ ಲೀಡರ್ ಇದ್ದಾಗ ಅವೆಲ್ಲಾ ಒಪ್ಪಿಕೊಳ್ಳಬೇಕಾಯಿತು. ನಾನು ಹೇಳಿದೆ, ಅದನ್ನು ಎನ್ಕ್ವೈರಿ ಮಾಡಿಸಿ ಎಂದು. ಏನ್ಕ್ವೈರಿ ಏಕೆ ಮಾಡಿಸುವುದು, ಎಲ್ಲಾ ವಿರೋಧ ಪಕ್ಷದ ನಾಯಕರಿಗೆ ಆ ಫೈಲನ್ನು ತೋರಿಸುತ್ತೇನೆ ಎಂದು ಹೇಳಿದರು. ಮಾನ್ಯ ಕೃಷ್ಣ ಅವರು ಸ್ಪೀಕರ್ ಆಗಿದ್ದಾಗ ಅವರ ಛೇಂಬರ್‌ನಲ್ಲಿ ಅದನ್ನು ಎಲ್ಲರೂ ನೋಡಿದರು. ಇಷ್ಟೇ ನಡೆದಿರುವುದು. ಇದಕ್ಕೆ ಇನ್ನು ಯಾವ ಆಧಾರ ಬೇಕು ಹೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿರಿಯರಾಗಿ ನೀವು ಹೌಸನ್ನು ಮಿಸ್ ಲೀಡ್ ಮಾಡಿದರೆ ಹೇಗೆ? ನಾವು ದಾಖಲೆಗಳನ್ನು ನೋಡಿದ್ದೇವೆ. ಇಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ಸ್ಪೀಕರ್ ಛೇಂಬರ್‌ನಲ್ಲಿ ನೋಡಿದೆವು. ಮಾನ್ಯ ಬಂಗಾರಪ್ಪನವರು ಮಾನ್ಯ ಮುಖ್ಯಮಂತ್ರಿ ಆಗಿದ್ದಾಗ ನೋಡಿದ್ದೇವೆ. ಮಾನ್ಯ ಚಂದ್ರೇಗೌಡರೂ ಇದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಚಂದ್ರೇಗೌಡರೇ, ತಾವು ಹಿರಿಯರು ಇದ್ದೀರಿ. ದಯಮಾಡಿ ಕುಳಿತುಕೊಳ್ಳಿ. ನಿಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಈಗ ಇದುವರೆಗೆ ಚರ್ಚೆ ನಡೆಯುವ ವಿಚಾರ ನೋಡಿದರೆ ಇದು ಮುಗಿದ ಅಧ್ಯಾಯದ ಬಗ್ಗೆ ತಾವು ಮಾತನಾಡುತ್ತಾ ಇರುವುದು. ಫೋನ್ ಕದ್ದಾಲಿಕೆ ಮುಗಿದ ಅಧ್ಯಾಯ. ಬಂಗಾರಪ್ಪನವರ ಕಾಲದಲ್ಲಿ ಮಾಡಿದ್ದೋ ಅಥವಾ ವೀರೇಂದ್ರ ಪಾಟೀಲರ ಕಾಲದಲ್ಲಿ ಮಾಡಿದ್ದೋ ಎಂಬ ಬಗ್ಗೆ ಪ್ರಸ್ತಾವನೆ ಮಾಡುತ್ತಾ ಇದ್ದೀರಿ. ಹಿರಿಯ ನಾಯಕರು ಮಾತನಾಡುತ್ತಾರೆ. ದಯಮಾಡಿ ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಅವರು ಮಾತನಾಡುತ್ತಾರೆ, ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಏನು ಮಾತನಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆಂದರೆ. to put the records straight.

ಶ್ರೀ ಎ.ಕೆ. ಅನಂತಕೃಷ್ಣ : ಇಲ್ಲಿ ಯಾರಾದರೂ ಎದ್ದರೆ ಕೋಪ ಬರುತ್ತದೆ. ಇಲ್ಲಿ ಅಧ್ಯಕ್ಷರು ತೀರ್ಮಾನ ಮಾಡಿದ ಮೇಲೆ ಮತ್ತೆ ನೀವು ನಿಂತು ಮಾತನಾಡಿದರೆ ತಪ್ಪಿಲ್ಲ. ನೀವು ಏನು ಮಾಡಿದರೂ ಪರವಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಅನಂತಕೃಷ್ಣರವರೇ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಸತ್ಯಗಳನ್ನು ಹೇಳತಕ್ಕದ್ದು ಬೇಕಾಗಿಲ್ಲ. ಈಗ ಇವರಿಗೆ ವೀರೇಂದ್ರ ಪಾಟೀಲರ ಬಗ್ಗೆ ಯಾವತ್ತೂ ಇಲ್ಲದೇ ಇರತಕ್ಕ ಪ್ರೀತಿ. ಆಗ ಅತ್ಯಂತ ಅವಶ್ಯವಾಗಿ ಬೇಕಾಗಿರತಕ್ಕ ಪ್ರೀತಿಯನ್ನು ಈಗ ತೋರಿಸುತ್ತಾ ಇದ್ದೀರಿ.

ಶ್ರೀ ವೀರೇಂದ್ರ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಶ್ರೀಮಾನ್ ಚಂದ್ರೇಗೌಡರು ಹೇಳಿದ್ದು ನನ್ನ ಕಾಲದ್ದಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರೂ ಸಹ ಅದೇ ವಿಚಾರ ಹೇಳಿದರು. ನಾನು ಅಧಿಕಾರ ತ್ಯಜಿಸಿದ ನಂತರ ಏನಾಗಿದೆಯೆಂಬುದು ನನಗೆ ಗೊತ್ತಿಲ್ಲ. ಅದರ ಬಗ್ಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ, ಹೇಳಿದರೆ ತಪ್ಪಾಗುತ್ತದೆ. ಗೊತ್ತಿರುವ ವಿಚಾರ ಹೇಳಬಹುದೇ ಹೊರತು, ಗೊತ್ತಿರದ ವಿಚಾರದ ಹೇಳಿದರೆ ತಪ್ಪಾಗುತ್ತದೆಂದು ನನಗನ್ನಿಸುತ್ತದೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಒಂದು ವಿಚಾರ ಹೇಳಿದರು. ಏನೆಂದರೆ, ರಾಜೀವ್ ಗಾಂಧಿಯವರನ್ನು ಪ್ಲೀಸ್ ಮಾಡುವುದಕ್ಕೆ ನಾನು ಅಧಿಕಾರದಲ್ಲಿದ್ದೆನೆಂದು ಹೇಳಿದರು. ಮತ್ತು ಅದಕ್ಕೆ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇಶಪಾಂಡೆಯವರು ಧ್ವನಿಗೂಡಿಸಿದರು. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ವಾದ-ವಿವಾದ ಶುರುವಾದರೆ ಅದಕ್ಕೆ ಅಂತ್ಯವಿಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ. ಈ ಸಂದರ್ಭದಲ್ಲಿ ಈ ಸದನದ ಒಬ್ಬ ಸದಸ್ಯನಾಗಿ ನಾನು ವಿನಂತಿಸಿಕೊಳ್ಳುವುದಿಷ್ಟೆ; ನಾನೇನಾದರೂ ಕದ್ದಿದ್ದೇನೆಯೇ ಎನ್ನುವ ವಿಚಾರವನ್ನು ಶ್ರೀಮಾನ್ ವೀರಪ್ಪಮೊಯಿಲಿಯವರು ನಿರ್ಣಯಿಸಬೇಕು. ಈ ಪ್ರಕರಣವನ್ನು ಬೇಕಾದರೆ ಅವರು ನ್ಯಾಯಾಂಗ ತನಿಖೆಗೊಳಪಡಿಸಲಿ; ನಾನು ವಿಚಾರಣೆ ಎದುರಿಸಲು ಸಿದ್ಧನಿದ್ದೇನೆ. ನ್ಯಾಯಾಂಗ ತನಿಖೆಯಷ್ಟೇ ಅಲ್ಲ ಬೇರಾವುದೇ ತನಿಖೆಗೊಳಪಡಿಸಿದರೂ ನಾನು ತಯಾರಿದ್ದೇನೆ. ಮತ್ತು ಇದಕ್ಕೆ ವಿರೋಧ ಪಕ್ಷದ ನಾಯಕರೂ ಸಹ ಒಪ್ಪುವುದಕ್ಕೆ ತಯಾರಾಗಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನ್ಯಾಯಾಂಗ ತನಿಖೆಯಾಗಲಿ, ನಾನು ಸಹ ಒಪ್ಪಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ : ನಾನು ಹೇಳಿದ್ದು: ನ್ಯಾಯಾಂಗ ತನಿಗೆಗಾಗಿ ಒತ್ತಾಯಿಸಿ ಎಂದು. ಇದಕ್ಕೆ ನಾನು ಅಡ್ಡಿ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೇ, ಬಹುಶಃ ಚರ್ಚೆ ಹಳಿ ತಪ್ಪಿ ಮುಂದೆ ಹೋಗುತ್ತಿದೆ. ತಮಗೆಲ್ಲಾ ಗೊತ್ತಿರುವಂತೆ ಸನ್ಮಾನ್ಯ ವೀರೇಂದ್ರ ಪಾಟೀಲರು ಕರ್ನಾಟಕ ರಾಜ್ಯದಲ್ಲಿ ಸತ್ಯ, ನಿಷ್ಠೆ, ಪ್ರಾಮಾಣಿಕತೆಯಿಂದ ಕೆಲಸ ಮಾಡಿದ ಅತ್ಯುತ್ತಮ ನಾಯಕರಲ್ಲೊಬ್ಬರು. ಇವೊತ್ತು ನಮ್ಮ ಸರ್ಕಾರಕ್ಕೆ ಅವರ ಮೇಲೆ ಯಾವುದೇ ರೀತಿಯ ಸಂಶಯ ಉಳಿದಿಲ್ಲ. ಈ ಕುರಿತು ಸರ್ಕಾರ ನ್ಯಾಯಾಂಗ ತನಿಖೆ ನಡೆಸಬೇಕಾದರೆ the Government should satisfy itself with the *prima facie* case. I know him. I have functioned with Mr. Veerendra Patil when he was the Chief Minister. I can tell you that I found him a most truthful Chief

Minister. I have no doubt about it. I can certify about it. I know how he functioned.

ಬಹುಶಃ ತಾವೂ ಕೂಡ ನಂಬುತ್ತೀರಿ. ಅದೇ ಅಭಿಪ್ರಾಯ ವೀರೇಂದ್ರ ಪಾಟೀಲರ ಬಗ್ಗೆ ತಮಗೂ ಕೂಡ ಇದೆಯೆಂದು ಅನೇಕ ಬಾರಿ ಹೇಳಿದ್ದೀರಿ, ಇವೊತ್ತು ಸಹ ಹೇಳಿದ್ದೀರಿ. ಆದರೆ, ನಿನ್ನೆ ಮತ್ತು ಇವೊತ್ತು ನಿಮ್ಮ ಅಭಿಪ್ರಾಯ ಸ್ವಲ್ಪ ಬದಲಾವಣೆಯಾದಂತಿದೆ. ಆದುದರಿಂದ, ಇಲ್ಲಿ ಒಂದು ರೀತಿಯ ಸದ್ಭಾವನೆ, ಸದಭಿಪ್ರಾಯ ನಮ್ಮದು, ಅವರದೂ ಉಳಿಯಲಿ. ಈ ಸದನದ, ಕರ್ನಾಟಕ ರಾಜ್ಯದ ಈ ರೀತಿಯ ಸದ್ಭಾವನೆ ಸನ್ಮಾನ್ಯ ವೀರೇಂದ್ರ ಪಾಟೀಲರ ಬಗ್ಗೆ ನಮಗೆಲ್ಲರಿಗೂ ಇದೆ. ಇದರ ಬಗ್ಗೆ ಸರ್ಕಾರ ನ್ಯಾಯಾಂಗ ತನಿಖೆ ಮಾಡುವಂಥ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಯಾರೋ ಒಬ್ಬರು ಅವರ ಮೇಲೆ ಆಪಾದನೆ ಮಾಡಿದರೆಂದರೆ ಅವರ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವುದಕ್ಕಾಗುವುದಿಲ್ಲ. Straight away I can tell you, absolutely there is no *prima facie* case to make any enquiry whatsoever, even if it is demanded by Mr. Veerendra Patil.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮ್ಮ ಮಂತ್ರಿಗಳ ಮೇಲೆಯೇ ಸಿಬಿಐ, ಸಿಓಡಿ ತನಿಖೆ ಮಾಡಿಸುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ : ಮಾನ್ಯ ಉಪಾಧ್ಯಕ್ಷರೇ, ಇದರಲ್ಲಿ ಇಬ್ಬರು ಸದಸ್ಯರ ಗೌರವದ ಪ್ರಶ್ನೆ ಅಡಗಿದೆ. ನನ್ನ ಸ್ನೇಹಿತರಾದ ಮಾನ್ಯ ವೀರೇಂದ್ರ ಪಾಟೀಲರ ಗೌರವ ಮತ್ತು ನನ್ನ ಸ್ವಂತ ಗೌರವ. ಈ ವಿಷಯವಾಗಿ ಸದನದಲ್ಲಿ ಯಾವ ದಿವಸ ಚರ್ಚೆಗೆ ಬಂದಿತೋ, ಆಗಲೇ ಈ ಕುರಿತು ನ್ಯಾಯಾಂಗ ತನಿಖೆ ಮಾಡಿಸಿ ಎಂದು ಹೇಳಿದೆ. ಆಗ ಮಾನ್ಯ ವೀರೇಂದ್ರ ಪಾಟೀಲರು ಅದಕ್ಕೆ ಒಪ್ಪಲಿಲ್ಲ. ಇವೊತ್ತು ಕೇಳುತ್ತಿದ್ದೇನೆ; ನೀವು ದಯವಿಟ್ಟು ಒಪ್ಪಿ ಎಂದು. ಇದರಲ್ಲಿ ನನ್ನ ಗೌರವದ ಪ್ರಶ್ನೆಯಿರುವುದರಿಂದ ನ್ಯಾಯಾಂಗ ತನಿಖೆ ಮಾಡಿಸಿ. ನಾನು ಆಪಾದನೆ ಮಾಡುತ್ತೇನೆ: ಎರಡು ಶೀಟ್‌ಗಳನ್ನು ನೀವು ಆ ಸಾಲಿನಲ್ಲಿ ಸೇರಿಸಿದ್ದೀರಿ. ಅದಕ್ಕೆ ಸರ್ಕಮ್‌ಸ್ಟೆನ್ಷಿಯಲ್ ಎವಿಡೆನ್ಸ್ (ಸ್ಥಳದ ಪುರಾವೆ) ಇದೆ. ಅದು ಎಲ್ಲಿ, ಯಾವಾಗ, ಯಾವ ದಿವಸ ಚರ್ಚೆಯಾಯಿತೋ ಅದರ ಹಿಂದಿನ ದಿವಸ ನೀವು ಆ ದಾಖಲೆಗಳನ್ನು ತೋರಿಸಿದ್ದೀರಿ.

ಆಗ ನಾನು ವಿಚಾರಣೆಗೆ ಕೇಳಿದಾಗ ತಾವು ಒಪ್ಪಿಕೊಳ್ಳಲಿಲ್ಲ. ಆದರೆ ಇವತ್ತು ವಿಚಾರಣೆಯಾಗಬೇಕೆಂದು ಕೇಳುತ್ತಿದ್ದೀರಿ, ಅದನ್ನು ಮಾಡಿ. ಈ ರೀತಿ ಹೇಳಿದರೆ ಆ ಕಡೆಯವರೆಲ್ಲರೂ ಬೊಬ್ಬೆ ಹೊಡೆಯುತ್ತಿದ್ದಾರೆ. ಅವರಿಗೆ ಇವತ್ತು ವೀರೇಂದ್ರ ಪಾಟೀಲರು ಬೇಕಾಗಿತ್ತು. ಆದರೆ ನಿನ್ನೆ ಅವರು ಬೇಡವಾಗಿತ್ತು. ನಾಳೆ ಮತ್ತೆ ಅವರಿಗೆ ವೀರೇಂದ್ರಪಾಟೀಲರು ಬೇಡವಾಗಬಹುದು. ನಿಮ್ಮ ಯೋಗ್ಯತೆ ನಿಮ್ಮ ಲಾಯಲ್ಟಿ ಏನೆಂದು ನಮಗೆ ಗೊತ್ತಿಲ್ಲವೇ?

(ಗೊಂದಲ)

ಶ್ರೀ ಎಂ. ಮಹದೇವ್ : ನನ್ನದು ಕ್ರಿಯಾಲೋಪ ಇದೆ. ಏನೆಂದರೆ, ಮಾನ್ಯ ಗೌರವಾನ್ವಿತ ಹೆಗಡೆಯವರು ಎಲ್ಲಾ ಸದಸ್ಯರುಗಳನ್ನು ಗೌರವದಿಂದ ಕಾಣುತ್ತಾರೆಂದು ನಮಗೆ ನಂಬಿಕೆ ಇತ್ತು. ಆದರೆ ಇವತ್ತು ಈ ಸದನದಲ್ಲಿ ಅವರು ನಮ್ಮನ್ನು ಯಾರು? ನಮ್ಮ ಲಾಯಲ್ಟಿ ಏನು ಎಂದು ಹೇಳಿದ್ದಾರೆ, ನಾವು ಅನ್ಯಾಯವನ್ನು, ಸುಳ್ಳನ್ನು ಖಂಡಿಸುತ್ತೇವೆ; ಅವರು ಸದಸ್ಯರ ಹಕ್ಕಿಗೆ ಧಕ್ಕೆಯನ್ನು ತಂದಿದ್ದಾರೆ. ನಮ್ಮ ಯೋಗ್ಯತೆ ಏನು ಎಂದು ಕೇಳಿದ್ದಾರೆ. ಹಾಗಾದರೆ ನಮ್ಮ ಯೋಗ್ಯತೆ ಏನಂತೆ?

ಮುಖ್ಯಮಂತ್ರಿಗಳಾಗಿದ್ದ, ಜವಾಬ್ದಾರಿ ಸ್ಥಾನದಲ್ಲಿದ್ದ ಹೆಗಡೆಯವರು ಈ ರೀತಿ ಹಗುರವಾಗಿ ಮಾತನಾಡುತ್ತಾರೆಂದು ನಾವು ನಂಬಿರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ : ಮಾನ್ಯ ಮಹದೇವ್‌ರವರಿಗೆ ಏನು ಹೇಳುತ್ತೇನೆಂದರೆ, ಈಗ ಬಂಗಾರ ಇರುತ್ತದೆ ಅದರ ಕಿಮ್ಮತ್ತು ಗೊತ್ತಿಲ್ಲವೇ ಎಂದು ಕೇಳಿದರೆ ಅದು ಅಪಮಾನವಾಗುತ್ತದೆಯೇ? ನೀವೆಲ್ಲಾ ಗೌರವಾನ್ವಿತ ಸದಸ್ಯರಿದ್ದೀರಿ. ನಿಮ್ಮ ಯೋಗ್ಯತೆ ಗೊತ್ತಿಲ್ಲವೇ ಎಂದು ಕೇಳಿದರೆ ಅದು ಅಪಮಾನವಾಗುತ್ತದೆಯೇ?

(ಗೊಂದಲ)

ಶ್ರೀ ಎಂ. ಮಹದೇವ್ : ಮಾನ್ಯ ವಾಟಾಳ್ ನಾರಾಜ್‌ರವರು ಬೆಳಿಗ್ಗೆ ಮುಖ್ಯಮಂತ್ರಿಗಳು ಕ್ರಮತೆಗೆದುಕೊಳ್ಳಬೇಕೆಂದು ಹೇಳಿದರಲ್ಲಾ, ಹಾಗೆಯೇ ಇವರು ಯಾವ್ಯಾವ ರೀತಿಯಲ್ಲಿ ಮಾತನಾಡಬಹುದೋ ಆ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್ : ಮಾನ್ಯ ಚಂದ್ರೇಗೌಡರೇ ನಮ್ಮನ್ನು ಕ್ಷಮೆ ಕೇಳಬೇಕೆಂದು ಹೇಳಿದ್ದರಲ್ಲಾ, ಈಗ ಮಾತನಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ : ಮಾನ್ಯ ವೀರೇಂದ್ರ ಪಾಟೀಲರ ಆರೋಗ್ಯವು ಚೆನ್ನಾಗಿಲ್ಲದ ಕಾರಣ ನಾನು ಅವರ ಮನಸ್ಸಿನ ಮೇಲೆ ಯಾವುದೇ ರೀತಿಯಾದಂಥ ಆಘಾತವಾಗತಕ್ಕ ಮಾತನ್ನು ಹೇಳಲು ಹೋಗುವುದಿಲ್ಲ. ಅವರದು ಮತ್ತು ನನ್ನದು ವೈಯಕ್ತಿಕವಾದ ಸಂಬಂಧ. ಇದು 1956ನೇ ಇಸವಿಯಿಂದಲೂ ಸಹ ಇದೆ. ಆಗ ಇವರುಗಳು ಎಲ್ಲಿದ್ದರೂ ನನಗೆ ಗೊತ್ತಿಲ್ಲ. ಅಲ್ಲಿಂದ ಇಲ್ಲಿಯವರೆಗೆ ನಮ್ಮಿಬ್ಬರ ಮಧ್ಯ ರಾಜಕೀಯ ಮತಭೇದ ಬಂದಿದ್ದರೂ ಸಹ ಅದು ನಮ್ಮ ವೈಯಕ್ತಿಕವಾದ ಸಂಬಂಧವನ್ನು ಎಂದೂ ಕೆಡಿಸಿರಲಿಲ್ಲ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅವರು ಮುಖ್ಯಮಂತ್ರಿಗಳಾಗಿದ್ದಾಗ, ನಮ್ಮ ಸರ್ಕಾರ ಹೋಗಬೇಕೆಂದು ಹೇಳಿದಾಗ, ಅವರಿಗೆ ಆಗ ಕಾಂಗ್ರೆಸ್ ಸೇರಬೇಕೆಂಬ ಇಚ್ಛೆ ಇತ್ತು, ಆಗ ನಾನು ಅದನ್ನು ವಿರೋಧ ಮಾಡಿದೆ. ನಾವು ಜೈಲಿನಲ್ಲಿದ್ದಾಗ ಅವರು ಕಾಂಗ್ರೆಸ್ ಸೇರಬೇಕೆನ್ನುವ ಪ್ರತಿಕ್ರಿಯೆ ನಡೆಯುತ್ತಿತ್ತು. ಆದರೆ ನಾನು ಸೇರಲಿಲ್ಲ.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ : ಈ ರೀತಿ ಅಸಂಬಂದ್ಧವಾದ ವಿಚಾರಗಳನ್ನು ಏಕೆ ಪ್ರಸ್ತಾಪ ಮಾಡುತ್ತಾರೆ? ಅವರು ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಲಿ.

ಒಬ್ಬರು ಮಾನ್ಯ ಸದಸ್ಯರು : ರಾಮಕೃಷ್ಣಹೆಗಡೆಯವರು ಕಾಂಗ್ರೆಸ್ ಪಕ್ಷಕ್ಕೆ ಬರುತ್ತಾರಾ?

ಶ್ರೀ ರಾಮಕೃಷ್ಣಹೆಗಡೆ : ನಾನೇನಾದರೂ ಕಾಂಗ್ರೆಸ್ ಪಕ್ಷಕ್ಕೆ ಬಂದರೆ ನಿಮ್ಮಲ್ಲಿ ಅನೇಕ ಜನರು ಹೊರಗೆ ಹೋಗಬೇಕಾಗುತ್ತದೆ.

(ಗೊಂದಲ)

ಚಿಕ್ಕಮಗಳೂರಿನ ಚುನಾವಣೆಯಾದ ಕೆಲವೇ ತಿಂಗಳಿನಲ್ಲಿ ಅವರು, ಕಾಂಗ್ರೆಸ್ ಪಕ್ಷವನ್ನು ಸೇರಿದ ಮೇಲೂ ಕೂಡ ಅವರಿಗೂ ಮತ್ತೆ ನನಗೂ ಯಾವುದೇ ಮತಭೇದ ಬರಲಿಲ್ಲ; ನಮ್ಮಿಬ್ಬರ ವೈಯಕ್ತಿಕವಾದಂಥ ಸಂಬಂಧ ಹಾಗೆಯೇ ಇತ್ತು.

ಆದರೆ ಅವರು ಯಾವಾಗ ಈ ರೀತಿಯಾದ ಒಂದು ದ್ರೋಹವನ್ನು ಮಾಡಿದ್ದಾರೆಂದು ನಮಗೆ ಗೊತ್ತಾಯಿತೋ ಅಂದಿನಿಂದ ನಮ್ಮ ವೈಯಕ್ತಿಕವಾದಂಥ ಸಂಬಂಧಕ್ಕೆ ಧಕ್ಕೆ ಬಂತು.

ಶ್ರೀ ಎ.ಕೆ. ಅನಂತಕೃಷ್ಣ: ಮಾನ್ಯ ಹೆಗಡೆಯವರು ಹೇಳಿದ್ದನ್ನೇ ಹೇಳುತ್ತಾ ಬರುತ್ತಿದ್ದಾರೆ. ಮಾನ್ಯ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರ ಪಕ್ಷದ ಸದಸ್ಯರನ್ನೆಲ್ಲಾ ಬ್ರಿಗೇಡ್ ರಸ್ತೆ ಮಹಾತ್ಮಾಗಾಂಧಿ ರಸ್ತೆ ಕಲ್ಚರ್ ಎಂದು ಹೇಳಿದ್ದರು. ಅವರು ಹೇಳುವುದನ್ನು ಕೇಳಿಕೊಂಡು ನಾವು ಕುಳಿತುಕೊಳ್ಳೋಣವೇ?

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ನಾನು ಹೇಳುವುದನ್ನು ಸ್ವಲ್ಪ ಕೇಳಿ.

3.10 ಪಿ. ಎಂ.

ಶ್ರೀ ಎ.ಕೆ. ಅನಂತಕೃಷ್ಣ : ಅವರು ಅನ್ನುತ್ತಿದ್ದರೆ ಕೇಳಿಕೊಂಡು ನಾವು ಕುಳಿತುಕೊಳ್ಳೋಣವೇ? ಇದಕ್ಕೆ ನಾವೇಕೆ ಬರಬೇಕು?

ಪ್ರೊ ಎಂ. ಡಿ. ನಂಜುಂಡಸ್ವಾಮಿ : ತಾವು ಅಪ್ಪಣೆ ಕೊಟ್ಟರೆ ನಾನು ಮನೆಗೆ ಹೋಗೋಣವೆಂದು ತೀರ್ಮಾನ ಮಾಡಿದ್ದೇನೆ. ಏಕೆಂದರೆ, ನನ್ನ ಸಮಯ ಕಾಲಹರಣವಾಗುತ್ತಿದೆ.

ಡಾ||ಎ.ಬಿ. ಮಲಕ ರೆಡ್ಡಿ : ನನಗೆ ಸ್ಪಷ್ಟವಾಗಿ ನೆನಪಿದೆ. ಒಂದು ಮಾತನ್ನು ಹೇಳಬೇಕಿದೆ.

ಅಧ್ಯಕ್ಷರು : ನೀವು ಮಾತನಾಡುವುದಿದ್ದರೆ ನಾನೇ ಗಪ್ಪನೆ ಕುಳಿತುಕೊಳ್ಳುತ್ತೇನೆ. ನಾನು ಯಾರಿಗೂ ಹೇಳುವುದಿಲ್ಲ.

ಸರಕಾರದ ವಿರುದ್ಧ ನೀವು ಅವಿಶ್ವಾಸ ನಿರ್ಣಯ ತಂದಿದ್ದೀರಿ. ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಆರೋಪಗಳನ್ನು ಅಥವಾ ಸರಕಾರದ ತಪ್ಪುಗಳನ್ನು ಎತ್ತಿ ಹೇಳಬೇಕು. ನಾವು ವೈಯಕ್ತಿಕವಾಗಿ ಸ್ವಲ್ಪ ದಾರಿ ಬಿಟ್ಟು ಮಾತನಾಡುವುದರಿಂದ ಈ ಸಭೆಯ ಕಲಾಪಗಳಿಗೆ ತೊಂದರೆಯಾಗುತ್ತದೆ. ಅವರ ಮೇಲೆ ಇವರು ಹಾಗೆ ಮಾಡಿದರೆ ಹೀಗೆ ಮಾಡಿದರೆಂದು ಹೇಳುವುದಕ್ಕಿಂತಲೂ ಸರಕಾರದ ಮೇಲೆ ತಮ್ಮ ಆರೋಪವೇನು ಇದೆ ಅದನ್ನು ಸದನದ ಮುಂದೆ ಹೇಳಬೇಕು. ಸರಕಾರವೇನೇನು ತಪ್ಪು ಮಾಡಿದೆ ಅದರ ಬಗ್ಗೆ ಮಾತನಾಡುವುದರಲ್ಲಿ ಸಂದೇಹವೇನೂ ಇಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇವರೆಲ್ಲಾ ಊಟ ಮಾಡಿಕೊಂಡು ಬಂದಿದ್ದಾರೆ. ಉಪಾಧ್ಯಕ್ಷರಿದ್ದಾಗ ಹೇಳಿದರು. ಇನ್ನು 15 ನಿಮಿಷದಲ್ಲಿ ಮುಗಿಸೋಣವೆಂದು; ಇಲ್ಲಾ ಊಟಕ್ಕಾದರೂ ಹೋಗಬೇಕು; ಇಲ್ಲ ಚರ್ಚೆಯಾದರೂ ಮುಂದುವರಿಸಬೇಕು. ನಾವು ಸಂಜೆತನಕ ಹಾಗೆಯೇ ಕುಳಿತಿರಬೇಕೇ? ಅಧ್ಯಕ್ಷರು ಊಟ ಮಾಡಿಕೊಂಡು ಬಂದಿದ್ದಾರೆ. ವೀರೇಂದ್ರ ಪಾಟೀಲರು ಊಟ ಮಾಡಿಕೊಂಡು ಬಂದಿದ್ದಾರೆ. ಕೂಗಾಟ ಮಾಡುವವರೆಲ್ಲರ ಗಂಟಲು ನೋಡಿದರೆ ಅವರೂ ಊಟಮಾಡಿಕೊಂಡು ಬಂದಿದ್ದಾರೆ. ನಾವು ಬೆಳಗಿನಿಂದ ಇಲ್ಲೇ ಕುಳಿತಿದ್ದೇವೆ.

ಡಾ|| ಎ.ಬಿ. ಮಲಕರೆಡ್ಡಿ : ಒಂದು ತಪ್ಪು ವಿಚಾರ ಇಲ್ಲಿ ಪ್ರಸ್ತಾಪವಾಗಿದೆ. ಅದನ್ನು ಸರಿಪಡಿಸಬೇಕಾಗಿದೆ. ಎಲ್ಲರೂ ನೆನಪಿನಿಂದಲೇ ಮಾತನಾಡುತ್ತಿದ್ದಾರೆ. ನನಗೆ ನೆನಪು ಇದ್ದಂತಹ ಒಂದು ವಿಚಾರವನ್ನು ಹೇಳುತ್ತೇನೆ. ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ. ಈ ಸದನದಲ್ಲಿ ಹೆಗಡೆಯವರು ಏನು ಹೇಳಿದರೆಂದು ತಿಳಿಯುತ್ತದೆ. ಎಲ್ಲಾ ಚರ್ಚೆ ಆದ ಮೇಲೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದು ನಿಜ.

ವೀರೇಂದ್ರ ಪಾಟೀಲರು ಜ್ಯುಡಿಷಿಯಲ್ ಎನ್‌ಕ್ವೈರಿಗೆ ಒಪ್ಪಿಲಿಲ್ಲವೆಂದು ಅವರು ಹೇಳಿದರು. ಆದರೆ ಅದು ಹಾಗಲ್ಲ. ಅವರು ಏನು ಹೇಳಿದ್ದರೆಂದರೆ, ಮಹಾತ್ಮಾಜಿಗೆ ನೀವು ಎನ್ಕೈರಿ ಕೇಳುತ್ತೀರಿ; ಇದೆಲ್ಲಾ ಮುಗಿದಿದೆ. ರಾಜೀನಾಮೆ ಕೊಟ್ಟಿದ್ದೀರಿ ಎಲ್ಲಾ ಮುಗಿದಿದೆ...

(ಗೊಂದಲ)

ಡಾ. ಎ.ಬಿ. ಮಲಕರೆಡ್ಡಿ : ಅವರೇನು ಹೇಳಿದ್ದರೆಂದರೆ ನೀವು ಜ್ಯುಡಿಷಿಯಲ್ ಎನ್ಕೈರಿಗೆ ರೆಡಿ ಇದ್ದೀರಲ್ಲಾ ನಾನು ರೆಡಿ ಇದ್ದೇನೆ. ನೀವು ಮಾಡಿ ಎಂದರೆ ಮಾಡುತ್ತೇನೆಂದು ಹೇಳಿದ ಕೂಡಲೇ ಚಂದ್ರೇಗೌಡರು ವಿರೋಧಪಕ್ಷದ ನಾಯಕರಾಗಿ ಏನು ಹೇಳಿದರೆಂದರೆ ಇದು ಇಷ್ಟಕ್ಕೇ ಸೀಮಿತವಾಗಬಾರದು;ಜ್ಯುಡಿಷಿಯಲ್ ವಿಚಾರಣೆ ಮಾಡುವುದಿದ್ದರೆ 10 ವರ್ಷದ ಹಿಂದಿನವರೆಗೂ ಮಾಡಬೇಕು. ಅಂದರೆ ಯಾವ್ಯಾವ ಮುಖ್ಯ ಮಂತ್ರಿಗಳ ಕಾಲದಲ್ಲಿ ಎಷ್ಟೆಷ್ಟು ಕದ್ದಾಲಿಕೆಯಾಯಿತು ಅದನ್ನೂ ವಿಚಾರಣೆ ಮಾಡಲಿಕ್ಕೆ ತಾವು ಒಪ್ಪಿದರೆ ನಾವು ವಿಚಾರಣೆಗೆ ಸಿದ್ಧರೆಂದು ಹೇಳಿದಾಗ ಅದು ಅಲ್ಲಿಗೇ ಮುಕ್ತಾಯವಾಯಿತು.

ಶ್ರೀ ವೀರೇಂದ್ರ ಪಾಟೀಲ್ : ಜ್ಯುಡಿಷಿಯಲ್ ವಿಚಾರಣೆ ಮಾಡಬೇಕೇ ಬಿಡಬೇಕೇ ಎನ್ನುವುದು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟದ್ದು. ನಾನು ಹೇಳಿದ ವಿಚಾರವೇನೆಂದರೆ ಒಂದು ವೇಳೆ ಇವರು ಜ್ಯುಡಿಷಿಯಲ್ ವಿಚಾರಣೆ ಮಾಡುವುದಿದ್ದರೆ ನಾನು ಅದಕ್ಕೆ ಅಡ್ಡ ಬರುವ ಹಾಗಿಲ್ಲವೆಂದು ಸ್ಪಷ್ಟ ಮಾಡಿದ್ದೇನೆ. ಮತ್ತು ಈ ಜ್ಯುಷಿಯಲ್ ವಿಚಾರಣೆಗೆ ಡಿಮ್ಯಾಂಡ್ ಮಾಡಬೇಕಾದರೆ ಅದು ವಿರೋಧ ಪಕ್ಷದವರಿಂದ ಬರಬೇಕು. ಆದ್ದರಿಂದ ಕೊನೆಗೆ ಶ್ರೀಮಾನ್ ಹೆಗಡೆಯವರು ನಾನು ಅವರಿಗೆ ದ್ರೋಹ ಮಾಡಿದ್ದೇನೆ ಎನ್ನುವ ಮಾತನ್ನು ಹೇಳಿದರು. ನಾನು ದ್ರೋಹ ಮಾಡಿದ್ದೆ ಎಂದರೆ ನಮ್ಮ ಮನೆಗೆ ಅವರು ಎರಡು ಸಲ ಬರಬೇಕಾದಂಥ ಅವಶ್ಯಕತೆ ಇರಲಿಲ್ಲ. ಆದರೆ ಅವರು ಬಂದು ಏನು ಹೇಳುತ್ತಾರೆಂದರೆ, ಅದನ್ನು ನಿಮಗೆ ಹೇಳುತ್ತೇನೆ. ನೀವು ಕಾಂಗ್ರೆಸ್ ಬಿಟ್ಟು ನಮ್ಮಲ್ಲಿ ಸೇರಿಕೊಳ್ಳಿ ಅಥವಾ ಎರಡನೇ ಪಾರ್ಟಿ ಮಾಡಿಕೊಳ್ಳಿ ಎಂದು. ನನ್ನ ಮತ್ತು ಅವರ ಮಧ್ಯೆ ಈ ತರಹದ ಚರ್ಚೆ ಆಯಿತು. ಅದರ ವಿವರವನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಏಕೆ ಇದನ್ನು ಹೇಳಿದೆಯೆಂದರೆ, ಒಂದು ವೇಳೆ ನಾನು ದ್ರೋಹ ಮಾಡಿದ್ದರೆ ದ್ರೋಹಿ ಮನೆಗೆ ಏಕೆ ಬಂದರು ಎಂದು ನಾನು ಕೇಳುತ್ತೇನೆ. ನಮ್ಮ ಮನೆಗೆ ಒಂದು ಸಲ ಅಲ್ಲ, ಎರಡು ಸಲ ಬಂದಿದ್ದರು.

ಶ್ರೀ ರಾಮಕೃಷ್ಣ ಹೆಗಡೆ : ಆಗ ಇದು ಬಂದಿರಲಿಲ್ಲ; ಅದು ಆದ ಮೇಲೆ ಈ ವಿಚಾರ ಇಲ್ಲಿ ಬಂತು. ಆದು ಆಗಿ ಆರು ತಿಂಗಳ ಮೇಲೆ ಬಂತು.

ಶ್ರೀ ವೀರೇಂದ್ರ ಪಾಟೀಲ್ : ಇಲ್ಲ, ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ : ಇವರು ಅನಾರೋಗ್ಯ ಹೊಂದಿದ ಮೇಲೆ ನಾನು ಹೋದದ್ದು ಹೌದು.

ಅಧ್ಯಕ್ಷರು : ಹೆಬ್ಬುಲಿಗಳ ಒಂದು ಭಾಷಣ....

ಶ್ರೀ ರಾಮಕೃಷ್ಣ ಹೆಗಡೆ : ಅದಾದ ಮೇಲೆ ನಮಗೆ ಇವರು ದ್ರೋಹ ಮಾಡಿದ್ದು ಗೊತ್ತಾದದ್ದು ಆರು ತಿಂಗಳ ಮೇಲೆ.

ಶ್ರೀ ವೀರೇಂದ್ರ ಪಾಟೀಲ್ : ಅವರು ನನ್ನ ಮನೆಗೆ ನನ್ನ ಹತ್ತಿರ ಬಂದಿದ್ದು ಯಾವಾಗ ಅಂದರೆ, ಆ ವೇಳೆಗೆ ರಾಜೀವ್ ಗಾಂಧಿಯವರು ಬಂದು ಹೋಗಿದ್ದರು.

ಆಗ ಒಂದು ವದಂತಿ ಇತ್ತು. ಬಹುಶಃ ವಿರೇಂದ್ರ ಪಾಟೀಲರು ಕಾಂಗ್ರೆಸ್ ಬಿಡುತ್ತಾರೆ, ಅವರು ಮತ್ತೊಂದು ಪಾರ್ಟಿಯಾದರೂ ಕಟ್ಟಬಹುದು ಇಲ್ಲವೆ ಎರಡನೆ ಪಾರ್ಟಿ ಸೇರಬಹುದೆಂಬ ಒಂದು ವಿಚಾರ ಇತ್ತು. ಆ ವೇಳೆಗೆ ನನಗೆ ಸ್ಟ್ರೋಕ್ ಆಗಿತ್ತು. ನಾನು ಮನೆಯಲ್ಲೇ ಇದ್ದೆ. ಆಗ ಇವರು ಎರಡು ಸಲ ಬಂದಿದ್ದಾರೆ. ಇವರು ಬಂದು ಏನು ಕೇಳಿದ್ದಾರೆಂದರೆ, ನೀವು ಕಾಂಗ್ರೆಸ್ ಬಿಟ್ಟು ನಮ್ಮ ಜೊತೆ ಬನ್ನಿ ಎಂದು ಹೇಳಿದರು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧ ಚುನಾವಣೆಗೆ ನಿಂತುಕೊಂಡು ನಂತರ ಅವರ ಪಾರ್ಟಿಗೆ ತಿರುಗಿ ನೀವೇನೇ ಹೋದಿರಲ್ಲಾ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್ : ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನನಗೆ ನೆನಪಿಲ್ಲ. ನಾನು ಡಿಮ್ಯಾಂಡ್ ಮಾಡಲಿಲ್ಲ. ಚರ್ಚೆಗೆ ಯಾರು ಡಿಮ್ಯಾಂಡ್ ಮಾಡಿದ್ದಾರೋ ಎಂಬುದಕ್ಕೆ ರೆಕಾರ್ಡ್ ಇಲ್ಲ. ಅದರಿಂದ ಎಲ್ಲಾ ಗೊತ್ತಾಗುತ್ತದೆ. ನಾನು ಹೇಳುವುದಿಷ್ಟೆ. ರೆಕಾರ್ಡ್ ನೋಡಿ ಎಂದು ಹೇಳುತ್ತಿದ್ದೇನೆಯೇ ಹೊರತು ನಿಮ್ಮ ಅಥವಾ ಮತ್ಯಾರ ಮೇಲಾಗಲಿ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿಲ್ಲ. ಟೆಲಿಫೋನ್ ಟ್ಯಾಪಿಂಗಿಗೆ ಯಾರು ಜವಾಬ್ದಾರರು ಎಂದು ರೆಕಾರ್ಡ್ ತೆಗೆದು ನೋಡಿ. ನಿಮಗೂ ಗೊತ್ತಾಗುತ್ತದೆ ಮತ್ತು ಎಲ್ಲರಿಗೂ ಗೊತ್ತಾಗುತ್ತದೆ. ವಿಷಯ ಪೂರ್ತಿ ಗೊತ್ತಾಗುತ್ತದೆನ್ನುವಂತಹ ಮಾತನ್ನು ತಮಗೆ ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ತಮಗೆ ನೆನಪು ಮಾಡಿಕೊಡುತ್ತೇನೆ. ಹಿರಿಯ ಸದಸ್ಯರಾದಂತಹ....

ಅಧ್ಯಕ್ಷರು : ಅವರು ಹೇಳಲಿ ಅವರದ್ದು ಮುಗಿಯಲಿ....

ಶ್ರೀ ಡಿ.ಬಿ. ಚಂದ್ರೇಗೌಡ : ಹಿರಿಯ ಸದಸ್ಯರಾದಂತಹ ದಿವಂಗತ ಶ್ರೀ ಕೆ. ಲಕ್ಕಪ್ಪನವರು, ಅಲ್ಲಿ ಕುಳಿತುಕೊಂಡು ಒಂದು ಪ್ರಿವಿಲೇಜ್ ಮೋಷನ್ ತಂದಿದ್ದರು. ಅದನ್ನು ರೂಲ್ 68ರಂತೆ ಪರಿವರ್ತನೆ ಮಾಡಿ ಚರ್ಚೆ ಪ್ರಾರಂಭ ಮಾಡಿದರು.

ಅಧ್ಯಕ್ಷರು : ಚಂದ್ರೇಗೌಡರವರೇ, ತಾವು ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅದನ್ನು ರೂಲ್ 68ರಂತೆ ಪರಿವರ್ತನೆ ಮಾಡಿ ಚರ್ಚೆ ಪ್ರಾರಂಭ ಮಾಡಿದರು. ಇದನ್ನು ರೆಕಾರ್ಡಿಗಾಗಿ ಹೇಳುವುದು ಬೇಡವೇ? ನೋಟೀಸ್ ಯಾರು ಕೊಟ್ಟರು ಎನ್ನುವುದಕ್ಕೆ ಅನುಮಾನವೇಕೆ? ಕಾಂಗ್ರೆಸ್ (ಐ) ಸದಸ್ಯರು ಪ್ರಿವಿಲೇಜ್ ಮೋಷನ್ ಅನ್ನು ತಂದಿದ್ದರು. ಅದನ್ನು ರೂಲ್ 68 ಆಗಿ ತಾವು ಅಂದರೆ ತಮ್ಮ ಪ್ರಿಡಿಸಿಸರ್ ಪರಿವರ್ತನೆ ಮಾಡಿದರು. ರೂಲ್ 68ರಲ್ಲಿ ಚರ್ಚೆಯಾಯಿತು.

ಶ್ರೀ ವೀರೇಂದ್ರ ಪಾಟೀಲ್ : ನಾನು ಎಷ್ಟೇ ಹೇಳಿದರೂ ಕೂಡ ಶ್ರೀ ಚಂದ್ರೇಗೌಡರು ತಾವು ಆಡಿದ ಮಾತನ್ನೇ ಆಡುತ್ತಿದ್ದಾರೆ. ನಾನು ಹೇಳಿದೆ ಈ ಚರ್ಚೆ ಏಕೆ ಆಯಿತು, ಈ ಚರ್ಚೆಗೆ ಕಾರಣರು ಯಾರು ಎಂಬುದೆಲ್ಲಾ ರೆಕಾರ್ಡಿನಲ್ಲಿದೆ. ಎಲ್ಲವೂ ತಿಳಿಯುತ್ತದೆ. ಅದನ್ನು ತರಿಸಿ ನೋಡಿ.

ಅವರು ಡಿಮಾಂಡ್ ಮಾಡಲಿ, ನಾನು ಇದಕ್ಕೆ ಅಡ್ಡಿ ಬರುವುದಿಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಟೆಲಿಫೋನ್ ಕದ್ದಾಲಿಕೆ ವಿಷಯ ಡಿಸ್ಕಸ್ ಆಗಿ

ಮೂರು ವರ್ಷವಾಯಿತು. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಆಗಲೇ ನಾನು ಜ್ಯುಡಿಷಿಯಲ್ ಎನ್ಕ್ವೇರಿಗೆ ಡಿಮಾಂಡ್ ಮಾಡಿದ್ದೇನೆಂದು ಹೇಳುತ್ತಿದ್ದಾರೆ. ಈಗ ನಾನು ಏನು ಹೇಳುತ್ತೇನೆಂದರೆ, ಜ್ಯುಡಿಷಿಯಲ್ ಎನ್ಕ್ವೇರಿಗೆ ನಾನು ಡಿಮಾಂಡ್ ಮಾಡಿಲ್ಲ; ಇದು ತಪ್ಪು ಎಂದು ನನಗೆ ಅನಿಸುತ್ತಿದೆ. ಅವರು ಹೇಳಿದ್ದು ನಿಜವಾದುದ್ದಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅದರ ಸಲುವಾಗಿ ನಾನು ಹೇಳುವುದು ಒಂದು ವೇಳೆ ತಪ್ಪು ಎನಿಸಿದರೆ ಮುಖ್ಯಮಂತ್ರಿಗಳು ಜ್ಯುಡಿಷಿಯಲ್ ಎನ್ಕ್ವೇರಿ ಮಾಡುತ್ತೇವೆಂದರೆ ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಮಾಡುವುದು, ಬಿಡುವುದು ಅವರಿಗೆ ಸೇರಿದ್ದು. ಜ್ಯುಡಿಷಿಯಲ್ ಎನ್ಕ್ವೇರಿಗೆ ಡಿಮಾಂಡ್ ಮಾಡುವುದು ವಿರೋಧ ಪಕ್ಷಕ್ಕೆ ಸಂಬಂಧಿಸಿದ್ದು. ಈ ಭರವಸೆಯನ್ನು ಸದನದಲ್ಲಿ ಕೊಡುತ್ತೇನೆ ಮತ್ತು ಈ ಚರ್ಚೆ ಏಕೆ ಬಂತೆಂದು ನಿಮಗೂ ಗೊತ್ತಿಲ್ಲ. ಏಕೆ ಬಂತೆಂದು ನನಗೂ ನೆನಪಿಲ್ಲ. ಟೆಲಿಫೋನ್ ಕದ್ದಾಲಿಕೆ ಚರ್ಚೆ ಏಕೆ ಬಂತು, ನೀವೇ ಹೇಳಿ ಪಾಟೀಲ್‌ರವರೇ, ನೀವು ಮುಖ್ಯಮಂತ್ರಿಗಳಾಗಿದ್ದಾಗ ಡಿಮಾಂಡ್ ಮಾಡಿದ್ದೀರಿ, ಅದಕ್ಕೆ ಈ ಚರ್ಚೆ ಬಂತೆಂದು ಬೇಕಾದರೆ ಹೇಳಿ. ಆದರೆ ನಾನು ಡಿಮಾಂಡ್ ಮಾಡಿದ್ದೀನಾ? ನನಗೆ ನೆನಪಿರುವ ಹಾಗೆ ನಾನು ಡಿಮಾಂಡ್ ಮಾಡಿಲ್ಲ. ಅಂದ ಮೇಲೆ ಚರ್ಚೆ ಏಕೆ ಬಂತು? ನನಗೆ ಗೊತ್ತಿದ್ದ ಹಾಗೆ ಕೇಂದ್ರದ ರಾಜ್ಯಸಭೆಯಲ್ಲಿ ಇರಬಹುದು, ಶ್ರೀಮಾನ್ ಹೆಗಡೆಯವರಿಗೂ ಚೆನ್ನಾಗಿ ಗೊತ್ತಿದೆ. ಅವರು ಯಾರು ಸದಸ್ಯರು ಎಂದು; ಅವರು ಏನು ಮಾಡಿದ್ದಾರೆಂದರೆ ನನಗೆ ನೆನಪಿರುವ ಹಾಗೆ ಅವರು ಭರವಸೆ ಸಮಿತಿ ಸದಸ್ಯರೇನೋ ಇದ್ದರು. ಅವರು ಈ ರೀತಿಯಿಂದ ಟೆಲಿಫೋನ್ ಕದ್ದಾಲಿಕೆ ಮಾಡಿದ್ದಾರೆಂದು ಚಾರ್ಜ್ ಮಾಡಿದರು.

ಶ್ರೀ ರಾಮಕೃಷ್ಣ ಹೆಗಡೆ : ತಮಗೆ ನಾನು ನೆನಪು ಮಾಡಿಕೊಡುತ್ತೇನೆ. ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿ ಬಹಳ ಕಾಲ ಆಗಿ ಹೋಗಿತ್ತು. ಬಹಳ ಕಾಲ ಮುಗಿದು ಹೋಗಿತ್ತು. ಪಾರ್ಲಿಮೆಂಟಿನಲ್ಲಿ ಚರ್ಚೆಯಾದ ಮರು ದಿವಸ ಇಲ್ಲಿ ಚರ್ಚೆಯಾಗಲಿಲ್ಲ. ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿ ಮೀಟಿಂಗ್ ಅನ್ನು ಇಲ್ಲಿ ಉದ್ದೇಶಪೂರ್ವಕವಾಗಿಯೇ ಮಾಡಿಸಿದರು. ಇದನ್ನು ಆ ಸಬಾರ್ಡಿನೇಟ್ ಲೆಜಿಸ್ಲೇಷನ್ ಕಮಿಟಿಯಲ್ಲಿಟ್ಟರು. ಅದಕ್ಕೂ ಕಮಿಟಿಗೂ ಸಂಬಂಧವಿಲ್ಲ. ಆದರೂ ಅದನ್ನು ತೆಗೆದುಕೊಂಡು ನಿಮ್ಮ ಪಕ್ಷದವರು ಇಲ್ಲಿ ಎತ್ತಿದರು. ಅದಕ್ಕೆ ಯಾರ ಪ್ರೋತ್ಸಾಹ ಬಂತು. ಆಗ ಸ್ಪೆಷಲ್ಲಾಗಿ ದೆಹಲಿಯಿಂದ ಯಾರು ಬಂದಿದ್ದರೆಂಬುದನ್ನು ಬೇಕಾದರೂ ನೆನಪು ಮಾಡಿಕೊಳ್ಳಿ, ಇಲ್ಲವೇ ನಾನು ನೆನಪು ಮಾಡಿಕೊಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಇವರಿಗೆ ಅನಾರೋಗ್ಯ ಆದಾಗ ಇವರನ್ನು ನೋಡುವುದಕ್ಕೆ ಹೋಗಿದ್ದರೋ ಏನೋ? ನಾನೂ ಸಹ ಅವರನ್ನು ನೋಡುವುದಕ್ಕೆ ಹೋಗಿದ್ದೇನೆ. ಅದು ತಪ್ಪಾ?

ಶ್ರೀ ವೀರೇಂದ್ರ ಪಾಟೀಲ್ : ಅಲ್ಲಿಂದ ಶ್ರೀಮಾನ್ ಹೆಗಡೆಯವರು ಹೇಳಿದರು, ನಾನು ಕಾಂಗ್ರೆಸ್ ಏಕೆ ಬಿಟ್ಟೆ ಎಂದು. ನಾನು ಕಾಂಗ್ರೆಸ್ ಏಕೆ ಬಿಟ್ಟೆ,ಬಿಡುವುದಕ್ಕೆ ಕಾರಣವೇನು? ಯಾರು ಬಿಡಿಸಿದರು? ಇದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ ಹೇಳಬಾರದು, ಏಕೆಂದರೆ ನಾನು ಇಲ್ಲಿಯವರೆಗೆ ಹೇಳಿಲ್ಲ ಎಂದ ಮೇಲೆ ಇನ್ನೂ ಶ್ರೀಮಾನ್ ಹೆಗಡೆಯವರು ಏಕೆ ಹೇಳುತ್ತಿದ್ದಾರೋ ಗೊತ್ತಿಲ್ಲ. ಅದರ ಮೇಲೆಮೂರು ವರ್ಷ ಆಯಿತು. ಮೂರು ವರ್ಷದ ಹಿಂದಿನ ಮಾತನ್ನು ಈಗ ಹೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ : ನಾನು ಮೊದಲನೇ ಸಲ ಅವರನ್ನು ಭೇಟಿ ಆಗುವುದಕ್ಕೆ ಹೋದಾಗ ಅವರ ಆರೋಗ್ಯ ವಿಚಾರಿಸಿದೆನೆಯೇ ಹೊರತು ಬೇರೆ ಏನಾದರೂ ವಿಚಾರ ಪ್ರಸ್ತಾಪ ಮಾಡಿದೆನೇ? ಹೇಳಿ ಮಾಡಿದ್ದೀನಾ? ಹೇಳಿ ಸತ್ಯ ಹೇಳಿ. ನಿಮ್ಮ ಆರೋಗ್ಯ ವಿಚಾರಿಸಿದೆನೋ ಇಲ್ಲವೋ ನಾನು ಆರೋಗ್ಯವನ್ನು

ವಿಚಾರಿಸಲಿಕ್ಕೆ ಬೊಕ್ಕೆಯನ್ನು ತೆಗೆದುಕೊಂಡು ಹೋಗಿದ್ದೆ ನಿಮಗೆ ಆದಷ್ಟು ಬೇಗ ಗುಣವಾಗಲಿ ಎಂದು. ಇನ್ನು 2ನೇ ಸಲ ನಾನು ನಿಮ್ಮ ಹತ್ತಿರ ಹೋದಾಗ ಅಷ್ಟರಲ್ಲಿ ಆಗಲೇ ಪೇಪರ್‌ನಲ್ಲಿ ಬಂದಿತ್ತು. ಇವರು ಕಾಂಗ್ರೆಸ್ ಬಿಡುತ್ತಾರೆ ಎಂದು. ನಾನು ಹೌದೇನೋ ಎಂದು ಕೇಳಿದೆ. ಅದು ತಪ್ಪಾ?

ಶ್ರೀ ವೀರೇಂದ್ರ ಪಾಟೀಲ್ : ಅವರ ಮಧ್ಯೆ ನನ್ನ ಮಧ್ಯೆ ಏನು ಚರ್ಚೆ ಆಯಿತು ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾವಿಬ್ಬರೇ ಇದ್ದಾಗ ಏನು ಮಾತುಕತೆ ಆಡಿದ್ದೇವೆ. ಅದನ್ನು ಈ ಸದನದಲ್ಲಿ ಹೇಳಬಾರದು. ಕೊನೆಯಲ್ಲಿ ನಾನು ಹೇಳುವಂತಾದ್ದು ಏನೆಂದರೆ ನನಗೆ ಜೀವನದಲ್ಲಿ ಯಾವ ಆಂಬಿಷನ್ ಇಲ್ಲ. ಮುಂದಿನ ಸದನಕ್ಕೆ ಬರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ಅಥವಾ ಇದೇ ಅಸೆಂಬ್ಲಿ ಕೊನೇ ಆಗುತ್ತದೋ ಏನೋ ನನಗೆ ಗೊತ್ತಿಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ನಾನು ಏನೇ ಹೇಳುತ್ತಿದ್ದರೂ ನನ್ನ ಆತ್ಮಸಾಕ್ಷಿಯಾಗಿ ಹೇಳುತ್ತೇನೆ. ಯಾರಿಗಾದರೂ ರಮಿಸುವುದಕ್ಕೆ, ಅಥವಾ ಯಾರಿಗಾದರೂ ಏನಾದರೂ ಮಾಡುವುದಕ್ಕೆ ನಾನು ಈ ವಿಚಾರವನ್ನು ಹೇಳುತ್ತಾ ಇಲ್ಲ. ಅದರ ಸಲುವಾಗಿ ಈಗ ಏನು ಹೇಳಿದ್ದೇನೆ ಅದನ್ನು ನಾನು ಆತ್ಮಸಾಕ್ಷಿಯಾಗಿ ಹೇಳಿದ್ದೇನೆ. ಜನರು ಒಪ್ಪಲಾರದೇ ಹೋದರೂ ಸಹ ಅದು ಅವರಿಗೆ ಬಿಟ್ಟಿದ್ದು ಹೊರತಾಗಿ ನಾನು ಮಾತ್ರ ಸ್ಪಷ್ಟವಾಗಿ ಹೇಳಿದ್ದೇನೆ. ಇಲ್ಲಿ ಅನೇಕ ಮಾನ್ಯ ಸದಸ್ಯರು ನಾವು ಮುಂದಿನ ಸದನಕ್ಕೆ ಬರುತ್ತೇವೆ ಎಂದು ಹೇಳಬಹುದು. ನನ್ನ ಮಟ್ಟಿಗೆ ಹೇಳಬೇಕಾದರೆ ನಾನು ಎರಡೂ ಕಾಲನ್ನು ನನ್ನ ಗುಣಿಯಲ್ಲಿ ಇಟ್ಟುಕೊಂಡು ಕುಳಿತಾಗ ನನಗೆ ಏನೂ ಆಂಬಿಷನ್ ಇಲ್ಲ. ಆದ್ದರಿಂದ ನಾನು ಸುಳ್ಳು ಹೇಳುವುದಕ್ಕೆ ತಯಾರಿಲ್ಲ. ಇವತ್ತು ನನ್ನ ಫ್ರೆಂಡ್ಸ್ ಇರಲಿ, ಅಥವಾ ರಿಲೇಷನ್ಸ್ ಇರಲಿ, ಯಾರಿದ್ದರೂ ಕಾನೂನು ಬಿಟ್ಟು ಹೋಗುವುದಕ್ಕೆ ತಯಾರು ಇಲ್ಲ. ಆದ್ದರಿಂದ ಕಾನೂನು ಪ್ರಕಾರ ಕೆಲಸ ಮಾಡಿದ್ದೇನೆ.

ಬೇಕಾದರೆ ಮುಂದಿನ ಕ್ರಮ ಏನು ತೆಗೆದುಕೊಳ್ಳಬೇಕೆನ್ನುವಂಥದ್ದನ್ನು ಮಾನ್ಯ ವಿರೋಧಪಕ್ಷದವರು ಮತ್ತು ಮಾನ್ಯ ಮುಖ್ಯಮಂತ್ರಿಯವರಿಗೇ ಬಿಟ್ಟಿದ್ದೇನೆ. ಆದರೆ ನಾನು ಆತ್ಮಸಾಕ್ಷಿಯಾಗಿ ಏನು ಹೇಳಬೇಕಾದಂಥ ಅವಶ್ಯಕತೆ ಇತ್ತು ಅದನ್ನು ಹೇಳಿದ್ದೇನೆ. ದಯವಿಟ್ಟು ಶ್ರೀಮಾನ್ ಹೆಗಡೆಯವರು ತಮಿಳುನಾಡಿನವರಿಗೆ ಹೊರಿಸಿದರು, ಮಾಡಿದರು ಎಂದು ಹೇಳುವುದು ಬೇಡವೆಂದು ಈ ಸಂದರ್ಭದಲ್ಲಿ ಅವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಹಸಿದ ಹೆಬ್ಬುಲಿಗಳ ಘರ್ಜನೆಯನ್ನು ಸ್ವಲ್ಪ ಇಲ್ಲಿಗೆ ವಿಶ್ರಾಂತಿ ಕೊಟ್ಟು ಒಂದು ಗಂಟೆ ಬಿಟ್ಟು ಸದನದ ಕಲಾಪಗಳನ್ನು ಪುನಃ ಮುಂದುವರಿಸೋಣವೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಸದನವು 3-27 ಕ್ಕೆ ಎದ್ದು ಮತ್ತೆ 4-27ಕ್ಕೆ ಸೇರಲು ನಿಶ್ಚಯಿಸಿತು)

(ಮತ್ತೆ ಸಭೆಯು 4.40ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರಾದ ಶ್ರೀ ಅಂಜನಾಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

+ ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಅಧ್ಯಕ್ಷರೇ ಈ ಸದನದಲ್ಲಿ ವಿರೋಧಪಕ್ಷದವರು ತಂದಿರುವಂತಹ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದೆ. ಈ ನಿರ್ಣಯವನ್ನು ಸಭೆಯ ಮುಂದೆ ತಂದಂತಹ ಕಾಲದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಆಡಿದರು. ಏನೆಂದರೆ, ನೀವು ಏಕೆ ಈ ನಿರ್ಣಯವನ್ನು ತಂದಿದ್ದೀರಾ, I have not thwarted the interest of the State. ಎನ್ನುವ ಮಾತನ್ನು ಅವರು ಹೇಳಿದರು. ಅಂದರೆ ಈ ನಿರ್ಣಯವನ್ನು ಏಕೆ

ತಂದಿದ್ದೇವೆ ಎಂಬುದನ್ನು ಹೇಳಬೇಕಾಗುತ್ತದೆ. ಏಕೆಂದರೆ ಅವರಿಗೆ ಇನ್ನೂ ಅನುಮಾನವಿದೆ. ವಿರೋಧಪಕ್ಷದವರು ಈ ನಿರ್ಣಯವನ್ನು ಏಕೆ ತಂದಿದ್ದಾರೆಂದು, ಈ ನಿರ್ಣಯದ ಮುಖಾಂತರ ವೀರಪ್ಪಮೊಯಿಲಿಯವರ ನೇತೃತ್ವದ ಸರ್ಕಾರ ರಾಜೀನಾಮೆ ಕೊಡಬೇಕೆಂದು ಹೇಳುತ್ತಿರುವುದಕ್ಕೆ ಕಾರಣವೇನು, ಮುಖ್ಯಮಂತ್ರಿಯವರು ಹೇಳಿದ ಹಾಗೆ ಇದುವರೆಗೂ ಮಾತನಾಡಿದಂತಹ ಯಾವ ಭಾಷಣಕಾರರು ಈ ರಾಜ್ಯದ ಹಿತವನ್ನು ಮಾರಿದ್ದೀರಾ, ಇದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದೀರಾ, ಎಂದು ಯಾರೂ ಹೇಳಲಿಲ್ಲ; ಇದೆಲ್ಲಕ್ಕಿಂತ ಹೆಚ್ಚಾಗಿ ನೀವು ಭ್ರಷ್ಟರು ಎಂದು ಯಾರೂ ಹೇಳಿಲ್ಲ. ಈ ಸರ್ಕಾರ ಭ್ರಷ್ಟತನದಿಂದ ಭಾರವನ್ನು ತಡೆಯಲಾರದೇ ಕೆಳಕ್ಕೆ ಬೀಳಬೇಕೆಂದು ಯಾರ ಪ್ರಾರ್ಥನೆಯೂ ಇಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ನಾವು ನಿರ್ಣಯವನ್ನು ತಂದಿರುವಂತಹ ಕಾರಣವೇನು ಎಂದರೆ ಶ್ರೀ ವೀರಪ್ಪಮೊಯಿಲಿಯವರ ನೇತೃತ್ವದ ಸರ್ಕಾರ ಈ ರಾಜ್ಯದ ಆಡಳಿತವನ್ನು ಮಾಡುವುದರಲ್ಲಿ ಅಸಮರ್ಪಕವಾಗಿದೆ. ಅಸಮರ್ಪಕವಾದಂತಹ ಈ ಸರ್ಕಾರ ಆಡಳಿತವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನೀವು ರಾಜಿನಾಮೆಯನ್ನು ಕೊಟ್ಟು ಹೊರಗೆ ಬನ್ನಿ. ಈ ಅಸಮರ್ಥತೆಗೆ ಕಾರಣ ಹಲವಾರು. ಈ ರಾಜ್ಯವನ್ನು ಆಳುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಇದಕ್ಕೆ ಮುಖ್ಯಮಂತ್ರಿಗಳು ಕಾರಣಕರ್ತರು. ಅವರ ಪಕ್ಷದಲ್ಲಿ, ಅವರ ಜೊತೆಯಲ್ಲಿ ಮಂತ್ರಿಗಳು ಆಗಿರುವಂತವರು ಇದಕ್ಕೆ ಕಾರಣಕರ್ತರು. ಜೊತೆಗೆ ಅವರ ಪಕ್ಷವೂ ಕಾರಣವಾಗಿದೆ. ನಮ್ಮ ವಿರೋಧ ಪಕ್ಷದವರದು ದೇಣಿಗೆ ಇದೆ. A situation is created wherein the government headed by Sri. M. Veerappa Moily is incapable of ruling the State, whatever may be the reason.

ಕಾರಣವನ್ನು ನಾನು ಆಗಲೇ ಹೇಳಿದ್ದೇನೆ. ಇದಕ್ಕೆ ಪ್ರಬಲವಾದಂತಹ ಹಾಗೂ ಪ್ರಾಮುಖ್ಯವಾದಂತಹ ಕಾರಣ ಮೊಯಿಲಿಯವರು. ಎರಡನೆಯವರು ಅವರ ಸಚಿವ ಸಂಪುಟದ ಸಚಿವರು; ಮೂರನೆಯವರು ಅವರ ಪಕ್ಷ. ನಾಲ್ಕನೆಯವರಾಗಿ ನಾವು ಸಹ ಸ್ವಲ್ಪ ದೇಣಿಗೆ ಕೊಟ್ಟಿದ್ದೇವೆ; ಈ ವ್ಯವಸ್ಥೆಗೆ ಸೃಷ್ಟಿಮಾಡುವುದಕ್ಕೆ. ಸನ್ಮಾನ್ಯ ಉಪಾಧ್ಯಕ್ಷರೇ, ಆವತ್ತಿನಿಂದಲೂ ಪ್ರಾಮುಖ್ಯವಾದಂತಹ ಒಂದು ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ. ಅದಕ್ಕೆ ನಾನು ಮೊಟ್ಟಮೊದಲನೆಯದಾಗಿ ಹೇಳುತ್ತೇನೆ, ಆಡಳಿತ ಪಕ್ಷದವರು ಆಂತರಿಕ ವಿಷಯದಲ್ಲಿ ನಮಗೆ ಆಸಕ್ತಿ ಇಲ್ಲ. I want to make it clear.

ಆದರೆ ಒಂದು ವಿಷಯವನ್ನು ನಾವು ಇಲ್ಲಿ ಅತ್ಯಂತ ಗಂಭೀರವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಅದು ಯಾವುದೆಂದರೆ ಆಡಳಿತ ವ್ಯವಹಾರಕರು, ಆ ಪಕ್ಷದ ಆಡಳಿತ ಮಾಡಿರುವಂತಹ ಆಡಳಿತಕ್ಕೂ ಇರುವಂತಹ ಆ ಪರದೆ ಇದೆಯಲ್ಲಾ that is not an iron wall. ಅದನ್ನು ತಾವು ದಯಮಾಡಿ ತಿಳಿದುಕೊಳ್ಳಬೇಕು. ಆಡಳಿತ ಪಕ್ಷದಲ್ಲಿ ತೆಗೆದುಕೊಳ್ಳುವಂತಹ ತೀರ್ಮಾನ ಆಡಳಿತ ಪಕ್ಷದ ಶಾಸಕಾಂಗ ಪಕ್ಷದಲ್ಲಿ ನಡೆಯುವಂತಹ ಚರ್ಚೆ ಅಲ್ಲಿ ತೆಗೆದುಕೊಳ್ಳುವಂತಹ ತೀರ್ಮಾನ ನೇರವಾಗಿ ಈ ರಾಜ್ಯದ ಆಡಳಿತದ ಮೇಲೆ ಪ್ರಭಾವ ಬೀರುತ್ತದೆ. ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ಯಾರನ್ನು ಮಂತ್ರಿಯಾಗಿ ಮಾಡಬೇಕು, ಯಾರನ್ನು ಮುಖ್ಯಮಂತ್ರಿಯಾಗಿ ಮಾಡಬೇಕು, ಆ ಪಕ್ಷದ ನೀತಿ ಸಿದ್ಧಾಂತಗಳು ಏನು ಎಂದು ಚರ್ಚೆ ಮಾಡಲು ನೋಡಿದರೆ, ಅದರ ಬಗ್ಗೆ ನಾವು ಏನಾದರೂ ತಲೆ ಹಾಕುವುದಕ್ಕೆ, ಮೂಗು ಹಾಕುವುದಕ್ಕೆ ಹೋದ್ದರೆ ಬಹುಶಃ ಅದು ಅತ್ಯಂತ ದಡ್ಡತನದ ಕೆಲಸ. ಆದರೆ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ಈ ನೆಲದ ಕಾನೂನಿನ ವಿರುದ್ಧವಾಗಿ ಏನಾದರೂ ನಡೆದರೆ ಆಗ ಈ ರಾಜ್ಯದ ಆಡಳಿತ ಅದರಲ್ಲಿ ಬರುತ್ತದೆ. ಎಂದಿನವರೆಗೆ ಗಂಡಹೆಂಡತಿ ತಮ್ಮ ಗೌಪ್ಯವಾದ ಕೋಣೆಯಲ್ಲಿ ರಸಕ್ರೀಡೆ ಮಾಡುತ್ತಿರುತ್ತಾರೋ ಅಲ್ಲಿಯವರೆಗೆ ಅದು ಅವರ ಸ್ವಂತ

ವಿಷಯವಾಗುತ್ತದೆ. ಅದರಲ್ಲಿ ನಾವು ಯಾರು ತಲೆ ಹಾಕುವ ಹಾಗೆ ಇಲ್ಲ. ಆದರೆ ಆ ರೂಮಿನಲ್ಲಿ ಖುದ್ದಾಗಿ ಕೊಲೆಯಾದರೆ ಆಗ ಅವನು ಹೇಳುವುದಕ್ಕಾಗುವುದಿಲ್ಲ ಇದು ಗಂಡಹೆಂಡತಿ ಜಗಳ ನೀವು ಯಾರೂ ತಲೆ ಹಾಕಬೇಡಿ ಎಂದು. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಎಲ್ಲಿಯವರೆಗೆ ಅವರ ಚರ್ಚೆ ಅವರ ತೀರ್ಮಾನಗಳು, ಅವರ ವಿಶ್ಲೇಷಣೆಗಳು ವಿಷಯಗಳು, ಅವರ ಪಕ್ಷದ ತತ್ವಕ್ಕೆ, ನೀತಿಗೆ, ಸಿದ್ಧಾಂತಕ್ಕೆ ಸೀಮಿತವಾಗಿರುತ್ತವೋ, ಆಗ ನಾವು ಯಾರೂ ಅದರಲ್ಲಿ ತಲೆ ಹಾಕುವುದಕ್ಕೆ ಸಿದ್ಧರಿಲ್ಲ. ನಮಗೆ ಆಸಕ್ತಿನೂ ಇಲ್ಲ. ಆದರೆ ನೀತಿ ಸಿದ್ಧಾಂತದ ನೆಪದಲ್ಲಿ ಈ ರಾಜ್ಯದ ಆಡಳಿತದ ಬಗ್ಗೆ ಚರ್ಚೆ ಮಾಡಿ ತೀರ್ಮಾನಗಳನ್ನು ತೆಗೆದುಕೊಂಡಾಗ, ಆ ಒಂದು ಚರ್ಚೆಯಿಂದ, ಆ ಘಟನೆಯಿಂದ, ಆ ಕೃತ್ಯಗಳಿಂದ, ಈ ರಾಜ್ಯದ ಆಡಳಿತದ ಮೇಲೆ ಪ್ರಭಾವ ಬೀರುವಂತಹ ಸಂದರ್ಭ ಬಂದಾಗ I should say that we have every right to question and intervene in it.

ಇದನ್ನು ಗಮನದಲ್ಲಿಟ್ಟುಕೊಂಡು ನಾನು ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಈ ರಾಜ್ಯದ ಮುಖ್ಯಮಂತ್ರಿಗಳನ್ನು ನೋಡಿದರೆ ಅಯ್ಯೋ ಅನಿಸುತ್ತದೆ. ಎಷ್ಟೊಂದು ಅಸಹಾಯಕರಾಗಿದ್ದಾರೆ ಅವರು. ಹೌದು, ಮೊನ್ನೆ ನಮ್ಮ ಕಾನೂನು ಮಂತ್ರಿಗಳು ಅಪ್ಪಣೆ ಕೊಡಿಸುತ್ತಿದ್ದರು. ಏನೆಂದರೆ, ನಾನು 1947ನೇ ಇಸವಿಯಿಂದ ನೋಡುತ್ತಿದ್ದೇನೆ. ಈ ದೇಶಕ್ಕೆ ಪ್ರಜಾಪ್ರಭುತ್ವ ಬಂದ ದಿನದಿಂದ ಭಿನ್ನಮತೀಯ ಚಟುವಟಿಕೆಗಳು ಎಲ್ಲಾ ಸರ್ಕಾರಗಳು ಇದ್ದಾಗ ನಡೆಯುತ್ತಿವೆ ಎಂದು; ನಾನು ಕೆಲವು ನೋಡಿದ್ದೇನೆ. ಕೆಲವು ಓದಿಕೊಂಡಿದ್ದೇನೆ. ಚೆಂಗಲ್ರಾಯ ರೆಡ್ಡಿಯವರು ಮುಖ್ಯಮಂತ್ರಿಯಾಗಿದ್ದಾಗ ಹನುಮಂತಯ್ಯನವರು ಈ ಕೆಲಸ ಮಾಡುತ್ತಿದ್ದರು. ಹನುಮಂತಯ್ಯನವರು ಬಂದಾಗ ನಿಜಲಿಂಗಪ್ಪನವರು ಶುರು ಮಾಡಿದರು. ನಿಜಲಿಂಗಪ್ಪನವರು ಬಂದಮೇಲೆ ಅರಸು ಅವರು ಶುರು ಮಾಡಿದರು. ನಂತರ 1980 ರ ಈಚೆಗೆ ನಾವೇ ಮಾಡಿದೆವಲ್ಲಾ. 80ರ ಶತಕದಲ್ಲಿ ನಡೆದಂತಹ ಭಿನ್ನಮತೀಯ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದಂತವರಲ್ಲಿ ನಾನೂ ಒಬ್ಬ. ಆದರೆ ಪ್ರಶ್ನೆ ಅದಲ್ಲ. ಆದರೆ ಇವತ್ತಿನ ಭಿನ್ನಮತ ಬಹಳ ವಿಭಿನ್ನವಾದಂತಹ ಭಿನ್ನಮತ. ಹೇಗೆ ವಿಭಿನ್ನವಾದದ್ದು ಎಂದರೆ ನಾವು ವಿರೋಧ ಪಕ್ಷದವರೇ ಭಿನ್ನಮತ ಮಾಡಿ ಅಧಿಕಾರ ಕಳೆದುಕೊಳ್ಳುತ್ತೇವೆ. ರಾಜೀನಾಮೆ ಕೊಟ್ಟು ಈಚೆಗೆ ಬರುತ್ತೇವೆ. ಆದರೆ ನೀವು ಎಷ್ಟೇ ಭಿನ್ನಮತೀಯರು ಇದ್ದರೂ ಕೂಡ ಹೊಡೆದಾಟ ಮಾಡುವ ಸಂದರ್ಭ ಬಂದರೂ ಕೂಡ ಅಧಿಕಾರಕ್ಕೆ ಕಚ್ಚಿಕೊಳ್ಳುತ್ತೀರಿ. This is all the difference between us and you. ಈ ಕಡೆ ನಾವು ದಳದವರಿಗೂ ಜನತಾ ಪಕ್ಷದವರಿಗೂ ಭಿನ್ನಮತ ಬಂದು, ಶಾಸಕಾಂಗ ಪಕ್ಷದ ನಾಯಕರ ವಿರುದ್ಧ ಕೈ ಎತ್ತಬೇಕು, ಅವರ ವಿರುದ್ಧ ಮಾತನಾಡಬೇಕು ಎಂದು ಮನಸ್ಸಿಗೆ ಬಂದ ದಿವಸ ನಾನು ನನ್ನ ಹೆಂಡತಿಯನ್ನು ಕೇಳದೆ ತೆಗೆದುಕೊಂಡು ಹೋಗಿ ರಾಜೀನಾಮೆ ಕೊಟ್ಟೆ. ಆದರೆ ಇವರು ಇಲ್ಲಿ ಯಾರ್ಯಾರು ಏನು ಏನು ಹೇಳಿದ್ದಾರೆಂದು ಬೇಕಾದರೆ ನಾನು ಓದುತ್ತೇನೆ. ಇಷ್ಟಾದರೂ ಕೂಡ ಯಾರು ರಾಜೀನಾಮೆ ಕೊಡುವುದಿಲ್ಲ, ಅಧಿಕಾರಕ್ಕೆ ಕಚ್ಚಿಕೊಳ್ಳುತ್ತಾರೆ. ಅವರ ಭಿನ್ನಮತಕ್ಕೂ ಇರುವಂತಹ ವ್ಯತ್ಯಾಸ ಇದು.

ಮತ್ತೊಂದು ವ್ಯತ್ಯಾಸವೇನೆಂದರೆ ನಾವು ಭಿನ್ನಮತದ ಚಟುವಟಿಕೆಗಳನ್ನು ಮಾಡಿದೆವು. ನಿಮಗೆ ಯಾರಿಗಾದರೂ ಜ್ಞಾಪಕ ಇದೆಯೋ ಇಲ್ಲವೋ ಗೊತ್ತಿಲ್ಲ ....'' We are branched as rutters'' ಈ ರಾಷ್ಟ್ರದ ಅತ್ಯಂತ ದೊಡ್ಡ ಪತ್ರಿಕಾಕರ್ತರಾದ ಅರುಣ್‌ಶೌರಿಯವರು ನಮ್ಮ ಮೇಲೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಅಗ್ರಲೇಖನಬರೆದು ನಮ್ಮನ್ನು ಮನೆಹಾಳರು ಎಂದು ಕರೆದರು. ಆದ್ದರಿಂದ ಒಂದು ಪಕ್ಷದಲ್ಲಿ ಭಿನ್ನಮತವಿರುವುದು, ಭಿನ್ನವಾದ ಚಟುವಟಿಕೆಗಳು ಇರುವುದು ಹೊಸದೆಂದು ನಾನು

ಭಾವಿಸಿಕೊಂಡಿರುವುದಿಲ್ಲ. ಆದರೆ ಇದರಿಂದ ಆಡಳಿತದ ಮೇಲೆ ಪ್ರಭಾವ ಬಿದ್ದರೆ, ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡರೆ ಅಂಥ ಸಂದರ್ಭಗಳಲ್ಲಿ ನಾವು ಅದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಆ ಒಂದು ಭಿನ್ನಮತದ ಚಟುವಟಿಕೆಯಿಂದ ಆದಂತ ಪ್ರಭಾವದಿಂದ ಸರ್ಕಾರವು ಅಧಿಕಾರವನ್ನು ನಡೆಸುವುದಕ್ಕೆ ಯೋಗ್ಯತೆ ಇಲ್ಲವೆಂದು ಹೇಳತಕ್ಕಂಥ ಸಂದರ್ಭ ಬಂದಾಗ ನಾವು ರಾಜೀನಾಮೆಯನ್ನು ಕೇಳಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳಿಗೆ ನೇರವಾಗಿ ಒಂದು ಪ್ರಶ್ನೆಯನ್ನು ಹಾಕಲಿಕ್ಕೆ ಇಷ್ಟಪಡುತ್ತೇನೆ. ನಾನು ರೆಕಾರ್ಡ್‌ನಲ್ಲಿರುವುದನ್ನು ಮಾತ್ರ ಓದುತ್ತೇನೆ. ಆ ದಿವಸ ಈ ಸದನಲ್ಲಿ ನಡೆದದ್ದನ್ನು ಹೇಳುತ್ತೇನೆ, ಹೊರಗಡೆ ನಡೆದದ್ದರ ಬಗ್ಗೆ ಅವಶ್ಯಕತೆ ಇಲ್ಲ. "Eversince I became an Advocate, this is the fourth attempt on my life". ನಾನು ಆಗಲೇ ಬರೆದು ಇಟ್ಟುಕೊಂಡೆ. ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದೆ. ಅವರ ಪಕ್ಷದ ಸಭೆಯಲ್ಲಿ ಏನು ನಡೆಯಿತು ಎಂಬುದರ ಬಗ್ಗೆ ನಮಗೆ ಆಸಕ್ತಿ ಇಲ್ಲ. ಈ ರಾಜ್ಯದ ನಾಲ್ಕು ಕೋಟಿಯ ಜನರ ಮಾನ, ಪ್ರಾಣ, ಆಸ್ತಿಯನ್ನು ರಕ್ಷಣೆ ಮಾಡತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳ ಪ್ರಾಣದಮೇಲೆ ಹಲ್ಲೆ ಪ್ರಯತ್ನ ನಡೆದರೆ ಹೇಗೆ? ಇವತ್ತು ಅವರು ಒಳಾಡಳಿತ ಸಚಿವರು ಸಹ ಆಗಿದ್ದಾರೆ. ಈ ಹಲ್ಲೆ ಯಾರು ನಡೆಸಿದ್ದಾರೆಂಬುದರ ಬಗ್ಗೆ ನನ್ನ ಪ್ರಶ್ನೆಯಿಲ್ಲ. ನಡೆಸಿದವರ ಮೇಲೆ ಕಾನೂನು ಪ್ರಕಾರ ಕ್ರಮ ನಡೆದಿದೆಯಾ... Has the Criminal law is put into motion? If not, why? He should answer as the Home Minister.

ಯಾವುದೋ ಒಂದು ಗುಡಿಸಿಲಿನಲ್ಲಿ ಯಾವುದೋ ಒಂದು ಹಳ್ಳಿಯಲ್ಲಿ, ಯಾವುದೋ ಒಂದು ಸ್ಲಮ್‌ನಲ್ಲಿ ಒಬ್ಬ ವ್ಯಕ್ತಿಯ ಪ್ರಾಣವನ್ನು ತೆಗೆಯುವಂಥ ಪ್ರಯತ್ನ ನಡೆದಿದ್ದರೆ, ಅಲ್ಲಿ ಕಾನೂನಿನ ಪರಿಪಾಲನೆಯಾಗುತ್ತಿರಲಿಲ್ಲವೇ? ಇಲ್ಲಿ ಮುಖ್ಯಮಂತ್ರಿಗಳ ಪ್ರಾಣದ ಮೇಲೆ ಹಲ್ಲೆ ನಡೆದಿರುವಾಗ ಪೊಲೀಸರಿಗೆ ಏನಾದರೂ ದೂರನ್ನು ಕೊಟ್ಟಿದ್ದಾರಾ? ಕೇಸನ್ನು ನೋಂದಾವಣಿ ಮಾಡಿದ್ದಾರಾ? ವಿಚಾರಣೆ ನಡೆಯುತ್ತಾ ಇದೆಯಾ, ಅಪರಾಧಿಯನ್ನು ಅರೆಸ್ಟ್ ಮಾಡಿದ್ದೀರಾ? ಇದು ಆಗಿಲ್ಲವೆಂದರೆ ಯಾವ ಕಾರಣಕ್ಕಾಗಿ ಆಗಿಲ್ಲ? ಸನ್ಮಾನ್ಯ ಅಧ್ಯಕ್ಷರೇ, ನೀವು ಕೂಡ ವಕೀಲರು. Concealment itself is an offence under the IPC. The Chief Minister is an offender.

ಅಪರಾಧವನ್ನು ಮುಚ್ಚಿಡುವುದೇ ಒಂದು ದೊಡ್ಡ ಅಪರಾಧ. ಆದ್ದರಿಂದ ಮಾಡಿದವರು ಅಷ್ಟು ಅಪರಾಧಿಗಳಲ್ಲ. ಅದನ್ನು ಮುಚ್ಚಿಟ್ಟಂಥ ಸನ್ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅಪರಾಧಿಗಳಾಗುತ್ತಾರೆ. ಭಾರತೀಯ ದಂಡಸಂಹಿತೆಯ ಕೆಳಗಡೆ ಅಪರಾಧವನ್ನು ಮುಚ್ಚಿಡುವುದು ಕೂಡ ಒಂದು ಅಪರಾಧ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಿಂದ ಈ ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಬಯಸುತ್ತೇನೆ.

ಈ ಅಪರಾಧ ನಡೆದಿರುವುದನ್ನು ಅವರೇ ಒಪ್ಪಿಕೊಂಡಿರುತ್ತಾರೆ. ನಾನು ಈ ಸದನದಲ್ಲಿ ಹೇಳುವುದಷ್ಟೇ ಅಲ್ಲ; ಹೊರಗಡೆ ಕೂಡ ಅವರು ಒಪ್ಪಿಕೊಂಡಿದ್ದಾರೆ. ಹಾಗಿದ್ದ ಮೇಲೆ ಏತಕ್ಕೆ ಅವರು ಪೊಲೀಸ್‌ನವರಿಗೆ ದೂರು ಕೊಡಲಿಲ್ಲ. ಇವರು ಕೊಡದಿದ್ದರೆ, ಒಂದು ವೇಳೆ ಈ ಸದನದ ಮುಂದೆ ಹೇಳಿರುವುದು ಅಸತ್ಯದ ಮಾತಾಗಿರಬಹುದು. ತಮ್ಮ ರಾಜಕೀಯ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಅಥವಾ ಭಿನ್ನಮತೀಯರನ್ನು ಹಿಮ್ಮೆಟ್ಟಿಸಲಿಕ್ಕೆ ಹೇಳಿರುವಂಥ ಸುಳ್ಳು ಸ್ಟೇಟ್‌ಮೆಂಟ್ ಇರಬಹುದು. ಅದು ನಿಜವಾಗಿದ್ದಿದ್ದರೆ ಅವರು ಪೊಲೀಸಿಗೆ ಕಂಪ್ಲೇಂಟ್ ಕೊಡಬೇಕಾಗಿತ್ತು. ಇದು ಎರಡರಲ್ಲಿ ಯಾವುದು ಸತ್ಯವೆಂಬುದನ್ನು ಇವರು ನಮ್ಮ ಗಮನಕ್ಕೆ ತರಬೇಕಾಗಿತ್ತು. ಒಂದು ಕಡೆ ಅವರು ಪೋಲೀಸರಿಗೆ ಏನಾದರೂ ದೂರನ್ನೂ ಕೊಡದಿದ್ದರೆ ಈ ರಾಜ್ಯದ ನಾಲ್ಕು ಕೋಟಿಯ ಜನರ ಪ್ರಾಣ ಹಾಗೂ ಆಸ್ತಿಯನ್ನು ರಕ್ಷಣೆ ಮಾಡತಕ್ಕಂಥ ಒಳಾಡಳಿತ ಖಾತೆಯನ್ನು ಇಟ್ಟುಕೊಂಡಿರತಕ್ಕಂಥ ಸನ್ಮಾನ್ಯ ಮುಖ್ಯಮಂತ್ರಿಗಳು ಕಾನೂನನ್ನು

ಪಾಲಿಸುವುದರಲ್ಲಿ ವಿಫಲರಾಗಿದ್ದಾರೆಂದು ನಾನು ಭಾವಿಸಿಕೊಳ್ಳಬೇಕಾಗುತ್ತದೆ. ಆ ದೂರನ್ನು ಕೊಡದಿದ್ದರೆ, ಅವರು ಹೇಳುತ್ತಿರುವುದು ಸುಳ್ಳು, ಈ ಸದನದಲ್ಲಿ ಸುಳ್ಳು ಮಾತನಾಡಿದ್ದಾರೆ. ಹಾಗೂ ಅಸತ್ಯದ ಮಾತನಾಡಿದ್ದಾರೆಂದು ನಾನು ಭಾವಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಈ ಒಂದು ವಿಷಯವನ್ನು ಪ್ರಸ್ತಾಪ ಮಾಡಿ ನಾನು ಇದಕ್ಕೆ ಉತ್ತರವನ್ನು ಬಯಸುತ್ತೇನೆ. ತಾವು ಈ ಸಭೆಯಲ್ಲಿ ಮತ್ತೊಂದು ಮಾತನಾಡಿದಿರಿ. ಆವತ್ತು ನಡೆದಂಥ ಗಲಾಟೆಯಲ್ಲಿ ಏನೇನು ನಷ್ಟವಾಗಿರುತ್ತದೋ, ಅದನ್ನು ಕಾಂಗ್ರೆಸ್ ಶಾಸಕಾಂಗಪಕ್ಷ ತುಂಬಿ ಕೊಡುತ್ತದೆ ಎಂದು ಹೇಳಿದಿರಿ. ನನಗೆ ಗೊತ್ತಿತ್ತು. ಕಾಂಗ್ರೆಸ್ ಶಾಸಕಾಂಗಪಕ್ಷಕ್ಕೆ ಅಷ್ಟೊಂದು ಆರ್ಥಿಕ ಶಕ್ತಿ ಇದೆ ಎಂದು ನಮಗೆಲ್ಲಾ ಗೊತ್ತಿದೆ. ಶಾಸಕಾಂಗ ಪಕ್ಷದಲ್ಲಿ ಸಾರ್ವಜನಿಕ ಆಸ್ತಿಯನ್ನು ನಾಶ ಮಾಡಿದರೆ ಅದರ ನಷ್ಟವನ್ನು ತುಂಬಿಕೊಟ್ಟುಬಿಟ್ಟರೆ ಸಾಕೇ? ಅದನ್ನು ನೀವು ಒಪ್ಪಿಕೊಳ್ಳುತ್ತೀರಿ. ಇದೇ ರೀತಿ ಇನ್ನೊಂದು ಕಡೆ ನಡೆದರೆ ಆಗ ಏನು ಮಾಡುತ್ತೀರಿ ? ಅದಕ್ಕಾಗಿ ನಾನು ಮುಖ್ಯಮಂತ್ರಿಗಳನ್ನು ದಬಾಯಿಸುತ್ತೇನೆ, ಈ ಒಂದು ನಷ್ಟವನ್ನು ತುಂಬಿಕೊಟ್ಟರೆ ಕಾನೂನೆಲ್ಲವನ್ನೂ ಪರಿಪಾಲನೆ ಮಾಡಿದಂತೆ ಆಯಿತೇ ಎಂದು. ಈ ಸಾರ್ವಜನಿಕ ಸ್ವತ್ತನ್ನು ನಷ್ಟಮಾಡುವವರ ಬಗ್ಗೆ ನೀವು ತೆಗೆದುಕೊಂಡಿರುವ ಕ್ರಮ ಏನು? ಈ ಎರಡು ಪ್ರಶ್ನೆಗಳಿಗೆ ಮುಖ್ಯ ಮಂತ್ರಿಗಳಿಂದ ನಾನು ಉತ್ತರವನ್ನು ನಿರೀಕ್ಷಿಸುತ್ತೇನೆ.

ಶ್ರೀ ಗುರುದೇವ್ : ಇಲ್ಲಿ ಒಂದು ವಿಷಯವನ್ನು ತಾವು ತಿಳಿಯಬೇಕು. ಇದು ಸಾರ್ವಜನಿಕ ಸ್ವತ್ತಲ್ಲ. ಅಲ್ಲಿ ಒಡೆದಂಥ ಕಪ್ಪು ಸಾಸರ್ ಒಂದು ಹೋಟೆಲಿಗೆ ಸೇರಿದ್ದು. ಆ ಹೋಟೆಲಿಗೆ ನಮ್ಮ ಸಿ.ಎಲ್.ಪಿ.ಯಿಂದ ಹಣ ಕೊಡುವ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಮುಖ್ಯ ಮಂತ್ರಿಗಳ ಬಗ್ಗೆ ನನಗೆ ಒಂದು ವಿಧವಾದ ಅಪನಂಬಿಕೆ ಬರುತ್ತದೆಂದು ಆಗಲೇ ಹೇಳಿದೆ. ಅವರ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ ಒಂದು ಕಡೆ ಅವರು ಅಧಿಕಾರವನ್ನು ಏನಾದರೂ ಮಾಡಿ ಉಳಿಸಿಕೊಳ್ಳಬೇಕೆಂಬ ಹಠ, ಇನ್ನೊಂದು ಕಡೆ ಅಧಿಕಾರವನ್ನು ಏನಾದರೂ ಮಾಡಿ ಕಿತ್ತುಕೊಳ್ಳಬೇಕೆಂಬ ಹೋರಾಟ. ಇದರ ಮಧ್ಯದಲ್ಲಿ ಏನಾಗಿದೆ ಎಂದರೆ, ಇದರ ದುಷ್ಪರಿಣಾಮ ಆಡಳಿತ ಯಂತ್ರದ ಮೇಲೆ ಸಂಪೂರ್ಣವಾಗಿ ಬೀರಿದೆ. ಇದಕ್ಕೆ ಒಂದೇ ಒಂದು ಉದಾಹರಣೆ ಹೇಳುವುದಾದರೆ, ಒಬ್ಬರು ಶಾಸಕರು ಒಬ್ಬ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಟ್ರಾನ್ಸ್‌ಫರ್ ಮಾಡಿಸುವುದು. ಮುಖ್ಯ ಮಂತ್ರಿಗಳು ಎಕ್ಸಿಕ್ಯೂಟೀವ್ ಇಂಜಿನಿಯರನ್ನು ಟ್ರಾನ್ಸ್‌ಫರ್ ಮಾಡಬೇಕೆಂಬ ನೋಟನ್ನು ರುಜು ಮಾಡುವವರೆಗೆ ಅವರು ಲಾಯಲ್ ಗುಂಪಿನ ಶಾಸಕರು. ಆದರೆ ದುರಾದೃಷ್ಟವಶಾತ್ ಆ ಫೈಲು ಎಲ್ಲಿಗೆ ಬರಬೇಕು? ನಮ್ಮ ಉಪಮುಖ್ಯಮಂತ್ರಿಗಳಿಗೆ ಬರಬೇಕು. ಏಕೆಂದರೆ ಇರಿಗೇಷನ್ ಇಂಜಿನಿಯರ್ ವರ್ಗಾವಣೆಯಾದ್ದರಿಂದ ಅವರ ಅಪ್ಪಣೆಯಾಗಬೇಕು. ಚೀಫ್ ಮಿನಿಸ್ಟರ್‌ರಿಂದ ಫೈಲು ಎಸ್.ಎಂ. ಕೃಷ್ಣ ಅವರ ಆಫೀಸಿಗೆ ಬರುವಾಗ ಜೊತೆಯಲ್ಲೇ ಡಿಸಿಡೆಂಟ್ ಆಗಿ ಬರುತ್ತಾರೆ. ಬೇಕೆಂದರೆ ಪರ್ಟಿಕ್ಯುಲರ್ಸ್ ಕೊಡುತ್ತೇನೆ. ಅವರು ನಿಮ್ಮ ಜಿಲ್ಲೆಯವರು ಅಲ್ಲ, ನಮ್ಮ ಜಿಲ್ಲೆಯವರು.

ಡಾ|| ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು): ಇಷ್ಟು ಹೇಳಿದವರು ಅಷ್ಟು ಏಕೆ ಮುಚ್ಚಿಬಿಡಬೇಕು? ಅವರು ಯಾರೆಂದು ಹೇಳಿಬಿಡಿ.

ಶ್ರೀ ಜಿ. ಎಸ್. ಶಿವನಂಜಪ್ಪ : ಎಲ್ಲರೂ ಇವರ ಮೇಲೆ ಅನುಮಾನ ಮಾಡುತ್ತಾರೆ.

ಶ್ರೀ ವೈ.ಕೆ. ರಾಮಯ್ಯ : ಉದ್ದೇಶ ಇಷ್ಟೆ. ಇದರಿಂದ ಆಡಳಿತದ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂಬುದನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ತುರುವೇಕೆರೆಯಲ್ಲಿ ನಿನ್ನೆ ದಿವಸ ಬಿಡಿಓ ಅವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ನಾನು ಮುಖ್ಯ ಮಂತ್ರಿಗಳ ಹತ್ತಿರ ಟ್ರಾನ್ಸಫರ್ ಮಾಡಿ ಅಥವಾ ಮಾಡಬೇಡಿ ಎಂದು ಹೋಗುವುದಿಲ್ಲ. ಹೋದರೆ ಏನು ಹೇಳುತ್ತಾರೆ; ಇಲ್ಲ ರಾಮಯ್ಯನವರೇ ಟೈಂ ಮುಗಿದಿದೆ, ಟ್ರಾನ್ಸ್ಫರ್ ಡೆಡ್ಲೈನ್ ಹಾಕಿಕೊಂಡು ನಾವು ಮಾಡಿ ಮುಗಿಸಿದ್ದೇವೆ. ಎನ್ನುತ್ತಾರೆ. ನಾನು ಬೇಡ ಬಿಡ್ರಪ್ಪ ಎಂದು ಹೋಗಲಿಲ್ಲ. ಅದಕ್ಕೆ ನೀವು ಮಾಡಿಸಿ ಎಂದು ಕೇಳಿಕೊಂಡೆ. ನಾನು ಹೋದರೆ, ನಮ್ಮವರು ಹೋದರೆ, ಅವರ ಪೈಕಿ ಯಾರಾದರೂ ಹೋದರೆ ಈ ಉತ್ತರ ಸಿಗುತ್ತದೆ. ಬೇಡ, ಟ್ರಾನ್ಸಫರ್ ಮಾಡುವುದು ಬೇಡ. ಆದರೆ ನಿನ್ನೆ ಹೇಗೆ ತುರುವೇಕೆರೆ ಬಿಡಿಓ. ಅವರನ್ನು ಟ್ರಾನ್ಸಫರ್ ಮಾಡಿದರು? ಏತಕ್ಕೆ ಮಾಡಿದರು? ಯಾವುದೇ ಒಬ್ಬ ಅಧಿಕಾರಿಯನ್ನು ಯಾವುದಾದರೂ ಆಪಾದನೆ ಮೇಲೆ ಯಾವುದೇ ಕಾಲದಲ್ಲಿ ವರ್ಗ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಯಾವುದೇ ಕಾರಣವಿಲ್ಲದೆ ಅವರನ್ನು ವರ್ಗಾವರ್ಗಿ ಮಾಡಿದ್ದಾರೆ. ಕಿಬ್ಬನಹಳ್ಳಿಯಲ್ಲಿದ್ದಂತ ಎಕ್ಸಿಕ್ಯೂಟೀವ್ ಇಂಜಿನಿಯರನ್ನು ಯಾವುದೇ ಕಾರಣವಿಲ್ಲದೆ ಮುಖ್ಯ ಮಂತ್ರಿಗಳು ಅಲ್ಲಿಂದ ವರ್ಗ ಮಾಡಿ ಎಂದು ಉಪಮುಖ್ಯಮಂತ್ರಿಗಳಿಗೆ ಟಿಪ್ಪಣಿ ಕಳುಹಿಸಿದ್ದಾರೆ. ನಾನು ನೇರವಾಗಿ ಹೇಳಬೇಕಾಗುತ್ತದೆ. ಇದಕ್ಕೆ ಬೇರೆ ಯಾವ ಕಾರಣವೂ ಇಲ್ಲ. ಶಾಸಕರನ್ನು ತಮ್ಮ ಕಡೆಗೆ ಎಳೆದುಕೊಳ್ಳುವುದಕ್ಕೆ ಆಡಳಿತವನ್ನು ಕೊಡುತ್ತಿದ್ದಾರೆ. ಅದು ಬಿಟ್ಟರೆ ಇನ್ನು ಯಾವ ಕಾರಣವೂ ನನಗೆ ಕಾಣುವುದಿಲ್ಲ. ಆತ ಭ್ರಷ್ಟ ಎಂದು ಮಾಡಿದ್ದರೆ ನಾನು ಯೋಚನೆ ಮಾಡುವುದಕ್ಕೆ ಹೋಗುವುದಿಲ್ಲ. ಆತ ಕೆಲಸ ಮಾಡುವುದಿಲ್ಲವೆಂದು ಮಾಡಿದ್ದರೆ ನಾನು ಕೇಳುವುದಕ್ಕೆ ಹೋಗುವುದಿಲ್ಲ. ಅವನಿಗೆ 6 ವರ್ಷ ಸರ್ವೀಸ್ ಆಗಿತ್ತು ಎಂದರೆ ಕೇಳುವುದಕ್ಕೆ ಹೋಗುವುದಿಲ್ಲ. ಆ ಇಂಜಿನಿಯರ್ ಹೋಗಿ 4 ತಿಂಗಳಾಗಿದೆ. ಅದು ಮಾಧುಸ್ವಾಮಿಯವರ ಕ್ಷೇತ್ರವಂತೆ. ನನ್ನ ಉದ್ದೇಶ ಇಷ್ಟೇ; ಈ ವರ್ಗಾವರ್ಗಿಗಳು ಇವತ್ತು ಸಹ ನಡೆಯುತ್ತಿವೆ. ಒಂದು ಗುಂಪಿನವರು ಅಧಿಕಾರವನ್ನು ಅಕ್ರಮ ಮಾಡಿಕೊಳ್ಳುವುದಕ್ಕೆ ಅಧಿಕಾರ ಯಂತ್ರವನ್ನು ಉಪಯೋಗಿಸಿಕೊಳ್ಳುತ್ತಾರೆ. ಇನ್ನೊಂದು ಗುಂಪಿನವರು ಅಧಿಕಾರ ಉಳಿಸಿಕೊಳ್ಳುವುದಕ್ಕೆ ಈ ಅಧಿಕಾರದ ದುರುಪಯೋಗವಾಗುತ್ತಿದೆ. ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ಕಾರ್ಯದರ್ಶಿಯವರ ವರ್ಗವಾಗಿದೆ. ಯಾವ ಕಾರಣಕ್ಕಾಗಿ ವರ್ಗ ಮಾಡಿದ್ದಾರೆಂದು ಗೊತ್ತಿಲ್ಲ. ನಾನು ತಮಗೆ ವರ್ಗ ಮಾಡಿ ಎಂದು ಕೇಳಿದವನು ಅಲ್ಲ. ಆ ವರ್ಗ ರದ್ದಾಯಿತು. ಏತಕ್ಕೆ ರದ್ದಾಯಿತು ಎಂದರೆ ಅವರ ಪಕ್ಷದ 12 ಜನ ಶಾಸಕರು ಹೋಗಿ ರದ್ದು ಮಾಡಿ ಎಂದು ಕೇಳಿದರಂತೆ, ರದ್ದು ಮಾಡಿದರು. ನನಗೆ ಆಶ್ಚರ್ಯವಾಗುತ್ತದೆ.

ಈ ವರ್ಗಾವರ್ಗಿಗಳು ರಾಜಕೀಯದ ದುರ್ಲಾಭವನ್ನು ಈವತ್ತೂ ಕೂಡ ಪಡೆದುಕೊಳ್ಳುತ್ತವೆ. ಈ ರೀತಿಯ ವರ್ಗಾವರ್ಗಿಯಿಂದ ಆಡಳಿತ ಮಾಡುತ್ತಿರುವ ಅಧಿಕಾರಿಗಳ ಮನಸ್ಥೈರ್ಯ ಕುಸಿದುಹೋಗಿದೆ. ಆಡಳಿತ ನಿಷ್ಕ್ರೀಯವಾಗಿದೆ.

ಶ್ರೀ ಜಿ.ಎಂ. ಕಾನಡೆ : ವರ್ಗಾವರ್ಗಿ ವಿಚಾರದಲ್ಲಿ ಅಡಿಪಾಯ ಹಾಕಿದ್ದು ಜನತಾದಳ ಸರ್ಕಾರ ಆಡಳಿತ ನಡೆಸುತ್ತಿದ್ದಾಗ. ಆಗ ಒಬ್ಬೊಬ್ಬ ಎಸ್.ಐ.ಗಳನ್ನು ಮೂರು ಮೂರು ತಿಂಗಳಿಗೆ 5 ಕಡೆಗೆ ವರ್ಗಾವಣೆ ಮಾಡಿದ್ದು ಇದೆ ಸ್ವಾಮಿ. ಸುಮ್ಮನೆ ಏಕೆ ಹೇಳುತ್ತೀರಿ? ನಮ್ಮ ಊರಿಗೆ ಒಬ್ಬ ಡಾಕ್ಟರನ್ನು ಹಾಕಿ 20 ದಿವಸಕ್ಕೇ ತೆಗೆದರು. ಆದ್ದರಿಂದ ಬೇರೆ ಇದ್ದರೆ ಹೇಳಿ. ವರ್ಗಾವರ್ಗಿ ಅಡಿಪಾಯ ಏನಿದ್ದರೂ ಜನತಾ ಸರ್ಕಾರದ್ದು.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತ ಎನ್ನುವ ಸಂಸ್ಥೆ ನಮ್ಮಲ್ಲಿ ಇದೆ. ಈ ರಾಜ್ಯದಲ್ಲಿ ಸಾರ್ವಜನಿಕ ಜೀವನವನ್ನು ಸ್ವಚ್ಛಮಾಡಬೇಕೆನ್ನುವ ಅತ್ಯಂತ ಉತ್ಕಟವಾದ ಆಕಾಂಕ್ಷೆ ಇಟ್ಟುಕೊಂಡು ಸ್ಥಾಪನೆ ಮಾಡಿದ ಸಂಸ್ಥೆ ಇದು.

ಇದರ ಕಾರ್ಯವೈಖರಿ ನೋಡಬೇಕು. ಒಳಾಡಳಿತ ಖಾತೆ ಹೊತ್ತಿರುವ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಗುಬ್ಬಿಯಲ್ಲಿ ಒಬ್ಬ ಸರ್ಕಲ್ ಹಾಗೂ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಲಂಚ ತೆಗೆದುಕೊಂಡಿದ್ದಾರೆಂದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಲೋಕಾಯುಕ್ತದ ಅಧಿಕಾರಿಗಳು ಹೋಗುತ್ತಾರೆ. ಆ ಲೋಕಾಯುಕ್ತದ ಅಧಿಕಾರಿ ಮೇಲೆ ಇವರು ಕೈ ಮಾಡಿದರು. ಲೋಕಾಯುಕ್ತದವರು ಕೆಲಸ ಮಾಡುವುದಕ್ಕೆ ಅಡ್ಡಿ ಮಾಡಿದರು, ತಡೆದರು ಎನ್ನುವ ಉದ್ದೇಶಕ್ಕೆ ಅಲ್ಲಿ ಇರುವ ಮುನಿಯಲ್ಲಪ್ಪರೆಡ್ಡಿ ಮತ್ತು ಚಂದ್ರೇಗೌಡ ಎನ್ನುವ ಎಸ್‌ಐ ಹಾಗೂ ಸಿಐ ಇವರನ್ನು ಈ ಸರ್ಕಾರ ಸಸ್ಪೆಂಡ್ ಮಾಡುತ್ತದೆ. ಅದೇ ಡಿಸಿಪಿ ಕೆಂಪಯ್ಯನವರು ಲೋಕಾಯುಕ್ತಕ್ಕೆ ಏನು ಮಾಡಿದರು? ಚಂದ್ರೇಗೌಡ ಮತ್ತು ಮುನಿಯಲ್ಲಪ್ಪರೆಡ್ಡಿಯವರು ಏನು ಮಾಡಿದರೋ ಅದೇ ಕೆಲಸವನ್ನು ಕೆಂಪಯ್ಯನವರು ಲೋಕಾಯುಕ್ತದವರಿಗೆ ಮಾಡಿದರು. ಏಕೆ ಅವರನ್ನು ಸಸ್ಪೆಂಡ್ ಮಾಡಿಲ್ಲ? ಇದರ ಕಾರಣ ನನಗೆ ಗೊತ್ತಾಗಬೇಕಲ್ಲವೇ? ಅಲ್ಲಿರುವವರು ಸಣ್ಣ ಅಧಿಕಾರಿಗಳು, ಅವರಿಗೆ ರಕ್ಷಣೆ ಇಲ್ಲ, ಅವರು ಲೋಕಾಯುಕ್ತ ಮಾಡಿದ ಕೆಲಸಕ್ಕೆ ಅಡ್ಡಿ ಮಾಡಿದರು ಎಂಬ ಒಂದೇ ಒಂದು ಕಾರಣಕ್ಕೆ ಸಸ್ಪೆಂಡ್ ಮಾಡುತ್ತಾರೆ. ಡಿಸಿಪಿ ಕೆಂಪಯ್ಯನವರಿಗೆ ಪ್ರಭಾವ ಇದೆ. ಐಪಿಎಸ್ ಅಧಿಕಾರಿಗಳಿಗೆ ಪ್ರಭಾವ ಇದೆ. ಅವರನ್ನು ನೋಡಿ ಮುಚ್ಚಿ ಹಾಕಿ ಸುಮ್ಮನೆ ಕುಳಿತುಕೊಳ್ಳುತ್ತಾರೆ. ಅದಕ್ಕಾಗಿ ಈ ಸರ್ಕಾರ ಈ ರಾಜ್ಯವನ್ನು ಆಳುವ ಸಂದರ್ಭದಲ್ಲಿ ಪಕ್ಷಪಾತದ ನೀತಿ ಅಳವಡಿಸುತ್ತಿದೆ. ಪಕ್ಷಪಾತದ ನಡವಳಿಕೆ ನಡೆಯುತ್ತಿದೆ. ಅದಕ್ಕಾಗಿ ರಾಜೀನಾಮೆ ಕೊಡಬೇಕು. ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳಿಗೆ ಆಗಲೇ ಒಂದು ಸಾರಿ ಹೇಳಿದೆವು. ಅವರಿಗೆ ಪಾಪ ಮೈ ಚುಚ್ಚಿಕೊಳ್ಳುವುದಕ್ಕೆ ಅವಕಾಶ ಇಲ್ಲ. ಎಷ್ಟೊಂದು ಖಾತೆಗಳು ಎಂದರೆ ನಿದ್ರೆ ಮಾಡುವುದಕ್ಕೆ ಆಗದಿರುವಷ್ಟು ಖಾತೆಗಳ ಭಾರ ಅವರಿಗೆ. ನಮ್ಮ ಮಂಜುನಾಥ್ ಅವರು, ಯೋಜನಾ ಮಂತ್ರಿಗಳು, ಕೆಲಸ ಇಲ್ಲದೇ ಇಲ್ಲಿ ಬಂದು ನಿದ್ರೆ ಮಾಡುವಂತಹ ಖಾತೆ. ಒಂದು ಕಡೆ ಅಷ್ಟೊಂದು ಖಾತೆ ಭಾರದಿಂದ ನಿದ್ರೆ ಮಾಡುವುದಕ್ಕೆ ಆಗುತ್ತಿಲ್ಲ. ಇವರಿಗೆ ಕೆಲಸ ಇಲ್ಲದೇ ಇರುವ ಖಾತೆ ಕೊಟ್ಟು ನಿದ್ರೆ ಮಾಡುತ್ತಾರೆ. ಹೋದ ಅಧಿವೇಶನದಲ್ಲಿ ಸಹ ನಿದ್ರೆ ಮಾಡುತ್ತಿದ್ದಾರೆ ಎಬ್ಬಿಸಿ ಎಂದೆವು. ಅವರು ಸಕ್ಕರೆಗಾದರೂ ಮಂತ್ರಿಯನ್ನಾಗಿ ಮಾಡಲಿ, ಜವಳಿಗಾದರೂ ಮಂತ್ರಿಯನ್ನಾಗಿ ಮಾಡಲಿ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ The Chief Minister has himself contributed to create this situation.

ಉಪಮುಖ್ಯಮಂತ್ರಿಗಳ ಹುದ್ದೆ ಸೃಷ್ಟಿ ಮಾಡಿ ಅವರನ್ನು ಉಪಮುಖ್ಯಮಂತ್ರಿಗಳಾಗಿ ರಾಜ್ಯಕ್ಕೆ ನೇಮಕ ಮಾಡಿದಾಗ ನಾನು ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಈ ಸದನದಲ್ಲಿ ಹೇಳಿದೆ. ಯಾವ ಉದ್ದೇಶ ಸಾಧನೆಗೆ ಆ ಹುದ್ದೆ ಸೃಷ್ಟಿ ಮಾಡಿದ್ದೀರೋ ಆ ಉದ್ದೇಶ ಸಾಧನೆ ಆಗುವುದಿಲ್ಲ ಎಂದು. ಆವತ್ತು ಈ ಮಾತು ಹೇಳಿದಾಗ ಅರ್ಥ ಆಗಲಿಲ್ಲ. ಆದರೆ ಮೊನ್ನೆ ಬಳ್ಳಾರಿಯಲ್ಲಿ ಹೇಳುತ್ತಾರೆ. ಹೌದು ಅದರ ಉದ್ದೇಶ ಸಾಧನೆ ಆಗಿಲ್ಲ ಎಂದು. ಇವತ್ತು ಒಪ್ಪಿಕೊಳ್ಳುತ್ತಾರೆ. ಯಾವ ಉದ್ದೇಶ ಇಟ್ಟು ನಾನು ಆ ಸ್ಥಾನವನ್ನು ಸೃಷ್ಟಿಮಾಡಿದೆನೋ ಆ ಉದ್ದೇಶದ ಸಾಧನೆ ಆಗಿಲ್ಲ ಎಂದು ಬಳ್ಳಾರಿಯಲ್ಲಿ ಹೇಳುತ್ತಾರೆ. ಅದನ್ನು ಮೊದಲೇ ನಾವು ನಿರೀಕ್ಷೆ ಮಾಡಿದ್ದೆವು. ಮುಂದೆ ಬರುವ ಪರಿಸ್ಥಿತಿಯನ್ನು ಊಹೆ ಮಾಡಿ ಭಿನ್ನಮತ ಸೃಷ್ಟಿ ಆಗದಿರಲಿ, ವಿಭಿನ್ನತೆ ಬರದಿರಲಿ ಎನ್ನುವ ಆಸೆ ಇಟ್ಟುಕೊಂಡು ಏನು ಮಾಡಿದರೋ ಆ ಉದ್ದೇಶ ಸಾಧನೆ ಆಗಿಲ್ಲ. ಇದು ಉಪಮುಖ್ಯಮಂತ್ರಿ ಸೃಷ್ಟಿ ಮಾಡುವ ಮುಖಾಂತರ ಭಿನ್ನಮತವನ್ನು ತಡೆಯಲಿಕ್ಕೆ ಮಾಡಿದಂತಹ ಮುಖ್ಯಮಂತ್ರಿಗಳ ಪ್ರಯತ್ನದ ವಿಫಲತೆ.

ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದ್ದೆ; ಏನೆಂದರೆ, ಈವೊಂದು ನಿರ್ಣಯ ಮಂಡಿಸುವುದರಿಂದ ಈ ಸರ್ಕಾರವನ್ನು ನಾವು ತೆಗೆದುಹಾಕುತ್ತೇವೆನ್ನುವ ಭ್ರಮೆ ನಮಗೆ

ಇಲ್ಲ ಎಂದು; ಕೇವಲ 25 ಶಾಸಕರ ಗುಂಪಿನ ನಾಯಕರು 180 ಜನ ಶಾಸಕರ ಕಾಂಗ್ರೆಸ್ ಸರ್ಕಾರವನ್ನು ವಜಾಮಾಡುವಂತಹ ಒತ್ತಾಯಿಸುವಂತಹ ಕೂಗು ರಾಜಭವನದ ಮೇಲೆ ಏನು ಪರಿಣಾಮ ಮಾಡಬಹುದು ಎಂದು ಸನ್ಮಾನ್ಯ ಉಪಮುಖ್ಯಮಂತ್ರಿಗಳ ವ್ಯಾಖ್ಯಾನ. ಅದು ನಮಗೆ ಗೊತ್ತಿದೆ. ಆದರೆ ಹೊರಗಡೆ ಈ ಸರ್ಕಾರವನ್ನು ತೆಗೆಯುವುದಕ್ಕೆ ಅವರು ಮಾಡುತ್ತಿರುವ ಎಲ್ಲಾ ಪ್ರಯತ್ನಗಳು ನಿಚ್ಚಳವಾಗಿ ನಮ್ಮ ಕಣ್ಣಿಗೆ ಕಾಣುತ್ತಿದೆ. ಸೂರ್ಯ ಚಂದ್ರರ ಬೆಳಕು ಎಷ್ಟು ಸ್ಪಷ್ಟ ಎಷ್ಟು ಸತ್ಯ ಅಷ್ಟೇ ಸತ್ಯವಾಗಿ ಅವರ ನಡವಳಿಕೆಗಳು ಹೊರಗಡೆ ನಮಗೆ ಕಾಣುತ್ತಿವೆ. ಅದು ಇದ್ದಾಗ ಒಳಗಡೆ ನಡೆಯುವಂತಹ ಜಗಳದಿಂದ ಇವರನ್ನು ಅಧಿಕಾರದಿಂದ ಇಳಿಸಬೇಕು ಎಂದು ನಾವು ಹೊರಟಾಗ ಮಾನ್ಯ ಉಪ ಮುಖ್ಯಮಂತ್ರಿಗಳು ಈ ತರಹ ವ್ಯಂಗ್ಯದ ಮಾತು ಆಡಿದರು. ಇದು ನನಗಂತೂ ಅರ್ಥವಾಗುವುದಿಲ್ಲ. ಪಕ್ಷದ ಒಳಜಗಳದಿಂದ ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಆತಂಕಗಳು ಬರುತ್ತಿವೆ ಎನ್ನುವುದು ನಮ್ಮ ವಾದ. "ಅಬಕಾರಿ ಹರಾಜಿನಲ್ಲಿ ವಿಳಂಬ, ವಾಣಿಜ್ಯ ತೆರಿಗೆಯಲ್ಲಿ ಖೋತ, ಸ್ಟಾಂಪ್ ನೋಂದಾಣಿಕೆ ಕಾರ್ಯಗಳಲ್ಲಿ ಕೆಲಸ ಸ್ಥಗಿತಗೊಂಡು ಆ ಕಾರಣಗಳಿಂದ ರಾಜ್ಯದ ಬೊಕ್ಕಸಕ್ಕೆ ಉಂಟಾಗಿರತಕ್ಕ ನಷ್ಟದಿಂದ ಮುಂದಿನ ಅವಧಿಯ ಯೋಜನಾಗಾತ್ರ ಗಣನೀಯವಾಗಿ ಕುಸಿಯಲಿದೆ" ಎಂದು ನಾನು ಹೇಳುತ್ತೇನೆ. ಇದಕ್ಕೆ ಮಾನ್ಯ ಬಂಗಾರಪ್ಪನವರು ಬೆಂಬಲ ಕೊಟ್ಟರು. ಅವರು ನಮ್ಮ ಪಕ್ಷದವರಲ್ಲ; ನಿಮ್ಮ ತಪ್ಪು ಆರ್ಥಿಕ ನೀತಿಯಿಂದ ಯೋಜನಾಗಾತ್ರ ಮುಂದೆ ಕುಸಿಯಲಿದೆ ಎನ್ನುವ ಅಪವಾದವನ್ನು ಈ ಸಭೆಯಲ್ಲಿ ಮಾಡುತ್ತಿದ್ದೇನೆ. ನನ್ನ ಅಪವಾದಕ್ಕೆ ಧಾರವಾಡದಿಂದ ಮಾನ್ಯ ಬಂಗಾರಪ್ಪನವರು ಒತ್ತು ಕೊಡುತ್ತಾರೆ. ಅವರದ್ದೇ ಸ್ಟೇಟ್‌ಮೆಂಟ್ ಇದು"ಅಬಕಾರಿ ಹರಾಜಿನ ವಿಳಂಬ, ವಾಣಿಜ್ಯ ತೆರಿಗೆಯಲ್ಲಿ ಖೋತ, ಸ್ಟಾಂಪ್ ಹಾಗೂ ನೋಂದಾಣಿಕೆ ಕಾರ್ಯಗಳು ಸ್ಥಗಿತಗೊಂಡು ಆ ಕಾರಣದಿಂದ ರಾಜ್ಯದ ಬೊಕ್ಕಸಕ್ಕೆ ಉಂಟಾಗಿರತಕ್ಕ ನಷ್ಟದಿಂದ ಮುಂದಿನ ಅವಧಿಯ ಯೋಜನಾಗಾತ್ರ ಗಣನೀಯವಾಗಿ ಕುಸಿಯಲಿದೆ". ಅಷ್ಟೇ ಅಲ್ಲ, ನಮ್ಮ ವಾದಕ್ಕೆ ಪುಷ್ಠಿ ಕೊಡುವಂತಹ ರೀತಿಯಲ್ಲಿ ಅವರ ಪಕ್ಷದ 44 ಜನ ಶಾಸಕರು ಹೇಳುತ್ತಾರೆ, ಸಾರಾಯಿ ವ್ಯವಹಾರದಲ್ಲಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ಗುತ್ತಿಗೆದಾರರ ಜೊತೆ ಶಾಮೀಲಾಗಿ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಕೋಟ್ಯಾಂತರ ರೂಪಾಯಿ ಆದಾಯ ತಪ್ಪಿ ಹೋಗಲು ಕಾರಣವಾಗಿರುವುದರಿಂದ ಮುಖ್ಯಮಂತ್ರಿಯವರು ತಮ್ಮ ಸ್ಥಾನವನ್ನು ತ್ಯಜಿಸಬೇಕೆಂದು ಹೇಳಿದ್ದಾರೆ.

ನಾವು ಇಲ್ಲಿ 27 ಜನ ಎಂದು ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ್ದಾರೆ. ನಮ್ಮ ಕೂಗು ರಾಜಭವನಕ್ಕೆ ಎಷ್ಟು ಮುಟ್ಟಬಹುದೆಂದು ಹೇಳಿದ್ದಾರೆ. ಆದರೆ ಈ 44 ಜನರ ಕೂಗು? ಆದ್ದರಿಂದ ಈವೊಂದು ಪಕ್ಷದಲ್ಲಿನ ಆಂತರಿಕ ವಿಷಯಗಳು ನಮಗೆ ಸಂಬಂಧವಿಲ್ಲದಿದ್ದರೂ ಈ ಆಂತರಿಕ ಕಿತ್ತಾಟದಿಂದ ಉಂಟಾಗಿರತಕ್ಕ ಪರಿಸ್ಥಿತಿಯಿಂದ ಆಡಳಿತದ ಮೇಲೆ ಅಭಿವೃದ್ಧಿ ಕೆಲಸಗಳ ಮೇಲೆ ಆಗಿರುವಂತಹ ಪರಿಣಾಮವನ್ನು ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತಂದು ಆ ಕಾರಣಕ್ಕೆ ಇವರು ರಾಜೀನಾಮೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೊಯಿಲಿಯವರ ನಾಯಕತ್ವವನ್ನು ವಿರೋಧಿಸುವ ಸಚಿವರು ಅವರ ಸಂಪುಟದಿಂದ ಹೊರಬರಬೇಕು. ಪ್ರಜಾಪ್ರಭುತ್ವ ನೀತಿಯಲ್ಲಿ ನಿಯಮಗಳಲ್ಲಿ ಕನಿಷ್ಟ ನಂಬಿಕೆ ನಿಮಗೆ ಏನಾದರೂ ಇದ್ದರೆ if you have a minimum belief ನಾಯಕರ ಬಗ್ಗೆ ಸ್ವಲ್ಪ ಕಿಂಚಿತ್ತು ಭಿನ್ನಾಭಿಪ್ರಾಯ ಬಂದಾಗ ಸಚಿವ ಸ್ಥಾನದಿಂದ ಹೊರಗೆ ಬರಬೇಕಾಗಿದ್ದು ನಿಮ್ಮ ಧರ್ಮ, ಹಾಗೂ ನಿಮ್ಮ ಕರ್ತವ್ಯ. ಧರ್ಮ ಮತ್ತು ಕರ್ತವ್ಯದ ಜೊತೆಗೆ ಈ ರಾಜ್ಯದ ಆಡಳಿತವನ್ನು ಸರಿ ಮಾಡಬೇಕು ಆ ದೃಷ್ಟಿಯಿಂದ ಇಲ್ಲಿ ನೀವು ರಾಜೀನಾಮೆ

ಕೊಟ್ಟು ಈಚೆಗೆ ಬನ್ನಿ. ಮುಖ್ಯಮಂತ್ರಿಗಳು ಹೇಳುತ್ತಾರೆ, ನನಗೆ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಮಾಡಿದ್ದು ಭ್ರಮನಿರಶನವಾಗಿದೆಯೆಂದು. Then, why you have kept quite? ರಾಜ್ಯದ ಜನ ಬೀದಿ ಬೀದಿಯಲ್ಲಿ ಕೇಳುತ್ತಿದ್ದಾರೆ, ಮುಖ್ಯ ಮಂತ್ರಿಗಳೇ, ನಿಮ್ಮ ಮೇಲೆ ನಂಬಿಕೆ ಇಲ್ಲದಿರುವಂಥ ಇಬ್ಬರು ಮಂತ್ರಿಗಳನ್ನು ಮೊದಲು ಆಚೆಗೆ ಕಳುಹಿಸಿ ಎಂದು. ಇದೇ ಜನ ಕೇಳುತ್ತಿದ್ದಾರೆ, ನೀವು ನನ್ನಲ್ಲಿ ಎಷ್ಟು ವಿಶ್ವಾಸವನ್ನು ವ್ಯಕ್ತಪಡಿಸುತ್ತೀರೋ ನಾನು ಅಷ್ಟೇ ವಿಶ್ವಾಸವನ್ನು ವ್ಯಕ್ತಮಾಡುತ್ತೇನೆಂದು ಒಬ್ಬರು ಮಂತ್ರಿಗಳು ಹೇಳುತ್ತಾರೆ. ಇನ್ನೊಬ್ಬರು ಇದನ್ನೇ ಹೇಳುತ್ತಾರೆ, ನೀವು ಎಷ್ಟು ನನ್ನ ಕೈ ಬಲಪಡಿಸುತ್ತಿರೋ ನಾನು ಅಷ್ಟೇ ನಿಮ್ಮ ಕೈ ಬಲಪಡಿಸುತ್ತೇನೆಂದು ಹೇಳುತ್ತಾರೆ.

5.10 ಪಿ.ಎಂ.

ಇನ್ನೊಬ್ಬರು ಹೇಳುತ್ತಾರೆ, ಈ ರಾಜ್ಯದ ಮುಖ್ಯಮಂತ್ರಿಗಳು ಸುಳ್ಳಿನ ಹೊರೆಯೆಂಬ ಈ ಮಾತನ್ನು ಒಬ್ಬರು ಮಾಜಿ ಮಂತ್ರಿಗಳು ಹೇಳುತ್ತಾರೆ. ಸುಳ್ಳು ಎಂಬ ಪದವನ್ನು ನಿಘಂಟಿನಿಂದ ತೆಗೆದು, ಮೊಯ್ಲಿ ಎಂಬ ಹೆಸರಿನ ಪದವನ್ನು ಇಡಬೇಕೆಂದು ಹೇಳುತ್ತಾರೆ. ಇದನ್ನು ನಾವು ಹೇಳುತ್ತಾ ಇಲ್ಲ, ಶ್ರೀಮಾನ್ ಚಿಕ್ಕೇಗೌಡರು ಹೇಳಿದ್ದಾರೆ. ಇದರಲ್ಲೇನೂ ಮುಚ್ಚುಮರೆ ಇಲ್ಲ, ರಾಜಾರೋಷವಾಗಿ ಹೇಳಿದ್ದಾರೆ. ನಾನು ಅದಕ್ಕೇ ಹೇಳಿದ್ದು, ಒಬ್ಬ ಮಂತ್ರಿ ಸಚಿವ ಸಂಪುಟದ ಸದಸ್ಯರಾಗಿದ್ದ ಮೇಲೆ ಜಂಟಿ ಜವಾಬ್ದಾರಿ, ಪ್ರಜಾಪ್ರಭುತ್ವದಲ್ಲಿ ಸಚಿವ ಸಂಪುಟದ ನಿಯಮಾವಳಿಗಳ, ಸಿಸ್ಟಂ ಬಗ್ಗೆ ತಿಳಿದುಕೊಂಡಿರಬೇಕು ಎಂದು ; ನಿಮಗೆ ಈ ನಿಯಮಾವಳಿಗಳ ಬಗ್ಗೆ ಕನಿಷ್ಠವಾದ ಗೌರವ ಇದ್ದರೆ, ಖಜಾನೆ ಖಾಲಿಯಾಗಿದೆ ಎಂದು ಹೇಳುತ್ತಾ ಇರಲಿಲ್ಲ. ಈ ಮಾತನ್ನು ನಾನು ಆಡುತ್ತಾ ಇಲ್ಲ. ಈ ಮಾತನ್ನು ಈ ರಾಜ್ಯದ ಕಂದಾಯ ಖಾತೆ ಹೊಂದಿರುವಂಥ, ಹಿರಿಯ ಸಚಿವರಾದ ರಾಜಶೇಖರಮೂರ್ತಿಯವರು ಹೇಳಿದ್ದಾರೆ. ಈ ರಾಜ್ಯದ ಖಜಾನೆ ಖಾಲಿಯಾಗಿದೆ ಎಂದು ಹೇಳುತ್ತಾರೆ. ಮುಖ್ಯಮಂತ್ರಿಗಳು ಹೇಳುತ್ತಾರೆ, ರಾಜ್ಯದ ಖಜಾನೆ ಖಾಲಿಯಾಗಿಲ್ಲ, ಕೆಲವರ ಜೇಬು ಖಾಲಿಯಾಗಿದೆ ಎಂದು ಹೇಳುತ್ತಾರೆ. ನಾನು ಮುಖ್ಯಮಂತ್ರಿಗಳಿಗೆ ಈ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವರಿಬ್ಬರಲ್ಲಿ ಯಾರು ಹೇಳುವುದು ಸರಿ. ರಾಜಶೇಖರಮೂರ್ತಿಯವರು ಬೇರೆ ಅಲ್ಲ, ಮಲ್ಲಿಕಾರ್ಜುನ ಖರ್ಗೆಯವರು ಬೇರೆ ಅಲ್ಲ, ರಂಗನಾಥ್‌ರವರು ಬೇರೆ ಅಲ್ಲ, ಇವರೆಲ್ಲರೂ ಒಂದೇ, ಸರ್ಕಾರ ಒಂದೇ. ನೀವು ನೀವೇ ಹೇಳಿದಮೇಲೆ ಯಾವುದು ಸರಿ, ಯಾವುದು ತಪ್ಪು ಎಂಬುದು ಗೊತ್ತಾಗಬೇಕಲ್ಲ. ರಾಜಶೇಖರ ಮೂರ್ತಿಯವರು ಹೇಳಿದ ಹಾಗೆ ಖಜಾನೆ ಖಾಲಿಯಾಗಿ ಹೋಗಿದೆಯೇ ಅಥವಾ ಮುಖ್ಯಮಂತ್ರಿಗಳು ಹೇಳಿದ ರೀತಿ ಖಜಾನೆ ತುಂಬಿತುಳುಕುತ್ತಿದೆಯೇ, ಇದರಲ್ಲಿ ಯಾವುದು ಸರಿ. ಈ ರಾಜ್ಯದ ಜನ ಯಾವುದನ್ನು ನಂಬಬೇಕು; ಏಕೆಂದರೆ ಆಚೆಕಡೆ ಜನ ಕೇಳುತ್ತಾರೆ. 4 ಕೋಟಿ ಜನರೂ ಇಲ್ಲಿ ಬಂದು, ಕೇಳುವುದಕ್ಕೆ ನಿಂತುಕೊಳ್ಳುವುದಕ್ಕಾಗುವುದಿಲ್ಲ. ಜನಗಳಿಗೆ ಊರಿನಲ್ಲಿ ಬೇರೆ ಕೆಲಸಗಳು ಇರುತ್ತವೆ; ಎಲ್ಲರೂ ಕೈಗೆ ಸಿಕ್ಕುವುದಿಲ್ಲ. ಅದಕ್ಕೇ ನಾನು ನಮ್ಮ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಗಳು ಹೇಳಿದ ಮಾತು ಸರಿಯೇ ಅಥವಾ ರಾಜ್ಯದ ಕಂದಾಯ ಮಂತ್ರಿಗಳು ಹೇಳಿದ ಮಾತು ಸರಿಯೇ? ಏಕೆಂದರೆ ಆಚೆಕಡೆ ರಾಜ್ಯದ ಜನತೆ ಕೇಳುತ್ತಾರೆ. ಅದಕ್ಕಾಗಿ ನಾನು ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ, ಇಬ್ಬರಲ್ಲಿ ಯಾರಾದರೂ ಒಬ್ಬರು ಸುಳ್ಳು ಹೇಳುತ್ತಾ ಇರಬೇಕು. ನೀವು ಸತ್ಯ ನುಡಿಯುತ್ತೀರೋ ಅಥವಾ ಅವರು ಸತ್ಯ ನುಡಿಯುತ್ತಾರೋ ಎಂದು ನಮಗೆ ತಿಳಿಯಬೇಕಾಗಿದೆ.

ನನಗೆ ಮಾನ್ಯ ವೀರಪ್ಪ ಮೊಯ್ಲಿಯವರ ಬಗ್ಗೆ ವೈಯಕ್ತಿಕವಾಗಿ ಗೌರವವಿದೆ. ಆದರೆ, ವಿಧಿ ಇಲ್ಲದೇ ಒಂದು ನೋವಿನ ಮಾತನ್ನು ಹೇಳುತ್ತಿದ್ದೇನೆ. ಈ ವಿಷಯದಲ್ಲಿ

ಮೊಯ್ಲಿಯವರು ಹೇಳತಕ್ಕಂಥ ಮಾತು ನೂರಕ್ಕೆ ನೂರು ಅಸತ್ಯವಾದ ಮಾತು. ಯಾವ ವಿಷಯದಲ್ಲಿ ಖಜಾನೆ ತುಂಬಿ ತುಳುಕುತ್ತಿದೆ; ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಮತ್ತು ಈ ಮಾತು ನೂರಕ್ಕೆ ನೂರು ಅಸತ್ಯವಾದ ಮಾತು. ಮಾನ್ಯ ಮುಖ್ಯಮಂತ್ರಿಗಳೇ, ನಿಮ್ಮ ಖಜಾನೆ ತುಂಬಿ ತುಳುಕುವುದಾದರೆ, ಅಲ್ಲಿ ನೀರಾವರಿ ಖಾತೆಯ ಕಾರ್ಯದರ್ಶಿಯವರು ಕುಳಿತಿದ್ದಾರೆ, ಕೃಷ್ಣಾ, ಕಾವೇರಿಗೆ 83 ಕೋಟಿ ರೂಪಾಯಿಗಳ ಬಿಲ್ಲನ್ನು ಏಕೆ ಕೊಟ್ಟಿಲ್ಲ? ಚೆಕ್ ಬರೆಯುವುದಕ್ಕೆ ಟೈಮ್ ಇಲ್ಲವೇ? ರುಜು ಮಾಡುವುದಕ್ಕೆ ಕಾಲಾವಕಾಶವಿಲ್ಲವೇ? ಏನು ಕಾರಣ? ನಿಮ್ಮ ಮಾತು ಸತ್ಯ ಇದ್ದರೆ, ನೀವು ಹೇಳುತ್ತಿರತಕ್ಕಂಥ ಮಾತು ನಿಜವಿದ್ದರೆ, ನಿಮ್ಮ ಖಜಾನೆ ತುಂಬಿ ತುಳುಕುತ್ತಾ ಇದ್ದರೆ, ಆ ರೀತಿ ತುಳುಕಿಹೋಗುವ ಬದಲು, ಅವರಿಗೆ ಪೇಮೆಂಟ್ ಮಾಡಿಬಿಡಿ. ಅಷ್ಟೇ ಅಲ್ಲ, ಕೇಂದ್ರಸರ್ಕಾರದಿಂದ 50 ಲಕ್ಷ ರೂಪಾಯಿಗಳು, ವೀವರ್ಸ್ ಕೋ ಆಪರೇಟಿವ್ ಸೊಸೈಟಿಗೆಂದು ಅನುದಾನ ಬಂದಿತ್ತು. ಈ ಅನುದಾನದ ಹಣವನ್ನೂ ಈ ಸರ್ಕಾರದವರು ತಿಂದುಹಾಕಿ, ಬಡವರಿಗೆ ಕೊಟ್ಟಂಥ ಚೆಕ್ ಬೌನ್ಸ್ ಆಗಿದೆಯೋ ಇಲ್ಲವೋ ಎಂದು ನಿಮ್ಮ ಅಧಿಕಾರಿಗಳನ್ನು ಕೇಳಿ. ಕೇಂದ್ರಸರ್ಕಾರದಿಂದ ಬಡನೇಕಾರರಿಗೆ ಬಂದಿದ್ದ ಎನ್.ಸಿ.ಡಿ.ಸಿ ಹಣ ಏನಿತ್ತು, ಆ ಹಣವನ್ನು ನೀವು ಖರ್ಚುಮಾಡಿಕೊಂಡಿದ್ದೀರಿ. ಆದ್ದರಿಂದ ಬಡವರಿಗೆ ಕೊಟ್ಟ ಚೆಕ್ ಬೌನ್ಸ್ ಆಗಿದೆ. ಜಿಲ್ಲಾಪರಿಷತ್ತಿಗೆ ನೀವು ಬಿಡುಗಡೆ ಮಾಡಬೇಕಾಗಿದ್ದ ಹಣದಲ್ಲಿ 20 ಪರ್ಸೆಂಟ್ ಅನುದಾನವನ್ನು ಕಡಿಮೆ ಮಾಡಿದ್ದೀರಿ. ಏಕೆ? ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಬೇರೆ ವಿಷಯದಲ್ಲಿ ಏನಾದರೂ ಆಗಲಿ, ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವುದು ಅಸತ್ಯವಾದುದು ಹಾಗೂ ರಾಜಶೇಖರಮೂರ್ತಿಯವರು ಹೇಳುವುದು ಸತ್ಯವಾದುದು ಎಂದು ನಾನು ವಿಧಿ ಇಲ್ಲದೇ ಪ್ರತಿಪಾದನೆ ಮಾಡಬೇಕಾಗುತ್ತದೆ; ನಾವು ಆ ತರಹ ಭಾವನೆಯನ್ನು ಹೊಂದಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಈಗಿನ ಮಂತ್ರಿಮಂಡಲದಲ್ಲಿಯೂ ಕೂಡ, ನನಗೆ ತಿಳಿದಹಾಗೆ ಎರಡು ತರಹ ಮಂತ್ರಿಗಳಿದ್ದಾರೆ. ನಿಷ್ಠರ ಮಂತ್ರಿಮಂಡಲದ ಸದಸ್ಯರು, ಇನ್ನೊಂದು ಭಿನ್ನಮತೀಯ ಮಂತ್ರಿಮಂಡಲದ ಸದಸ್ಯರು. ಈ ನಿಷ್ಠರ ಮಂತ್ರಿಮಂಡಲದ ಸದಸ್ಯರಿಗೆ ಮತ್ತು ಭಿನ್ನಮತೀಯ ಮಂತ್ರಿಮಂಡಲದ ಸದಸ್ಯರಿಗೆ ಭಿನ್ನತೆ ಇರುವುದನ್ನು ನಾನು ಅರ್ಥಮಾಡಿಕೊಂಡಿರುತ್ತೇನೆ. ಆದರೆ, ಮೊನ್ನೆ ತಾವು ಇದ್ದಿರೋ ಇಲ್ಲವೋ ಗೊತ್ತಿಲ್ಲ. ಈ ನಿಷ್ಠ ಮಂತ್ರಿಮಂಡಲದ ಸದಸ್ಯರಲ್ಲಿಯೂ ಕೂಡ ಒಮ್ಮತ ಇಲ್ಲ. ನಮಗೆ, ಇಲ್ಲಿ ಉನ್ನತ ವಿದ್ಯಾಭ್ಯಾಸದ ಸಚಿವರು ಹೇಳುತ್ತಾರೆ. ವೃತ್ತಿಪರ ಕಾಲೇಜುಗಳಲ್ಲಿ ಸ್ಥಾನಗಳನ್ನು ಮೀಸಲಿಡುವಾಗ ನಾವು ವಿಶ್ವವಿದ್ಯಾನಿಲಯಗಳ ಆಧಾರದ ಮೇಲೆ ತುಂಬುತ್ತೇವೆಂದು ಹೇಳಿದರೆ, ಅದು ಸಾಧ್ಯವಾಗುವುದಿಲ್ಲ, ಏಕೆಂದರೆ ಬಾಂಬೆ ಹೈಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಆಗಿದೆ, it ultra virus the constitution ಎಂದು.

ಅವರು ಹೇಳಿದ ಆದ 10 ನಿಮಿಷಕ್ಕೆ ಮುಖ್ಯ ಮಂತ್ರಿಗಳು ಹೇಳಿಕೆ ಕೊಡುತ್ತಾರೆ, ಯಾವುದೇ ಕೋರ್ಟ್‌ನ ತೀರ್ಮಾನ ಈ ಜನರ ಸಮಸ್ಯೆಯನ್ನು ನಿವಾರಿಸಲಿಕ್ಕೆ ಕೊಡಿ ಬರದೇ ಇದ್ದರೆ ಅಂಥಹ ಒಂದು ತೀರ್ಮಾನವನ್ನು ನಾವು ಆನರ್ ಮಾಡುವುದಕ್ಕಾಗುವುದಿಲ್ಲ; ಆದುದರಿಂದ ನಾವು ವಿಶ್ವವಿದ್ಯಾನಿಲಯಗಳ ಆಧಾರದ ಮೇಲೆ ತುಂಬುತ್ತೇವೆ. ಅಂದರೆ ಯಾವುದನ್ನು ನಂಬಿಕೊಳ್ಳಬೇಕು ಈ ರಾಜ್ಯದ ಜನ? ಮೊನ್ನೆ ನೀವು ಹೇಳಿದ ಮಾತು ಪೇಪರ್‌ನಲ್ಲಿ ಬಂತು. ಇವತ್ತು ನೂರಾರು ಜನ ವಿದ್ಯಾರ್ಥಿಗಳು ಬೀದಿಪಾಲಾಗುತ್ತಿದ್ದಾರೆ. ಅವರು ಪೇಪರ್‌ನಲ್ಲಿ ಓದಿಕೊಂಡಿದ್ದಾರೆ. ಈಗ ಯಾವುದನ್ನು ನಂಬಿಕೊಳ್ಳಬೇಕು? ದಯಮಾಡಿ ತಿಳಿಸಿ. ಉನ್ನತ ವಿದ್ಯಾಭ್ಯಾಸದ ಮಂತ್ರಿಗಳು ಹೇಳಿದ್ದನ್ನು ನಂಬಿಕೊಳ್ಳಬೇಕೇ? ಅಥವಾ ಈ ರಾಜ್ಯದ ಮುಖ್ಯಮಂತ್ರಿಗಳನ್ನು ನಂಬಿಕೊಂಡು ಅವರು ವಿದ್ಯಾಭ್ಯಾಸ ಮಾಡಬೇಕೇ ಹೇಳಿ. ಅಷ್ಟೇ ಅಲ್ಲ, ನಾವು ಎಷ್ಟೊಂದು ಅಭಾಸಗಳನ್ನು ಕಾಣುತ್ತಿದ್ದೇವೆಂದರೆ, ಒಂದೇ ದಿವಸ ಇಬ್ಬರು ಮಂತ್ರಿಗಳು ಕೊಟ್ಟ ಹೇಳಿಕೆಯಂತೆ ವಿದ್ಯುತ್ ದರ ಇಳಿತ

ಇಲ್ಲ, ಮೊಯಿಲಿ "ವಿದ್ಯುತ್ ದರದ ಪುನರ್ ಪರಿಶೀಲನೆ, ಕೃಷ್ಣ" ಒಂದೇ ಪೇಪರ್‌ನ ಮುಖ ಪುಟದಲ್ಲಿ ಬಂದಿದೆ. ಆಡಳಿತನಾ ಇದು? ರಾಜೀನಾಮೆ ಕೇಳಬಾರದಾ? ಮುಖ್ಯ ಮಂತ್ರಿಗಳು, ಏಕೆ ತಂದಿದ್ದೀರಿ ಈ ನಿರ್ಣಯವನ್ನು ಎಂದು ಕಾಣದವರ ಹಾಗೆ ಕೇಳುತ್ತಾರೆ. ಒಂದೇ ದಿವಸ ಇಬ್ಬರು ಮಂತ್ರಿಗಳು ಒಂದೊಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದು ಒಂದೇ ಪೇಪರ್‌ನ ಮುಖ ಪುಟದ ಒಂದೊಂದು ಕಡೆ ಬರುತ್ತದೆ. ಯಾರನ್ನು ನಂಬಿಕೊಳ್ಳಬೇಕು ಸ್ವಾಮಿ ನಾವು? ಮೊನ್ನೆ ಈ ರಾಜ್ಯದ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಹೇಳಿದ್ದಾರೆ. ನಾನು ನಕ್ಸಲೈಟ್ ಆಗಲಾರದ ಕಾರಣಕ್ಕೆ ಕವಿ ಆದೆ. ಅದಕ್ಕೆ ಕಾರಣವನ್ನೂ ಕೂಡಾ ಅವರು ಗುರುತಿಸಿಕೊಂಡಿದ್ದಾರೆ. ಏನು ಕಾರಣ ಗುರುತಿಸಿಕೊಂಡಿದ್ದಾರೆಂದರೆ ಈ ಸಮಾಜದ ಮೇಲೆ ನನಗೆ ಸಿಟ್ಟು ಇದೆ. ಅಸಹನೆ ಇದೆ, ಆಕ್ರೋಶ ಇದೆ, ಹಾಗೆಂದು ನಾನು ನಕ್ಸಲೈಟ್ ಆಗಲಾರೆ. ನನ್ನೊಳಗಿನ ಬೇಗುದಿ ಹೊರ ಹಾಕಲು ನಾನು ಬರೆಯುತ್ತೇನೆ. ರಾಜಕಾರಣಿಯಾದ ನನಗೆ ದೇಶಕ್ಕೆ, ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಆಸೆ ಇದೆ. ಆದರೆ ನನ್ನ ಸುತ್ತ ಇರುವ ಆಶಾಢಭೂತಿಗಳು ನನಗೆ ಅವಕಾಶ ಕೊಡುತ್ತಿಲ್ಲ.

What A helplessness? This is the statement made by the Chief Minister of Karnataka.

ಅದಕ್ಕೆ ನಾನು ಹೇಳಿದ್ದು, ಇವರು ಎಷ್ಟು ಅಸಹಾಯಕರಾಗಿದ್ದಾರೆ ಎಂದು ಒಬ್ಬ ಸಾಮಾನ್ಯ ಪ್ರಜೆಗೆ ಇವತ್ತು ಏನು ಭಾವನೆ ಇದೆ ಎಂದರೆ, ಕಾನೂನಿನ ಚೌಕಟ್ಟಿನಲ್ಲಿ ಒಬ್ಬ ಸಾಮಾನ್ಯ ಮನುಷ್ಯ ತನಗೆ ದಕ್ಕಬೇಕಾದ ಸವಲತ್ತುಗಳನ್ನು ಪಡೆದುಕೊಳ್ಳದಿರುವುದಕ್ಕೆ ಸಾಧ್ಯವಿಲ್ಲದೇ ಇರುವಂಥ ಸಂದರ್ಭ ಇಡೀ ರಾಷ್ಟ್ರದಲ್ಲಿ ಉಂಟಾಗಿದೆ. ನಾನು ಅದಕ್ಕೆ ಈ ಸದನದಲ್ಲಿ ಒಂದು ದಿವಸ ಹೇಳಿದೆ. ಏನೆಂದರೆ, ಒಬ್ಬ ಪೋಲಂಕಿ ಆಂಧ್ರದ ನಕ್ಸಲೈಟ್ ಅಂಥವರು ಒಬ್ಬರಲ್ಲ ನೂರಾರು ಜನ ಹುಟ್ಟಿ ಬರುತ್ತಾರೆಂದು; ಈ ರಾಜ್ಯದ ಮುಖ್ಯಮಂತ್ರಿ ಹೇಳುತ್ತಾರೆ, ನನ್ನ ಎದೆಯಲ್ಲಿ ಆಕ್ರೋಶ ಇದೆ, ಸಿಟ್ಟು ಇದೆ, This means that the Chief Miniister is incapable of destroying those Ashadabhutis, vested interests who are coming in the way of inplementing his schemes or plans.

ಬೆಳಿಗ್ಗೆ ತಾನೇ ಜಾಲಪ್ಪನವರು ಓದಿ ಹೇಳುತ್ತಿದ್ದರು. ಮುಖ್ಯ ಮಂತ್ರಿಗಳ ಹೇಳಿಕೆ ಹೇಗಿದೆ ಎಂದರೆ, ಮಹಾಭಾರತದಲ್ಲಿ ನಮ್ಮ ಹಳ್ಳಿ ಕಡೆ ನಾಟಕದಲ್ಲಿ ಡೈಲಾಗ್ ಇದೆ. 'ನಾನು ಸದೆ ಬಡೆದುಬಿಡುತ್ತೇನೆ' ಎಂದು; ಅದೇ ರೀತಿ ಇವರು ಅಧಿಕಾರಿ ಗುತ್ತಿಗೆದಾರರ ಕೊಂಬನ್ನು ಹಿಡಿದು ಹೋರಾಡಿ ತಿರುಚಿಬಿಡುತ್ತೇನೆ ಅಂದರು. ಆದರೆ ಇವತ್ತು ಅವರಿಗೆ ಅರಿವಾಗಿದೆ. ಯಾವ ವ್ಯವಸ್ಥೆಯ ವಿರುದ್ಧ ಇವರು ಹೋರಾಡುವುದಕ್ಕೆ ಹೋದರೋ, ಆ ವ್ಯವಸ್ಥೆಯೇ ಇವರನ್ನು ಕಬಳಿಸುತ್ತಿದೆ. ಯಾವ ಹಿತಾಸಕ್ತಿಗಳನ್ನು ಬಗ್ಗು ಬಡಿಯುವುದಕ್ಕೆ ಹೋದರೋ ಅದೇ ಹಿತಾಸಕ್ತಿಗಳು ಇವರನ್ನು ಸಂಪೂರ್ಣವಾಗಿ ನಾಶ ಮಾಡುತ್ತಿವೆ. ಅವರು ಹೇಳಿಕೊಂಡಿರುವುದನ್ನೇ ನಾನು ಹೇಳುತ್ತಿದ್ದೇನೆ. 'ಈ ಸಮಾಜದ ಮೇಲೆ ಸಿಟ್ಟು ಇದೆ' ಅಸಹನೆ ಇದೆ, ಕ್ರೋಧ ಇದೆ, ಆದರೂ ಕೂಡಾ ನನ್ನ ಕೈಯಲ್ಲಿ ಸರಿ ಮಾಡಲಿಕ್ಕೆ ಸಾಧ್ಯವಿಲ್ಲ. Then why are you sitting there? ಈಗಲಾದರೂ ಸನ್ಯಾಸ್ಯ ಮುಖ್ಯ ಮಂತ್ರಿಗಳಿಗೆ ವಿರೋಧ ಪಕ್ಷದವರು ಅವಿಶ್ವಾಸವನ್ನು ಏಕೆ ತಂದಿದ್ದೇವೆಂದು ರಾಜ್ಯದ ಒಬ್ಬ ಮುಖ್ಯ ಮಂತ್ರಿಗೆ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲದಿದ್ದರೆ, ತನ್ನ ಪ್ರಾಣವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲದೇ ಇದ್ದರೆ, · ಈ ರಾಜ್ಯದ 4 ಕೋಟಿ ಜನರ ಬಯಕೆಗಳನ್ನು ಈಡೇರಿಸುವಂಥ, ಆಶೋತ್ತರಗಳಿಗೆ ಸ್ಪಂದಿಸುವಂಥ ಶಕ್ತಿ ಇಲ್ಲ ಎಂದು ಅರ್ಥ. ಕಾನೂನಿನ ಚೌಕಟ್ಟಿನಲ್ಲಿ ಪಡೆಯಬೇಕಾದ ಸವಲತ್ತನ್ನು ಪಡೆಯಲಿಕ್ಕೆ ಸಾಧ್ಯವಾಗದೇ ಇದ್ದಾಗ ಕಾನೂನನ್ನು ಕೈಗೆ ಎತ್ತಿಕೊಳ್ಳಬೇಕಾಗುತ್ತದೆ.

ನಮ್ಮ ಪ್ರೊಫೆಸರ್‌ರವರು ಹೇಳಿದ ಹಾಗೆ ಸಂವಿಧಾನವನ್ನು ಕೂಡಾ ಕೈಗೆ ಎತ್ತಿಕೊಳ್ಳಬೇಕಾಗುತ್ತದೆ. ಆ ಪರಿಸ್ಥಿತಿಗೆ ಸಾಮಾನ್ಯ ಜನ ಬಂದಿದ್ದಾರೆ. ಮುಖ್ಯ ಮಂತ್ರಿಗಳು ಆ ಮಟ್ಟಕ್ಕೆ ಬರಬಾರದಾಗಿತ್ತು. ಸನ್ಮಾನ್ಯ ಅಧ್ಯಕ್ಷರೇ, ನಾನು ಮತ್ತೊಮ್ಮೆ ಒತ್ತಿ ಹೇಳುತ್ತಿದ್ದೇನೆ, ಈ ದೇಶದ ಆಡಳಿತವನ್ನು ನಡೆಸಲಿಕ್ಕೆ ನಾನು ಅಶಕ್ತನಾಗಿದ್ದೇನೆ, ನನ್ನ ಕೈಯಲ್ಲಿ ಆಗೋದಿಲ್ಲ, ಎನ್ನುವ ಅಸಹಾಯಕತನವನ್ನು ಅವರೇ ತೋರಿಸಿರುವುದರಿಂದ ದಯಮಾಡಿ ಅವರು ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ. ಕೇವಲ ಏನು ಅವಿಶ್ವಾಸವನ್ನು ತಂದು ಈ ಸರ್ಕಾರವನ್ನು ತೆಗಳಿ ಸಂತೃಪ್ತರಾಗಬೇಕೆಂದು ತಂದಿಲ್ಲ. ರಾಜ್ಯದಲ್ಲಿ ಅತ್ಯಂತ ಜಟಿಲವಾದ ಸಮಸ್ಯೆಗಳು ನಮ್ಮ ಮುಂದೆ ಇವೆ. ಈ ಜಟಿಲವಾದ ಸಮಸ್ಯೆಗಳನ್ನು ಪರಿಹಾರ ಮಾಡಬೇಕಾದರೆ ಶಕ್ತಿಯುತವಾದ ಸರ್ಕಾರದ ಅವಶ್ಯಕತೆ ಇದೆ, ಸದೃಢವಾದ ಸರ್ಕಾರದ ಅವಶ್ಯಕತೆ ಇದೆ. ಅಶಕ್ತವಾದಂಥ ಮತ್ತು ಸದೃಢತೆ ಇಲ್ಲದಂಥ ಸರ್ಕಾರದಿಂದ ರಾಜ್ಯದಲ್ಲಿರುವ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಒಂದು ಉದಾಹರಣೆ ಯಾವುದು ಎಂದರೆ, ಈ ರಾಜ್ಯದಲ್ಲಿ ವೃತ್ತಿಪರ ಶಿಕ್ಷಣದ ಬಗ್ಗೆ ಉಚ್ಚ ನ್ಯಾಯಾಲಯವು ಕೊಟ್ಟ ತೀರ್ಮಾನದ ಪ್ರಕಾರ ಏನು ಎಲ್ಲಾ ಸ್ಥಾನಗಳನ್ನು ಸರ್ಕಾರವೇ ತುಂಬಬೇಕೆಂಬ ಹಠಮಾರಿತನದಿಂದ ಹೊರಟಿದೆಯೋ ಅದನ್ನು ಕಾರ್ಯರೂಪಕ್ಕೆ ತರಲಿಕ್ಕೆ ಸಾಧ್ಯವಾಗಿಲ್ಲ. ಜುಲೈ ತಿಂಗಳಿನಲ್ಲೇ ಎಲ್ಲಾ ಕಾಲೇಜುಗಳಿಗೆ ಅಡ್ಮಿಷನ್ ಆಗಬೇಕಾಗಿತ್ತು. ಈಗ ಸೆಪ್ಟೆಂಬರ್ ಮೊದಲನೇ ವಾರದಲ್ಲಿ ಇದ್ದೇವೆ. ಆದರೂ ಇವತ್ತಿನವರೆಗೂ ಆಗಿಲ್ಲ. ನಿಮ್ಮ ಈ ಕಚ್ಚಾಟದಿಂದ, ನಿಮ್ಮ ಈ ಒಳ ಜಗಳದಿಂದ ನಿಮ್ಮ ಈ ಕಿತ್ತಾಟದಿಂದ, ನಿಮ್ಮ ಈ ವಿಭಿನ್ನತೆಯಿಂದ ಆ ನೂರು ಜನ ಮಕ್ಕಳನ್ನು ಬೀದಿಪಾಲು ಮಾಡಿರುವ ಪಾಪಕ್ಕೆ ನೀವು ಹೊಣೆಯಾಗುತ್ತೀರಿ. ಆ ಪಾಪವನ್ನು ಕಟ್ಟಿಕೊಳ್ಳಬೇಕು ಎನ್ನುವುದಾದರೆ ಖುರ್ಚಿಯಲ್ಲಿ ಕುಳಿತುಕೊಳ್ಳಿ. ಬೇಡ ಎನ್ನುವುದಾದರೆ, ಖುರ್ಚಿಯನ್ನು ಬಿಟ್ಟು ಈಚೆಗೆ ಬನ್ನಿ. ಜುಲೈ ಕೊನೆಯೊಳಗೆ ಇವರಿಗೆಲ್ಲಾ ಅಡ್ಮಿಷನ್ ಕೊಡಬೇಕಾಗಿತ್ತು. ಆ ಮಕ್ಕಳಿಗೆ ಒಂದು ವರ್ಷ ಹಾಳು ಮಾಡಿದ ಪಾಪಕ್ಕೆ ನೀವು ಹೊಣೆಯಾಗಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಈ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲ. ಏಕೆ ಸಾಧ್ಯವಿಲ್ಲವೆಂದರೆ ನಿಮಗೆ ಬೆಂಬಲ ಇಲ್ಲ. ಆ ಬೆಂಬಲ ಇಲ್ಲವೆಂದರೆ ಸದೃಢತೆ ಬರುವುದಿಲ್ಲ. ಸದೃಢತೆ ಇಲ್ಲವೆಂದರೆ ನ್ಯಾಯವಾದ ಆಡಳಿತವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಗೆ ಮತ್ತೊಂದು ಸಾರಿ ಒತ್ತನ್ನು ಕೊಟ್ಟು ಹೇಳಬೇಕಾಗುತ್ತದೆ. ಈ ರಾಜ್ಯದಲ್ಲಿರುವಂಥ ನೀರಿನ ಸಮಸ್ಯೆ ಹಾಗೂ ಕೃಷ್ಣಾ, ಕಾವೇರಿ ನೀರನ್ನು ಉಳಿಸಿಕೊಳ್ಳುವುದಕ್ಕೆ ನಾವು ಮಾಡಬೇಕಾದ ಹೋರಾಟ, ಮತ್ತು ಅದನ್ನು ಬಳಿಸಿಕೊಳ್ಳಲಿಕ್ಕೆ ಬೇಕಾದ ಕಾರ್ಯಕ್ರಮ, ಈ ಎರಡನ್ನೂ ಕೂಡ ಮಾಡಬೇಕಾಗಿದೆ.

ಮುಖ್ಯ ಮಂತ್ರಿಗಳು ದಿನಬೆಳಗಾದರೆ ಆ ಎಂಎಲ್‌ಎ ಅನ್ನು ಕರೆಸು, ಈ ಎಂಎಲ್‌ಎ ಅನ್ನು ಕರೆಸು ಎಂದು, ಇನ್ನೊಂದು ಕಡೆ ಉಪ ಮುಖ್ಯ ಮಂತ್ರಿಗಳು; ಈ ಇಬ್ಬರೂ ರಾಜಕೀಯದ ದೊಂಬರಾಟದಲ್ಲಿ ತೊಡಗಿರುವುದರಿಂದ ಹಾಗೂ ಅಭಿವೃದ್ಧಿ ಕೆಲಸಗಳ ಕಡೆಗೆ ಗಮನ ಕೊಡದಿರುವುದರಿಂದ ಸಂಪೂರ್ಣವಾಗಿ ಆಡಳಿತವು ಕುಸಿದು ಹೋಗಿದೆ. ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ, ರಾಜ್ಯದ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಅಧಿಕಾರಿಗಳು ತೊಡಕಾಗಿದ್ದಾರೆ; ಅಧಿಕಾರಿಗಳ ಅತೀ ಎಚ್ಚರಿಕೆಯ ಮನೋಭಾವದಿಂದಾಗಿ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಮಾನ್ಯ ಉಪ-ಮುಖ್ಯಮಂತ್ರಿಯವರು ಈ ವಿಚಾರದಲ್ಲಿ ನನಗೆ ಬೆಂಬಲಕೊಡಬೇಕು. ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿವೆ ಎಂದು ನಾನು ಹೇಳುತ್ತೇನೆ, ಅದಕ್ಕೆ ಮಾನ್ಯ ಉಪ-ಮುಖ್ಯಮಂತ್ರಿಯವರು ಒತ್ತು ಕೊಡುತ್ತಾರೆ. ಬೆಂಗಳೂರಿನಲ್ಲಿ 21ನೇ ತಾರೀಖು "ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಅಧಿಕಾರಿಗಳು ತೊಡಕಾಗಿದ್ದಾರೆ" ಎಂದು ಅದಕ್ಕಾಗಿಯೇ ನಿಮ್ಮ ಸರಕಾರದಿಂದ ಅಭಿವೃದ್ಧಿ ಕಾರ್ಯಗಳನ್ನು ಮಾಡಲು

ಸಾಧ್ಯವಾಗುತ್ತಿಲ್ಲ, ರಾಜೀನಾಮೆ ಕೊಡಿ ಎಂದು ನಾವು ಕೇಳುತ್ತೇವೆ. ರಾಜ್ಯದಲ್ಲಿ ನಾಲ್ಕು ಕೋಟಿ ಜನರು ಕಣ್ಣಲ್ಲಿ ನೀರು ಸುರಿಸುತ್ತಿದ್ದರೆ ನೀವು ಚೆಲ್ಲಾಟವಾಡುತ್ತಾ ಇದ್ದೀರಿ. ರಾತ್ರಿ ಹಗಲೆಲ್ಲಾ ಎಂಎಲ್‌ಎ ಗಳನ್ನು ಹಿಡಿದಿಟ್ಟುಕೊಳ್ಳುವುದರಲ್ಲಿ ಕಾಲ ಕಳೆಯುತ್ತಿದ್ದೀರಿ.

(ಗೊಂದಲ)

ಉಪಾಧ್ಯಕ್ಷರು : ರಾಮಯ್ಯನವರೇ, ತಮ್ಮ ಭಾಷಣವನ್ನು ಮುಗಿಸಿ ......

ಶ್ರೀ ವೈ.ಕೆ. ರಾಮಯ್ಯ :- ನಾನು ಯಾರ ಮೇಲೆಯೂ ಆಪಾದನೆ ಮಾಡಬೇಕೆಂದು ಹೇಳುತ್ತಿಲ್ಲ. ಯಾರಿಗೂ ಅವಮಾನ ಮಾಡಬೇಕೆಂದು ಕೂಡ ಮಾತನಾಡುತ್ತಾ ಇಲ್ಲ, ಒಬ್ಬ ಮುಖ್ಯಮಂತ್ರಿಯನ್ನು 8 ತಿಂಗಳುಗಳು ಸಹ ಇರುವುದಕ್ಕೂ ಬಿಡದಿದ್ದರೆ ಇದಕ್ಕೆ ಕಾರಣರು ಯಾರು? ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖಾಂತರ ಈ ಸರಕಾರ ರಾಜಿನಾಮೆ ಕೊಡಬೇಕು ಎಂದು ಅತ್ಯಂತ ಬಲವಾಗಿ ಕೇಳಿಕೊಳ್ಳುತ್ತೇನೆ. ನಿಮ್ಮ ಪಕ್ಷದಲ್ಲಿರುವ ಆಂತರಿಕ ವಿಷಯಗಳಿಂದ, ನಿಮ್ಮ ಪಕ್ಷದಲ್ಲಿರುವ ಕಿತ್ತಾಟದಿಂದ, ನೀವು ಆಡಳಿತವನ್ನು ಮಾಡುವಂಥ ಶಕ್ತಿಯನ್ನು ಕಳೆದುಕೊಂಡಿದ್ದೀರಿ. ನೀವು ಅಶಕ್ತರಾಗಿದ್ದೀರಿ; ನೀವು ರಾಜಕಾರಣದಲ್ಲಿ ತೊಡಗಿರುವುದರಿಂದ ನಿಮಗೆ ಆಡಳಿತ ಮಾಡಲು ಕಾಲಾವಕಾಶವಿಲ್ಲದ ಕಾರಣ ದಯಮಾಡಿ ರಾಜಿನಾಮೆ ಕೊಡಬೇಕೆಂದು ಮುಖ್ಯ ಮಂತ್ರಿಗಳ ನೇತೃತ್ವದಲ್ಲಿನ ಈ ಸರಕಾರವನ್ನು ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ದೇಶಪಾಂಡೆಯವರು ಈ ಸಚಿವಸಂಪುಟದ ಮೇಲೆ ಏನು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ, ಅದಕ್ಕೆ ಮಾನ್ಯ ವಾಟಾಳ್ ನಾಗಾರಾಜ್‌ರವರು, ರೈತಸಂಘದ ಮಿತ್ರರು, ಬೆಂಬಲವನ್ನು ಸೂಚನೆ ಮಾಡಿ ಅದರ ಮೇಲೆ ಕಳೆದ ಮೂರು ದಿನಗಳಿಂದ ಚರ್ಚೆ ಆಗಿದೆ. ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಬಹಳ ಮುಖ್ಯವಾಗಿ ನಮ್ಮ ರಾಜ್ಯದ ಜನರು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಬಹಳ ಮುಖ್ಯವಾಗಿ ನಮ್ಮ ರಾಜ್ಯದ ಜನರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಹಳ ವಿಶ್ವಾಸವನ್ನು ಇಟ್ಟುಕೊಂಡು ಕಾಂಗ್ರೆಸ್(ಐ) ಪಕ್ಷಕ್ಕೆ ಮತಗಳನ್ನು ಕೊಟ್ಟರು. ನಮಗೆಲ್ಲಾ ತಿಳಿದಿರುವ ಹಾಗೆ ಈ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಕಾಂಗ್ರೆಸ್(ಐ)ಗೆ ಬೆಂಬಲ ಸಿಕ್ಕಿರತಕ್ಕಂಥಾದ್ದು ಇದೇ ಮೊದಲ ಸಾರಿ. 1970ರಲ್ಲಿ ಗರೀಬಿ ಹಟಾವೋ, ಬ್ಯಾಂಕ್ ರಾಷ್ಟ್ರೀಕರಣದ ಘೋಷಣೆಗಳನ್ನು ಶ್ರೀಮತಿ ಇಂದಿರಾಗಾಂಧಿಯವರು ಮಾಡಿದ ಸಂದರ್ಭದಲ್ಲಿಯೂ ಇಷ್ಟೊಂದು ಅಪಾರವಾದಂಥ ಬೆಂಬಲವು ಶ್ರೀಮಾನ್ ದೇವರಾಜ್ ಅರಸ್‌ರವರ ನಾಯಕತ್ವಕ್ಕೂ ಕೂಡಾ ಸಿಕ್ಕಿರಲಿಲ್ಲ. ಆದರೆ ಕಳೆದ ನಾಲ್ಕು ವರ್ಷಗಳ ಕಾಲದಲ್ಲಿ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತವು ಬಂದಮೇಲೆ, ಇವೊತ್ತು ಆಗಿರತಕ್ಕಂಥ ಪರಿಸ್ಥಿತಿಯನ್ನು ನಾನು ಆದಷ್ಟು ಪಕ್ಷಾತೀತವಾಗಿ ನಿರ್ವಿಕಾರ ಮನೋಭಾವನೆಯಿಂದ ಹೇಳಬಯಸುತ್ತೇನೆ. ಈ ಅವಿಶ್ವಾಸ ನಿರ್ಣಯವನ್ನು ಮಂಡಿಸಿ ಭಿನ್ನಮತಿಯರೆಲ್ಲರೂ ನಮಗೆ ಬೆಂಬಲ ಕೊಡುತ್ತಾರೆ; ನಾವು ಈ ಸರಕಾರವನ್ನು ತೆಗೆದುಹಾಕಿ ಬಿಡುತ್ತೇವೆ ಎಂಬ ವಿಶ್ವಾಸವಂತೂ ನಮಗಿಲ್ಲ.

ಅದು ನಮಗೂ ಸಹ ಗೊತ್ತಿದೆ, ಇದೊಂದು ರಾಷ್ಟ್ರೀಯ ಪಕ್ಷ. ಪಕ್ಷದ ಅಂತಃಕಲಹದಿಂದ ಪಕ್ಷದಿಂದ ವಿಪ್ ಕೊಟ್ಟಾಗ ಇವರೆಲ್ಲಾ ಎಲ್ಲಿ ನಿಲ್ಲುತ್ತಾರೆ ಎಂಬುದು ನಮಗೆ ಗೊತ್ತಿದೆ. ಆದರೆ ರಾಜ್ಯದ ವಸ್ತುಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇರುವ ಪರಿಸ್ಥಿತಿ ಏನೆಂದು ನಮ್ಮ ನಾಯಕರು ವಿಚಾರ ಮಾಡಬೇಕಾಗಿದೆ. ಪ್ರಾರಂಭದಲ್ಲಿ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ನಾವು ವಿಧಾನಸಭೆಯಲ್ಲಿ ಮಾತನಾಡುವಾಗ

ಬಹಳ ಹೆದರುತ್ತಾ ಇದ್ದೆವು. ನಮ್ಮ ಚಂದ್ರೇಗೌಡರು ನಾಯಕರಾಗಿದ್ದ ಸಂದರ್ಭದಲ್ಲಿ ಏನು ಮಾತಾಡಬೇಕಾದರೂ ಹೆದರುತ್ತಾ ಇದ್ದೆವು. ಏಕೆಂದರೆ ನಾವು ಸಹ ತಪ್ಪುಗಳನ್ನು ಮಾಡಿದ್ದೇವೆ. ಅದೇ ಶ್ರೀ ವಾಟಾಳ್ ನಾಗರಾಜ್ ಮತ್ತು ಶ್ರೀ ಯಡಿಯೂರಪ್ಪನವರಿಗೆ ತಪ್ಪು ಮಾಡಿದ್ದೇವೆಂಬ ಅಭಿಪ್ರಾಯವಿರಲಿಲ್ಲ. ಏಕೆಂದರೆ ಅವರು ಆಡಳಿತದಲ್ಲಿರಲಿಲ್ಲ. ಆದರೆ ಆಗತಾನೇ ನಾವು ಆಡಳಿತ ಕಳೆದುಕೊಂಡು ಇಲ್ಲಿಗೆ ಬಂದಿದ್ದೆವು. ನಾವು ತಪ್ಪು ಮಾಡಿದ್ದೆವು. ಆಗ ಆಡಳಿತ ಪಕ್ಷದ ಮಂತ್ರಿಗಳ ಮೇಲೆ ಸಭಾನಾಯಕರ ಮೇಲೆ ಸರ್ಕಾರದ ಮೇಲೆ ಮಾತಾಡಬೇಕಾದರೆ ನಾವು ಸ್ವಲ್ಪ ವಿಚಾರ ಮಾಡುತ್ತಿದ್ದೆವು. ಅದಾದನಂತರ ಮಾನ್ಯ ಬಂಗಾರಪ್ಪನವರ ಸರ್ಕಾರ ಬಂತು. ಬಂಗಾರಪ್ಪನವರ ಸರ್ಕಾರದ ಬಗ್ಗೆ ಈ ಸದನದಲ್ಲಿ ನಾವು ಟೀಕೆ ಕೇಳಿದ್ದೇವೆ. ನಾನೂ ಅತ್ಯಂತ ಕಟುವಾಗಿ ಆ ಸರ್ಕಾರವನ್ನು ಟೀಕೆ ಮಾಡಿದ್ದೇನೆ. ಬಂಗಾರಪ್ಪನವರ ಕಾಲದಲ್ಲಿ ಪ್ರಾರಂಭವಾದ ಕೆಲವು ಕಾರ್ಯಕ್ರಮಗಳು ಅದರಲ್ಲೂ ಆಶ್ರಯ ಕಾರ್ಯಕ್ರಮ ಏನಿದೆ ಅದರ ಬಗ್ಗೆ ನನ್ನದೇ ಆದ ಒಂದು ಅಭಿಪ್ರಾಯ ಇದೆ.

ಕರ್ನಾಟಕ ಹೌಸಿಂಗ್ ಬೋರ್ಡಿನಲ್ಲಿ ಆಗಿರುವ ಅವ್ಯವಹಾರಗಳು ಒಂದು ಮುಖವಾದರೆ ಇನ್ನೊಂದು ಮುಖ ಬಡವರಿಗೆ ಉಪಯೋಗ ಆಗುವಂತಹ ಸುಮಾರು 4 ಲಕ್ಷ ಬಡವರಿಗೆ, ಜಮೀನು ಇಲ್ಲದಿರುವವರಿಗೆ ಈ ಭೂಮಿ ಮೇಲೆ ಇರಲಿಕ್ಕೆ ಒಂದಿಂಚು ಜಮೀನು ಇಲ್ಲದೇ ಇರುವ ಜನಗಳಿಗೆ ಸೈಟ್ ಹಂಚಿರುವುದನ್ನು ನಾವ್ಯಾರು ಸಹಿತ ಇಲ್ಲ ಎಂದು ಹೇಳೋಕಾಗೋದಿಲ್ಲ. ಇದನ್ನು ನಾನು ಮೆಚ್ಚುತ್ತೇನೆ. ಅದಾದನಂತರ ಅವರ ಆಂತರಿಕ ಕಲಹದಿಂದಾಗಿ ಬಂಗಾರಪ್ಪನವರನ್ನು ತೆಗೆದು ಮೊಯ್ಲಿಯವರನ್ನು ಆರಿಸಿದರು. ನಾವು ಅದರ ಬಗ್ಗೆ ಯಾವತ್ತೂ ಟೀಕೆ ಮಾಡಿಲ್ಲ. ಇವತ್ತು ಮೊಯ್ಲಿಯವರನ್ನು ತೆಗೆದು ರಂಗನಾಥ್‌ರವರನ್ನು ಮುಖ್ಯಮಂತ್ರಿ ಮಾಡಿದರೂ ಎರಡು ದೃಷ್ಟಿಯಿಂದ ನಾವು ಸಂತೋಷಪಡುತ್ತೇವೆ. ಒಂದು, ರಂಗನಾಥ್ ಅವರು ಮುಖ್ಯಮಂತ್ರಿಯಾದರೆ ನಮಗೆ ರಾಜಕೀಯವಾಗಿ ಸ್ವಲ್ಪ ಲಾಭ ಇದೆ. ತಾವು ನಿನ್ನೆ ಹೇಳಿದ ಹಾಗೆ ನೀವು ತಪ್ಪಿದರೆ ನಾವು ಅಧಿಕಾರಕ್ಕೆ ಬರುತ್ತೇವೆ. ರಾಜ್ಯದ ಜನ ಆ ದೃಷ್ಟಿಯಿಂದ ವಿಚಾರ ಮಾಡುತ್ತಾರೆ. ಅದರಲ್ಲಿ ನೀವು ಸಂಶಯ ಇಟ್ಟುಕೊಳ್ಳದೆ ನಿರ್ವಿಕಾರ ದೃಷ್ಟಿಯಿಂದ ಆ ಮಾತು ಹೇಳಿದ್ದೀರಿ. ಇವತ್ತು ಅದೇ ದೃಷ್ಟಿಯಿಂದಾಗಿ ನಾನು ಹೇಳುತ್ತಿದ್ದೇನೆ. ಮೂರೂವರೆ ವರ್ಷಗಳ ಕಾಂಗ್ರೆಸ್ ಆಡಳಿತದ ಕಾಲದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆಗಿರುವ ಅಭಿವೃದ್ಧಿ ಕೆಲಸಗಳೇನು ? ಇವತ್ತು ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡಿ ವಿಶೇಷವಾಗಿ ಇವರೇನು ವಿದ್ಯುಚ್ಛಕ್ತಿ ಮಂಡಲಿಯ ದರವನ್ನು ಏರಿಕೆ ಮಾಡಿದ್ದರ ಬಗ್ಗೆ ಅತ್ಯಂತ ಕಟುವಾಗಿ ಟೀಕೆ ಮಾಡಿದರು. ಸರ್ಕಾರದ ಬೊಕ್ಕಸಕ್ಕೆ ಅಬ್ಕಾರಿ ಇಲಾಖೆ ಮೂಲಕ ಬರುವ ಹಣ ಸೋರಿ ಹೋಗದಂತೆ ನಾನು ಅಭಿಮನ್ಯು ರೀತಿಯಲ್ಲಿ ಶಕ್ತಿಗಳ ವಿರುದ್ಧ ಎದ್ದುನಿಂತು ಕೆಲಸ ಮಾಡುತ್ತೇನೆಂದು ಮಾನ್ಯ ಮೊಯ್ಲಿಯವರು ಏನು ಹೇಳಿದ್ದರು, ಈಗ ಅದು ಸಂಪೂರ್ಣ ಸುಳ್ಳು ಎಂಬುದನ್ನು ಸಾಬೀತು ಮಾಡಿದ್ದಾರೆ. ಅದು ಸಂಪೂರ್ಣ ಸುಳ್ಳು, ಅದರಲ್ಲೇನೂ ಸತ್ಯವಿಲ್ಲ. ಇವರು ಹೇಳಿರುವ ಪ್ರತಿ ವಾಕ್ಯವೂ ಸುಳ್ಳು ಎಂದು ಸಾಬೀತು ಮಾಡಿದ್ದಾರೆ. ಅದರ ಬಗ್ಗೆ ನಾನು ಇವತ್ತು ಪ್ರಸ್ತಾಪಿಸುವುದಿಲ್ಲ. ಇವತ್ತು ವಿದ್ಯುತ್‌ಮಂಡಲಿಯವರು ದರವನ್ನು ಏಕಾಏಕಿ ಏರಿಸಿದ್ದರ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಆದರೆ ಈ ಸರ್ಕಾರದವರು ಕೊನೇಪಕ್ಷ ರಾಜಕೀಯವಾಗಿ ಯೋಚನೆ ಮಾಡುತ್ತಾರೋ ಇಲ್ಲವೋ ಎಂದು ನನಗಂತೂ ಅರ್ಥವಾಗುವುದಿಲ್ಲ. ಹೋದವರ್ಷ ಕೆ. ಎಸ್. ಆರ್. ಟಿ. ಸಿ ದರಗಳನ್ನು ಜಾಸ್ತಿ ಮಾಡಿದ್ದೀರ; ಕೆಇಬಿ ದರಗಳನ್ನು ಜಾಸ್ತಿ ಮಾಡಿದ್ದೀರಿ. ಇದರಿಂದ ಸರ್ಕಾರಿ ಖಜಾನೆಗೆ ಬಂದಿರುವ ಹಣವೆಷ್ಟು? ಇವತ್ತು ಹೈಕಮಾಂಡಿಗೆ ಏನು ಮನವಿ ಕೊಟ್ಟು ಈ ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಏನು ಹೇಳಿದ್ದಾರೆ ನಾನು ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ

ಹೋಗುವುದಿಲ್ಲ. I am going to refer to the Memorandum which has been submitted by our dissident friends to the Congress Party High Command.

ಆದರೆ ವಸ್ತು ಸ್ಥಿತಿ ಏನಿದೆ ಖಜಾನೇದು? ನಮ್ಮ ನಾಗಮ್ಮ ಕೇಶವಮೂರ್ತಿಯವರು ಇದ್ದಾರೆ. ಅವರ ಬಗ್ಗೆ ಈ ಸದನದ ಎಲ್ಲಾ ಕಡೆಯ ಸದಸ್ಯರಿಗೆ ಗೌರವವಿದೆ.

ಶ್ರೀ ಎನ್. ಜಿ ನಾಯಕ್ : ಅಧ್ಯಕ್ಷರೇ ವಿರೋಧಪಕ್ಷದ ನಾಯಕರು ಹಳ್ಳಿಗಳಿಗೆ ತಿರುಗಿ ನಮ್ಮ ಪ್ರಗತಿ ನೋಡಿದ್ದಾರಾ ಅಥವಾ ಬೆಂಗಳೂರಲ್ಲಿ ಇದ್ದುಕೊಂಡು ಹೇಳುತ್ತಿದ್ದಾರಾ? ದಯವಿಟ್ಟು ಹಳ್ಳಿಗಳಿಗೆ ತಿರುಗಿ ನೋಡಿ. ನಾನು ಒಂದು ದಿವಸ ಕೂಡ ಹಳ್ಳಿಗಳಲ್ಲಿ ವಿರೋಧಪಕ್ಷದ ನಾಯಕರನ್ನು ನೋಡಿಲ್ಲ ಸುಮ್ಮನೆ ಇಲ್ಲಿ ನಿಂತುಕೊಂಡು ಹೇಳುತ್ತಿದ್ದಾರೆ. ಅವರು ಹೇಳುತ್ತಿರುವುದು ಸುಳ್ಳು. ನೋಡಿ, ಅವರು ಟೀಕೆ ಮಾಡೋದೆ. ನಾವು ಆ ಕಡೆ ಇದ್ದಾಗ ಹೇಗೆ ಟೀಕೆ ಮಾಡುತ್ತಿದ್ದೆವು. ಈಗ ನೀವು ಆ ಕಡೆಯಲ್ಲಿದ್ದೀರಿ. ಇದೇ ಪದ್ಧತಿ ವಿರೋಧಪಕ್ಷದ್ದು. ನೋಡುವುದಿಲ್ಲ ಮಾಡೋದಿಲ್ಲ, ಬೆಂಗಳೂರಲ್ಲಿದ್ದುಕೊಂಡು ಮಜಾ ಮಾಡಿಕೊಂಡು ಇರುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ನಮ್ಮ ಎನ್.ಜಿ. ನಾಯಕರ ಅಭಿಪ್ರಾಯ ಏನಿದೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಪಾಪ ಅವರನ್ನು ಉಗ್ರಾಣ ನಿಗಮಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಅವರನ್ನು ಸ್ವಲ್ಪ ಮುಂದಿನ ಸಾಲಿನಲ್ಲಿ ಕೂರಿಸಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಅದು ಬಹುದಿನಗಳ ಆಸೆ ಅವರದ್ದು. ಒಳಗಡೆ ಯಾರ ಕಡೆ ಅವರು ಇದ್ದಾರೋ ಹೊರಗಡೆ ಯಾರ ಕಡೆ ಇದ್ದಾರೋ ನನಗೆ ಗೊತ್ತಿಲ್ಲ. ಅವರು ಮುಂದಿನ ಸಾಲಿನಲ್ಲಿ ಕುಳಿತುಕೊಂಡಿದ್ದರೆ ಚೆನ್ನಾಗಿರುತ್ತಿತ್ತು ಎನ್ನುವುದು ನಮ್ಮ ಆಸೆ. ಏಕೆಂದರೆ ನಮಗೆ ಹೆಚ್ಚಿಗೆ ಮಾತಾಡಲಿಕ್ಕೆ ಮನರಂಜನೆ ಸಿಗುತ್ತಿತ್ತು. ಕೊನೇ ಪಕ್ಷ ಒಬ್ಬ ಶಾಸಕರಾದರೂ ಮೊಯ್ಲಿಯವರ ಪರವಾಗಿ ಎದ್ದುನಿಂತುಕೊಂಡರಲ್ಲಾ ಎಂಬುದೇ ನನಗೆ ಸಂತೋಷ. ಕರ್ನಾಟಕ ಸರ್ಕಾರದ ಖಜಾನೆ ಖಾಲಿ ಆಗಿದೆ ಎನ್ನುವುದಕ್ಕೆ ಮೊನ್ನೆ ದಿನ ಅನೇಕ ಜನ ನನ್ನ ಶಾಸಕ ಮಿತ್ರರು ಜಿಲ್ಲಾಪರಿಷತ್ತಿನ ಸಭೆಯಲ್ಲಿ ಭಾಗವಹಿಸುತ್ತಿದ್ದೆವು. ನಮ್ಮ ಜಿಲ್ಲೆಯಲ್ಲಿ ಅಧಿಕಾರಿಗಳು ನಮ್ಮನ್ನು ಕರೆಸುತ್ತಾರೆ. ಯಾವ ಮಟ್ಟಕ್ಕೆ ಬಂದಿದೆ ಈ ಸರ್ಕಾರ. ಬೋರ್‌ವೆಲ್‌ಗಳ ರಿಪೇರಿ ಸಹ ಮಾಡಲಿಕ್ಕೆ ಇವರ ಹತ್ತಿರ ದುಡ್ಡಿಲ್ಲ. ಹಳ್ಳಿಗಳಲ್ಲಿ ಮಂಡಲಿ ಪಂಚಾಯ್ತಿಗಳ ಮೂಲಕ ಬೀದಿ ದೀಪಗಳನ್ನು ಹಾಕಲಿಕ್ಕೂ ಸಹಿತ ಈ ಸರ್ಕಾರಕ್ಕೆ ದುಡ್ಡಿಲ್ಲ. ಮಾನ್ಯ ಅಧ್ಯಕ್ಷರೇ, ಒಂದು ಹೊಸ ಕಾರ್ಯಕ್ರಮ ಪ್ರಾರಂಭ ಮಾಡಿದರು. ಬಾರ್ಡರ್ ಏರಿಯಾ ಅಭಿವೃದ್ಧಿಗೆಂದು ಒಂದೊಂದು ತಾಲ್ಲೂಕಿಗೂ 25 ಲಕ್ಷ ಕೊಡುತ್ತೇವೆಂದು ಹೇಳಿದರು. 90-91, 91-92, 92-93 ಹಾಗೂ

5.40 ಪಿ.ಎಂ

ಈಗ ನಾವು 93-94ನೇ ಸಾಲಿನಲ್ಲಿ ಇದ್ದೇವೆ. 92-93ನೇ ಸಾಲಿನ ದುಡ್ಡನ್ನು ಪ್ರತಿಯೊಂದು ತಾಲ್ಲೂಕಿಗೆ ಇನ್ನು 10 ರಿಂದ 15 ಲಕ್ಷ ರೂಪಾಯಿ ಬಾಕಿ ಇಟ್ಟುಕೊಂಡಿದ್ದಾರೆ. 92-93ನೇ ಸಾಲಿನಲ್ಲಿ ಆ ಕಂಟ್ರಾಕ್ಟ್‌ದಾರರು ಎಂಎಲ್‌ಎಗಳ ಮಾತನ್ನು ಕೇಳಿಕೊಂಡು, ಡೆಪ್ಯುಟಿ ಕಮೀಷನರ್ ಮಾತನ್ನು ಕೇಳಿಕೊಂಡು ಐದು ಲಕ್ಷ ರೂಪಾಯಿ, ನಾಲ್ಕು ಲಕ್ಷ ರೂಪಾಯಿಗಳ ಪೆಂಡಿಂಗ್ ಬಿಲ್ ಇರುವಾಗ, ಎಲ್ಲಿದೆ ನಿಮ್ಮ ಸರ್ಕಾರದ ಖಜಾನೆಯಲ್ಲಿ ದುಡ್ಡು? ಇದನ್ನು ಕೇಳುವುದಕ್ಕೆ ನಾನು ಬಯಸುತ್ತೇನೆ. ಏತಕ್ಕೆ ಜನಗಳಿಗೆ ಮೋಸ ಮಾಡುತ್ತಿದ್ದೀರಿ? ಬಾರ್ಡರ್ ಏರಿಯಾ ಡೆವಲಪ್ಮೆಂಟ್ ಫಂಡನ್ನು ಬಿಡುಗಡೆ ಮಾಡಿ ಎಂದು ಹೇಳಿ ಎಲ್ಲಾ ಶಾಸಕರುಗಳು ಒತ್ತಾಯ ಮಾಡುತ್ತಿದ್ದೇವೆ. ಇವತ್ತು ನೀವು ಅದರ ಬಗ್ಗೆ ಗಮನವನ್ನು ಕೊಡುತ್ತಿಲ್ಲ. ನಾನು ಸ್ವತಃ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ಒಂದಲ್ಲ, ಹಲವಾರು

ಬಾರಿ ನೋಡಿದ್ದೇವೆ. ಹಾಗಿದ್ದರೆ ನಮ್ಮ ಹತ್ತಿರ ದುಡ್ಡಿಲ್ಲ, ನಾವು ಈ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿಬಿಡಿ. ಮತ್ತೆ ನಾಚಿಕೆ ಇಲ್ಲದೆ 93-94ನೇ ಸಾಲಿನಲ್ಲಿ ಮತ್ತೆ ಕೆಲಸವನ್ನು ಪ್ರಾರಂಭ ಮಾಡಿಸಬೇಕು ಎಂದು ಹೇಳುತ್ತಿದ್ದೀರಾ? ಯೋಜನೆಗಳನ್ನು ತಯಾರು ಮಾಡಿಸುತ್ತಿದ್ದೀರಾ? ನಮಗೆ ಮೋಸ ಮಾಡುವುದಕ್ಕೆ ನೀವು ಹೊರಟಿದ್ದೀರಾ? ನಿಮ್ಮ ಖಜಾನೆಯಲ್ಲಿ ಎಲ್ಲಿದೆ ದುಡ್ಡು? ಇದಕ್ಕೆ ಉತ್ತರವನ್ನು ನೀವು ನನಗೆ ಕೊಡಬೇಕು ಮಾನ್ಯ ಅಧ್ಯಕ್ಷರೇ, ನೂರು ದಿನಗಳ ಕಾರ್ಯಕ್ರಮದ ಬಗ್ಗೆ ನಾಚಿಕೆಯಾಗಬೇಕು, ಇವರು ಕೆಲಸ ಮಾಡಿದ್ದೇ 100 ದಿವಸ ಅದಕ್ಕೋಸ್ಕರ ಅವರು ಹೇಳಿಕೊಂಡಿದ್ದು. 100 ದಿವಸಗಳ ಪ್ರೋಗ್ರಾಮ್ ಎಂದು.

ಶ್ರೀ ಎನ್.ಜಿ. ನಾಯಕ್ : ನಿಮ್ಮ ಸರ್ಕಾರದ ಆಡಳಿತ ಮಾಡಿ ಮುಗಿಸಿದ ಮೇಲೆ ವೀರೇಂದ್ರ ಪಾಟೀಲರು ಅಧಿಕಾರವನ್ನು ತೆಗೆದುಕೊಂಡರು. ಆಗ ಅವರು ಖಾಲಿ ಡಬ್ಬ ತೆಗೆದುಕೊಂಡರು. ಆಗ ದುಡ್ಡಿತ್ತೇನು ಕೇಳ್ರಿ. ಈಗ ನಮಗೆ ಹೇಳುತ್ತಿದ್ದಾರೆ. ನಮ್ಮಲ್ಲಿ ಬೇಕಾದಷ್ಟು ದುಡ್ಡು ಇದೆ. ಎಷ್ಟು ಬೇಕಾದರೂ ಇದೆ. ಖಾಲಿ ಡಬ್ಬ ಎಂದು ಹೇಳುತ್ತಾರೆ. ಆ ಪದವನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು : ಮುಖ್ಯಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಾಮಿ, ವೀರೇಂದ್ರ ಪಾಟೀಲರ ಬಗ್ಗೆ ಮಾತನಾಡಲಿಕ್ಕೆ ನನಗೆ ನೈತಿಕವಾದ ಹಕ್ಕಿದೆ. ರಾಜಶೇಖರಮೂರ್ತಿಯವರಿಗೂ ಸಹ ಗೊತ್ತಿದೆ. 1978ನೇ ಇಸವಿಯಲ್ಲಿ ನಾನು ನೀವು ಎಲ್ಲರೂ ಸೇರಿಸಿಕೊಂಡು ಡಾ ರಾಜ್‌ಕುಮಾರ್ ಅವರನ್ನು ಹೋಗಿ ಬೇಡಿಕೊಂಡೆವು ಮೈಸೂರಿನಲ್ಲಿ. ಇಂದಿರಾಗಾಂಧಿಯವರ ವಿರುದ್ಧ ಅವರನ್ನು ನಿಲ್ಲಿಸಬೇಕು ಎಂದು ಹೇಳಿ. ರಾಜ್‌ಕುಮಾರ್‌ರವರು ಕೈಮುಗಿದು ನಾವು ರಾಜಕೀಯಕ್ಕೆ ಬರುವುದಿಲ್ಲ ಎಂದು ಹೇಳಿದರು. ನಾವು ಇವರ ಕಾಲನ್ನು ಹಿಡಿದೆವು. ಅವರು ಒಪ್ಪಿರಲಿಲ್ಲ ನಿಂತುಕೊಳ್ಳುವುದಕ್ಕೆ. ಹೌದು ತಾನೇ ಸ್ವಾಮಿ? ಅದಾದ 15 ತಿಂಗಳಿಗೆ ಏನು ಮಾಡಿದರು, ಅವರ ಮಂತ್ರಿಮಂಡಲವನ್ನೇ ಸೇರಿದರು. ಅದರಿಂದ ನನಗೆ ಅವರ ಬಗ್ಗೆ ಗೊತ್ತಿದೆ. ಅವರಿಗೆ ನಾನು ದುಡಿದಿದ್ದೇನೆ. ಹೌದು, ಇಂದಿರಾಗಾಂಧಿಯವರು ಗೆದ್ದರು. ಇವರು ಸೋತರು. ಅವರ ಜೊತೆಯಲ್ಲಿ ಹೋಗಿ ಸೇರಿಕೊಂಡರು. ನಾನು ದುಡಿದಿದ್ದೇನೆ ವೀರೇಂದ್ರ ಪಾಟೀಲರು, ಅದಕ್ಕೋಸ್ಕರ ನನಗೆ ಹೊಟ್ಟೆ ಉರಿಯುತ್ತಿದೆ. ಆದರೆ ನಾನು ವೀರೇಂದ್ರ ಪಾಟೀಲರ ವ್ಯಕ್ತಿತ್ವದ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಬಂಗಾರಪ್ಪನವರ ವ್ಯಕ್ತಿತ್ವದ ಬಗ್ಗೆ ನಾನು ಟೀಕೆ ಮಾಡುವುದಕ್ಕೆ ಹೋಗಿಲ್ಲ. ಗುಂಡುರಾವ್‌ರವರನ್ನು ಸತ್ತಮೇಲಲ್ಲ ಹೊಗಳುವುದು ಗುಂಡುರಾವ್‌ರವರು ಬದುಕಿದ್ದಾಗ ಹೊಗಳಬೇಕು. ಅವರಿಗೆ ಚೂರಿ ಹಾಕತಕ್ಕಂಥದ್ದಲ್ಲ. ಏನು ಓಹೋ ಎನ್ನುತ್ತೀರಾ? ಓಹೋ ಎನ್ನುವುದಕ್ಕೆ ಏನಿದೆ? ಗುಂಡುರಾಯರನ್ನು ಹೊರಗಡೆ ಒಳಗಡೆ ಎಲ್ಲಾ ಕಡೆ ನಾನು ಹೊಗಳಿದ್ದೇನೆ. ಅದರಲ್ಲಿ ಸಂಶಯ ಏನು? ಅವರ ಹತ್ತಿರ ಕೆಲಸ ಮಾಡಿಸಿಕೊಳ್ಳಬೇಕಾದರೆ ರಾತ್ರೋ ರಾತ್ರಿ ಹೋಗಿ ಕೆಲಸ ಮಾಡಿಸಿಕೊಳ್ಳುವುದು. ಹಗಲ ಹೊತ್ತಿನಲ್ಲಿ ಬಂದು ಅವರಿಗೆ ಟೀಕೆ ಮಾಡತಕ್ಕಂಥ ಪ್ರವೃತ್ತಿಯ ರಾಜಕಾರಣಿ ನಾನಲ್ಲ. ನನಗೇನೂ ಯಾರದ್ದೂ ಶಹಭಾಷ್ಗಿರಿ ಬೇಕಿಲ್ಲ. ನನ್ನ ಕ್ಷೇತ್ರದ ಜನರು ಆರಿಸಿದರೆ ಕೆಲಸ ಮಾಡುತ್ತೇನೆ. ಇಲ್ಲದಿದ್ದರೆ ಮನೆಯಲ್ಲಿ ಇರುತ್ತೇನೆ. ಅಥವಾ ನೀವು ಓಹೋ ಎನ್ನುವುದರಿಂದ ನಮ್ಮ ಬಾರ್ಡರ್ ಏರಿಯಾ ಫಂಡ್ ರಿಲೀಸ್ ಆಗುತ್ತದೆಯೇ? ನೀವು ದುಡ್ಡು ರಿಲೀಸ್ ಮಾಡಿದ್ದೀರಾ? ಜಿಲ್ಲಾಧಿಕಾರಿಗಳು ನಿಮಗೆ ಈ ಸರ್ಕಾರ ದುಡ್ಡು ಕೊಟ್ಟಿಲ್ಲ, ಹೋದ ವರ್ಷದ ಬಿಲ್ಲು ಬಾಕಿ ಇದೆ ಎಂದು ಹೇಳಿಲ್ಲವೇ? ಅದಕ್ಕೆ ಓಹೋ ಎಂದು ಎಲ್ಲಿ ಹೇಳುತ್ತಾರೆ. ಅದಕ್ಕೆ ತಿರುಪತಿ ನಾಮ ಎಂದು ಹೇಳುತ್ತಾರೆ. ಇಲ್ಲಿ ಸಾಂಡ್ರಾರವರು ಇಲ್ಲ. ಇಂಥ ಮಂತ್ರಿಗಳನ್ನು ಕಟ್ಟಿಕೊಂಡೇ ನಿಮ್ಮ

ಸರ್ಕಾರಕ್ಕೆ ಮಾನ ಮರ್ಯಾದೆ ಎನ್ನತಕ್ಕಂಥದ್ದು ಕಡಿಮೆಯಾಗುತ್ತಿದೆ. ಇವರು ಹೇಳಬೇಕು. ರಂಗನಾಥ್‌ರವರಿಗೆ ನಾನು ಕೇಳಿದ್ದೇನೆ, ಏನು ಸಾರ್, ನಿಮ್ಮ ಪೊಸಿಷನ್ ಏನು? ದುಡ್ಡಿದೆಯಾ? ಕೆಲಸ ಮಾಡುವುದಕ್ಕಾಗುತ್ತದೆಯೇ ಎಂದು ಕೇಳಿದ್ದಕ್ಕೆ, ಕಷ್ಟ ಸಿಂಧ್ಯರವರೇ, ದುಡ್ಡಿಲ್ಲ, ಆದರೆ ಇರುವುದರಲ್ಲಿ ನಾನು ನಾಲ್ಕೈದು ಲಕ್ಷ ರೂಪಾಯಿ ಜಾಸ್ತಿ ಕೊಡುತ್ತೇನೆಪ್ಪ ಅದೇನು ಕೆಲಸ ಇದೆ ಎಂಬುದನ್ನು ಹೇಳಿ ಎಂದು ಅವರು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ : ಗೋಪ್ಯವಾದ ವಿಚಾರ ಇಲ್ಲಿ ಏಕೆ ಹೇಳುತ್ತಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಗೋಪ್ಯವಾದ ವಿಚಾರ ಅಲ್ಲ.

(ಗೊಂದಲ)

ಉಪಾಧ್ಯಕ್ಷರು : ಸಿಂಧ್ಯರವರು ಹೇಳುವುದನ್ನು ಕೇಳಿ ಎಲ್ಲಾ ಎಂಎಲ್‌ಎ ಗಳು ರಂಗನಾಥ್ ಅವರ ಹತ್ತಿರ ಹೋಗುತ್ತಾರೆ. ಅವರಿಗೆ ಕೊಟ್ಟ ಹಾಗೆ ನಮಗೂ 5-5 ಲಕ್ಷ ಕೊಡಿ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಏಕೆ ಇಷ್ಟು ಅವಸರದಲ್ಲಿ ಇದ್ದೀರಿ? ನೀವು ನಮ್ಮ ಜಿಲ್ಲೆಯವರು. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾನು ಮಾತನಾಡುವುದೇ ಅಪರೂಪ.

ಉಪಾಧ್ಯಕ್ಷರು : ತಾವು ಮಾತನಾಡುವುದು ಅಪರೂಪವೇ?

ಶ್ರೀ ಎನ್.ಜಿ. ನಾಯಕ್ : ನಮ್ಮಲ್ಲಿ ದುಡ್ಡು ಇಲ್ಲ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ : ಛೇರ್ಮನ್ ಆದಮೇಲೆ ಮಾನ್ಯ ನಾಯಕ್ ಅವರಿಗೆ ಬಹಳ ಉತ್ಸಾಹ ಬಂದಿದೆ. ಉಗ್ರಾಣದಲ್ಲಿ ಬಹಳ ಹೆಗ್ಗಣಗಳು ಬಿದ್ದು ಬಿಟ್ಟಿವೆ, ಅವನ್ನು ಸ್ವಲ್ಪ ನೋಡಿಕೊಳ್ಳಲು ಹೇಳಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಶ್ರಯ ಯೋಜನೆಯಲ್ಲಿ ಒಂದು ಲಕ್ಷ 50 ಸಾವಿರ ಮನೆಗಳನ್ನು ಕಟ್ಟಿಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ನಾವೆಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರು. ಅವತ್ತು ಪ್ರಶ್ನೋತ್ತರ ವೇಳೆಯಲ್ಲಿ ಅರ್ಧ ಉತ್ತರ ಕೊಟ್ಟು ಓಡಿ ಹೊರಟು ಹೋದರು. ಈ ಸದನದಿಂದ ನಾನು ಕೇಳುತ್ತಿದ್ದೇನೆ. ನಿಮ್ಮ ಹಾಗೆ ನಾವೂ ಕ್ಷೇತ್ರದಲ್ಲಿ ಕೆಲಸ ಮಾಡುವವರು. ಸರ್ಕಾರ ದುಡ್ಡು ಕೊಡುತ್ತದೆ ಎಂದು ಹೇಳಿ ಪಟ್ಟಿಗಳನ್ನು ನಾವು ಮಾಡಿದ್ದೇವೆ. ನಾವು ಕುಳಿತುಕೊಂಡು ಸಾವಿರ ಸಾವಿರ ಪಟ್ಟಿ ಮಾಡಿದೆವು. ಪಟ್ಟಿ ಮಾಡಿದ ಮೇಲೆ 500 ಮನೆಗಳಿಗೆ ಇವರು ಇಳಿಸಿದರು. ಇವರು ಮಾನ್ಯ ಮುಖ್ಯಮಂತ್ರಿಗಳಾದ ಮೇಲೆ ಒಂದು ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದವರು. 500 ಮನೆಗಳಿಗೆ ಇಳಿಸಿದರು. ನಿಮ್ಮ ಸರ್ಕಾರ ಮಾತು ಕೊಟ್ಟಾಯಿತು. ನಿಮ್ಮ ಸರ್ಕಾರ ಬಂದು ನಾಲ್ಕು ವರ್ಷ ಆಯಿತು. ಬಡವರಿಗೆ ಹಾಕಿದ್ದಂತಹ ಒಂದು ಕಾರ್ಯಕ್ರಮವನ್ನು ನಿಲ್ಲಿಸಿದ್ದೀರಿ. ಇವತ್ತು ಏನು ಮಾಡಿದ್ದೀರಿ ನೀವು? ನಾಲ್ಕು ವರ್ಷದಲ್ಲಿ ಆರು ಸಾವಿರ ಮನೆಗಳನ್ನು ಕಟ್ಟಿ ನಿಮ್ಮನ್ನು ನಂಬಿ ಆ ಬಡಜನರು ತಮ್ಮ ತಾಳಿಗಳನ್ನು ಸಹ ತೆಗೆದುಕೊಂಡು ಹೋಗಿ ಅಡವು ಇಟ್ಟಿದ್ದಾರೆ. ಪಾಯ ಹಾಕಿಕೊಂಡಿದ್ದಾರೆ. ಗೋಡೆಗಳನ್ನು ಕಟ್ಟಿದ್ದಾರೆ, ಸಿದ್ದಯ್ಯನವರೇ, ನಮ್ಮ ಕ್ಷೇತ್ರಕ್ಕೆ ಬನ್ನಿ. ನಿನ್ನೆ ಮಳೆ ಬಿದ್ದು ಮನೆ ಎಲ್ಲಾ ಮುಳುಗಿ ಹೋಯಿತು.

ಇವರು ಏನು ಮಾಡಬೇಕು? ಹುಡ್ಕೋ ಯೋಜನೆ ಆ ಮೇಲೆ ಆಯಿತು. ಆಶ್ರಯ ಯೋಜನೆ ಬಗ್ಗೆ ನಾನು ಹೇಳುತ್ತಿದ್ದೇನೆ. ಎರಡು ಸಾವಿರ ರೂಪಾಯಿ ರಿಲೀಸ್ ಮಾಡಿದ್ದೀರಿ. ಎರಡು ಸಾವಿರ ರೂಪಾಯಿ ತೆಗೆದುಕೊಂಡು ಏನು ಮಾಡುವುದು? ಅದರಲ್ಲಿ ಎರಡು ನೂರು ರೂಪಾಯಿ ಅಲ್ಲಿ ಮುರಿದುಕೊಳ್ಳುತ್ತಾರೆ. ಇವರ ಕೈಗೆ ಸಿಕ್ಕುವುದು ಕೇವಲ 1800 ರೂಪಾಯಿಗಳು ಮಾತ್ರ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಯಾವ ಲೆಕ್ಕದಲ್ಲಿ ಮುರಿದುಕೊಳ್ಳುತ್ತಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಯಾವುದೋ ತಿರುಪತಿ ಲೆಕ್ಕ. ಸಾಲದ್ದಕ್ಕೆ ಗೋಡೆಗಳೆಲ್ಲಾ ಬಿದ್ದು ಹೋಗಿವೆ. ಒಂದು ಲಕ್ಷ ಕುಟುಂಬದ ಐದು ಲಕ್ಷ ಜನ ನಿಮಗೆ ಶಾಪ ಹಾಕಿಕೊಂಡು ಕೂತಿದ್ದಾರೆ. ಇದು ನಿಮಗೆ ಗೊತ್ತಾಗಬೇಕು. ನಿಮ್ಮ ಖಜಾನೆಯಲ್ಲಿ ದುಡ್ಡು ಇಲ್ಲ. ಅದನ್ನು ನೀವು ಹೇಳುವುದಕ್ಕೆ ತಯಾರು ಇಲ್ಲ. ಒಂದನೇ ಮಾರ್ಚ್ ಏಪ್ರಿಲ್ ತಿಂಗಳಲ್ಲಿ ರಿಲೀಸ್ ಮಾಡಿದವರು ಇವತ್ತು ಸೆಪ್ಟೆಂಬರ್ ತಲುಪಿದ್ದೇವೆ. ಇವತ್ತು ದುಡ್ಡು ರಿಲೀಸ್ ಮಾಡಿಲ್ಲ ಎಂದರೆ ನಾವು ಯಾವ ಕಡೆ ಹೋಗಬೇಕು. ಅಥವಾ ನಿಮಗೆ ಬೇಕಾಗಿರತಕ್ಕವರಿಗೆ ದುಡ್ಡು ರಿಲೀಸ್ ಮಾಡಿದ್ದೀರಾ ಹೇಗೆ ಎಂಬುದು ನಮಗೆ ಗೊತ್ತಿಲ್ಲ. ನಾನಾದರೂ ಒತ್ತಾಯ ಮಾಡತಕ್ಕದ್ದು ಈ ದುಡ್ಡನ್ನು ಬೇಗ ಬಿಡುಗಡೆ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ರಾಜಶೇಖರ್ ಮೂರ್ತಿಯವರು ಕಂದಾಯ ಮಂತ್ರಿಗಳು. ತಾವು ನಮ್ಮ ಬಾದರ್ಲಿ ಹಂಪನಗೌಡ ಕ್ಷೇತ್ರಕ್ಕೆ ಹೋಗಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಕಳೆದ ವರ್ಷ ಮಳೆ ಆಯಿತು, ಮಳೆ ಆದ ನಂತರ ಮುಖ್ಯಮಂತ್ರಿಗಳ ಬದಲಾವಣೆ ಆಯಿತು. ಕೋಟ್ಯಾಂತರ ರೂಪಾಯಿ ಆಸ್ತಿ ಲುಕ್ಸಾನು ಆಗಿದೆ ಎಂದು ತಮಗೆ ಗೊತ್ತಿರತಕ್ಕಂಥ ವಿಚಾರ. ಇವತ್ತು ಆಗಾಗ ನಾವು ಪರಿಹಾರ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಒಂದೊಂದು ಪಂಪುಸೆಟ್ಟಿಗೆ 40 ಸಾವಿರ ರೂಪಾಯಿ, 50 ಸಾವಿರ ರೂಪಾಯಿ, 60 ಸಾವಿರ ರೂಪಾಯಿ ಖರ್ಚು ಮಾಡಿ..

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಸಿಂಧ್ಯರವರೇ, ಬಂಗಾರಪ್ಪನವರ ಅಧಿಕಾರ ಹೋದ ಮೇಲೆ ಮಳೆ ಬೇಗನೇ ಬಂತು, ಮೊದಲು ಇರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪ್ರವಾಹ ಬಂತು ಎಂದು ಹೇಳಿ. ಪುಂಗನೂರು ಕ್ಷೇತ್ರದಲ್ಲಿ ಮಳೆ ಆಯಿತು.

ಶ್ರೀ ಕೆ.ಹೆಚ್. ರಂಗನಾಥ್ : ಎಲೆಕ್ಷನ್ ಇನ್ನೂ ದೂರ ಇದೆ. ಈಗಲೇ ಜೋರಾಗಿ ಶುರು ಮಾಡಿದ್ದೀರಲ್ಲಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಲೆಕ್ಷನ್ಗೋಸ್ಕರ ಮಾತನಾಡುತ್ತಿಲ್ಲ, ನಿಮಗೆ ಒಂದು ವಿಷಯ ಹೇಳುತ್ತೇನೆ. ಬಹಳ ಹೆಮ್ಮೆಯಿಂದ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಂಗನಾಥ್ ಅವರು ಮಾರ್ಮಿಕವಾಗಿ ಹೇಳುತ್ತಿರುವುದು ಇದು ಚುನಾವಣಾ ಭಾಷಣ ಎಂದು. ಅದು ಅಲ್ಲ ಎಂದು ನಾನ ಅಂದುಕೊಂಡಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಚುನಾವಣೆ ಇನ್ನೂ ದೂರ ಇದೆ. ಮಾಡಬೇಕಾದ ಕೆಲಸದ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈಗ ದುಡ್ಡನ್ನು ಕೊಡುತ್ತೇವೆಂದು ಹೇಳಿದರು. ಅದು ಎಷ್ಟು ದುಡ್ಡು ಕೊಟ್ಟಿದ್ದೀರಾ ಎಂಬ ಬಗ್ಗೆ ಈ ಸದನಕ್ಕೆ ತಾವು ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಒಂದು ಮಾತನ್ನು ತಾವು ಆ ಸಂದರ್ಭದಲ್ಲಿ ಹೇಳಿದ್ದೀರಿ. ಪ್ರತಿ ಒಂದು ಪಂಪುಸೆಟ್ಟಿಗೂ ಸಹಿತ ಮೂರು ಸಾವಿರ ರೂಪಾಯಿ

ನಾವು ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಈ ಸದನದ ಮಾಜಿ ಸದಸ್ಯರಾದ ಸನ್ಮಾನ್ಯ ಉದಾಸಿಯವರು, ಹಾನಗಲ್ ಕ್ಷೇತ್ರದವರು. ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದಲ್ಲಿ ಅವರು ಏನು ಹೇಳಿದ್ದಾರೆಂದು ಹೇಳಿದರೆ ಅವರ ಹಾನಗಲ್ ಕ್ಷೇತ್ರದಲ್ಲಿ ಇದ್ದಂತಹ ಪಂಪುಸೆಟ್ಟುಗಳಿಗೆ 30 ಸಾವಿರ, 40 ಸಾವಿರ ರೂಪಾಯಿ ಸಾಲ ತೆಗೆದುಕೊಂಡು ಲುಕ್ಸಾನು ಆಗಿದ್ದಂತಹ ದುಡ್ಡಿಗೆ ಮೂರು ಸಾವಿರ ರೂಪಾಯಿ ಪರಿಹಾರ ಕೊಡುತ್ತೇವೆ ಎಂದು ಹೇಳಿದ್ದವರು ಇದುವರೆಗೆ ಕೊಟ್ಟಿರತಕ್ಕದ್ದು ಒಂದು ಸಾವಿರ ರೂಪಾಯಿ ಮಾತ್ರ ಎಂದು.

ಆ ಒಂದು ಸಾವಿರ ರೂಪಾಯಿಯಲ್ಲಿ ಸ್ಥಳ ಪರಿಶೀಲನೆಗೆ ಹೋಗಿರತಕ್ಕಂಥ ಗ್ರಾಮ ಲೆಕ್ಕಿಗನಿಗೆ, ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ, ತಹಶೀಲ್ದಾರರಿಗೆ ಮತ್ತು ಅಲ್ಲಿ ಕೆಲಸ ಮಾಡುವ ಇತರೆ ಸಿಬ್ಬಂದಿಗೆಲ್ಲಾ ಖರ್ಚಾಗಿ ಕೊನೆಗೆ ಉಳಿಯುವಂಥ ಹಣ ಏನೂ ಇಲ್ಲ. ಏಕೆ ನೀವು ಹಣವನ್ನು ಬಿಡುಗಡೆ ಮಾಡುತ್ತಿಲ್ಲ? ನೀವು ಏಕೆ ಹಣ ಬಿಡುಗಡೆ ಮಾಡುತ್ತಿಲ್ಲವೆಂದ ನಿಮ್ಮ ಹತ್ತಿರ ಹಣವಿಲ್ಲ. ಹಣ ಬಿಡುಗಡೆ ಮಾಡಬೇಕೆಂಬ ಸದಿಚ್ಛೆ ನಿಮಗಿದೆ. ಆದರೆ ನಿಮ್ಮ ಬಳಿ ದುಡ್ಡಿಲ್ಲ. ಇಂದು ಮಧ್ಯಾಹ್ನ ಸದನದಲ್ಲಿ ಮುಖ್ಯಮಂತ್ರಿಗಳು ಇರಲಿಲ್ಲ. ನಿಮ್ಮ ಸರ್ಕಾರ ಅಧಿಕಾರಿಗಳು ಸಿಂಧನೂರು ತಾಲ್ಲೂಕಿಗೆ ಹೋಗಿ ಲೆಕ್ಕಾಚಾರ ಹಾಕಿರುವ ಪ್ರಕಾರ ಒಂದು ಪಂಪ್ಸೆಟ್ಟಿಗೆ ಕೊಡಬೇಕಾಗಿರುವ ಹಣ ಮೂರು ಸಾವಿರ ರೂಪಾಯಿಗಳು. ಅಂದರೆ, ಒಂದು ಸಾವಿರ ಪಂಪ್ಸೆಟ್ಟಿಗೆ ಬೇಕಾಗಿರತಕ್ಕಂಥ ಹಣ 30 ಲಕ್ಷ ರೂಪಾಯಿಗಳು. ಆದರೆ, ಬಿಡುಗಡೆ ಮಾಡಿರತಕ್ಕಂಥ ಹಣ 5 ಲಕ್ಷ ರೂಪಾಯಿಗಳು. ರೈತರು ಏನು ಮಾಡಬೇಕು? ಅವರು ಎಲ್ಲಿಗೆ ಹೋಗಬೇಕು? ಅವರಿಗೆ ಪರ್ಯಾಯವಾದ ಯೋಜನೆಯೇನಾದರೂ ತಯಾರು ಮಾಡಿದ್ದೀರಾ? ಅದೂ ಸಹ ಮಾಡಿಲ್ಲ. ಅಥವಾ ಕೇಂದ್ರ ಸರ್ಕಾರದವರೇನಾದರೂ ದುಡ್ಡು ಕೊಟ್ಟಿದ್ದಾರಾ? ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೀವೇನು ಮಾಡುತ್ತೀರೆಂಬುದನ್ನೂ ಸಹ ನಮಗೆ ತಿಳಿಸಿಲ್ಲ. ಸಿಂಧ್ಯಾರವರು ಏಕೆ ಇವೊತ್ತು ಹೀಗೆ ಮಾತನಾಡುತ್ತಿದ್ದಾರೆ? ಎಂದು ಸನ್ಮಾನ್ಯ ಸಚಿವರಾದ ರಂಗನಾಥ್‌ರವರು ಯಾವ ಉದ್ದೇಶವಿಟ್ಟುಕೊಂಡು ಹೇಳಿದರೋ ನನಗೆ ಗೊತ್ತಾಗುತ್ತಿಲ್ಲ. ವಿಧಾನ ಸಭೆ ಏನಾದರೂ ಸಧ್ಯದಲ್ಲಿಯೇ ವಿಸರ್ಜನೆಯಾಗುತ್ತದೆಯೇ?

ಶ್ರೀ ಕೆ.ಎಚ್. ರಂಗನಾಥ್ : ಇವೊತ್ತು ದೊಡ್ಡ ಧ್ವನಿಯಿಂದ ಇಷ್ಟು ಜೋರಾಗಿ ಮಾತನಾಡುತ್ತಿದ್ದೀರಿ. ಚುನಾವಣೆ ಇನ್ನೂ ಬಹಳ ದೂರವಿರುವುದರಿಂದ ಈಗಲೇ ಏಕೆ ಎಕ್ಸಾಸ್ಟ್ ಆಗುತ್ತೀರೆಂದು ಹೇಳಿದೆ ಅಷ್ಟೆ;

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮ ಸರ್ಕಾರದ ಗತಿ ಏಕೆ ಈ ಮಟ್ಟಕ್ಕೆ ಬಂತು? ಜಾಲಪ್ಪನವರು ನಿಮ್ಮ ಮುಖದ ಮೇಲೆ ಈವತ್ತು 150 ರೂಪಾಯಿಗಳ ಚೆಕ್ ಅನ್ನು ಎಸೆದಿದ್ದಾರೆ. ಯಾವ್ಯಾವ ಫಲಾನುಭವಿಗಳಿಗೆ ಕೊಟ್ಟಿದ್ದರೋ ಅವರಿಂದ ತಹಶೀಲ್ದಾರ್ ವಾಪಸ್ಸು ತೆಗೆದುಕೊಂಡು ಬಂದಿದ್ದಾರೆ. ನಿಮ್ಮ ಹತ್ತಿರ ಹಣ ಇಲ್ಲವೆಂದರೆ, ಹಣ ಇಲ್ಲವೆಂದು ಕೇಳಿ. ಏಕೆ ಈ ಸದನವನ್ನು ತಪ್ಪು ದಾರಿಗೆಳೆಯುತ್ತಿದ್ದೀರಿ? ಇದರ ಬಗ್ಗೆ ನಮಗೆ ಪೂರ್ಣ ಮಾಹಿತಿ ಕೊಡಿ. ಸಿಂಧನೂರು ತಾಲ್ಲೂಕಿನ ವಿಚಾರವಾಗಿ ನಾವು ಹೇಳುತ್ತಿದ್ದೇವೆ. ಅಲ್ಲಿಗೆ ಬೇಕಾಗಿರುವುದು 30 ಲಕ್ಷ ರೂಪಾಯಿಗಳು. ಆದರೆ, ನೀವು ಬಿಡುಗಡೆ ಮಾಡಿರುವುದು ಬರೇ 5 ಲಕ್ಷ ರೂಪಾಯಿಗಳು, ಇನ್ನೂ 25 ಲಕ್ಷ ರೂಪಾಯಿಗಳನ್ನು ರೈತರಿಗೆ ಕೊಡಬೇಕು. ಮೊಯಿಲಿಯವರೇ ತಾವು ಉತ್ಸಾಹದ ಭರದಲ್ಲಿ ಬಹಳ ಭರವಸೆಗಳನ್ನು ಕೊಟ್ಟು ಬಿಡುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಬಹಳ ವೇಗವಾಗಿ ಹೋಗುತ್ತಿದ್ದೀರಿ. ಇದನ್ನು ಚೆಕ್ ಮಾಡುವ ಅವಶ್ಯಕತೆ ನಮಗಿಲ್ಲ. ತಮ್ಮ ಮಾಹಿತಿಗಾಗಿ ಹೇಳಬೇಕೆಂದರೆ,

ನೆರೆ ಹಾವಳಿಯಿಂದ ಏನು ನಷ್ಟವಾಯಿತು ಅದಕ್ಕೆ ಪರಿಹಾರವಾಗಿ ನಾವು ಬಿಡುಗಡೆ ಮಾಡಿದಂಥ ಎರಡು ಕೋಟಿ ರೂಪಾಯಿಗಳು ರಾಯಚೂರು ಜಿಲ್ಲಾಧಿಕಾರಿಗಳ ಬಳಿ ಇದೆ. I am telling you that the money is with him for payment. We have fully released that money. ಆದುದರಿಂದ, ಅಲ್ಲಿ ಪೇಮೆಂಟ್ ಮಾಡಬೇಕಾದರೆ ಆ ಭಾಗದ ಶಾಸಕರು ಸ್ವಲ್ಪ ಆಸಕ್ತಿ ವಹಿಸಬೇಕು.

ಶ್ರೀ ಕೆ.ಬಿ. ಕೋಳಿವಾಡ್ : ಪಂಪ್ಸೆಟ್ಟಗಳನ್ನು ಕಳೆದುಕೊಂಡಂಥವರಿಗೆ ಮೂರು ಸಾವಿರ ಪರಿಹಾರಧನ ಕೊಡುತ್ತೇವೆಂದು ಹೇಳಿದ್ದೀರಿ. ನೀವು ಹಣವನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿರಬಹುದು. ಆದರೆ, ಜಿಲ್ಲಾಧಿಕಾರಿಗಳು ಪರಿಹಾರವಾಗಿ ಕೊಡುತ್ತಿರುವುದು ಒಂದು ಸಾವಿರ ರೂಪಾಯಿಗಳು ಮಾತ್ರ. ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಕೊಡಬೇಕೆಂದೇನಾದರೂ ಸರ್ಕಾರದಿಂದ ಆದೇಶ ಹೋಗಿದೆಯೇ? ಶಾಸಕರು ಕೇಳಿದರೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆಂದು ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಉಪಾಧ್ಯಕ್ಷರೇ, ಇವೊತ್ತು 3ನೇ ತಾರೀಖು. ಸನ್ಮಾನ್ಯ ಕಂದಾಯ ಸಚಿವರಾಗಿರತಕ್ಕಂಥ ಶ್ರೀ ಎಂ. ರಾಜಶೇಖರಮೂರ್ತಿಯವರು ನನ್ನ ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 520ಕ್ಕೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರವನ್ನು ಓದುತ್ತೇನೆ. ಸಿಂಧನೂರು ತಾಲ್ಲೂಕಿನಲ್ಲಿ ನೆರೆ ಹಾವಳಿಯಿಂದ ಹಾನಿಗೊಳಗಾದ ಪಂಪುಸೆಟ್ಟುಗಳೆಷ್ಟು ಎಂದು ಕೇಳಿದ್ದಕ್ಕೆ ಉತ್ತರವಾಗಿ 1992ರ ನವೆಂಬರ್ ತಿಂಗಳಲ್ಲಿ ಅತಿವೃಷ್ಟಿಯಿಂದ ಸಿಂಧನೂರು ತಾಲ್ಲೂಕಿನಲ್ಲಿ 1059ಪಂಪುಸೆಟ್ಟುಗಳು ಹಾನಿಗೊಳಗಾಗಿವೆಯೆಂದು ಹೇಳಿದ್ದಾರೆ.

ಈ ಹಾನಿಯನ್ನು ತುಂಬಲು ಬಿಡುಗಡೆಯಾದ ಹಣ 5 ಲಕ್ಷ ರೂಪಾಯಿಗಳು. ಇದಕ್ಕಾಗಿ ಇನ್ನೂ ತಗಲುವ ವೆಚ್ಚವನ್ನು ಸಿಂಧನೂರಿನ ತಹಶೀಲ್ದಾರರ ಬಳಿ ಇರುವ ಉಳಿದಿರುವ ಹಣದಿಂದ ಭರಿಸಲು ಅನುಮತಿ ನೀಡಲಾಗಿದೆ. ಹಾನಿಗೆ ಒಳಗಾದ ನೀರಾವರಿಯ ಪಂಪುಸೆಟ್‌ನ ಗರಿಷ್ಟ ಪರಿಹಾರವಾಗಿ 3000ಎಂದು ನಿಗಧಿ ಮಾಡಲಾಗಿದೆ. ಇದುವರೆಗೆ 538ಪಂಪುಸೆಟ್ಟಿಗಳಿಗೆ 5.38ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೆಂದು ಇದು ತಾವೇ ಕೊಟ್ಟಿರುವ ಉತ್ತರ ನಾವು ಇದಕ್ಕಿಂತ ಇನ್ನಾವ ದಾಖಲೆಯ ಆಧಾರದ ಮೇಲೆ ಮಾತನಾಡಬೇಕು ಎನ್ನುವ ಬಗ್ಗೆ ತಿಳಿಯಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಅದರಲ್ಲೇ ತಹಶೀಲ್ದಾರರಿಗೆ ಅನುಮತಿಯನ್ನು ನೀಡಲಾಗಿದೆ ಎಂದು ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ನೀವು ಎರಡು ಕೋಟಿ ರೂಪಾಯಿಗಳನ್ನು ಪೇಪರ್ ಮೇಲೆ ರಿಲೀಸ್ ಮಾಡಿದ್ದೀರಿ. ತಾವು ಹೇಳಿರುವುದು ಸರಿ ಇದೆ. ಆದರೆ ಆ ಬಿ.ಡಿ.ಓ ತಹಶಿಲ್ದಾರರು, ಡೆಪ್ಯೂಟಿ ಕಮೀಷನವರು ಹಣವೇ ಇಲ್ಲವೆಂದು ಹೇಳುತ್ತಾರೆ. ನಾವೂ ಕೂಡ ಆಡಳಿತವನ್ನು ನಡೆಸಿದ್ದೇವೆ. ಹೀಗಾದರೆ ನಾವು ಯಾರನ್ನು ನಂಬಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಅಧ್ಯಕ್ಷರೇ, ನಾನು ಹೇಳುವುದನ್ನು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ. ನಿಮ್ಮ ಲೆಕ್ಕದ ಪ್ರಕಾರ 1992ರ ನವೆಂಬರ್ ರಾಯಚೂರು, ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿ ಏನು ಪ್ರವಾಹದಿಂದ ಹಾನಿಯಾಯಿತು ಅದು 307 ಕೋಟಿ. ಆದರೆ ನೀವು ಬಿಡುಗಡೆ ಮಾಡಿದ ಹಣ 69 ಕೋಟಿ. ನೀವೇ ಹೇಳಿ 307 ಕೋಟಿಯಲ್ಲಿ 69ಕೋಟಿಯನ್ನೂ ಕೂಡ ಬಿಡುಗಡೆ ಮಾಡದಿದ್ದರೆ ಅದು employment generation, repairs, crop loss, pumpsets, human life loss, ಇದರ ಬಗ್ಗೆ ತಾವೇ

ಹೇಳಿ, ಯಾವ ಪ್ರಕಾರವಾಗಿ ಪರಿಹಾರವನ್ನು ಕೊಡಲು ಸಾಧ್ಯವಾಗುತ್ತದೆ. ಆದಕಾರಣ ಪರಿಹಾರವನ್ನು ಕೊಟ್ಟಿಲ್ಲವೆಂದು ಪ್ರಾಮಾಣಿಕವಾಗಿ ತಾವು ಒಪ್ಪಿಕೊಳ್ಳಬೇಕಾಗುತ್ತದೆ.

Sri M. Rajashekhara Murthy : The entire loss cannot be compensated.

Sri R.V. Deshapande : I agree, it is difficult. But, ಅಡಿಕ್ವೇಟ್ ಆಗಿ ನೀವು ಏನು ಕೊಡಬೇಕಾಗಿತ್ತೋ ಅದನ್ನೂ ಸಹ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಬೆಳೆ ಹಾನಿಯನ್ನು ಕೊಟ್ಟಿಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ : ಅದನ್ನೂ ಸಹ ಕೊಟ್ಟಿಲ್ಲ.

Sri K.H. Ranganath : This has specific reference to Raichur. When the money is there as the Hon. Chief Minister says, if something has happened, how can you hold the government resposible?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮತ್ತೊಂದು ವಿಚಾರವೇನೆಂದರೆ, ಕನ್ನಡ ಸಂಸ್ಕೃತಿ ಇಲಾಖೆಯ ಮಂತ್ರಿಗಳಾದ ಮಾನ್ಯ ವಿಶ್ವನಾಥ್‌ರವರು ಇವತ್ತು ಕಾಣಿಸುತ್ತಿಲ್ಲ. ಮೇಲ್ಮನೆಗೆ ಅವರು ಹೋಗಿದ್ದಾರೆ. ಅಲ್ಲಿ ಕೇಳಿದರೆ ಇಲ್ಲಿದ್ದಾರೆ ಎಂದು ಹೇಳುತ್ತಾರೆ. ಇಲ್ಲಿ ಕೇಳಿದರೆ ಅಲ್ಲಿ ಇದ್ದಾರೆಂದು ಹೇಳುತ್ತಾರೆ. ಈಗ ಬಹಳ ಜನ ಮಂತ್ರಿಗಳು ಇದ್ದೀರಿ ಸಂತೋಷ. ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಗೊರೂರು ಚನ್ನಬಸಪ್ಪನವರು ನನಗೆ ಸಿಕ್ಕಿದಾಗ ಅವರನ್ನು ಚೆನ್ನಾಗಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವರು ಚೆನ್ನಾಗಿದ್ದೇನೆಂದು ಹೇಳಿದರು. ಅನಂತರ ಅವರ ಪಕ್ಕದಲ್ಲಿದ್ದವರಿಗೆ ಇವರಿಗೆ ಸರ್ಕಾರದಿಂದ ಕಾರನ್ನು ಕೊಟ್ಟಿದ್ದಾರಂತೆ, ಮಂತ್ರಿಗಳ ಸ್ಟೇಟಸ್‌ನ್ನು ಕೊಟ್ಟಿದ್ದಾರಂತೆ, ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದಾರಂತೆ ಎಂದು ಕೇಳಿದೆ. ಚನ್ನಬಸಪ್ಪನವರು ಅತ್ಯಂತ ಸರಳವಾಗಿರತಕ್ಕಂಥ ಪ್ರಾಮಾಣಿಕವಾದಂಥ ವ್ಯಕ್ತಿ, ಚೆನ್ನಾಗಿ ಕೆಲಸ ಮಾಡಲು ಅವರಿಗೆ ಇದರಿಂದ ಅನುಕೂಲವಾಗುತ್ತದೆಂದು ನಾನು ಸಂತೋಷಪಟ್ಟೆ. ರಾಯಚೂರಿನ ಕೊಪ್ಪಳದಲ್ಲಿ ನಡೆದಂಥ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರಿಗೆ ಮಂತ್ರಿಯ ಸ್ಟೇಟಸ್‌ನ್ನು ಕೊಡುತ್ತೇವೆ, ಕಾರನ್ನು ಕೊಡುತ್ತೇವೆ ಎಂದೆಲ್ಲಾ ಹೇಳಿದ್ದೀರಿ. ಆ ಹೇಳಿಕೆಯ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅಲ್ಲಿ ನಾನು ಏನು ಹೇಳಿದ್ದೇನೆಂದರೆ, ಅಧ್ಯಕ್ಷರು ಏನಾದರೂ ಪ್ರಯಾಣ ಮಾಡುವುದಿದ್ದರೆ ಆ ಸಂದರ್ಭದಲ್ಲಿ ಅವರಿಗೆ ಕಾರನ್ನು ಒದಗಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆಂದು ಹೇಳಿದ್ದೇನೆ. ಖಾಯಂ ಆಗಿ ಕಾರನ್ನು ಕೊಡುತ್ತೇವೆಂದು ಹೇಳಲಿಲ್ಲ. ಅಧ್ಯಕ್ಷರು ಎಲ್ಲೆಲ್ಲಿ ಪ್ರಯಾಣ ಮಾಡುತ್ತಾರೆ ಆಗ ಅವರಿಗೆ ಕಾರನ್ನು ಕೊಡಬೇಕೆಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಮತ್ತು ಸರ್ಕಾರದ ಬಂಗಲೆಯಲ್ಲಿ ಅವರಿಗೆ ಕೊಠಡಿಯನ್ನು ಕಾಯ್ದಿರಿಸಬೇಕೆಂದು ಹೇಳಿದ್ದೇನೆ. ಇದನ್ನು ಬಿಟ್ಟರೆ ಬೇರೆ ಹೇಳಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯ ಮಂತ್ರಿಗಳೇ, ತಾವು ಆ ಸ್ಥಾನದಲ್ಲಿ ಕುಳಿತಿದ್ದೀರಿ. ತಾವು ಹೇಳಿದ್ದು ಮುಖ ಪುಟದಲ್ಲಿ ಬಂದಿದೆ, ಅವರಿಗೆ ಕ್ಯಾಬಿನೆಟ್ ದರ್ಜೆ ಸವಲತ್ತು ಕೊಡುತ್ತೇವೆಂದು ಕಾರು ಕೊಡುತ್ತೇವೆಂದು ಹೇಳಿದ್ದು. ಅವತ್ತು ಪತ್ರಿಕೆಯಲ್ಲಿ ಬಂದಾಗ ಅದನ್ನು ಡಿನೈ ಮಾಡಲಿಲ್ಲ. ಇಷ್ಟು ದಿವಸವಾದ ಮೇಲೆ ಇದರ ಬಗ್ಗೆ ಈ ಮಾತನ್ನು ಹೇಳಿದರೆ ಇದರ ಪರಿಣಾಮ ಏನಾಗುತ್ತದೆ? ಮಾನ್ಯ ಮುಖ್ಯ ಮಂತ್ರಿಗಳ ಮಾತಿಗೆ ಇನ್ನು ಮುಂದೆ ಬರುವ ದಿವಸಗಳಲ್ಲಿ ಯಾರೂ ಎಲ್ಲೂ ಬೆಲೆ ಕೊಡದಿರುವ ಒಂದು ದುಸ್ಥಿತಿಯನ್ನು ನೀವೇ ತಂದುಕೊಳ್ಳುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಪತ್ರಿಕೆಯ ಪ್ರತಿಯನ್ನು ತಂದು ನೋಡಿ. What I said was ಮಿನಿಸ್ಟರ್ ಪ್ರೊಟೋಕಾಲ್ ಕೊಡುತ್ತೇವೆಂದು ಸಜ್ಜನಿಕೆಯಿಂದ ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾನು ಓದಿದ್ದೇನೆ. ನೀವು ಹೇಳಿದ್ದನ್ನು ಮರೆತು ಬಿಡುತ್ತೀರಿ. ನಮ್ಮ ಹಣೆಬರಹ ಸರಿಯಿಲ್ಲ. ನಾನು ಕೂಡ ಇವರಾರು ಎಲ್ಲಿ ಇದೆ ಎಂದು ಹುಡುಕುತ್ತಿದ್ದೆ. ಯಾವ ಕಾರನ್ನು ಕೊಡುತ್ತಾರೋ ಕಾಂಟೆಸ್ಸಾ ಇಲ್ಲವೇ ಮಂತ್ರಿಗಳಿಗೆ ಕೊಡುವಂಥಾದ್ದನ್ನು ಕೊಡಬಹುದೆಂದು ನಾನು ಬಹಳ ಕಾತುರದಿಂದಿದ್ದೆ. ಸಾಹಿತ್ಯ ಪರಿಷತ್ ಹತ್ತಿರ ಹೋಗಿ ನೋಡುತ್ತೇನೆ, ಕಾರೂ ಇಲ್ಲ ಜಟಕಾ ಗಾಡಿಯೂ ಇಲ್ಲ. ಸಮ್ಮೇಳನದ ಅಧ್ಯಕ್ಷರನ್ನೂ ಕೇಳುತ್ತೇನೆ, ಅವರ ಹತ್ತಿರ ಜಟಕಾ ಗಾಡಿಯ ಮಾತು ಇರಲಿ ಅವರ ಹಣೆಬರಹ ಅವರಿಗೆ ಸೈಕಲ್ಲೂ ಇಲ್ಲ. ತಾವು ಹೇಳುತ್ತೀರಿ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆಂದು. ಅಲ್ಲಿ ಇವರಿಗಾಗಿ ಕಾರು ಇಟ್ಟಿದ್ದೀರಾ? ಸಾಹಿತ್ಯ ಪರಿಷತ್ ಅಧ್ಯಕ್ಷರು ಜಿಲ್ಲಾಧಿಕಾರಿಗಳನ್ನು ನಾನು ಕರ್ನಾಟಕ ರಾಜ್ಯದಲ್ಲಿ ಪ್ರವಾಸ ಮಾಡಬೇಕಾಗಿದೆ, ಕಾರು ಬೇಕೆಂದು ಕೇಳಿದರೆ ಇವರಿಗೆ ಕೊಡುವುದಕ್ಕೆ ಜಿಲ್ಲಾಧಿಕಾರಿಗಳ ಹತ್ತಿರ ಕಾರು ಇಟ್ಟಿದ್ದೀರಾ? ಪಾರ್ಲಿಮೆಂಟಿನ ಸದಸ್ಯರಿಗೆ ಒಂದೊಂದು ಕಾರು, ಕಾರ್ಯಾಲಯ, 5 ಲಕ್ಷ ರೂಪಾಯಿ ಕೊಟ್ಟು ನಮಗೂ ಅವರಿಗೂ ಒಂದು ರೀತಿಯ ಜಿಜ್ಞಾಸೆ ತಂದಿಟ್ಟಿದ್ದೀರಿ. ಅವರು ಮಾಡಬೇಕಾದ ಕೆಲಸ ನಾವು ಮಾಡಬೇಕಾಗಿದೆ. ಇದು ನಮ್ಮ ಹಣೆಬರಹವಾಗಿಬಿಟ್ಟಿದೆ. ಅದು ದೊಡ್ಡ ಕಥೆಯಾಗಿ ಕೂತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : 1992-93ನೇ ಸಾಲಿನಲ್ಲಿ ನಮ್ಮ ರಾಜ್ಯದಲ್ಲಿ ನಡೆದಂತಹ ಪರಿಹಾರದ ಕೆಲಸವೇನಿದೆ, ಅದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿಲ್ಲ. ನಾನು ಹೇಳಬೇಕಾದ ಮೊದಲನೇ ಮುಖ್ಯ ಅಂಶವೇನೆಂದರೆ ನಿಮ್ಮ ಖಜಾನೆಯಲ್ಲಿ ಇವತ್ತು ದುಡ್ಡು ಇಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಕೊಡಬೇಕಾಗಿರುವಂತಹ ಸವಲತ್ತಿನ ವಿಚಾರ ಇರಬಹುದು ಅಥವಾ ಬೋರ್‌ವೆಲ್ ರಿಪೇರಿಯಿರಬಹುದು, ಸ್ಟ್ರೀಟ್ ಲೈಟ್ ಇರಬಹುದು ಅಥವಾ ಬಾರ್ಡರ್ ಏರಿಯಾ ಫಂಡ್ಸ್ ಇರಬಹುದು, ಇಲ್ಲವೇ ಬಡವರ ಮನೆಗಳನ್ನು ಕಟ್ಟಲಿಕ್ಕೆ ಬೇಕಾಗಿರತಕ್ಕಂಥ ಹಣದ ವಿಚಾರ ಇರಬಹುದು, ಕಳೆದ ವರುಷ ಆಗಿರತಕ್ಕಂತಹ ಪ್ರವಾಹದ ಸಂದರ್ಭದಲ್ಲಿ ನೊಂದಂತಹ ಸಂತ್ರಸ್ಥರಿಗೆ ಪರಿಹಾರ ಕೊಡುವುದು ಇರಬಹುದು, ಅದಕ್ಕೆಲ್ಲಾ ಹಣ ಒದಗಿಸಬೇಕಾಗುತ್ತದೆ. ಕಳೆದ ವರುಷ ಭದ್ರಾಛಾನಲ್ ಬ್ರೀಚ್ ಆಯಿತು. ಇದಾಗಿ ಒಂದೂವರೆ ವರುಷವಾಗುತ್ತಾ ಬಂತು. ಯಾವ ಪ್ರಮಾಣದಲ್ಲಿ ಎಷ್ಟು ಕೆಲಸವಾಗಬೇಕಿತ್ತು, ಅಷ್ಟು ಪ್ರಮಾಣದಲ್ಲಿ ಕೆಲಸವಾಗಿಲ್ಲ. ಅಲ್ಲೇನೋ ಈಗ ಮಳೆ ಬಿದ್ದಿದೆ. ಈಗ ಶಿವಮೊಗ್ಗ ಜಿಲ್ಲೆಯ ರೈತರಿಗೆ ತೊಂದರೆಯಿಲ್ಲ. ಆದರೆ ಅದರ ರಿಪೇರಿ ಕೆಲಸವನ್ನು ಇನ್ನಾರು ತಿಂಗಳಲ್ಲಿ ಮುಗಿಸದೇ ಹೋದರೆ ಮತ್ತೆ ಅಲ್ಲಿರತಕ್ಕಂತಹ ಎಲ್ಲಾ ರೈತರಿಗೆ ತೊಂದರೆಯಾಗುತ್ತದೆ. ಆದರೆ ತಾವು ಒಂದು ಸಾರಿ ಅಲ್ಲಿಗೆ ಭೇಟಿ ನೀಡಲು ಆಗಿಲ್ಲ. ಭದ್ರಾಛಾನಲ್ ಬ್ರೀಚಾಗಿ ಒಂದೂವರೆ ವರುಷವಾಯಿತು. ಯಾವ ಪ್ರಮಾಣದಲ್ಲಿ ರಿಪೇರಿ ಕೆಲಸ ಅಲ್ಲಿ ಆಗಬೇಕಿತ್ತೋ ಅಷ್ಟು ಪ್ರಮಾಣದಲ್ಲಾಗುತ್ತಿಲ್ಲ. ಮೊನ್ನೆ ತುಂಗಭದ್ರಾ ಛಾನಲ್ ಬ್ರೀಚಾಯಿತು. ನಮ್ಮ ಪಕ್ಷದ ಅಧ್ಯಕ್ಷರು, ವಿರೋಧ ಪಕ್ಷದ ನಾಯಕರು ನಾವೆಲ್ಲಾ ಹೋಗಿ ನೋಡಿಕೊಂಡು ಬಂದೆವು. ಇದಾದ ಮೇಲೆ ನಾವೆಲ್ಲಾ ಅತ್ತೂ ಕರೆದು. ಸರಕಾರದವರನ್ನು ಕರೆದುಕೊಂಡು ಹೋಗಬೇಕೆಂದು ಹೇಳಿದಾಗ ಮಾನ್ಯ ಕೃಷ್ಣ ಅವರು ಅಲ್ಲಿಗೆ ಭೇಟಿ ಕೊಟ್ಟು ಬಂದರು. ನಾನು ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ. ನಾವೇನು ಮಾಡುವುದು, ಹಣವಿಲ್ಲವೆಂದು ಅವರು ಹೇಳುತ್ತಾರೆ. ಮಂತ್ರಿಗಳ ಪೈಕಿ ಮಾನ್ಯ ನಾಗೇಗೌಡರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ನಿಮಗೇನು ನೀರಾವರಿ ಇಲಾಖೆ ಕೊಡಬೇಕೆಂದು ನಾನು

ರೆಕಮೆಂಡ್ ಮಾಡುತ್ತಿಲ್ಲ. ನಾನು ಈ ಸರಕಾರವೇ ಹೋಗಬೇಕೆಂದು ಹೇಳುವವನು. ಈ ಪಶುಸಂಗೋಪನೆ ವಿಚಾರದಲ್ಲಿ ಸ್ವಲ್ಪ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಅದೇನು ಖಾಯಿಲೆ ಬಂತೋ ನಾಗೇಗೌಡರಿಗೆ, ನನಗೆ ಅರ್ಥವಾಗುತ್ತಿಲ್ಲ. ರೈತರಿಗೆ ಹಾಲಿನ ಬೆಲೆಯೇನೋ ಕಡಿಮೆ ಮಾಡಿದ್ದೀರಂತಲ್ಲಾ ಏಕೆ? ಏನು ತೊಂದರೆಯಾಯಿತು. ಒಂದು ಕಡೆ ಹಾಲಿನ ಉತ್ಪಾದನೆ ಜಾಸ್ತಿ ಮಾಡಿದ್ದೇವೆಂದು ಹೇಳುತ್ತೀರಿ ಮತ್ತೊಂದು ಕಡೆ ವಿಶ್ವಬ್ಯಾಂಕಿನಿಂದ ಸಾಲ ತರುತ್ತೇವೆಂದು ಹೇಳುತ್ತೀರಿ. ಆದರೆ ರೈತರಿಗೆ ಕೊಡುತ್ತಿದ್ದ ಹಾಲಿನ ಬೆಲೆಯನ್ನೇಕೆ ಕಡಿಮೆ ಮಾಡಿದಿರಿ? ಮಾರಾಟವೇನಾದರೂ ಕಡಿಮೆ ಮಾಡಿದ್ದೀರಾ ಅಥವಾ ದನಗಳಿಗೆ ಕೊಡತಕ್ಕಂತಹ ಹಿಂಡಿ, ಬೂಸಾ ಬೆಲೆಯನ್ನಾಗಲೀ ಕಡಿಮೆ ಮಾಡಿದ್ದೀರಾ? ರೈತರಿಗೆ ಹಾಲಿನ ಬೆಲೆಯನ್ನೇಕೆ ಕಡಿಮೆ ಮಾಡಿದ್ದೀರಿ ಎಂಬುದಕ್ಕೆ ಮಾನ್ಯ ನಾಗೇಗೌಡರು ಉತ್ತರ ಕೊಡಬೇಕು. ಇದನ್ನು ನಾನು ಅವರಿಂದ ನಿರೀಕ್ಷಿಸುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ : ಮಾನ್ಯ ಸಿಂಧ್ಯರವರೇ, ಈಗ ವಾರದಲ್ಲಿ ಒಂದು ದಿವಸ ಹಾಲು ನಿಲ್ಲಿಸಬೇಕು. ಅವರು ಸ್ವಿಚ್ ಇಟ್ಟಿದ್ದಾರೆ, ಕೆಚ್ಚಲಿಗೆ ಸ್ವಿಚ್ ಮಾಡಿಬಿಟ್ಟರೆ ಆವತ್ತು ಹಾಲಿನ ಪ್ರೊಡಕ್ಷನ್ ಇರುವುದಿಲ್ಲ. ಅಷ್ಟಕ್ಕೋಸ್ಕರ ಹಾಗೆ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಉತ್ತರ ಕೊಡುವುದು ಏನಾದರೂ ಇದ್ದರೆ ಈಗಲೇ ಕೊಡಿ

(ಗೊಂದಲ)

ಉಪಾಧ್ಯಕ್ಷರು : ತಾವು ಮುಂದುವರೆಸಿ,

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ಅರ್ಥವಾಗುತ್ತಿಲ್ಲ ಹಾಲಿನ ಬೆಲೆ ಏಕೆ ಕಡಿಮೆ ಮಾಡಿದ್ದೀರಾ, ಎಂದು ಹೇಳಿ, ಈಗಾಗಲೇ ಎಲ್ಲಾ ಶಾಸಕರುಗಳೊಡನೆ ಸಮಾಲೋಚನೆ ಮಾಡಿ ಹಲವಾರು ಪಶು ಆಸ್ಪತ್ರೆಗಳನ್ನು ಕೊಟ್ಟಿದ್ದೀರಿ, ಕೆಲಸ ಮಾಡುವವರಿಗೆ ಬೆನ್ನು ತಟ್ಟದೆ ಹೋದರೆ ನಿರುತ್ಸಾಹ ಬರುತ್ತದೆ. ನಾವು ಅಧಿಕಾರದಲ್ಲಿ ಇದ್ದಾಗ ನೀವು ನನ್ನ ಬೆನ್ನು ತಟ್ಟಿದ್ದೀರಿ ಆ ಕಾರಣದಿಂದ ಈ ಕೆಲಸವನ್ನು ನಾನು ಮಾಡುತ್ತಿದ್ದೇನೆ. ಇರುವವರಲ್ಲಿ ನೀವು ಉತ್ತಮ ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದೀರಿ. ಪಶುಸಂಗೋಪನಾ ಇಲಾಖೆಗೆ ಒಂದು ಹೊಸ ಚೈತನ್ಯವನ್ನು ಕೊಡುವುದಕ್ಕೆ ನೀವು ಪ್ರಯತ್ನ ಮಾಡುತ್ತಿದ್ದೀರಿ, ಆದರೆ ನಿಮ್ಮ ಇಲಾಖೆಗೆ ಏನು ಖಾಯಿಲೆ ಬಂತು? ಯಾವ ಅಧಿಕಾರಿ ನಿಮಗೆ ಹೇಳಿದ್ದು? ಏಕೆ ಹಾಲಿನ ಬೆಲೆಯನ್ನು ಕಡಿಮೆ ಮಾಡಿದ್ದೀರಿ; ಇದು ನನಗೆ ಅರ್ಥವಾಗುತ್ತಿಲ್ಲ. ನಿಮ್ಮ ಸರ್ಕಾರ ರೈತರ ವಿರೋಧಿ ಎಂದು ಹೇಳಬೇಕೇ ಅಥವಾ ಇನ್ನು ಯಾವ ಕಾರಣಕ್ಕಾಗಿ ನೀವು ಹಾಲಿನ ಬೆಲೆಯನ್ನು ಕಡಿಮೆ ಮಾಡಿದ್ದೀರಿ, ಎನ್ನುವುದು ನನಗೆ ಅರ್ಥವಾಗುತ್ತಿಲ್ಲ, ದಯಮಾಡಿ ಈ ಸದನಕ್ಕೆ ಈಗಲೇ ವಿವರಣೆ ಕೊಟ್ಟರೆ ಒಳ್ಳೆಯದೆಂದು ಅಂದುಕೊಂಡಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) : ಮಾನ್ಯ ಉಪಸಭಾಪತಿಗಳೇ, ಹಾಲಿನ ಬೆಲೆಯನ್ನು ನಿಗದಿ ಮಾಡುವಂತಹ ಅಧಿಕಾರ 13 ಒಕ್ಕೂಟಗಳಿಗೆ ಸಂಬಂಧಪಟ್ಟಿರುವಂತಹ ವಿಚಾರ. ಈ 13 ಒಕ್ಕೂಟಗಳೂ ಸಹ ಜನತಾ ಪ್ರತಿನಿಧಿಗಳಿಂದ ಆಯ್ಕೆಯಾದಂತಹ ಒಕ್ಕೂಟಗಳು. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಪ್ರತಿದಿವಸ ಹತ್ತೂವರೆ ಲಕ್ಷ ಲೀಟರ್ ಹಾಲನ್ನು ಮಾರಾಟ ಮಾಡುತ್ತಿದ್ದೆವು, ಈಗ ಹದಿಮೂರು ಲಕ್ಷ ಲೀಟರ್ ಹಾಲನ್ನು ಮಾರಾಟ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಸಂಸ್ಕರಣಾ ಸಾಮರ್ಥ್ಯ ಇರುವುದು ಎಂಟೂವರೆ ಲಕ್ಷ ಲೀಟರ್‌ನಿಂದ ಒಂಭತ್ತು ಲಕ್ಷ ಲೀಟರ್‌ನಷ್ಟು ಕೆ.ಎಂ.ಎಫ್. ಮಾಜಿ ಅಧ್ಯಕ್ಷರು ಇಲ್ಲೇ ಇದ್ದಾರೆ, ಅವರಿಗೆ ಗೊತ್ತು. ಹಾಲಿನ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಕಾರಣವೇನು ಎಂದರೆ ಸ್ಕಿಮ್ಡ್ ಮಿಲ್ಕ್ ಮಾಡುವುದಕ್ಕೆ ಆಗದೇ ಇವತ್ತು ಪೌಡರ್‌ಗೆ ಕನ್‌ವರ್ಟ್

ಮಾಡಬೇಕಾಗುತ್ತದೆ. ಪೌಡರ್ ಆಗಿ ಕನ್‌ವರ್ಟ್ ಮಾಡಿದರೆ ನಷ್ಟವಾಗುತ್ತದೆ. ಅದು ಕೆ ಎಂ ಎಫ್ ಅಧ್ಯಕ್ಷರಿಗೂ ಗೊತ್ತಿದೆ. ಒಂದು ಲೀಟರ್‌ಗೆ ರೂ. 1-80 ರಿಂದ 2 ರೂಪಾಯಿಗಳು ನಷ್ಟವಾಗುತ್ತದೆ.

ನಮ್ಮ ಹತ್ತಿರ 30 ಕೋಟಿ ರೂಪಾಯಿಗಳ ಸರಕು ಇತ್ತು, ಇವತ್ತು ಏಳು ಕೋಟಿ ರೂಪಾಯಿಗಳಷ್ಟು ಮಾತ್ರವಿದೆ. ಹತ್ತೂವರೆ ಲೀಟರ್‌ನಿಂದ 14 ಲಕ್ಷ ಲೀಟರ್ ಹಾಲನ್ನು ಇವತ್ತು ಮಾರಾಟ ಮಾಡುತ್ತಿದ್ದೇವೆ. ಈ ರೀತಿ ಕರ್ನಾಟಕದ ಇತಿಹಾಸದಲ್ಲೇ ಇಲ್ಲ, ಬೇಸಿಗೆಯ ಒಳಗೆ 60 ಲಕ್ಷ ಲೀಟರ್ ಹಾಲು ಪ್ರತಿನಿತ್ಯ ಉತ್ಪಾದನೆಯಾಗುತ್ತಿದೆ. ಉದಾಹರಣೆಗೆ ಕೋಲಾರವನ್ನು ತೆಗೆದುಕೊಂಡರೆ 1990-91ರಲ್ಲಿ ಪ್ರತಿದಿನ 2 ಲಕ್ಷದ 2 ಸಾವಿರ ಲೀಟರ್ ಹಾಲು ಇದ್ದುದ್ದು 1991-92ರಲ್ಲಿ 2 ಲಕ್ಷದ 10 ಸಾವಿರ ಆಯಿತು. 1992-93ರಲ್ಲಿ 2 ಲಕ್ಷದ 15 ಸಾವಿರ ಲೀಟರ್‌ಗೆ ಹೋಯಿತು. 1993-94ರಲ್ಲಿ 2 ಲಕ್ಷ 80 ಸಾವಿರ ಲೀಟರ್ ಹಾಲನ್ನು ಕೋಲಾರ ಜಿಲ್ಲೆಯಲ್ಲೇ ಕೊಂಡುಕೊಂಡಿದ್ದೇವೆ. ಇದು ಕೋಲಾರ ಜಿಲ್ಲೆಯ ಮಂತ್ರಿಗಳಿಗೂ ಗೊತ್ತಿದೆ, ಮತ್ತು ನಮ್ಮ ಎಲ್ಲಾ ಶಾಸಕರಿಗೂ ಗೊತ್ತು. ಅಂದರೆ ಹೆಚ್ಚು ಹಾಲು ಉತ್ಪಾದನೆಯಾದುದರಿಂದ ಹಾಲನ್ನು ಸಂಸ್ಕರಣ ಮಾಡುವುದಕ್ಕೆ ವ್ಯವಸ್ಥೆ ಇಲ್ಲದಿರುವುದರಿಂದ ಅದನ್ನು ಸ್ಕಿಮ್ಡ್ ಮಿಲ್ಕ್ ಮಾರುವುದಕ್ಕೆ ಆಗದೇ ಇರುವುದು ಕಾರಣವಾಗಿದೆ. ಈಗ ತಮಿಳುನಾಡಿನಲ್ಲಿ ಹೆಚ್ಚು ಹಾಲು, ಆಂಧ್ರ, ಗೋವಾದಲ್ಲೂ ಹೆಚ್ಚು ಹಾಲು, ಇಡೀ ದೇಶದಲ್ಲೇ, ಪ್ರಪಂಚದಲ್ಲೇ ಭಾರತದೇಶದ ಹಾಲಿನ ಉತ್ಪಾದನೆಯಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆ. ಆದುದರಿಂದ ಭಾರತದೇಶದಲ್ಲಿ ಹಾಲು ಉತ್ಪಾದನೆ ಜಾಸ್ತಿಯಾದುದರಿಂದ ಸ್ಕಿಮ್ಡ್ ಮಿಲ್ಕ್ ಮಾರುವುದಕ್ಕೆ ಸಾಧ್ಯತೆ ಇಲ್ಲದಿರುವುದರಿಂದ, ಪೌಡರ್ ಆಗಿ ಕನ್‌ವರ್ಟ್ ಮಾಡಿದರೆ ಸುಮಾರು ರೂ. 1-80, 1-90, 2 ರೂಪಾಯಿಗಳವರೆಗೆ ನಷ್ಟವಾಗುತ್ತದೆ. ನಿಮಗೆ ಹೇಳುವುದಾದರೆ, ಕೋಲಾರ ಜಿಲ್ಲೆಯ ಒಕ್ಕೂಟ ನಷ್ಟದಲ್ಲಿತ್ತು. ಆದರೆ ಬೆಲೆಯ ವಿಷಯವನ್ನು ಒಕ್ಕೂಟಕ್ಕೆ ಬಿಟ್ಟಿದ್ದೇವೆ. ರಾಜ್ಯಸರ್ಕಾರ ಹಾಲಿನ ಬೆಲೆಯನ್ನು ಖಂಡಿತವಾಗಿಯೂ ಕಡಿಮೆ ಮಾಡಿಲ್ಲ, ಜಾಸ್ತಿ ಲಾಭ ಮಾಡಿದ್ದರೆ ನೀವು ಕೊಂಡುಕೊಳ್ಳಿ, ಕಡಿಮೆ ಲಾಭ ಮಾಡಿದ್ದರೆ ಅದಕ್ಕೆ ನೀವೇ ಜವಾಬ್ದಾರರು ಎಂದು ಆಯಾ ಜನತಾ ಪ್ರತಿನಿಧಿಗಳಿಗೆ ತಿಳಿಸಿದ್ದೇವೆ. ಆದರೂ ಸಹಿತ ನಮಗೆ ಸಮಾಧಾನವಿಲ್ಲ. ಈ ಒಕ್ಕೂಟಗಳಿಗೆ ಆದೇಶವನ್ನು ಕೊಟ್ಟಿದ್ದೇವೆ. ಇದಕ್ಕೋಸ್ಕರ ನಮ್ಮ ಸರ್ಕಾರ 5 ಕೋಟಿ ರೂಪಾಯಿಗಳನ್ನು ಕೊಟ್ಟಿದೆ, ನಷ್ಟವನ್ನು ತುಂಬಿಸಲು, ಕಳೆದ 2-3 ತಿಂಗಳಲ್ಲಿ 2 ಕೋಟಿ ರೂಪಾಯಿಗಳನ್ನು ರೈತರಿಗೋಸ್ಕರ ಕೊಟ್ಟಿದ್ದೇವೆ. ಆದುದರಿಂದ ತಾವು ಕೇಳಿದ ಪ್ರಶ್ನೆಗೆ ನಾನು ಕಳಕಳಿಯಿಂದ ಪ್ರಶಂಸೆ ಮಾಡುತ್ತೇನೆ. ಆದರೆ ಪರಿಸ್ಥಿತಿ ಹೀಗಿದೆ ಎಲ್ಲೂ ಸಹ ಹಾಲು ತೆಗೆದುಕೊಳ್ಳುತ್ತಿಲ್ಲ, ನಾನು ಗುಜರಾತ್‌ಗೆ ಹೋಗಿದ್ದೆ. ಅಲ್ಲಿ ಪ್ರತಿನಿತ್ಯ 36 ಲಕ್ಷ ಲೀಟರ್ ಹಾಲನ್ನು ಮಾರುತ್ತಿದ್ದಾರೆ. ಇಡೀ ಪ್ರಪಂಚದಲ್ಲೇ ಹಾಲು ಜಾಸ್ತಿಯಾಗಿರುವುದರಿಂದ ಈ ಸಮಸ್ಯೆ ಬಂದಿದೆ. ಆದುದರಿಂದ ಸ್ವಲ್ಪ ಕಾಲ ಸೈರಿಸಿಕೊಳ್ಳಬೇಕಾಗುತ್ತದೆ. ಬೇರೆ ಮಾರ್ಗವಿಲ್ಲವೆಂದು ಹೇಳುವುದಕ್ಕಿಚ್ಛಿಸುತ್ತೇನೆ.

ಶ್ರೀ ಜೆ.ಸಿ. ಮಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಇಷ್ಟೆಲ್ಲಾ ಇದ್ದರೂ ಮಾನ್ಯ ಮಂತ್ರಿಗಳು ಇನ್ನೂ 50 ಸಾವಿರ ಹಸುಗಳನ್ನು ಇನ್‌ಡೆಂಟ್ ಮಾಡುತ್ತೇವೆಂದು ಏತಕ್ಕೆ ಹೇಳಿದರು ಎಂಬುದು ಒಂದು ಪ್ರಶ್ನೆ. ಜಮಖಂಡಿಯಲ್ಲಿ ತಮಗೆ ಪೌಡರ್ ಪ್ಲಾಟ್ ಬಂತು, ಅದು ಇವತ್ತಿನವರೆಗೂ ಏಕೆ ಪ್ರಾರಂಭವಾಗಿಲ್ಲ ಎನ್ನುವುದು 2ನೇಯ ಪ್ರಶ್ನೆ.

6.10 ಪಿ. ಎಂ.

ಮೂರನೆಯದು ಹೋದವರ್ಷ ಆಗಸ್ಟ್‌ನಲ್ಲಿ ನೀವು ಹಾಲಿನ ಧಾರಣೆಯನ್ನು ಜಾಸ್ತಿ ಮಾಡಿದ್ದೀರಿ, ಆ ಧಾರಣೆಯಲ್ಲಿ 2 ಸಲ ಕಡಿತ ಮಾಡಿದ್ದೀರಿ. ಮೊದಲು

25 ಪೈಸೆ ಕಡಿಮೆ ಮಾಡಿದ್ದೀರಿ, ಇವತ್ತು 25 ಪೈಸೆ ಕಡಿಮೆ ಮಾಡಿದ್ದೀರಿ. ಕರ್ನಾಟಕದಲ್ಲಿ ಅಕ್ಟೋಬರ್‌ಗೆ ಮೊದಲೇ ಎಲ್ಲರೂ ಪೌಡರ್ ಮಾಡುವ ಹಾಗೆ ಇರಲಿಲ್ಲ. ತಿಳುವಳಿಕೆ ಇಲ್ಲದೇ ಹೋದ ವರ್ಷ ತಾವು ಆಗಸ್ಟ್ನಲ್ಲಿ ಹುರುಪಿನಲ್ಲಿ ಧಾರಣೆ ಜಾಸ್ತಿ ಮಾಡಿ ಡೈರಿಗಳೆಲ್ಲಾ ಮುಚ್ಚುವ ಸ್ಥಿತಿಗೆ ತಂದಿರಿ. ತುಮಕೂರು ಡೈರಿಗೆ ಇವತ್ತು 3 ಕೋಟಿ ರೂಪಾಯಿ ನಷ್ಟ. ಯಾರು ನಿಮ್ಮನ್ನು ಬಂದು - ಕೇಳಿದ್ದರು, ಹೋದವರ್ಷ ಆಗಸ್ಟ್‌ನಲ್ಲಿ ಜಾಸ್ತಿ ಮಾಡಿ ಎಂದು? ಪ್ರಪಂಚದಲ್ಲಿ ಯಾರೂ ಆಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಹಾಲಿನ ಧಾರಣೆ ಜಾಸ್ತಿ ಮಾಡುವುದಿಲ್ಲ. ಸುಗ್ಗಿ ಕಾಲ ಬಂದಾಗ ಹಾಲಿನ ಧಾರಣೆ ಜಾಸ್ತಿ ಮಾಡಿ ಪೌಡರ್ ಮಾಡಿಬಿಟ್ಟು ನಮಗೆ ಒಂದು ರೂಪಾಯಿ, 80 ಪೈಸೆ ನಷ್ಟವಾಗುತ್ತದೆ ಎಂದರೆ, ತಲೆ ಇಲ್ಲದೆ ಇರೋ....... ಈ ತೀರ್ಮಾನಗಳಿಗೆಲ್ಲಾ ಸಹಕಾರ ಕೊಡುತ್ತಾ ಹೋಗಿ ಇವತ್ತು ಧಾರಣೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾ ಇದ್ದೀರಿ. ಒಂದು ಸಲ 25 ಪೈಸೆ ಇನ್ನೊಂದು ಸಲ 25 ಪೈಸೆ, ಅದರ ಜೊತೆ ರಜಾ ಬೇರೆ, ಇದೆಲ್ಲಾ ನಮಗೆ ಅರ್ಥವಾಗುತ್ತಿಲ್ಲ. ತುಮಕೂರು ಡೈರಿಯಲ್ಲಿ ನಾನು ಅಧ್ಯಕ್ಷನಾಗಿದ್ದಾಗಲೂ ಲಾಭ ಬರುತ್ತಿತ್ತು. ಸನ್ಮಾನ್ಯ ನಾಗೇಗೌಡರು ಅಧಿಕಾರಿಗಳು ಏನು ಹೇಳುತ್ತಾರೆ. ಅಷ್ಟೇ ಕೇಳಿಬಿಡುವುದು. ಕರ್ನಾಟಕ ರಾಜ್ಯದಲ್ಲಿ 12ರಿಂದ ಹನ್ನೆರಡೂವರೆ ಲಕ್ಷ ಲೀಟರ್ ಹಾಲು ಈ ಹಿಂದೆ ಕೂಡ ಉತ್ಪಾದನೆಯಾಗುತ್ತಿತ್ತು. ಈ ವರ್ಷ ದಿಢೀರ್ ಉತ್ಪಾದನೆಯಾಗಿಲ್ಲ. ಈ ಕಥೆ ಹೇಳುವುದನ್ನು ನಿಲ್ಲಿಸಬೇಕು. ಮಧುರೆಗೆ ಮಾರುತ್ತಿದ್ದೇವೆ, ಕಲ್ಕತ್ತಾಗೆ ಮಾರುತ್ತಿದ್ದೇವೆ, ಎಲ್ಲಿಗೆ ಹೋಯಿತು ಇದೆಲ್ಲಾ.

(ಮಾನ್ಯ ಅಧ್ಯಕ್ಷರು (ವಿ.ಎಸ್. ಕೌಜಲಗಿಯವರು) ಪೀಠವನ್ನು ಅಲಂಕರಿಸಿದರು)

ಕರ್ನಾಟಕದ ಮಾರ್ಕೆಟ್ ಏಕೆ ನಿಲ್ಲಿಸಿದರು, ಯಾರು ನಿಲ್ಲಿಸಿದರು, ಸ್ವಲ್ಪ ತಾವು ಸಂಬಂಧಪಟ್ಟವರನ್ನು ಕರೆಯಿಸಿ ಕೇಳಬೇಕಾಗಿದೆ. ಈ ತೀರ್ಮಾನ ತೆಗೆದುಕೊಂಡರೆ ಮುಂದಿನ ಕಾಲದಲ್ಲಿ ನಿಮಗೆ ಯಾರೂ ಹಾಲು ಹಾಕುವುದಿಲ್ಲ. 5-6 ವಾರಗಳ ಬಿಲ್ ಬಾಕಿ ಇದೆ. ಜೊತೆಗೆ ಕಡಿಮೆ ಮಾಡುತ್ತಿದ್ದೀರಿ ಹಾಗೂ ರಜೆ ಕೊಡುತ್ತಿದ್ದೀರಿ. ಅವರು ಹೇಳಿದ್ದನ್ನೇ ತಾವು ಕೇಳುತ್ತಾ ಹೋಗುವುದು ಅಷ್ಟು ಸಮಂಜಸ ಎಂದು ನನಗೆ ಅನಿಸುವುದಿಲ್ಲ, ಇದರಲ್ಲಿ ಏನೋ ದೋಷವಿದೆ; ಅದನ್ನು ನೀವು ಹುಡುಕಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಾಧುಸ್ವಾಮಿಯವರು ಕೆಎಂಎಫ್ ಅಧ್ಯಕ್ಷರಾಗಿದ್ದರು. ನನಗಿಂತ ಅವರು ಅದರಲ್ಲಿ ಬಹಳ ಅನುಭವಸ್ಥರು. ಕೇರಳದ ಮಲಬಾರ್ ಜಿಲ್ಲೆಗೆ ಮತ್ತು ಮಂಡ್ಯ ಡೈರಿಯವರು 20 ಸಾವಿರ ಲೀಟರ್ ಹಾಲು ಕಳುಹಿಸುಸಿತ್ತಿದ್ದರು. ಇವತ್ತು ಅವರು ಬೇಡ ಎಂದು ಹೇಳುತ್ತಿದ್ದಾರೆ. ಕಾರಣ ಏನು ಎಂದು ಕೇಳಿದರೆ ಕೇರಳ ರಾಜ್ಯಕ್ಕೆ ಐದೂವರೆ ಲಕ್ಷ ಲೀಟರ್ ಬೇಕಾಗಿರುವುದು. ಆದರೆ ಅವರ ಹತ್ತಿರವೇ 10 ಲಕ್ಷ ಲೀಟರ್ ಉತ್ಪತ್ತಿಯಾಗಿದೆ. ಆದ್ದರಿಂದ ಬೇಡ ಎಂದು ಹೇಳಿದ್ದಾರೆ. ಕಲ್ಕತ್ತಾಗೆ ಹಾಲು ಕಳುಹಿಸುತ್ತಿದ್ದೆವು. ಅವರ ಹತ್ತಿರ ಹಾಲು ಜಾಸ್ತಿ ಇದೆ ಅವರು ಬೇಡ ಎಂದು ಹೇಳಿದ್ದಾರೆ ಎಂಬ ಕಾರಣಕ್ಕಾಗಿ ತಮಿಳುನಾಡಿಗೆ ಹಾಲು ಕಳುಹಿಸುತ್ತಿದ್ದೆವು.

ಶ್ರೀ ಜೆ.ಸಿ. ಮಾಧುಸ್ವಾಮಿ - ಕಲ್ಕತ್ತಾದಲ್ಲಿ ಈ ಜನ್ಮದಲ್ಲಿ ಈ ಶತಮಾನದಲ್ಲಿ ಹಾಲು ಜಾಸ್ತಿಯಾಗುವುದಿಲ್ಲ. ಕರ್ನಾಟಕದ ಬದಲು ಆಂಧ್ರಪ್ರದೇಶದಲ್ಲಿ ಅವರು ತೆಗೆದುಕೊಳ್ಳುತ್ತಿದ್ದಾರೆ. ಏಕೆಂದರೆ ನೀವು ಸಪ್ಲೈ ರೆಗ್ಯೂಲರ್ ಆಗಿ ಕೊಟ್ಟಿಲ್ಲ. ದಯವಿಟ್ಟು ರೆಕಾರ್ಡ್ ತರಿಸಿ ನೋಡಿ.

ಶ್ರೀ ಕೆ.ಎನ್. ನಾಗೇಗೌಡ : ನಾನು ಕೂಲಂಕುಷವಾಗಿ ಚರ್ಚೆ ಮಾಡಿ ತಮಿಳುನಾಡಿನ ಮಂತ್ರಿಯವರ ಜೊತೆ ಆಂಧ್ರಪ್ರದೇಶದ ಮಂತ್ರಿಯವರ ಜೊತೆ ಹಾಗೂ ಕೇರಳದ ಮಂತ್ರಿಯವರ ಜೊತೆ ಚರ್ಚೆ ಮಾಡಿದ್ದೇನೆ. ಸಂಬಂಧಪಟ್ಟ ಎಲ್ಲಾ

ಮಿಲ್ಕ್ ಫೆಡರೇಷನ್‌ನವರ ಜೊತೆ ಚರ್ಚೆ ಮಾಡಿದ್ದೇನೆ. ಮ್ಯಾನೇಜರ್ ಜೊತೆ ಚರ್ಚೆ ಮಾಡಿದ್ದೇನೆ. ಚರ್ಚೆ ಕೇವಲ ಒಂದು ಹಂತ; 2 ಹಂತದಲ್ಲಿ ಆಗಿಲ್ಲ; ನಾನಾ ಹಂತಗಳಲ್ಲಿ ಆಗಿದೆ. ಇವತ್ತು ಮದ್ರಾಸ್‌ಗೆ 10 ಲಕ್ಷ ಲೀಟರ್ ಹಾಲು ಪ್ರತಿದಿನ ಬೇಕು. ಆದರೆ ಮದ್ರಾಸ್ ಸಿಟಿ ಒಂದರಲ್ಲೇ 17 ಲಕ್ಷ ಲೀಟರ್ ಹಾಲು ಉತ್ಪತ್ತಿಯಾಗುತ್ತಿದೆ. ಅವರು ತೆಗೆಧುಕೊಳ್ಳುವುದಿಲ್ಲ ಎಂದು ಹೇಳಿದರು. ಗೋವಾಕ್ಕೆ ಕೊಡುತ್ತಿದ್ದೆವು, ಗೋವಾದವರು ಬೇಡ ಎಂದು ಹೇಳಿದರು. ಗೋವಾದ ಮುಖ್ಯಮಂತ್ರಿಯವರು ಇಲ್ಲಿಗೆ ಬಂದಿದ್ದರು, 20 ಸಾವಿರ ಲೀಟರ್ ಹಾಲು ತೆಗೆದುಕೊಳ್ಳಿ ಎಂದು ಅವರಿಗೆ ಬೇಕಾದಷ್ಟು ಕೇಳಿದ್ದೇವೆ. ಇಲ್ಲ ನಮ್ಮ ಹತ್ತಿರ ಹಾಲು ಇದೆ, ನಾವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಆದುದರಿಂದ ಬೇರೆ ಮಾರ್ಗ ಇಲ್ಲದೆ ಅದನ್ನು ಪೌಡರ್ ಮಾಡಬೇಕು. ಬೆಣ್ಣೆ ತುಪ್ಪ ಮಾರಲೇಬೇಕು. ಇಲ್ಲಿ ಮಾನ್ಯ ವೈ.ಕೆ. ರಾಮಯ್ಯನವರು ಇದ್ದಾರೆ; ಅವರಿಗೆಲ್ಲಾ ಗೊತ್ತಿದೆ. 6 ತಿಂಗಳ ಹಿಂದೆ ಸುಮಾರು 22ಕೋಟಿ ರೂಪಾಯಿ ರೈತರಿಗೆ ಕೊಡಬೇಕಾಗಿತ್ತು. ಇವತ್ತು ರೈತರಿಗೆ ಕೊಡಬೇಕಾಗಿರುವುದು 6 ಕೋಟಿ ರೂಪಾಯಿ ಮಾತ್ರ. ಆದರೂ ಸಮಾಧಾನ ಇಲ್ಲ. 5-6-7-8 ವಾರಗಳ ಪೇಮೆಂಟ್‌ನ ಕೆಲವು ಡೈರಿಗಳು ಕೊಟ್ಟಿಲ್ಲ. ಆದರೆ ಕೆಲವು ಡೈರಿಗಳು ಕೊಟ್ಟಿವೆ. ಬೆಂಗಳೂರರು ಮತ್ತು ಕೋಲಾರ ಡೈರಿಗಳು ಕೊಟ್ಟಿವೆ; ತುಮಕೂರರು ಮತ್ತು ಮಂಡ್ಯದವರು ಕೊಟ್ಟಿಲ್ಲ. ಹಾಸನದಲ್ಲಿ ಸುಮಾರು ಒಂದು ತಿಂಗಳಿನಲ್ಲಿ 50 ಲಕ್ಷ ರೂಪಾಯಿ ನಷ್ಟವಾಗಿದೆ. ಆದುದರಿಂದ ಈ ಸಮಸ್ಯೆ ನಮಗೆ ಚೆನ್ನಾಗಿ ಗೊತ್ತಿದೆ. ಇದನ್ನೆಲ್ಲಾ ಬಗೆಹರಿಸಬೇಕಾಗಿದೆ. ಇದು ಒಂದು ದಿವಸಕ್ಕೆ ಬಗೆಹರಿಸುವ ಸಮಸ್ಯೆಯಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಹಾಲಿನ ಕತೆ ಹೀಗಾಯಿತು. ಈ ಕಡೆ ರೈತರಿಗೆ ಬೆಲೆ ಕಡಿಮೆ ಕೊಟ್ಟಿದ್ದೀರಿ. ಆದರೆ ಹಾಲನ್ನು ಕೊಂಡುಕೊಳ್ಳುವ ಗ್ರಾಹಕರಿಗೆ ಏಕೆ ಕಡಿಮೆ ಮಾಡಲಿಲ್ಲ?

ಶ್ರೀ ಕೆ.ಎನ್. ನಾಗೇಗೌಡ : ದೆಹಲಿಯಲ್ಲಿ 10 ರೂಪಾಯಿ ಇದೆ, ಮದ್ರಾಸ್‌ನಲ್ಲಿ 9 ರೂಪಾಯಿ ಇದೆ.

ಅಧ್ಯಕ್ಷರು : ನಾಗೇಗೌಡರೇ ಕುಳಿತುಕೊಳ್ಳಿ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಇನ್ನು ನಮ್ಮ ಹುಚ್ಚಮಾಸ್ತಿಗೌಡರು ನಿನ್ನೆ ದಿನ ಉತ್ತರ ಕೊಟ್ಟರು. ಅವರು ವಯೋವೃದ್ಧರು; ಅವರಿಗೆ ಜಾಸ್ತಿ ತೊಂದರೆ ಕೊಡಬಾರದು ಎಂದು ಕ್ಲಾರಿಫಿಕೇಷನ್ ಹೆಚ್ಚಾಗಿ ಕೇಳುವುದಕ್ಕೆ ನಾವು ಹೋಗುವುದಿಲ್ಲ. ಈ ಸದನ ಮುಗಿಯುವುದರೊಳಗೆ ಎಲ್ಲಾ ಶಾಸಕರನ್ನು ಕರೆದು ಗೊಬ್ಬರವನ್ನು ಹೇಗೆ ಹಂಚಬೇಕು ಎಂದು ನಿಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಿಬಿಡುತ್ತೇವೆ ಎಂದು ಅವರು ಹೇಳಿದರು. ಮಾನ್ಯ ರೆವಿನ್ಯೂ ಮಂತ್ರಿಗಳ ಹತ್ತಿರ ಪ್ರತಿ ತಾಲ್ಲೂಕಿನ ಸಣ್ಣ ರೈತರ ಲಿಸ್ಟ್ ಇಲ್ಲವೇ? ಆ ಸಣ್ಣ ರೈತರ ಲಿಸ್ಟನ್ನು ನಿಮ್ಮ ತಹಸೀಲ್ದಾರ್ ಅವರಿಂದ ಅಥವಾ ರೆವಿನ್ಯೂ ಇಲಾಖೆಯಿಂದ ನಿಮ್ಮ ಅಗ್ರಿಕಲ್ಚರ್ ಅಸಿಸ್ಟೆಂಟ್‌ಗಳಿಂದ ತೆಗೆದುಕೊಳ್ಳುವುದಕ್ಕೆ ತೊಂದರೆ ಏನು? ಕಳೆದ ವರ್ಷ ಕೇಂದ್ರ ಸರ್ಕಾರದಿಂದ ಕೊಟ್ಟಿರತಕ್ಕಂತಹ 27 ಕೋಟಿ ರೂಪಾಯಿಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಇವರಿಂದ ಆಗಿಲ್ಲ. ಅದು ಲ್ಯಾಪ್ಸ್ ಆಗಿದೆ. ಈ ವರ್ಷದಲ್ಲಿ ಸುಮಾರು 69 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ಇದುವರೆಗೂ ಒಂದು 5 ಕೋಟಿ ರೂಪಾಯಿ ಹಂಚಿಯಾಗಿದೆ. ನನಗೆ ಅನೇಕ ಜನ ಅಸಿಸ್ಟೆಂಟ್ ಡೈರೆಕ್ಟರ್‌ಗಳು ಇವರು ಮಾಡಿರತಕ್ಕಂಥ ಸಿಸ್ಟಂ ಮೂಲಕ ಗೊಬ್ಬರ ಕೊಡುವುದಕ್ಕೆ ಆಗುವುದೇ ಇಲ್ಲ ಎನ್ನುವ ಮಾತನ್ನು ಹೇಳುತ್ತಾರೆ.

ಇವತ್ತು ನಿಮ್ಮ ಸರ್ಕಾರ ಗೊಬ್ಬರದ ವಿತರಣೆಯ ವಿಚಾರದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದನ್ನು ನೀವು ಒಪ್ಪಿಕೊಳ್ಳಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಿಗೆ ಹೋದರೆ ಮಂಡಲ್ ಪಂಚಾಯತ್ ಸೆಕ್ರೆಟರಿ ಸಿಗುವುದಿಲ್ಲ, ಹಳ್ಳಿಗಳಲ್ಲಿ ಲೈಟಿಲ್ಲ; ಇದನ್ನು ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ಇವತ್ತು ಮಂಡಲ್ ಸೆಕ್ರೆಟರಿಗಳು ನಮ್ಮ ಕೈಗೆ ಸಿಗುತ್ತಿಲ್ಲ. ಆ ಪ್ರಧಾನರಲ್ಲಿ ಅನೇಕರು ದುರುಪಯೋಗ ಮಾಡಿರಬಹುದು, ಆದರೆ ಅವರು ಇದ್ದಾಗ ಜನರ ಹೆದರಿಕೆಯಾದರೂ ಅವರಿಗೆ ಇರುತ್ತಿತ್ತು. ಇವತ್ತು ಮಂಡಲ ಸೆಕ್ರೆಟರಿಗಳು ಎಲ್ಲಿರುತ್ತಾರೆನ್ನುವುದೇ ಗೊತ್ತಾಗುವುದಿಲ್ಲ. ಲೈಟ್‌ಗಳನ್ನು ಹಾಕುವುದೇ ಇಲ್ಲ, ಬೋರ್‌ವೆಲ್‌ಗಳ ರಿಪೇರಿಯಾಗುತ್ತಿಲ್ಲ, ಮಿನಿವಾಟರ್ ಸಪ್ಲೆ ಕೆಲಸವೂ ಕೂಡ ಆಗುತ್ತಿಲ್ಲವೆಂಬುದನ್ನು ಇವತ್ತು ನಿಮಗೆ ಹೇಳುತ್ತಿದ್ದೇನೆ. ಗೊಬ್ಬರದ ವಿತರಣೆ ಸರಿಯಿಲ್ಲ, ಪರಿಹಾರಕ್ಕೆ ಕೊಡತಕ್ಕಂಥ ಹಣವನ್ನು ಸರಿಯಾಗಿ ಕೊಡುತ್ತಿಲ್ಲ. ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಿಸಿ ಅದನ್ನು ಸಂಪೂರ್ಣವಾಗಿ ಹಾಳುಮಾಡುತ್ತಿದ್ದೀರಿ; ಅದಾದಮೇಲೆ ಈ ಆಶ್ರಯ ಯೋಜನೆಯಡಿಯಲ್ಲಿ ಸೈಟುಗಳನ್ನು ಕೊಡಬೇಕೆಂದು ಹೇಳಿ ಮಾರ್ಕೆಟ್ ಬೆಲೆಯಲ್ಲಿ ಜಮೀನನ್ನು ಕೊಂಡುಕೊಳ್ಳತಕ್ಕಂಥ ಕ್ರಮವನ್ನು ಹಿಂದಿನ ಸರ್ಕಾರವು ತೆಗೆದುಕೊಂಡು ಬಂದಿತ್ತು. ಏನು ಸ್ವಾಮಿ ಆಯಿತು ಆ ಕಾರ್ಯಕ್ರಮ. ಏತಕ್ಕೆ ಅದನ್ನು ನಿಲ್ಲಿಸಿದಿರಿ? ಇವತ್ತು ಯಾವುದಾದರೂ ಊರಿನಲ್ಲಿ ಬಡವರಿಗೆ ಸೈಟ್ ಹಂಚಬೇಕೆಂದು ಹೇಳಿದರೆ ಯಾರೂ ಇವತ್ತು ಜಮೀನನ್ನು ಕಡಿಮೆ ಬೆಲೆಗೆ ಕೊಡಲಿಕ್ಕೆ ತಯಾರಾಗಿಲ್ಲ.

ಮಾರ್ಕೆಟ್ ಬೆಲೆಗೆ ಮಾನ್ಯ ಬಂಗಾರಪ್ಪನವರ ಸರ್ಕಾರ ಇದ್ದಾಗ ಕೊಡುತ್ತಿದ್ದರು. ನೀವು ಏತಕ್ಕೆ ಕೊಡುವುದಿಲ್ಲವೆಂದು ರೈತರು ಕೇಳುತ್ತಾರೆ. ನಾವು ಟಾಸ್ಕ್ ಫೋರ್ಸ್ ಚೇರ್‌ಮನ್‌ಗಳಾಗಿದ್ದುಕೊಂಡು ಮಾಡುವುದೇನು? ಒಬ್ಬರಿಗೂ ಸೈಟನ್ನು ಹಂಚುವುದಕ್ಕೆ ಆಗುತ್ತಿಲ್ಲ. ಜಿಲ್ಲಾಧಿಕಾರಿಗಳು ಕೇಳಿದರೆ ಸರ್ಕಾರದ ಕಡೆಗೆ ಕೈತೋರಿಸುತ್ತಾರೆ. ಸರ್ಕಾರ ವಿಧಾನಸೌಧ ಎಂದು ಹೇಳುತ್ತಾರೆ. ನಿಮ್ಮ ಖಜಾನೆ ಇವತ್ತು ಸಂಪೂರ್ಣವಾಗಿ ಖಾಲಿಯಾಗಿದೆ ಎನ್ನುವ ವಿಚಾರವನ್ನು ಹೇಳುತ್ತಿದ್ದೇನೆ. ಮತ್ತೆ ಬರಗಾಲದ ವಿಚಾರ, ಮೂರು ದಿವಸಗಳಿಂದ ಸ್ವಲ್ಪ ಮಳೆಯಾಗಿದೆ, ಬೆಂಗಳೂರು ಗ್ರಾಮಾಂತರ, ಕೋಲಾರಜಿಲ್ಲೆ, ತುಮಕೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ಬೀದರ್ ಜಿಲ್ಲೆ, ಗುಲ್ಬರ್ಗಾ ಜಿಲ್ಲೆಯಲ್ಲೂ ಸಹಿತ ಕುಡಿಯುವ ನೀರಿನ ತೊಂದರೆಯಾಗಿದೆ. ಇವತ್ತು ಇದರ ಬಗ್ಗೆ ಮಾನ್ಯ ರೆವಿನ್ಯೂ ಸಚಿವರನ್ನು ಕೇಳಬಯಸುತ್ತೇನೆ. ಏನೆಂದರೆ, ಕೇಂದ್ರ ಸರ್ಕಾರಕ್ಕೆ ನಿಮ್ಮ ವರದಿಯನ್ನು ಇದರ ಬಗ್ಗೆ ಕೊಟ್ಟಿದ್ದೀರಾ ಎಂದು; ನಮ್ಮ ಕಡೆ ಪೂರ್ತಿ ಬಿತ್ತನೆಯಾಗಿಲ್ಲ, ರೂಪಾಯಿಗೆ ಎಂಟು ಆಣೆಯಷ್ಟು ಮಾತ್ರ ಬಿತ್ತನೆಯಾಗಿರತಕ್ಕಂಥದ್ದು. ನಮ್ಮ ಮುಂಗಾರಿ ಬೆಳೆಯಾಗಿರತಕ್ಕಂಥ ಎಳ್ಳು ಚೆಲ್ಲಲೇ ಇಲ್ಲ, ಕಡಲೆಕಾಯಿಯನ್ನು ಬಿತ್ತನೆ ಮಾಡಲಿಲ್ಲ, ಹಾಕಿದ್ದಂಥ ಕಡಲೆಕಾಯಿನ ಬೀಜ ಸಂಪೂರ್ಣವಾಗಿ ಒಣಗಿಹೋಗಿದೆ. ಈಗ ಮಳೆ ಬಂದರೂ ಸಂಪೂರ್ಣವಾಗಿ ಉಪಯೋಗವಾಗುವುದಿಲ್ಲ. ಕೆರೆ ಕುಂಟೆಗಳಲ್ಲಿ ಸ್ವಲ್ಪ ನೀರು ಬಂದಿರುವುದನ್ನು ಇನ್ಯಾವುದೇ ಬೆಳೆಯನ್ನು ಸಹಿತ ಇಲ್ಲಿ ತೆಗೆಯಲಿಕ್ಕೆ ಸಾಧ್ಯವಾಗುವುದಿಲ್ಲ, ಅದಕ್ಕೆ ಏನು ಪರಿಹಾರವನ್ನು ನೀವು ಕೊಡುತ್ತಿದ್ದೀರಿ ಎಂಬುದನ್ನು ನಾನು ಕೇಳಲು ಬಯಸುತ್ತಿದ್ದೇನೆ. ಇವತ್ತು ಏತಕ್ಕೆ ಈ ಅವಿಶ್ವಾಸ ನಿರ್ಣಯವನ್ನು ಸರ್ಕಾರದ ಮೇಲೆ ಮಂಡಿಸಿದ್ದೇವೆಂದು ಹೇಳಿದರೆ, ನಿಮ್ಮ ಸರ್ಕಾರದ ಆಡಳಿತ ಸಂಪೂರ್ಣವಾಗಿ ವೈಫಲ್ಯವಾಗಿದೆ, ಇಂಥ ಸಂದರ್ಭದಲ್ಲಿ ನಾವು ಸುಮ್ಮನೆ ಕುಳಿತುಕೊಂಡರೆ ಜನ ನಮಗೆ ನೀವು ಮುಖ್ಯಮಂತ್ರಿ ಮೊಯಿಲಿಯವರ ಜೊತೆಯಲ್ಲಿ ಶಾಮೀಲಾಗಿದ್ದೀರೆಂದು ಜನರೇ ಸಂಪೂರ್ಣವಾಗಿ ನಿಮ್ಮ ಆಡಳಿತ ವೈಫಲ್ಯವಾಗಿರತಕ್ಕಂಥದ್ದರ ಬಗ್ಗೆ ಬೀದಿಬೀದಿಗಳಲ್ಲಿ ಮಾತನಾಡುತ್ತಿದ್ದಾರೆ; ನಿಮ್ಮ ಸಿ.ಎಲ್.ಪಿ. ಮೀಟಿಂಗ್ ಬಗ್ಗೆ, ನಿಮ್ಮ ಆಂತರಿಕ ಜಗಳದ ಬಗ್ಗೆ ನಾನು ಹೋಗುತ್ತಿಲ್ಲ; ಇವತ್ತು ಆಡಳಿತದ ಮೇಲೆ ನಿಮ್ಮ ಬಿಗಿ ತಪ್ಪಿದೆ. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬೇಕಾಗಿದೆ.

ನನ್ನ ಕ್ಷೇತ್ರದ ಒಬ್ಬ ಎಕ್ಸಿಕ್ಯುಟೀವ್ ಇಂಜಿನೀಯರನ್ನು, ನಾನೇನೂ ಹೇಳಿರಲಿಲ್ಲ. 18.8.1993ರಂದು ಕನಕಪುರಕ್ಕೆ ಹಾಕಿದ್ದೇವೆಂದು ಆರ್ಡರ್ ಮಾಡುತ್ತಾರೆ. ಅದಕ್ಕೆ ಆ ಎಕ್ಸಿಕ್ಯುಟೀವ್ ಇಂಜಿನೀಯರ್ ನನ್ನ ಹತ್ತಿರ ಬಹಳ ಖುಷಿಯಿಂದ ಬಂದು ಸಾರ್ ನಾನು ಹಾಕಿಸಿಕೊಂಡು ಬಂದಿದ್ದೇನೆ, ನಾನು ನಿಮ್ಮ ಕ್ಷೇತ್ರಕ್ಕೆ ಬರುತ್ತಿದ್ದೇನೆಂದು ಹೇಳಿದರು. ನಾನು ಅದಕ್ಕೆ ಬಹಳ ಸಂತೋಷ, ಹೋಗಿ ಕೆಲಸ ಮಾಡಿ ಎಂದು ಹೇಳಿದೆ. ಅವರು ನಾನು ಹೀಗೆ, ಎಂದು ಹೇಳುತ್ತಾ ಅವರ ನೆಂಟರಿಷ್ಟರ ವಿಚಾರ ಇತ್ಯಾದಿ ಹೇಳಿದರು. ಹೋಗಿ ಕೆಲಸ ಮಾಡಿ ಎಂದು ಹೇಳಿದೆ. ಅವರು ಹೋಗುವುದರೊಳಗಾಗಿ, ಇನ್ನೊಬ್ಬರು 16ನೇ ತಾರೀಖಿನ ಡೇಟ್ ಹಾಕಿಕೊಂಡು ರಿಪೋರ್ಟ್ ಮಾಡಿಕೊಂಡಿರುತ್ತಾರೆ. ಈಗ 18ನೇ ತಾರೀಖಿನಂದು ಆರ್ಡರ್ ಸಿಕ್ಕಿರುತ್ತದೆಯಲ್ಲಾ, ಅವರು ಏನು ಮಾಡಬೇಕು? ಅಂದರೆ ನಿಮ್ಮ ವರ್ಗಾವಣೆಯ ಕೆಲಸ ಇದುವರೆಗೂ ಸಹಿತ ನಿಂತಿಲ್ಲ, ಇದಕ್ಕೆ ಕಾರಣವೇನು? ನಾನು ಬೇಕಾದರೆ ಡೀಟೈಲ್ಸ್ ಎಲ್ಲವನ್ನೂ ಕೊಡುತ್ತೇನೆ. ಹೆಸರುಗಳನ್ನು ಈ ಸಭೆಯಲ್ಲಿ....

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಆ ಎಕ್ಸಿಕ್ಯುಟೀವ್ ಇಂಜಿನೀಯರ್‌ಗೆ ಪ್ರಮೋಷನ್ ಆಗಿತ್ತು. ಆತನನ್ನು ನಾವು ಆರ್.ಡಿ.ಪಿ.ಆರ್.ಗೆ ಹಾಕಿದ್ದೆವು. ಅಲ್ಲಿ ಏನೋ ವೇಕೆನ್ಸಿ ಇಲ್ಲವೆಂದು ಹೇಳಿ ಸ್ವಲ್ಪ ದಿವಸದ ನಂತರ ಮತ್ತೆ ಬಂದಮೇಲೆ ಮೈನರ್ ಇರಿಗೇಷನ್ ಕನಕಪುರದಲ್ಲಿದೆ ಎಂದು ಅವರನ್ನು ಅಲ್ಲಿಗೆ ಹಾಕಿಬಿಟ್ಟೆವು. ಇರಿಗೇಷನ್ ಇಲಾಖೆಯವರಿಗೆ ಗೊತ್ತಾಗುವುದಿಲ್ಲ. ಅವರ ಇಲಾಖೆಯಲ್ಲಿಯೇ ೧೬ನೇ ತಾರೀಖಿನಂದು ಒಂದು ಆರ್ಡರ್ ಆಗಿದೆಯಂತೆ, ಹಾಗಾಗಿ ಅದು ಉಳಿದುಕೊಂಡಿದೆಯೇ ವಿನಹ ಅವರನ್ನು ಅಲ್ಲಿ ಇಲ್ಲಿ ಓಡಾಡಿಸಬೇಕೆಂದು ಏನೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ರಂಗನಾಥ್ ಅವರು ಸುಳ್ಳು ಹೇಳುವುದಿಲ್ಲವೆಂದು ನಾನು ನಂಬಿದ್ದೇನೆ. ಆದರೆ ಇಂಜಿನಿಯರ್‌ಗೆ ಟ್ರಾನ್ಸ್‌ಫರ್‌ಗೆ ಆರ್ಡರ್ ಆಗಿರುವುದು ನಿಜ.

ಶ್ರೀ ಕೆ.ಹೆಚ್. ರಂಗನಾಥ್ : ಇನ್ನೊಂದು ಸಾರಿ ಹೇಳುತ್ತೇನೆ ಕೇಳಿ. ಆತ ಅಪ್ಪರ್ ಕೃಷ್ಣದಲ್ಲಿ ಕೆಲಸ ಮಾಡುತ್ತಿದ್ದ. ಪ್ರೊಮೋಷನ್ ಬಂತು. ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಿ ಪ್ರೊಮೋಷನ್ ಬಂದಮೇಲೆ ವರ್ಲ್ಡ್ ಬ್ಯಾಂಕ್ ಸ್ಕೀಂ ಏನಿದೆ ಅದಕ್ಕೆ ಆರ್‌ಡಿಪಿಆರ್‌ನಲ್ಲಿ ಹಾಕಿದ್ದರು. ಅಲ್ಲಿ ತೆಗೆದುಕೊಳ್ಳಲಿಲ್ಲ. ಲೋಕೋಪಯೋಗಿ ಇಲಾಖೆಯಿಂದ ಅಲ್ಲಿಗೆ ಕಳುಹಿಸಿಕೊಟ್ಟೆವು. ಅವರು ಅಲ್ಲಿ ಜಾಗ ಇಲ್ಲವೆಂದು ಸ್ವಲ್ಪ ದಿನದ ನಂತರ ಮೈನರ್ ಇರಿಗೇಷನ್, ಕನಕಪುರದಲ್ಲಿ ಜಾಗ ಖಾಲಿ ಇದೆ ಎಂದು ಹಾಕಿಕೊಟ್ಟು ಆಯಿತು. ಆದರೆ ಇರಿಗೇಷನ್ ಡಿಪಾರ್ಟ್‌ಮೆಂಟಿನಲ್ಲಿ ಅದಕ್ಕೆ ಮುಂಚೆ ಭರ್ತಿ ಮಾಡಿದ್ದಾರೆ. ಹಾಗಾಗಿ ಇದು ಉದ್ದೇಶಪೂರ್ವಕವಾಗಿ ಮಾಡಿದ್ದು ಅಲ್ಲ. ಇದರಲ್ಲಿ ತಪ್ಪೂ ಇಲ್ಲ; ಸುಳ್ಳೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಇವರ ಇಂಟಿಗ್ರಿಟಿಯನ್ನು ಪ್ರಶ್ನೆ ಮಾಡುತ್ತಿಲ್ಲ. ಇಲ್ಲಿ ಪ್ರಶ್ನೆ ಇರತಕ್ಕದ್ದು ಏನೆಂದರೆ ನಿಮ್ಮ ಆರ್‌ಡಿಪಿಆರ್, ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆ, ಸರಿಯಾಗಿ ಕೋ-ಆರ್ಡಿನೇಟ್ ಮಾಡುತ್ತಿಲ್ಲ ಎಂಬುದು ಇದರಿಂದ ತಿಳಿಯುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಲೋಕೋಪಯೋಗಿ ಇಲಾಖೆ ನನ್ನ ಹತ್ತಿರ ಇದೆ. ನೀರಾವರಿ ಉಪಮುಖ್ಯ ಮಂತ್ರಿಗಳ ಹತ್ತಿರ ಇದೆ. ಬಹುಮಟ್ಟಿಗೆ ಇದು ಆಗುವಾಗ ಗೊತ್ತಿಲ್ಲದೆ ಆಗಿರಬಹುದು. ಉದ್ದೇಶಪೂರ್ವಕವಾಗಿ ತೊಂದರೆ ಮಾಡಬೇಕೆಂದು ಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಂಥ ಉದಾಹರಣೆಗಳನ್ನು ಹಲವಾರು ಕೊಡಬಲ್ಲೆ. ಕೆಮ್ಮಣ್ಣುಗುಂಡಿಗೆ ಕೃಷ್ಣಪ್ಪನವರೇ, ಅದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಒಬ್ಬ ಅಧಿಕಾರಿಯನ್ನು ಪೋಸ್ಟ್ ಮಾಡಿದ್ದರು. 4-5ವರ್ಷ ಅಲ್ಲಿ ಕೆಲಸ ಮಾಡಿದರು. ಅವರ ಮೇಲೆ ಬೇಕಾದಷ್ಟು ಅಲಿಗೇಷನ್ಸ್ ಇವೆ. ಅಲ್ಲಿ ಅನೇಕ ಅನ್ಯಾಯಗಳು ನಡೆದಿವೆ ಎಂದು ಮೇಲ್ಪಟ್ಟ ಅಧಿಕಾರಿಗಳು ವಿಚಾರಣೆ ಮಾಡಿ ತಮ್ಮ ಗಮನಕ್ಕೆ ತಂದಮೇಲೆ ಅವರನ್ನು ವರ್ಗಾವಣೆ ಮಾಡಿದ್ದೀರಿ. ಬೇರೆಯವರಿಗೆ ಅಲ್ಲಿ ಪೋಸ್ಟ್ ಮಾಡಿದ್ದೀರಿ. ಆದರೆ ಯಾರಿಗೆ ಪೋಸ್ಟ್ ಮಾಡಿದ್ದೀರಿ ಆ ಪೋಸ್ಟಿಂಗ್ಸ್ ರದ್ದು ಮಾಡಿ ಬೇರೆಯವರಿಗೆ ಹಾಕಿದ್ದೀರಿ. ಅಲ್ಲಿ ಈಗಾಗಲೇ ಯಾರು 5ವರ್ಷ ಕೆಲಸ ಮಾಡಿದ್ದರಲ್ಲಾ ಅವರನ್ನೇ ಅಲ್ಲಿಗೆ ಹಾಕಿದ್ದೀರಿ.ಅವರನ್ನು ಹಾಕಿರುವುದು ತಪ್ಪು ಎಂದು ಕರ್ನಾಟಕ ಅಡ್ಮಿನಿಸ್ಟ್ರೇಟೀವ್ ಟ್ರಿಬ್ಯುನಲ್ ಡೈರೆಕ್ಷನ್ ಕೊಟ್ಟಿದೆ. ಆ ಡೈರೆಕ್ಷನ್ನಿಗೂ ನಿಮ್ಮ ಹತ್ತಿರ ಬೆಲೆ ಇಲ್ಲ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ, ಇವರಿಗೆ ಆಡಳಿತದ ಮೇಲೆ ಎಷ್ಟು ಬಿಗಿ ತಪ್ಪಿದೆ ಎಂದು ತಿಳಿಸುವ ಕಾರಣಕ್ಕಾಗಿ.

ಶ್ರೀ ಎ. ಕೃಷ್ಣಪ್ಪ(ತೋಟಗಾರಿಕಾ ರಾಜ್ಯಸಚಿವರು): ತಾವು ಹೇಳಿದ್ದು ಮೊದಲ ಭಾಗ ಸರಿ ಇದೆ. ಅಲ್ಲಿದ್ದಂಥ ಅಧಿಕಾರಿ ದುರುಪಯೋಗ ಮಾಡಿದ್ದಾನೆಂದು ಇಲಾಖೆಗೆ ಯಾವ ಕಡೆಯಿಂದಲೂ ರುಜುವಾತು ಆಗಿ ಬಂದಿಲ್ಲ. ಎರಡನೇ ಮನುಷ್ಯ ಯಾರು ಕೋರ್ಟ್ ಮುಂದೆ ಹೋಗಿದ್ದರು, ಅವರು 8 ಲಕ್ಷ ರೂಪಾಯಿ ದುರುಪಯೋಗ ಮಾಡಿದ್ದಾರೆಂದು ಸಸ್ಪೆಂಡ್ ಆಗಿದ್ದಾರೆ. ಅವರು ಕೋರ್ಟಿನಿಂದ ಆದೇಶ ತಂದು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳಿ ಎಂದು ಕೇಳುತ್ತಿದ್ದಾರೆ. ಕೋರ್ಟಿನಲ್ಲಿ ಈ ಪರ್ಟಿಕ್ಯುಲರ್ ಜಾಗಕ್ಕೆ ಹಾಕಿ ಎಂದು ಆದೇಶ ಕೊಟ್ಟಿಲ್ಲ. ಅವನಿಗೆ ಪೋಸ್ಟಿಂಗ್ಸ್ ಕೊಡಬೇಕಾಗಿತ್ತು, ಕೋರ್ಟ್ ಆದೇಶವನ್ನು ಮಾನ್ಯತೆ ಮಾಡಬೇಕಾಗಿತ್ತು; ಅದರ ಪ್ರಕಾರ ಪೋಸ್ಟಿಂಗ್ಸ್ ಕೊಟ್ಟಿದ್ದೇವೆ. ಇದರಲ್ಲಿ ಯಾವ ಅಡ್ಮಿನಿಸ್ಟ್ರೇಷನ್ ಅಥವಾ ಪರ್ಸನಲ್ ಅಟ್ಯಾಚ್ಮೆಂಟ್ ಅಥವಾ ಡಿಟ್ಯಾಚ್ಮೆಂಟ್ ಪ್ರಶ್ನೆಯೇ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಮಧ್ಯೆ ಪ್ರವೇಶ ಮಾಡುತ್ತಿರಲಿಲ್ಲ. ತಾ.6.7.92ರಂದು ಶ್ರೀ ರಾಮಚಂದ್ರ ರಾವ್ ಅವರನ್ನು ನರಗುಂದಕ್ಕೆ ಪೋಸ್ಟ್ ಮಾಡುತ್ತಿದ್ದೀರಿ, ಸಹಾಯಕ ತೋಟಗಾರಿಕೆ ನಿರ್ದೇಶಕರಾಗಿ. ಅವರು 6.7.92ರಿಂದ 10.5.93ರವರೆಗೆ ನರಗುಂದದಲ್ಲಿ ಹುದ್ದೆಗೆ ಹಾಜರಾಗುವುದಿಲ್ಲ. ಆತನ ಮೇಲೆ ನೀವು ಕ್ರಮ ತೆಗೆದುಕೊಳ್ಳುವುದಿಲ್ಲ. ನಂತರ 31.5.93ಕ್ಕೆ ಸರ್ಕಾರದ ಅಧಿಸೂಚನೆ ಸಂ. 93-94.ರ. ಪ್ರಕಾರ ಪುನಃ ಆತನನ್ನು ಅಲ್ಲಿಗೇ ಹಾಕುತ್ತಿದ್ದೀರಿ. ಮೂರನೇ ಭಾರಿ ಸರ್ಕಾರದ ಅಧಿಸೂಚನೆ ಸಂ. ಕೃಷಿ ತೋಟಗಾರಿಕೆ 109ರ ಪ್ರಕಾರ ಇವರನ್ನು ಕೆಮ್ಮಣ್ಣುಗುಂಡಿಗೆ ಪುನಃ ವರ್ಗಾಯಿಸುತ್ತಿದ್ದೀರಿ. 6-7-93ರಂದು ಶ್ರೀ ರಾಮಚಂದ್ರರಾವ್ ಕೆಲಸಕ್ಕೆ ವರದಿ ಮಾಡಿಕೊಳ್ಳಲಿಲ್ಲ ಅಂದ್ರಲ್ಲಾ, ಆತನ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಆತ ಬಹಿರಂಗವಾಗಿ ಅಲ್ಲಿರತಕ್ಕ ಅಧಿಕಾರಿಗಳಿಗೆ ಹೇಳುತ್ತಾನೆ, 3 ಲಕ್ಷ ಕೊಟ್ಟು ನಾನು ಇಲ್ಲಿಗೆ ಹಾಕಿಸಿಕೊಂಡು ಬಂದಿದ್ದೇನೆ ಎಂದು ಈ ಮಾತನ್ನು. ಶಾಸನಸಭೆಯಲ್ಲಿ ನಿಂತು ಹೇಳುತ್ತಿದ್ದೇನೆ. ನನ್ನ ಜವಾಬ್ದಾರಿಯ ಅರಿವು ನನಗೆ ಇದೆ. ದಯವಿಟ್ಟು ಈ ಆಪಾದನೆ ನಿಮ್ಮ ತಲೆಗೆ ಸುತ್ತಿಕೊಳ್ಳುವುದಕ್ಕೆ ಮುಂಚೆ ಎಚ್ಚರಿಕೆ ವಹಿಸಿ.

ಶ್ರೀ ಎ. ಕೃಷ್ಣಪ್ಪ : ವಿರೋಧ ಪಕ್ಷದ ಹಿರಿಯ ನಾಯಕರು ಏನು ಹೇಳಿದರು ಮೊದಲು ಅವನ ಮೇಲೆ ಆಪಾದನೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬರೆದಿದ್ದೇವೆಂಬು ಲೋಕಲ್ ಪತ್ರಿಕೆಗಳಲ್ಲಿ ಪ್ರಕಟ ಮಾಡಿದರು. ಅಷ್ಟುಹೊತ್ತಿಗೆ ನಾನು ಚಾರ್ಜ್ ತೆಗೆದುಕೊಂಡಿರಲಿಲ್ಲ. ಆದಕಾರಣ ಆಪಾದನೆ ನನ್ನ ಮೇಲೆ ಬರುವುದಕ್ಕೆ ಅವಕಾಶ

ಇಲ್ಲ. ಎರಡನೇ ಬಾರಿ ಅವನಿಗೆ ಟ್ರಾನ್ಸ್‌ಫರ್ ಮಾಡಿದಾಗ ನವಲಗುಂದದಲ್ಲಿ ನಾನು ಕಾಯಿಲೆಯಿಂದ ನರಳುತ್ತಿದ್ದೇನೆಂದು ಸರ್ಕಾರಕ್ಕೆ ರಜಾ ಕೋರಿ ಪತ್ರ ಬರೆದ. ಇವನು ಅಲ್ಲಿಗೆ ಹೋಗಲಿಲ್ಲ ಖಾಯಿಲೆ ಎಂದು ಹೇಳಿ ರಜಾ ಕೇಳಿದ. ಅದಕ್ಕೆ ಮೊದಲೇ ಈ ಮೊದಲು ಇದ್ದ ಮನುಷ್ಯ 8ಲಕ್ಷ ರೂಪಾಯಿ ದುರುಪಯೋಗ ಮಾಡಿಕೊಂಡಿದ್ದಾನೆಂದು ಸರ್ಕಾರದ ಗಮನಕ್ಕೆ ಬಂದಾಗ ಅವನನ್ನು ತನಿಖೆ ಮಾಡಿ ಸಸ್ಪೆಂಡ್ ಮಾಡಿದ್ದೇವೆ. ಸಸ್ಪೆಂಡ್ ಆರ್ಡರ್ ಅನ್ನು ಕೋರ್ಟಿನಲ್ಲಿ ಛಾಲೆಂಜ್ ಮಾಡಿದಾಗ ಕೋರ್ಟ್ ಆತನ ಪರವಾಗಿ ತೀರ್ಮಾನ ಕೊಟ್ಟಿದೆ. ತೀರ್ಮಾನ ಕೊಟ್ಟು ಆದೇಶ ಕೊಟ್ಟಿದೆ, ಅವನಿಗೆ ಕೆಲಸಕ್ಕೆ ತೆಗೆದುಕೊಳ್ಳಿ ಎಂದು. ಆದ್ದರಿಂದ ಕೆಲಸಕ್ಕೆ ತೆಗೆದುಕೊಂಡಿದ್ದೇವೆ. ಆದರೆ ಮತ್ತೆ ತನಿಖೆ ಮಾಡಿದಾಗ ಇದುವರೆಗೆ ಕೊಡಬೇಕಾದ ಸರ್ಕಾರದ ಹಣ ಏನು ದುರುಪಯೋಗ ಆಗಿತ್ತು ಅದನ್ನು ಇವತ್ತಿನವರೆಗೂ ಕಟ್ಟಿಲ್ಲ. ವೈಯುಕ್ತಿಕವಾಗಿ ಇನ್ವಾಲ್ವ್‌ಮೆಂಟ್ ಪ್ರಶ್ನೆ ಏನು? ಆತ 5 ಲಕ್ಷ, 10ಲಕ್ಷ ಕೊಟ್ಟಿದ್ದೇನೆ ಎಂದು ಹೇಳಬಹುದು. ಮೊದಲನೇ ಹಂತದಲ್ಲಿ ಆದ ಕಾರ್ಯದಲ್ಲಿ ನಾನು ಮಂತ್ರಿ ಆಗಿ ಇರಲಿಲ್ಲ. ನಾನು ಬಂದಿದ್ದು ಜನವರಿ 20ನೇ ತಾರೀಖು.

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆ ಬೇಡ. ಇದೆಲ್ಲಾ ವಿವರ ಕಳುಹಿಸಿಕೊಡುತ್ತೇನೆ. ದಯಮಾಡಿ ವಿಚಾರಣೆ ಮಾಡಿ. ಡ್ರೈವರ್‌ಗೆ, ಜವಾನರಿಗೆ, ಅಡಿಗೆಯವರಿಗೆ.....

ಶ್ರೀ ಎ. ಕೃಷ್ಣಪ್ಪ : ಆ ಬಗ್ಗೆ ವಿವರವಾದ ವರದಿಯನ್ನು ಪ್ರತ್ಯೇಕವಾಗಿ ಕಳುಹಿಸಿಕೊಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾವು ಬಹಳ ಗೌರವಸ್ಥರು ಹೋಗತಕ್ಕ ಜಾಗ ಅದು. ತುಂಬಾ ಜನರು ಅದನ್ನು ಗಿರಿಧಾಮ ಎಂದು ಬರುತ್ತಾರೆ. ನಮ್ಮ ಗಿರಿಧಾಮಗಳಲ್ಲಿ ನಿಮ್ಮ ಆಡಳಿತಾತ್ಮಕವಾದ ರಾಜಕೀಯ ಹೊಲಸು ಹಾಕುವುದು ಬೇಡ. ಅದು ಸ್ವಚ್ಛ ಆಗಿರಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಬಂದ ಮೇಲೆ ನಾನು ಮುಖ್ಯಮಂತ್ರಿಗಳಿಗೆ ಆಸ್ಪತ್ರೆಗಳ ಸ್ಥಿತಿ ಬಗ್ಗೆ ಪತ್ರವನ್ನು ಬರೆಯುವುದಕ್ಕೆ ಆಗಲಿಲ್ಲ. ಆದರೆ ನನ್ನ ಸ್ವಂತ ಕ್ಷೇತ್ರ, ಕನಕಪುರ ಕ್ಷೇತ್ರದ 2 ಆಸ್ಪತ್ರೆಗಳ ಬಗ್ಗೆ ಪತ್ರವನ್ನು ಬರೆದೆ. ನನ್ನ ಒಂದು ಪತ್ರದಲ್ಲಿ ಅಲ್ಲಿ 50 ಹಾಸಿಗೆಗಳ ಆಸ್ಪತ್ರೆ ಏನು ಇದೆ, ಅದನ್ನು ಮುಚ್ಚಿ ಎಂದು ಹೇಳಿದ್ದೆ. ಇನ್ನೊಂದು ಪತ್ರದಲ್ಲಿ ನಮ್ಮ ಕನಕಪುರ ತಾಲ್ಲೂಕಿನಲ್ಲಿ, ನನ್ನ ಕ್ಷೇತ್ರದಲ್ಲಿ 400 ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗಳು ಇವೆ. ಮತ್ತು 420 ವೇಕೆನ್ಸಿಗಳು ಇವೆ. ಆದುದರಿಂದ ಸರ್ಕಾರಿ ಶಾಲೆಗಳನ್ನು ಒಂದು ವರ್ಷ ಮುಚ್ಚಿ ರಜಾ ಕೊಡಿ ಎಂದು ಹೇಳಿದ್ದೆ.

ಶ್ರೀ ಎಂ. ಶಂಕರರೆಡ್ಡಿ : ಅದು ನಿಮ್ಮ ಕೊಡುಗೆ.

ಶ್ರೀ ಪಿ.ಜಿ. ಆರ್ ಸಿಂಧ್ಯಾ : ಅದು ನಮ್ಮ ಕೊಡುಗೆಯೋ, ನಿಮ್ಮ ಕೊಡುಗೆಯೋ; ನಾಲ್ಕು ವರ್ಷಗಳಿಂದ ನೀವು ಅಧಿಕಾರದಲ್ಲಿ ಇದ್ದೀರಿ. ನಾವು ಇಲ್ಲಿ ಕುಳಿತಿದ್ದೇವೆ.

ಶ್ರೀ ಆರ್ ಎನ್ ನಾಯಕ್ : ಶಿಕ್ಷಣ ಕ್ಷೇತ್ರವನ್ನು ಜಿಲ್ಲಾಪರಿಷತ್ತಿಗೆ ನಿಮ್ಮ ಕಾಲದಲ್ಲಿ ಕೊಟ್ಟಿದ್ದೀರಿ. ಶಿಕ್ಷಣ ಇಲಾಖೆಗೆ ಏನು ಗತಿ ಮಾಡಿದ್ದೀರಿಎಂದು ಬಹಳ ಸಲ ಹೇಳಿದೆವು. ಆ ಹೊಲಸು ಪ್ರಾರಂಭ ಆಗಿದ್ದು ನಿಮ್ಮಿಂದ. ನೀವು ಆ ಬಗ್ಗೆ ಮಾತನಾಡಿ ಪ್ರಯೋಜನವಿಲ್ಲ.

ಅಧ್ಯಕ್ಷರು : ನಾಯಕ್ ಅವರೇ, ಕುಳಿತುಕೊಳ್ಳಿ. ಸಿಂಧ್ಯಾ ಅವರೇ ತಾವು ಮುಂದುವರೆಸಿ.

ಶ್ರೀ ಪಿ. ಜಿ. ಆರ್ ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಈ ಸರ್ಕಾರಿ ಆಸ್ಪತ್ರೆಗಳಲ್ಲಿನ ಆಪರೇಷನ್ ಥಿಯೇಟರ್ಸ್ ಬಗ್ಗೆ ಹೇಳಬೇಕೆಂದರೆ ಮಾನ್ಯ ಪೆರಿಕಲ್ ಮಲ್ಲಪ್ಪನವರು ಬಹಳ ಸಾರಿ ನಮ್ಮ ತಾಲ್ಲೂಕಿಗೆ ಬಂದಿದ್ದಾರೆ. ಅವರು ನಮ್ಮ ತಾಲ್ಲೂಕಿನ ಬೀಗರು. ಅಲ್ಲಿ ದೊಡ್ಡ ವಿಶಾಲವಾದ ಆಸ್ಪತ್ರೆ ಇದೆ. ನಾನು ಆರೋಗ್ಯ ಇಲಾಖೆ ಮಂತ್ರಿ ಆಗಿದ್ದಾಗ ಅದನ್ನು ದೊಡ್ಡದು ಮಾಡಲಾಯಿತು. ಆದರೆ ಇವತ್ತು ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ಕತ್ತೆ ನಾಯಿಗಳು ಅಲ್ಲಿ ಮಲಗುತ್ತವೆ. ಮನುಷ್ಯ ಹೋಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿಗೆ ಯಾವ ರೀತಿ ವೈದ್ಯರನ್ನು ಕೊಟ್ಟಿದ್ದೀರೆಂದರೆ, ಡೆಂಟಿಸ್ಟ್ ಪೋಸ್ಟ್ನ್ನೆ ಸರ್ಜರಿ ಪೋಸ್ಟ್ನ್ನೆ ಹಾಗೂ ಫಿಸಿಷಿಯನ್ ಪೋಸ್ಟ್ನ್ನೆ ಅನಿಸ್ಥೇಸಿಸ್ಟ್ ಹಾಕಿದ್ದೀರಿ. ಅಂದರೆ ಎಲ್ಲರಿಗೂ ಅನಿಸ್ಥಿಷಿಯಾ ಕೊಡಬೇಕು; ಅಥವಾ ಕ್ಲೋರೋಫಾರ್ಮ್‌ನಲ್ಲಿ ಇಡಬೇಕೆಂದು ಮಾಡಿದ್ದೀರಾ? ಏಕೆ ಇರಬೇಕು ಆಸ್ಪತ್ರೆ? ಅದಕ್ಕೋಸ್ಕರ ಆ ಸರ್ಕಾರಿ ಆಸ್ಪತ್ರೆ ಮುಚ್ಚಿ ಎಂದು ಹೇಳಿದ್ದೇನೆ. ಮೊನ್ನೆ ದಿವಸ ನಾನು ಸಂಜಯಗಾಂಧಿ ಆಸ್ಪತ್ರೆ ಮತ್ತು ಜಯನಗರ ಆಸ್ಪತ್ರೆಗೆ ರಾತ್ರಿ 11 ಗಂಟೆಯಲ್ಲಿ ಭೇಟಿ ಕೊಟ್ಟಿದ್ದೆ. ನಾನು ನೋಡಿರತಕ್ಕದ್ದು ಇದು. ಅಲ್ಲಿರತಕ್ಕ 4 ಜನ ಅಧಿಕಾರಿಗಳನ್ನು ಸಸ್ಪೆಂಡ್ ಇಡುವುದರಿಂದ ಎಲ್ಲಾ ಸರಿಯಾಗುತ್ತದೆ ಎಂದಲ್ಲ. ನಾನು ಆರೋಗ್ಯ ಮಂತ್ರಿ ಆಗಿದ್ದಾಗ ಹರಿಶ್ಚಂದ್ರನ ಕಾಲ ಇತ್ತು, ಧರ್ಮರಾಯನ ಕಾಲ ಇತ್ತು ಎಂದು ಹೇಳುವುದಿಲ್ಲ. ಆದರೆ ದಯವಿಟ್ಟು ಪಾಟೀಲರೇ, ಆಸ್ಪತ್ರೆಗೆ ಹೋಗಿ ನೋಡಿ. ತಮಗೇ ಗೊತ್ತಾಗುತ್ತದೆ. ಎಮರ್ಜೆನ್ಸಿ ವಾರ್ಡ್‌ಗೆ ಕಾಲು ಕತ್ತರಿಸಿಕೊಂಡವರು ಯಾರಾದರೂ ಬಂದರೆ ಹಣ ಕೊಡದಿದ್ದರೆ ಅಡ್ಮಿಷನ್ ಇಲ್ಲ. ಇದು ನನ್ನ ಮುಂದೆಯೇ ನಡೆಯಿತು. ನಾನೇ ನನ್ನ ಪರಿಚಯ ಹೇಳಿಕೊಳ್ಳಬೇಕಾಯಿತು. ನಾನು ವಿರೋಧಪಕ್ಷದ ಉಪನಾಯಕ ಇದ್ದಾನೆ, ನನ್ನ ಹೆಸರು ಸಿಂಧ್ಯ ಎಂದು ಹೇಳಿ ಅವರು ನಮ್ಮ ನೆಂಟರು ಎಂದು ಹೇಳಿದ ಮೇಲೆ, ಹೌದಾ ಸ್ವಾಮಿ, ನನಗೆ ಗೊತ್ತಿರಲಿಲ್ಲ ಎಂದು ಹೇಳಿದ. ಜಯನಗರ ಸರ್ಕಾರಿ ಆಸ್ಪತ್ರೆಯಲ್ಲಿ 200 ರೂಪಾಯಿ ಕೊಟ್ಟರೆ ಅಡ್ಮಿಷನ್.

ನಾನು ಈ ಮಾತನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಅಂದರೆ ಭ್ರಷ್ಟಾಚಾರ ಯಾರ ಕಾಲದಲ್ಲೂ ಇರಲಿಲ್ಲವೆಂದು ನಾನು ಹೇಳುತ್ತಿಲ್ಲ. ಅದು ಲಿಮಿಟ್‌ನಲ್ಲಿತ್ತು. ಅವರಿಗೆ ಫಿಯರ್ ಇರಬೇಕಾಗುತ್ತದೆ. ಆದರೆ ಇವತ್ತು ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಲಂಚವಿಲ್ಲದೆ ಕೆಲಸ ನಡೆಯುತ್ತಿಲ್ಲ. ಔಷಧಿಗಳು ಇಲ್ಲವೆಂದು ಹೇಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಬಗ್ಗೆ ನಿಮಗೆ ಹೇಳಬೇಕು. ಕಳೆದ ಎರಡು ತಿಂಗಳುಗಳಿಂದ ಮಂಗಳೂರು ಮತ್ತು ಎಲ್ಲಾ ತಾಲ್ಲೂಕುಗಳಲ್ಲಿ ಮಲೇರಿಯಾ ಕಾಯಿಲೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಸಾವಿರಾರು ಮಕ್ಕಳು ಅದರಿಂದ ನರಳುತ್ತಿದ್ದಾರೆ. ಆದರೆ ನಮ್ಮ ಆರೋಗ್ಯ ಇಲಾಖೆಯ ನಿರ್ದೇಶಕರು ಏನಿದ್ದಾರೆ, ಅವರಿಗೆ ಅಲ್ಲಿಗೆ ಭೇಟಿ ಕೊಡಬೇಕೆನ್ನುವ ಸೌಜನ್ಯವಿಲ್ಲ. ನಿಮ್ಮ ಜಾಯಿಂಟ್ ಡೈರೆಕ್ಟರ್‌ರವರಿಗೆ ಟೈಮ್ ಸಿಕ್ಕಿಲ್ಲ. ಅದು ನಿಮ್ಮ ಸ್ವಂತ ಜಿಲ್ಲೆ. ಅಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಪಾಸಿಟೀವ್ ರಿಸಲ್ಟ್ ಬಂದಿರುವುದರಿಂದ ಇದನ್ನೆಲ್ಲಾ ಮುಖ್ಯಮಂತ್ರಿಗಳಿಗೆ ಕಳುಹಿಸಿ ಕೊಡುತ್ತಿದ್ದೇನೆ. ಅದನ್ನು ತಾವು ನೋಡಬೇಕು. ನಾನಾದರೂ ಸರ್ಕಾರದಲ್ಲಿ ಒತ್ತಾಯ ಮಾಡತಕ್ಕದ್ದು, ನೀವು ಮಕ್ಕಳನ್ನು ಶಾಲೆಗೆ ಸೇರಿಸಿಯೆಂದು ಮಾನ್ಯ ಮೊಯಿಲಿಯವರು ಶಿಕ್ಷಣ ಸಚಿವರಾಗಿದ್ದಾಗ ಹೇಳಿದರು. ಬಹಳ ಉತ್ಸಾಹದಿಂದ ಎಲ್ಲಾ ಶಾಸಕರು ಇದನ್ನು ಮಾಡಲು ಕರೆ ಕೊಟ್ಟರು; ಅದರಂತೆ ನಾನು ರೇವಣ್ಣನವರು, ಸಾದತ್ ಆಲಿಖಾನ್. ಶಿವಕುಮಾರ್ ಅವರು ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಿ ಮಕ್ಕಳನ್ನು ಸ್ಕೂಲಿಗೆ ಸೇರಿಸಿಯೆಂದು ಹೇಳಿದೆವು. ಈಗ ಹಳ್ಳಿಗಳಲ್ಲಿ ಏನು ಹೇಳುತ್ತಿದ್ದಾರೆಂದರೆ ನಮ್ಮ ಮಕ್ಕಳು ದನಕಾಯ್ದುಕೊಂಡು ಇದ್ದರು. ನೀವು ಸ್ಕೂಲಿಗೆ ಸೇರಿಸಿ ಅಂದಿರಿ; ನಾವು ಸೇರಿಸಿದೆವು. ಈಗ ಮೇಸ್ಟ್ರುಗಳೇ ಇಲ್ಲವೆಂದು ಕೇಳುತ್ತಿದ್ದಾರೆ. 200-300 ಮಕ್ಕಳಿಗೆ ಒಬ್ಬ ಶಿಕ್ಷಕರು ಪಾಠ ಮಾಡಬೇಕೆಂದು ಹೇಳಿದರೆ ಏನು

ಹೇಳುವುದು? ಇದು ನನ್ನ ಕಾಲದಲ್ಲಿ ಆಗಿದ್ದರೆ ಅಪರಾಧ. ಅದು ಮುಂದುವರಿದುಕೊಂಡು ಹೋಗಬೇಕಾ ಅಥವಾ ನಿಲ್ಲಬೇಕಾ ಎಂಬುದು ನಮ್ಮ ಮುಂದಿರತಕ್ಕ ಪ್ರಶ್ನೆ. ಬಳ್ಳಾರಿ ಜಿಲ್ಲಾಪರಿಷತ್‌ನವರು ಮತ್ತು ಬೆಂಗಳೂರು ಜಿಲ್ಲಾ ಪರಿಷತ್‌ನವರು 300-400 ಸಂಬಳ ಕೊಟ್ಟು ಶಿಕ್ಷಕರುಗಳನ್ನು ನೇಮಕ ಮಾಡಿಕೊಂಡರೆ ಅವರನ್ನು ಕನ್ಫರ್ಮ್ ಮಾಡುವುದಕ್ಕೆ ನಿಮಗೇನು ತೊಂದರೆ? ರೋಸ್ಟರ್ ಪ್ರಕಾರ ನೇಮಕ ಮಾಡಲಿಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಲಂಚ ತೆಗೆದುಕೊಂಡು ಕೆಲಸ ಕೊಟ್ಟಿದ್ದಾರೆಂದು ಹೇಳುತ್ತಾರೆ. ಒಂದು ವಿಚಾರವನ್ನು ಬಹಳ ದುಃಖದಿಂದ ಈ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಜಿಲ್ಲಾ ಪರಿಷತ್‌ಗಳಲ್ಲಿ ಟೀಚರ್ಸ್ ನೇಮಕ ಮಾಡುವಾಗ ರೋಸ್ಟರ್ ಪ್ರಕಾರ ನೇಮಕ ಮಾಡಲಿಲ್ಲ. ಅಲ್ಲಿ ಅಕ್ರಮ ನಡೆದಿದೆಯೆಂದು ಹೇಳುತ್ತಿದ್ದಾರೆ.

ನಾನು ಕಳೆದ ಸದನದಲ್ಲೂ ಕೂಡ ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ಮಾತನಾಡಿದ್ದೇನೆ. ಕೆಪಿಎಸ್‌ಸಿ ಬಗ್ಗೆ ಜನರು ಬಹಳ ಲಘುವಾಗಿ ಮಾತನಾಡುತ್ತಾರೆ. ಕೆಪಿಎಸ್‌ಸಿಯನ್ನು ನಾನು ಸಹ ಅತ್ಯಂತ ಕಠೋರವಾಗಿ ಕಂಡೆಮ್ ಮಾಡುತ್ತಿದ್ದೇನೆ. ಕೆಪಿಎಸ್‌ಸಿಯಲ್ಲಿ ಸಂದರ್ಶನಕ್ಕೆ ಹೋದರೆ ಮುಂಚೆಯೇ ವ್ಯವಹಾರ ಮಾಡಿಕೊಂಡಿರುತ್ತಾರೆ. ಅಲ್ಲಿರತಕ್ಕ ಸದಸ್ಯರು ಹಾಗೆ ಮಾಡಿಕೊಂಡಿರುತ್ತಾರೆ. ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡದಿದ್ದರೂ ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆಂದು ಹೇಳಿ 23 ಅಂಕಗಳನ್ನು ಕೊಡುತ್ತಾರೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಸಿಂಧ್ಯಾರವರು ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ಮಾತನಾಡುತ್ತಿದ್ದಾರೆ. ಕಳೆದ ಸಲ ಈ ವಿಚಾರ ಇಲ್ಲಿ ಬಂತು. ಇದರ ಮೂಲಕ ಮಾನ್ಯ ಬಂಗಾರಪ್ಪನವರ ಸರ್ಕಾರ ಇದ್ದಾಗ ಇಂಜಿನೀಯರ್ಸ್, ಟೀಚರ್ಸ್, ಹೆಡ್ಮಾಸ್ಟರ್ಸ್ ಅಪಾಯಿಂಟ್‌ಮೆಂಟ್‌ಗಳನ್ನು ಮಾಡಿದರು. ನಂತರ ಅದನ್ನು ನೀವೇನು ಮಾಡುತ್ತಿದ್ದೀರಿ? ನಿಮ್ಮ ಪಕ್ಷ ಏನು ಮಾಡುತ್ತಿತ್ತು? ಅದಕ್ಕೆ ನಿಮ್ಮಲ್ಲೇ ಡಿಫರೆನ್ಸ್ ಬಂತು. ಆಗ ತಾವು ಸುಮ್ಮನೆ ಕುಳಿತಿದ್ದಿರಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ನಾಯಕ್‌ರವರಿಗೆ ನಾನೇನು ಮಾತನಾಡಿದ್ದೇನೆ ಎನ್ನುವುದೂ ಗೊತ್ತಿಲ್ಲ.

ಶ್ರೀ ಆರ್.ಎನ್. ನಾಯಕ್: 15 ಪರ್ಸೆಂಟ್ ಮಾರ್ಕ್ ರೂರಲ್‌ನವರಿಗೆ ಇತ್ತು. ಈಗ ಅದೆಲ್ಲಿದೆ? ಆಗ ನೀವು ಏಕೆ ಸುಮ್ಮನೆ ಕುಳಿತಿದ್ದೀರಿ? ಏನು ಮಾಡುತ್ತಾ ಇದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಆಗ ಪರಲೋಕಕ್ಕೆ ಹೋಗಿದ್ದೆ.

ಶ್ರೀ ಆರ್.ಎನ್. ನಾಯಕ್ : ನಾನು ಆಗ ಬರಲಿಕ್ಕೆ ಆಗಲಿಲ್ಲ. ಕ್ಷಮಿಸಿ, ಭಯವಾಗುತ್ತಿದೆ. ತಾವು ಪರಲೋಕಕ್ಕೆ ಹೋಗಿ ಬಂದಿದ್ದೀರಿ. ನೀವು ಯಾರೆಂದು ಗೊತ್ತಾಗುತ್ತಿಲ್ಲ; ನಾನು ಮತ್ತೆ ಹೆಚ್ಚಿಗೆ ಮಾತನಾಡುವುದಿಲ್ಲ. ನನಗೆ ಭಯವಾಗುತ್ತಿದೆ.

ಶ್ರೀ ವೈ.ಕೆ. ರಾಮಯ್ಯ : ಈ ವಿಷಯದ ಬಗ್ಗೆ ಕಳೆದ ಆಧಿವೇಶನದಲ್ಲಿಯೂ ಅತ್ಯಂತ ವ್ಯಾಪಕವಾಗಿ ಚರ್ಚೆ ಮಾಡಲಾಯಿತು; ಗಂಭೀರವಾಗಿ ಸರ್ಕಾರದ ಗಮನ ಸೆಳೆಯಲಾಯಿತು. ಸನ್ಮಾನ್ಯ ಮುಖ್ಯಮಂತ್ರಿಗಳು ಸಭೆಯನ್ನು ಕರೆದರು. ಅವರು ಏಕೋ ಏನೋ, ಹಳ್ಳಿಯವರ ಬಗ್ಗೆ ಅವರಿಗೆ ಆಸೆ ಆತಂಕಗಳು ಕಡಿಮೆಯಾಗಿದೆ. ಅವರು, ಹಳ್ಳಿಯವರು ಎಂದರೆ ಕೃಪೆ ತೋರುತ್ತಾ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ತಾವು ಒಂದು ವಿಷಯವನ್ನು ನೆನಪಿಟ್ಟುಕೊಳ್ಳಬೇಕು. ಈ ಹದಿನೈದು ಪರ್ಸೆಂಟ್ ಎಂಬುದು ಶಿಕ್ಷಕರ ನೇಮಕಾತಿಗೆ ಮಾಡಿದ್ದು. It was my initiative and it was agreed by the Cabinet.

SRI K.B. KOLIWAD : Then why was it reduced to $2\frac{1}{2}$ %.

ಶ್ರೀ ವೈ.ಕೆ. ರಾಮಯ್ಯ : ಮುಖ್ಯಮಂತ್ರಿಗಳು, ವಿರೋಧಪಕ್ಷದ ನಾಯಕರುಗಳ ಜೊತೆ ಚರ್ಚೆ ಮಾಡಿದರು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಗ್ರಾಮೀಣ ಪ್ರದೇಶದ ಮಕ್ಕಳಿಗೆ, ಅಂದರೆ ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ಅನುಕೂಲ ಈ ಸೌಲಭ್ಯಗಳು ಪಟ್ಟಣ ಪ್ರದೇಶದಲ್ಲಿ ಮಾಡಿ ಕೊಡಬೇಕು. ಎಲ್ಲರಿಗೂ ಸಿಗುತ್ತದೆಂದಲ್ಲ. ಹೆಚ್ಚಿನ ಅಂಕಗಳನ್ನು ಪಡೆಯುವುದಕ್ಕೆ, ಇಲ್ಲಿಯೂ ಕೊಳಚೆ ಪ್ರದೇಶಗಳು ಮತ್ತು ಬೇರೆ ಬೇರೆ ಪ್ರದೇಶಗಳೂ ಕೂಡ ಇವೆ. ಇದನ್ನು ಗಮನದಲ್ಲಿಟ್ಟುಕೊಂಡು ಮುಂದೆ ಕಾನೂನು ಮಾಡಬೇಕೆಂಬ ಉದ್ದೇಶ, ನನ್ನ ನೇತೃತ್ವದ ಸರ್ಕಾರ ಇದ್ದಾಗಲೂ ಇತ್ತು. ಇದು ಅರ್ಬನ್ ಏರಿಯಾಕ್ಕೆ ಸಂಬಂಧಪಟ್ಟ ಹಾಗೆ, ಪಟ್ಟಣ ನಗರ ಪ್ರದೇಶ ಇತ್ಯಾದಿ. ಗ್ರಾಮೀಣ ಪ್ರದೇಶದಲ್ಲಿ ಓದತಕ್ಕ ಮಕ್ಕಳು ಹೆಚ್ಚಿನ ಅಂಕಗಳನ್ನು ತೆಗೆಯುವುದಕ್ಕಾಗುವುದಿಲ್ಲ. ಅಂಕಗಳ ಆಧಾರದ ಮೇಲೆ ಅವರನ್ನು ಸಂದರ್ಶನ ಕರೆಯುವಂಥಾದ್ದು ಮತ್ತು ಆಯ್ಕೆ ಮಾಡತಕ್ಕ ವಿಧಿ ವಿಧಾನ, ಕಾನೂನು ನಮ್ಮ ಹತ್ತಿರ ಇರುವುದರಿಂದ ನಾವು ಈ ಕೃಪಾಂಕಗಳನ್ನು ಅಥವಾ ಗ್ರೇಸ್ ಮಾರ್ಕ್ಸ್‌ನ್ನು ಶೇಕಡ 15ರಷ್ಟು ಕೊಡಬೇಕು ಎನ್ನತಕ್ಕ ವಿಚಾರವನ್ನು ತೀರ್ಮಾನ ಮಾಡಿದಾಗ, ಇದು ಬರೀ ಪ್ರಾಥಮಿಕ ಶಾಲಾ ಶಿಕ್ಷಕರ ವಿಚಾರ ಎಂದಲ್ಲ, ಇದನ್ನು ಪಾಲಿಸಿ ವಿಷಯವಾಗಿ ತೆಗೆದುಕೊಂಡು, ಯಾವುದೇ ಡಿಪಾರ್ಟ್‌ಮೆಂಟ್ ಬಂದರೂ ಕೂಡ ಇದನ್ನು ಅಳವಡಿಸಬೇಕು. ಸರ್ಕಾರಿ ಇಲಾಖೆಯಲ್ಲಿ ಇರಬಹುದು ಅಥವಾ ಜಿಲ್ಲಾ ಪರಿಷತ್ತಿನಲ್ಲಿ ಬರಬಹುದು ಹೀಗೆ ಎಲ್ಲ ಕಡೆ ಅಳವಡಿಸಬೇಕೆಂದಾಗ ಕೆ.ಎಸ್.ಆರ್.ಟಿ.ಸಿ., ಅಲ್ಲಿಯೂ ಕೂಡ ಈ 15 ಪರ್ಸೆಂಟ್ ಕೊಟ್ಟರು, ಮತ್ತು ಇದೇ ರೀತಿ ಆಯ್ಕೆ ಕೂಡ ಆಯಿತು. ನಾವು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಬೇಕಾದರೆ, ಮಾನ್ಯ ಮುಖ್ಯಮಂತ್ರಿಯವರಾದ ವೀರಪ್ಪ ಮೊಯ್ಲಿಯವರು ಏನು ಹೇಳುತ್ತಿದ್ದಾರೆ, ಬರೀ ಪ್ರಾಥಮಿಕ ಶಾಲಾ ಶಿಕ್ಷಕರು ಎಂಬ ಅಭಿಪ್ರಾಯ ಹೇಳುತ್ತಿದ್ದಾರೆ. That is totally wrong. Better you verify all these things.

ಈ ಸಂದರ್ಭದಲ್ಲಿ ಅಂದಿನ ಸಚಿವ ಸಂಪುಟದಲ್ಲಿ ಏನು ವಿಚಾರ ನಡೆಯಿತು ಎಂಬ ವಿವರಗಳಿಗೆ ಹೋಗುವುದಿಲ್ಲ. ಆಗ ನೀವು ವಿರೋಧ ಮಾಡಿದ್ದೀರಿ. ಆ ವಿಚಾರ ಏನೇ ಆಗಿರಲಿ. ಅಷ್ಟಾದರೂ ಕೂಡ, the cabinet took a unanimous decision. Thereafter, at the later stage, you agreed. You had to agree. Then you agreed for 15%. Supposing 100 ಮಾರ್ಕ್ಸ್ ಇದ್ದು, ಒಬ್ಬ ಮಗು 50 ತೆಗೆದುಕೊಂಡಿದ್ದರೆ, 50 ಮತ್ತು 15 ಒಟ್ಟು 65 ಆಗುತ್ತದೆ. 5 ಪೇಪರ್ಸ್ ಇದ್ದರೆ, 15 x 5 = 75 ಆಗುತ್ತದೆ. 5 ಪೇಪರ್ಸ್‌ನಲ್ಲಿ 500 ಅಂಕಗಳಿಗೆ ಒಬ್ಬ ಹುಡುಗಿ ಅಥವಾ ಹುಡುಗ 200 ಅಂಕಗಳನ್ನು ತೆಗೆದುಕೊಂಡಿದ್ದರೆ, ಅದಕ್ಕೆ 75 ಸೇರಿಸಿದರೆ 275 ಆಗುತ್ತದೆ. ಆಗ ನಾವು ವಿಚಾರ ಮಾಡಿದೆವು. ಇದು ಗ್ರಾಮೀಣ ಪ್ರದೇಶದ ಮಕ್ಕಳು, ನೌಕರಿ ಸೇರುವುದಕ್ಕೆ, ಸರ್ಕಾರಿ ಸೇವೆ ಸೇರುವುದಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕ ತೀರ್ಮಾನವನ್ನು ನಾವು ಮಾಡಿದೆವು. ಪ್ರಾರಂಭದಲ್ಲಿ ಶಿಕ್ಷಕರ ಹುದ್ದೆಗಳಿಗೆ ಅಳವಡಿಸೋಣ, ನಂತರ ಉಳಿದುದಕ್ಕೂ ಅಳವಡಿಸಬೇಕೆಂಬ ಅಭಿಪ್ರಾಯ ಇಟ್ಟೇ ತೀರ್ಮಾನ ಮಾಡಿದ್ದೇವೆ. ನಾವು ಬರೇ ಅದೊಂದನ್ನು ಮಾಡಿದ್ದರೆ, ನೀವು ಉಳಿದುದನ್ನು ಏಕೆ ಮಾಡಬಾರದಿತ್ತು, ಏನು ತೊಂದರೆ ಇತ್ತು ಎಂಬುದು ನನಗೆ ಅರ್ಥವಾಗದಿರತಕ್ಕ ವಿಚಾರ. ಕೊನೆಗೆ, ನೀವು ಬಂದ ಮೇಲೆ ಏನು ಮಾಡಿದಿರಿ ಗೊತ್ತೇನು. ಒಟ್ಟು 15 ಅಂಕಗಳು ಎಂದು ಮಾಡಿದಿರಿ. 500 ಮಾರ್ಕ್ಸ್ ಇದ್ದು, 200 ಅಂಕಗಳನ್ನು ತೆಗೆದುಕೊಂಡರೆ, 200 + 15

ಎಂದು ಮಾಡಿದಿರಿ. ನಮ್ಮದು 275 ಆಗುವುದು. ನಿಮ್ಮದು 1.25 ಪರ್ಸೆಂಟೇಜ್ ವರ್ಕ್‌ಔಟ್ ಆಗುತ್ತದೆ. ಇದರಿಂದೇನಾಗುತ್ತದೆಂದರೆ, ಗ್ರಾಮೀಣ ಪ್ರದೇಶದ ಮಕ್ಕಳಿಗೆ, ಯಾವ ಸೌಲಭ್ಯವನ್ನು ನನ್ನ ನೇತೃತ್ವದ ಸರ್ಕಾರ ಇದ್ದಾಗ ಕೊಡುತ್ತಿತ್ತೋ ಅದಕ್ಕೆ ಸಂಪೂರ್ಣವಾಗಿ ತುಳಸಿ ನೀರನ್ನುಬಿಟ್ಟಿರಿ, ನಿಮಗೆ ಅನುಮಾನ ಬೇಕಾಗಿಲ್ಲ. ಇದರಿಂದ ಸಂಪೂರ್ಣವಾಗಿ, ಕರ್ನಾಟಕ ರಾಜ್ಯದ ಬಡ ಮಕ್ಕಳಿಗೆ ದೊಡ್ಡ ಅನ್ಯಾಯವಾಗಿದೆ ಎನ್ನತಕ್ಕ ಮಾತನ್ನು ಈಗಲಾದರೂ ಮನಗಂಡು, ಮೊದಲಿನಂತೆ ಜಾರಿಗೆ ಕೊಡತಕ್ಕ ಸೌಜನ್ಯತೆ, ನಂಬಿಕೆ, ಪ್ರಾಮಾಣಿಕವಾಗಿ ನಿಮ್ಮಿಂದ ಬರಲಿ. ಇರುವ ಒಂದೊಂದನ್ನೂ ಹಾಳು ಮಾಡುತ್ತಾ ಹೋಗುವುದಿಲ್ಲ. ಕ್ಷಮಿಸಬೇಕು ಮಾನ್ಯ ಸಭಾಧ್ಯಕ್ಷರೇ, ನಾನು ಭಾಷಣ ಮಾಡುವುದಕ್ಕೆ ತಯಾರಿಲ್ಲ. ಏಕೆಂದರೆ, ಪ್ರಾಥಮಿಕ ಶಾಲಾ ಶಿಕ್ಷಕರು ಎಂಬ ಮಾತು ಆಡಿದ್ದರಿಂದ, ನಾನು ಎದ್ದುನಿಂತು ಮಾತನಾಡ ಬೇಕಾಯಿತು. ಇಲ್ಲದಿದ್ದರೆ, ನಾನು ಮಾತನಾಡುವುದಕ್ಕೆ ಹೋಗುತ್ತಾ ಇರಲಿಲ್ಲ. ಆದ್ದರಿಂದ, ಇದನ್ನು ಬೇರೆಯವರಿಗೂ ಕೂಡ ಅಳವಡಿಸಿ ಕೊಳ್ಳಬೇಕು. ಇನ್ನು ಆರ್.ಎನ್. ನಾಯಕ್‌ರವರು, ಪಿ.ಎಸ್.ಸಿ. ವಿಚಾರ ಹೇಳಿದರು.

6.40 ಪಿ.ಎಂ.

ಮುಖ್ಯೋಪಾಧ್ಯಾಯರ ವಿಚಾರ ಎಂದು ಕಾಣುತ್ತದೆ. We took out all these things from the purview of the Karnataka Public Service Commission. ನಾವು ಕ್ಯಾಬಿನೆಟ್ ಡಿಸಿಷನ್ ಮಾಡಿದ್ದು ಅದೇ ಉದ್ದೇಶದಿಂದ ಮಾನ್ಯ ಸಭಾಧ್ಯಕ್ಷರೇ, ಈಗ ಪಿ.ಎಸ್.ಸಿ.ಗೆ ಹೋದರೆ, ಮೂರು ನಾಮ ಬೀಳುತ್ತದೆ ಹುಡುಗರಿಗೆ. ಆ ಉದ್ದೇಶ ಇಟ್ಟುಕೊಂಡೇ ನಾವು ಮಾಡಿದ್ದು. ಇವರು ಬಂದ ತಕ್ಷಣ ನಾವು ಏನು ಮಾಡಿದ್ದೆವು, ಅದನ್ನು ಪಿಎಸ್‌ಸಿ ತೆಗೆದುಕೊಳ್ಳಲಿ ಅಂದರು. ಇದರ ಬಗ್ಗೆ ಒಂದು ಕಥೆ ಇದೆ. 'ಗಂಡ' ಏನು ಹೇಳಿದರೂ ಹೆಂಡತಿ ಆಗೋದಿಲ್ಲ ಅನ್ನುತ್ತಿದ್ದಳಂತೆ. ಆಮೇಲೆ ಯಾರೋ ಹೇಳಿಕೊಟ್ಟರಂತೆ, ಮಂಗ ಮುಂಡೇದೆ, ನಿನಗೆ ಬುದ್ಧಿ ಇಲ್ಲ, ನಿನಗೆ ಬೇಕು ಎಂಬ ಉತ್ತರ ಬೇಕಾದರೆ, ಆಗೋದಿಲ್ಲ ಅಂಥ ಸ್ಟಾರ್ಟ್ ಮಾಡು ಅದರಂತೆ. ಹಾಗೆ ಈ ಕಥೆ ಮಾಡುವುದು ಬೇಡ. ಪ್ರಾಮಾಣಿಕವಾಗಿ ಈ ಸಮಸ್ಯೆಯನ್ನು ನೋಡಿ, ಗಂಭೀರವಾಗಿ ಏನು ತೊಂದರೆ ಇದೆ ಎಂದು ಅರಿತು ಹೋಗಬೇಕೇ ವಿನಃ ಮಾಡಿದ್ದಕ್ಕೆಲ್ಲಾ ನೆಗೆಟೀವ್ ಅಪ್ರೋಚ್ ಮಾಡುವುದಲ್ಲ. ಆಮೇಲೆ ಜನ ಅನ್ನೋ ಬುಲ್ಡೋಜರ್ ಕಾಯುತ್ತಿರುತ್ತಾರೆ. ಆಮೇಲೆ ಯಾರೂ ಕಾಯುವುದಕ್ಕಾಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ನಾನು ಇಷ್ಟೇ ಹೇಳಿದ್ದು, 15 ಪರ್ಸೆಂಟನ್ನು ಗ್ರಾಮಾಂತರದಿಂದ ಬರುವ ಶಿಕ್ಷಕರಿಗೆ ಕೊಡಬೇಕೆಂದು. ಮೊದಲು ಶಿಕ್ಷಕರ ಅಪಾಯಿಂಟ್‌ಮೆಂಟ್‌ನಲ್ಲಿ ಮಾಡಿದೆವು. ಆ ಪ್ರಪೋಸಲ್ ಬಂದ ಮೇಲೆ ಈ ಪ್ರಪೋಸಲ್ ಅನ್ನು ಎಲ್ಲಾ ಇಲಾಖೆಗಳಿಗೆ ಅನ್ವಯಿಸೋಣ ಎಂದು ಇದ್ದೆವು. ಅದರಲ್ಲಿ ವಿರೋಧಾಭಾಸ ಏನೂ ಇಲ್ಲ. ಆ ಬಗ್ಗೆ ಉತ್ತರ ಕೊಡುವಾಗ ಹೇಳುತ್ತೇನೆ. I said that first we will start it with the teachers.

ಶ್ರೀ ವೈ.ಕೆ. ರಾಮಯ್ಯ : ಇದು ಬಹಳ ಗಂಭೀರವಾದ ವಿಷಯ. ದಯಮಾಡಿ ಒಂದು ಸೆಕೆಂಡ್ ಅವಕಾಶ ಕೊಡಬೇಕು.

ಅಧ್ಯಕ್ಷರು : ಉತ್ತರ ಹೇಳುವಾಗ ಹೇಳುತ್ತೇನೆಂದು ಹೇಳಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ : ಸಮಸ್ಯೆಯೇ ಬಗೆಹರಿದಿಲ್ಲ, ಅವರು ಉತ್ತರ ಏನು ಹೇಳುತ್ತಾರೆ?

ಅಧ್ಯಕ್ಷರು : ತಾವು ಏನು ಕೇಳಿದ್ದೀರಿ, ಅದಕ್ಕೆ ಉತ್ತರ ಹೇಳುತ್ತೇನೆಂದು ಅವರು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈ ವಿಷಯ ಚರ್ಚೆಯಾಗಿದೆ. ಅವರು ಕ್ಲಾರಿಫಿಕೇಷನ್ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಜೆ.ಸಿ. ಮಧುಸ್ವಾಮಿ : 15 ಪರ್ಸೆಂಟ್‌ನಿಂದ ಒಟ್ಟು 15 ಮಾರ್ಕ್ಸ್ ಹೇಗೆ ಆಯಿತೆಂದು ಅವರು ಹೇಳಿಬಿಡಲಿ.

ಅಧ್ಯಕ್ಷರು : ಅವರು ತಮ್ಮ ಉತ್ತರದಲ್ಲಿ ಹೇಳುತ್ತೇನೆಂದು ಹೇಳಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ : ನಾನು ಒಂದೇ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದೇನೆಂದರೆ, 15 ಪರ್ಸೆಂಟನ್ನು ಕೃಪಾಂಕವಾಗಿ ಕೊಡಬೇಕೆಂದು ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳು ಆಗಿದ್ದಾಗ ಹಾಗೂ ವೀರಪ್ಪಮೊಯಿಲಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಉಪಾಧ್ಯಾಯರನ್ನು ಆಯ್ಕೆ ಮಾಡುವಂಥ ಸಂದರ್ಭದಲ್ಲಿ ನಿರ್ಧರಿಸಿ ಕೊಟ್ಟಿದ್ದಾರೆ. 15 ಪರ್ಸೆಂಟ್ ಮಾರ್ಕ್ಸ್ ಕೊಟ್ಟಿದ್ದರಿಂದ ಸ್ವಲ್ಪ ಹಳ್ಳಿಯವರು ಜಾಸ್ತಿ ಬಂದಿದ್ದರಿಂದ ವಿಧಾನಸೌಧದಲ್ಲಿರುವ ನಮ್ಮ ಪ್ರಭುಗಳಿಗೆ ಕಣ್ಣು ಕೆಂಪಗೆ ಆಯಿತು. ಈ ಶೋಷಣೆ ಆವತ್ತಿನಿಂದ ನಡೆಯುತ್ತಿದೆ, ಇವೊತ್ತೂ ಕೂಡಾ ನಡೆಯುತ್ತಿದೆ. ಇದನ್ನು ಆಧಾರವಾಗಿ ಇಟ್ಟುಕೊಂಡು ನಾನು ಮತ್ತು ಮಧುಸ್ವಾಮಿಯವರು ಇಲ್ಲಿ ಚರ್ಚೆಗೆ ತಂದು 15 ಪರ್ಸೆಂಟನ್ನು 15 ಮಾರ್ಕ್ಸ್‌ಗೆ ಏಕೆ ಇಳಿಸಿದ್ದೀರೆಂದು ಮುಖ್ಯಮಂತ್ರಿಗಳ ಜೊತೆ ಚರ್ಚೆಗೆ ತಂದೆವು. ಇಲ್ಲಿ ಚರ್ಚೆ ನಡೆಯಿತು. ಚರ್ಚೆ ಪೂರ್ಣವಾಗಲಿಲ್ಲ. ನಮ್ಮನ್ನು ಕರೆದು ಚರ್ಚೆ ಮಾಡುತ್ತೇನೆಂದು ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟರು.

ಶ್ರೀ ಜೆ.ಸಿ. ಮಧುಸ್ವಾಮಿ : 15 ಪರ್ಸೆಂಟ್ ಮಾಡುತ್ತೇವೆಂದು ಅವರು ಹೇಳಿದರು. ಆಗ ಅವರು ಎಜುಕೇಷನ್ ಮಿನಿಸ್ಟರ್ ಆಗಿದ್ದರು. ಆಮೇಲೆ ಒಂದೇ ತೀರ್ಮಾನದಲ್ಲಿ ಎರಡು ಒಪೀನಿಯನ್ ಕೊಟ್ಟರು.

ಶ್ರೀ ವೈ.ಕೆ. ರಾಮಯ್ಯ : ಎಲ್ಲಾ ವಿರೋಧ ಪಕ್ಷದವರನ್ನು ಕರೆದು ಚರ್ಚೆ ಮಾಡುವಂಥ ಕೃಪೆಯನ್ನು ಮುಖ್ಯಮಂತ್ರಿಗಳು ಮಾಡಿದರು. ಆವತ್ತು ಚರ್ಚೆ ಪೂರ್ಣವಾಗಲಿಲ್ಲ, 15 ಪರ್ಸೆಂಟ್ ಇದ್ದಿದ್ದನ್ನು ಕಂಟಿನ್ಯೂ ಮಾಡಬೇಕೇ ಅಥವಾ 15 ಮಾರ್ಕ್ಸ್‌ಗೆ ಮಾಡಬೇಕೇ ಎಂಬ ಬಗ್ಗೆ ಮತ್ತೊಂದು ಸಭೆಯನ್ನು ಕರೆಯುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಈಗಲಾದರೂ ಹಳ್ಳಿ ಮಕ್ಕಳಿಗೆ 15 ಪರ್ಸೆಂಟ್ ಕೊಡುತ್ತೇವೆಂದು ವಾಗ್ದಾನ ಕೊಡುತ್ತೀರಾ ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರದಲ್ಲಿ ಹೇಳುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಉತ್ತರದ ಸಮಯದಲ್ಲಿ ಸರಿಯಾದ ಕ್ಲಾರಿಫಿಕೇಷನ್ ಕೊಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಮುಖ್ಯ ಮಂತ್ರಿಗಳು ಆಗ ಶಿಕ್ಷಣ ಸಚಿವರಾಗಿದ್ದರು. ಅವರಿಗೆ, ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಬೇಕೆಂಬ ಕಳಕಳಿ ಇತ್ತು. ನಾನು ಅದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಕೇಂದ್ರ ಸರ್ಕಾರದವರೂ ಸಹ ಒಂದು ಶಿಕ್ಷಣ ಸಮಿತಿ ಮಾಡಿ ಅದಕ್ಕೆ ತಮ್ಮನ್ನು ಅಧ್ಯಕ್ಷರಾಗಿ ಮಾಡಿ ಒಂದು ವರದಿ ಕೊಡಬೇಕೆಂದು ಕೇಳಿದ್ದಾರೆ. ಆದರೆ ತೊಂದರೆ ಏನಾಗಿದೆ ಎಂದರೆ 20 ಸಾವಿರಕ್ಕೂ ಹೆಚ್ಚು ವೇಕೆನ್ಸೀಸ್ ಇವೆ. ಮಾನ್ಯ ಸಾದತ್ ಅಲೀ ಖಾನ್ ಮತ್ತು ನನಗೆ ಗೊತ್ತಿದೆ ಸ್ವಾಮಿ, ಇದರ ತೊಂದರೆ ಮಾನ್ಯ ಶಿವಕುಮಾರ್‌ರವರಿಗೂ ಸಹ ಅದು ಗೊತ್ತಿದೆ. ನಮ್ಮ ಕ್ಷೇತ್ರದ ಹಳ್ಳಿಗಳಿಗೆ ನಾವು ಹೋಗುವುದು ಕಷ್ಟವಾಗಿದೆ. 420 ಸ್ಕೂಲ್‌ಗಳು ಇರುವ ತಾಲ್ಲೂಕಿನಲ್ಲಿ 510 ವೇಕೆನ್ಸಿಗಳು ಇರುವಾಗ ಚುನಾಯಿತ ಪ್ರತಿನಿದಿಗಳು ಹೇಗೆ ಉತ್ತರ ಕೊಡುವುದು? ಇರುವ 20 ಸಾವಿರ ವೇಕೆನ್ಸಿಗಳನ್ನು 5 ವರ್ಷದಲ್ಲಿ ಫಿಲಪ್ ಮಾಡುತ್ತೇವೆಂದರೆ ಈ ಮಕ್ಕಳಿಗೆ ಏನು ಮಾಡುವುದು? ನಿನ್ನೆ ದಿವಸ ನಾಗಮ್ಮ ಕೇಶವ ಮೂರ್ತಿಯವರು 'ಅಕ್ಷಯ' ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ ಈ ವರ್ಷದ ಆಯವ್ಯಯದಲ್ಲಿ 70 ಕೋಟಿ ರೂಪಾಯಿಗಳನ್ನು ನಾವು ಇದಕ್ಕೆ ತೆಗೆದು ಇಟ್ಟಿದ್ದೇವೆಂದು ಹೇಳಿದ್ದಾರೆ. ಆ ಹಣವನ್ನು ಇದಕ್ಕೆ ತೆಗೆದುಕೊಂಡರೂ ಪರವಾಗಿಲ್ಲ. ಆ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಕೈ ಬಿಟ್ಟರೂ ಪರವಾಗಿಲ್ಲ. ಆದರೆ ಶಿಕ್ಷಕರನ್ನು ನೇಮಕ ಮಾಡುವುದನ್ನು ತಾವು ದಯವಿಟ್ಟು ತಡ ಮಾಡಬಾರದೆಂದು ಒತ್ತಾಯ ಮಾಡುತ್ತೇನೆ. ಜಿಲ್ಲಾಪರಿಷತ್ತಿನ ಮೂಲಕ ಶಿವಮೊಗ್ಗ, ಬಳ್ಳಾರಿ, ಬೆಂಗಳೂರು ಗ್ರಾಮಾಂತರಗಳಲ್ಲಿ ಸುಮಾರು 3000 ಜನ 6 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರೆಲ್ಲಾ ಗ್ರ್ಯಾಜುಯೇಟ್ಸ್ ಮತ್ತು ಪೋಸ್ಟ್ ಗ್ರ್ಯಾಜುಯೇಟ್ಸ್. ಈ ತರಹ ಎಲ್ಲಾ ಜಿಲ್ಲೆಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಇವರನ್ನು ಕನ್‌ಫರ್ಮ್ ಮಾಡುವುದಕ್ಕೆ ರೋಸ್ಟರ್ ಸಿಸ್ಟಮ್ ಇಲ್ಲವೆಂದು ಹೇಳಿದ್ದೀರಿ. ಇದರಲ್ಲಿ ಕೆಲವರು ಟಿಸಿಹೆಚ್ ಕೋರ್ಸ್ ಮಾಡಿಲ್ಲ, ಕೆಲವರು ಬಿಎಡ್ ಮಾಡಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಟಿಸಿಹೆಚ್ ಮತ್ತು ಬಿಎಡ್ ಮಾಡಿರುವವರು ಪ್ರಾಕ್ಟಿಕಲ್ ಆಗಿ ಮಾಡಿರುವವರಿಗಿಂತ ಹೆಚ್ಚಿನ ಶಿಕ್ಷಣ ಕೊಡುವುದಕ್ಕಾಗುವುದಿಲ್ಲ. ಇವರು ರೆಗ್ಯುಲರ್ ಟಿಸಿಹೆಚ್ ಮತ್ತು ಬಿಎಡ್ ಹೋಲ್ಡರಿಗಿಂತ ಹೆಚ್ಚು ಕ್ವಾಲಿಫೈಡ್ ಆಗಿದ್ದಾರೆ. ಆದ್ದರಿಂದ ಈ ಅರೆಕಾಲಿಕ ಶಿಕ್ಷಕರು ಮತ್ತು ಜಿಲ್ಲಾಪರಿಷತ್ತಿನಲ್ಲಿ ಯಾರು ಗೌರವ ಶಿಕ್ಷಕರಿದ್ದಾರೆ, ಇವರನ್ನು ತಕ್ಷಣ ಖಾಯಂ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಕರ್ನಾಟಕ ಲೋಕ ಸೇವಾ ಆಯೋಗ; ಇಲ್ಲಿ ಭ್ರಷ್ಟಾಚಾರ ಇದೆ. ಎಲ್ಲಾ ಕಾಲದಲ್ಲೂ ಇದು ಇತ್ತು ಎಂದು ನಾವು ಕೇಳಿದ್ದೇವೆ. ಬಹಳಷ್ಟು ವರ್ಷಗಳ ಕಾಲ ಈ ಲೋಕಸೇವಾ ಆಯೋಗ ಬಹಳ ಪವಿತ್ರವಾಗಿರತಕ್ಕಂಥಾದ್ದು; ಇದರ ಬಗ್ಗೆ ಏನೂ ಮಾತನಾಡಬಾರದೆಂದು ಈ ವಿಧಾನ ಸಭೆಯಲ್ಲಿ ನಾವು ಚರ್ಚೆಯನ್ನೇ ಮಾಡುತ್ತಿರಲಿಲ್ಲ. ಮಾನ್ಯ ಅಧ್ಯಕ್ಷರೇ, ಇವರ ಅವ್ಯವಹಾರಗಳ ಒಂದಲ್ಲ, ಎರಡಲ್ಲ, ನೂರಾರು; ಹಾಜರಿ ಪತ್ರವನ್ನು ದುರುಪಯೋಗ ಮಾಡುತ್ತಾರೆ, ಬೇರೆಯವರು ಬಂದು ಪರೀಕ್ಷೆಗಳಲ್ಲಿ ಬರೆಯುತ್ತಾರೆ, ಪ್ರಶ್ನೆ ಪತ್ರಿಕೆಗಳನ್ನು ಅದಲುಬದಲು ಮಾಡುತ್ತಾರೆ, ಪ್ರಶ್ನೆ ಪತ್ರಿಕೆಗಳನ್ನು ಇವರೇ ಮಾರಾಟ ಮಾಡುತ್ತಾರೆ; ಸಾಮೂಹಿಕವಾಗಿ ಕಾಪಿ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ; ಪಠ್ಯದಲ್ಲಿ ಇಲ್ಲದೇ ಇರತಕ್ಕಂಥ ಪ್ರಶ್ನೆಪಟ್ಟಿಗಳನ್ನು ಮಾಡಿ ಕಳುಹಿಸಿದ್ದಾರೆ. ಹಿಸ್ಟರಿ ಇರುವ ಕಡೆ ಜಿಯಾಗ್ರಫಿ ಕಳುಹಿಸುತ್ತಾರೆ, ಸೈನ್ಸ್ ಇರುವ ಕಡೆ ಜಿಯಾಗ್ರಫಿಯನ್ನೇ ಕಳುಹಿಸುತ್ತಾರೆ.

ಇದು ಅಷ್ಟೇ ಇಲ್ಲ, ಇವರು ದೊಡ್ಡ ದೊಡ್ಡ ಪೋಸ್ಟ್‌ಗಳಿಗೆ ಇಂಟ್ರ್ಯೂ ಮಾಡುತ್ತಾರಲ್ಲಾ ಇವರುಗಳೆಲ್ಲಾ ಮುಂಚಿತವಾಗಿ ಮಾತನಾಡಿಕೊಂಡಿರುತ್ತಾರೆ, ಇಂಥವರಿಗೆ ಫೇಲ್ ಮಾಡಬೇಕು, ಇಂಥವರಿಗೆ ಪಾಸ್ ಮಾಡಬೇಕೆಂದು ನಿಗದಿ ಮಾಡಿಕೊಂಡಿರುತ್ತಾರೆ. ಅಭ್ಯರ್ಥಿಯು ಉತ್ತರವನ್ನು ಸರಿಯಾಗಿ ಕೊಡಲಿ, ಕೊಡದೇ ಹೋಗಲಿ, ಇವರಿಗೆ

ಯಾರನ್ನು ಸೆಲೆಕ್ಟ್ ಮಾಡಬೇಕು, ಅವರಿಗೆ ಇವರು ಒಂದು ಸಿಗ್ನಲ್ ಕೊಡುತ್ತಾರೆ, ಅದು ಏನೆಂದರೆ, ಬಹಳ ಚೆನ್ನಾಗಿ ಉತ್ತರ ಕೊಟ್ಟರಲ್ಲಾ ಎಂದು ಹೇಳುವುದು; ಅವನಿಗೆ ಹೈಯೆಸ್ಟ್ ಮಾರ್ಕ್ಸ್ ಕೊಡುವುದು. ಇನ್ನೊಬ್ಬ ಚೆನ್ನಾಗಿ ಉತ್ತರ ಕೊಟ್ಟಿದ್ದರೂ ಕೂಡ ಇವನ ಉತ್ತರ ಕಳಪೆ ಸರಿಯಾಗಿಲ್ಲ ಎಂದು ಹೇಳುವುದು. ಈ ರೀತಿಯಲ್ಲಿ ಅವ್ಯವಹಾರಗಳು ನಡೆಯುತ್ತಾ ಇವೆ. ಇದನ್ನು ನಿಲ್ಲಿಸಲಿಕ್ಕೆ ತಾವುಗಳು ದಯಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಒತ್ತಾಯ ಮಾಡಿ, ಕೊನೆಯಲ್ಲಿ ಈ ಸರಕಾರದ ಕಾರ್ಮಿಕ ನೀತಿಯನ್ನು ನಾನು ಖಂಡನೆ ಮಾಡಬಯಸುತ್ತೇನೆ. ಇವೊತ್ತು ಬೆಳಿಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಉತ್ತರದಲ್ಲಿ ಕೊಟ್ಟ ಪ್ರಕಾರ ಕಾರ್ಮಿಕ ಸಚಿವರು ಇನ್ನೂ 23 ಘಟಕಗಳಿಗೆ ಮಿನಿಮಮ್ ವೇಜಸನ್ನು ಫಿಕ್ಸ್ ಮಾಡಿಲ್ಲ. ನೋಟಿಫಿಕೇಷನ್ ಆಗಿರತಕ್ಕಂಥವುಗಳನ್ನೂ ಕೂಡ ಕ್ಯಾನ್ಸಲ್ ಮಾಡುತ್ತಾ ಇದ್ದಾರೆ. ಹಾಗಾದರೆ ಯಾರ ಪ್ರೆಷರ್ ಮೇಲೆ ಹೀಗೆ ಮಾಡುತ್ತಾರೆ? ನಮ್ಮ ಗಮನಕ್ಕೆ ಅದು ಬರುವುದಿಲ್ಲ. ಇದು ಕೆಳಮಟ್ಟದಲ್ಲಿ ಆಗುತ್ತಾ ಇದೆ. ಇವೊತ್ತು ಅತ್ತೂ ಕರೆದು ಮಾಡಿದ ಮೇಲೆ ಕಾರ್ಮಿಕ ಸಚಿವರು ಇನ್ನು ಆರು ತಿಂಗಳೊಳಗಡೆ ನಾನು ಇದನ್ನು ಮಾಡುತ್ತೇನೆ ಎಂದು ಹೇಳುತ್ತಾರೆ. ಇನ್ನು ಆರು ತಿಂಗಳಲ್ಲಿ ಇವರು ಇರುತ್ತಾರೋ, ಇಲ್ಲವೋ, ಯಾರು ಬರುತ್ತಾರೋ ಎಂಬುದು ಗೊತ್ತಿಲ್ಲ. ಹಟ್ಟಿ ಚಿನ್ನದ ಗಣಿಯವರು ಈಗಾಗಲೇ ಬಂದು ತಮಗೆ ಒಂದು ಮನವಿಯನ್ನು ಮಾಡಿದ್ದಾರೆ. ಅಲ್ಲಿನ 300 ಜನ ಕಾರ್ಮಿಕರು ಇರುವ ಗಣಿಯನ್ನು ಮುಚ್ಚುತ್ತಾ ಇದ್ದಾರೆ. ಹಾಗಾದರೆ ಅವರು ಆಲ್ಟರ್ನೇಟಿವ್ ಜಾಬ್‌ಗೆ ಏನು ಮಾಡಬೇಕು? ಅವರುಗಳು 50 ವರ್ಷಕ್ಕೆ ಮೇಲ್ಪಟ್ಟವರು ಆಗಿದ್ದರೆ ಮನೆಗೆ ಹೋಗಲಿ ಎಂದು ಹೇಳಬಹುದಾಗಿತ್ತು. 35-45 ವರ್ಷಗಳ ಯುವಕರು 10-15 ವರ್ಷಗಳ ಕಾಲ ಕೆಲಸ ಮಾಡಿದ ಮೇಲೆ ಇನ್ನು ಏನು ಮಾಡಬೇಕು? ಆದ್ದರಿಂದ ಅವರಿಗೆ ಬದಲಿ ಉದ್ಯೋಗವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಇನ್ನೊಂದು ವಿಚಾರ ಅಂದರೆ, ತಾವುಗಳು ಮುಖ್ಯಮಂತ್ರಿಗಳಾದ ಮೇಲೆ ಸಾರಿಗೆ ಬೆಲೆಗಳನ್ನು ಜಾಸ್ತಿ ಮಾಡಿದ್ದೀರಿ. ಎರಡೂ ಸದನಗಳಲ್ಲಿ ತಮ್ಮ ಮೇಲೆ ಎರಡೂ ಕಡೆಯ ಸದಸ್ಯರುಗಳು ಒತ್ತಾಯ ಮಾಡಿದ ಮೇಲೆ ಪ್ರಜಾಪ್ರಭುತ್ವದ ಒಂದು ನೀತಿಗನುಗುಣವಾಗಿ ಒಂದಷ್ಟು ಬೆಲೆಯನ್ನು ಕಡಿಮೆ ಮಾಡಿದ್ದೀರಿ. ಸಾರಿಗೆ ಇಲಾಖೆಯ ಕಾರ್ಯವೈಖರಿಯನ್ನು ನೋಡಿದಾಗ ಹೀಗೆ ಬೆಲೆಗಳನ್ನು ಜಾಸ್ತಿ ಮಾಡುವುದು ಅನಿವಾರ್ಯವಾಗಿತ್ತೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿ ಸಲಹೆಯನ್ನು ಕೊಡಬೇಕೆಂದು ಹೇಳಿ ನನ್ನನ್ನೇ ಅಧ್ಯಕ್ಷನನ್ನಾಗಿ ಮಾಡಿ ಒಂದು ಸಮಿತಿಯನ್ನು ಕೂಡ ನೀವು ಮಾಡಿದ್ದೀರಿ. ಅದು ಕೆಲಸ ಮಾಡುತ್ತಾ ಇದ್ದು ವರದಿಯನ್ನು ನಾವು ನಿಮಗೆ ಕೊಡುತ್ತೇವೆ. ಆದರೆ ಮೂರು ತಿಂಗಳ ಒಳಗಡೆ ಸಾರಿಗೆ ಇಲಾಖೆಯನ್ನು ಉತ್ತಮ ಪಡಿಸುತ್ತೇವೆ ಎಂದು ಹೇಳಿ ಒಂದು ಆಶ್ವಾಸನೆಯನ್ನು ಕೂಡ ನೀವು ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರಿಗೆ ಈ ವಿಚಾರವು ಗಮನಕ್ಕೆ ಬಂದಿದೆ ಎಂದು ಅಂದುಕೊಂಡಿದ್ದೇನೆ. ಗ್ರಾಮೀಣ ಪ್ರದೇಶದಲ್ಲಿ ಜನರು ನಿಮ್ಮ ಸರಕಾರಕ್ಕೆ ಬಹಳ ಶಾಪವನ್ನು ಹಾಕುತ್ತಿದ್ದಾರೆ. ಯಾವ ಸಿ ರೂಟ್‌ಗಳನ್ನು ಎರಡು ವರ್ಷಗಳ ಹಿಂದೆ ಕ್ಯಾನ್ಸಲ್ ಮಾಡಿದ್ದರು, ಅದನ್ನು ಇನ್ನೂ ನಿಮ್ಮಿಂದ ಪ್ರಾರಂಭ ಮಾಡಲು ಆಗಲಿಲ್ಲ. ಇವೊತ್ತೂ ಕೂಡ 25 ರಿಂದ ಪರ್ಸೆಂಟ್ ಕ್ಯಾನ್ಸಲ್ ಆಗುತ್ತಾ ಇದೆ. ಇದಕ್ಕೆ ಕಾರಣವೇನು? ತಮ್ಮ ಸರಕಾರದ ನೀತಿ ಹೇಗೆ? ಇವೊತ್ತು ಕೆಎಸ್‌ಆರ್‌ಟಿಸಿ ಬೋರ್ಡ್ ಇದೆ. ಬೋರ್ಡ್ ಎನ್ನುವುದೇ ಸುಪ್ರೀಂ ಆಗಿರುತ್ತದೆ. ಆದರೆ ಪ್ರಿನ್ಸಿಪಲ್ ಮ್ಯಾಟರ್ಸ್ ಬಂದಾಗ ಸರಕಾರದವರು ಅದಕ್ಕೆ ಡೈರೆಕ್ಷನ್ಸ್ ಕೊಡಬೇಕು. ಅವರ ವೇಜ್, ಸೆಟಲ್‌ಮೆಂಟ್ ಬಗ್ಗೆ ೪೦ ಕೋಟಿ ರೂಪಾಯಿಗಳನ್ನು ವೇಜಸ್ ಬಗ್ಗೆ ಹೆಚ್ಚು ಮಾಡಬೇಕೆಂದು ಹೇಳಿ, ಅಗ್ರಿಮೆಂಟ್ ನಾಲ್ಕು ವರ್ಷಗಳ ಹಿಂದೆ ರಾಜ್ಯಪಾಲರ ಆಡಳಿತವಿದ್ದಾಗ ಆಗಿತ್ತು. ಆದಾಗಿ ಒಂದು ವರ್ಷ ಆಗಿದೆ, ಒಂದು ವರ್ಷದಿಂದ

ಸರಕಾರದ ಮೇಲೆ ಅವರು ಒತ್ತಾಯ ಮಾಡುತ್ತಾ ಇದ್ದಾರೆ. ರಿವೈಸ್ ಮಾಡಬೇಕೆಂದು ಅವರ ಒತ್ತಾಯವಾಗಿದೆ. ಹೀಗೆ ಬೋರ್ಡ್‌ನವರು ಈ ಕುರಿತು ಒಂದು ಚಿತ್ರವನ್ನು ನಿಮಗೆ ಕೊಡುತ್ತೇವೆ ಎಂದು ಹೇಳಿ ಅವರ ಒಪ್ಪಿಗೆಯನ್ನು ಪಡೆದಿದ್ದಾರೆ. ಬೋರ್ಡ್‌ನಲ್ಲಿ ಅದಕ್ಕೆ ಒಪ್ಪಿಗೆ ಸಿಕ್ಕಿದೆ. ಬೋರ್ಡ್ ಅಂದರೆ ಯಾರು? ಇದರಲ್ಲಿ ಕೇಂದ್ರ ಸರಕಾರದ ಮೂರು ಜನರು ಪ್ರತಿನಿಧಿಗಳು ಇರುತ್ತಾರೆ, ಜೊತೆಗೆ ರಾಜ್ಯ ಸರಕಾರದ ಗೃಹ ಮತ್ತು ಸಾರಿಗೆ ಇಲಾಖೆಯ ಕಾರ್ಯದರ್ಶಿಗಳು ಇರುತ್ತಾರೆ.

ಹಣಕಾಸಿನ ಕಾರ್ಯದರ್ಶಿಗಳಿರುತ್ತಾರೆ. ನಿಮ್ಮ ರಾಜ್ಯಸರ್ಕಾರದ ಕಡೆಯಿಂದ ಹೋಗಿರುವ ಸಿಎಂಡಿ ಇರುತ್ತಾರೆ. ಇದಲ್ಲದೆ ನಾನ್ ಅಫೀಷಿಯಲ್ಸ್ ಡೆರೆಕ್ಟರ್ಸ್‌ನ್ನು ನೇಮಕ ಮಾಡುವ ಹಕ್ಕು ನಮಗಿದೆ. ಈ ಬೋರ್ಡ್ ಸರ್ಕಾರದ ಕ್ರಿಯೇಷನ್ ತಾನೇ? ಬೋರ್ಡ್‌ನವರು ಏತಕ್ಕೆ ಅದಕ್ಕೆ ಒಪ್ಪಿಗೆ ಕೊಟ್ಟರು? ಬೋರ್ಡ್ ಒಪ್ಪಿಗೆ ಕೊಟ್ಟಮೇಲೆ ಮಂತ್ರಿಗಳು ಏಕೆ ಇದಕ್ಕೆ ಒಪ್ಪಿಕೊಳ್ಳುತ್ತಿಲ್ಲ? ಸಾರಿಗೆ ಇಲಾಖೆಯ 30 ವರ್ಷಗಳ ಇತಿಹಾಸದಲ್ಲಿ ಕೇಂದ್ರ ಕಚೇರಿಗೆ ನುಗ್ಗಿ ಅಲ್ಲಿರುವ ಅಧಿಕಾರಿಗಳ ಮೇಲೆ ಕಾರ್ಮಿಕರು ಹಲ್ಲೆ ಮಾಡುವ ಪ್ರಸಂಗ ಬಂದಿದೆ. ಅದು ತೀರ ಖಂಡನೀಯವಾದುದು. They have taken law into their own hands ಇದರರ್ಥ ಏನು, ಕಾರಣ ಏನು ಎಂದರೆ ಸರ್ಕಾರಕ್ಕೆ ಅವರ ಮೇಲೆ ನಿಯಂತ್ರಣ ಇಲ್ಲ, ನನ್ನ ಅನುಭವದಿಂದ ನಾನು ಹೇಳುತ್ತಿದ್ದೇನೆ. ನನಗೆ ಅತ್ಯಂತ ಪ್ರಾಮಾಣಿಕವಾಗಿ ಸಾರಿಗೆ ಇಲಾಖೆ ಬಗ್ಗೆ ಕಳಕಳಿ ಇದೆ. ಒಂದು ಸಾರ್ವಜನಿಕ ವಲಯದಲ್ಲಿ ಕೆಲಸ ಮಾಡುವ ಸಂಸ್ಥೆ ಉದ್ಧಾರವಾಗಬೇಕೆಂಬುದು ನನ್ನ ಆಸೆ. ಈ ಸದನಕ್ಕೆ ಹಿಂದೆ ಆಶ್ವಾಸನೆ ಕೊಟ್ಟಿದ್ದಿರಲ್ಲಾ, 3 ತಿಂಗಳಲ್ಲಿ ಇದನ್ನು ಸರಿ ಮಾಡುತ್ತೇವೆ ಎಂದು, ಅದು ಸುಳ್ಳಾಗಿದೆ, ಪೊಳ್ಳು ಭರವಸೆಯಾಗಿದೆ. ಅದಕ್ಕೆ ಬದಲಾಗಿ ಟ್ರಾನ್ಸ್‌ಪೋರ್ಟ್ ಸಿಸ್ಟಂ ಹಾಳಾಗಿ ಹೋಗಿ ಕಾರ್ಮಿಕರ ಮೇಲೆ ಕೇಸ್ ಹಾಕುವಂತಹ ಹೆರ್‍ರ್ಯಾಸ್ ಮಾಡುವಂತಹ ಅವರಿಗೇ ತೊಂದರೆ ಕೊಡುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಅವರು ಮತ್ತೆ 9ನೇ ತಾರೀಖು ಸ್ಟ್ರೈಕ್ ಮಾಡುತ್ತೇವೆ ಎಂದು ನೋಟೀಸ್ ಕೊಟ್ಟಿದ್ದಾರೆ. ಅಂದರೆ ನಿಮ್ಮ ಲೇಬರ್ ಪಾಲಿಸಿ ಬಗ್ಗೆ ಯಾವ ಮಟ್ಟದಲ್ಲಿ ನೀವು ಕೆಲಸ ಮಾಡ್ತಿದ್ದೀರಿ ಎಂಬ ಬಗ್ಗೆ ನೀವು ಯೋಚನೆ ಮಾಡಬೇಕು. ಅಧ್ಯಕ್ಷರೇ, ಮೆಡಿಕಲ್ ಮತ್ತು ಇಂಜಿನಿಯರಿಂಗ್ ಪ್ರವೇಶದ ಬಗ್ಗೆ ನಮ್ಮನ್ನೆಲ್ಲಾ ಕರೆದು ಮಾತನಾಡುತ್ತೇವೆ ಎಂಬ ಸೌಜನ್ಯ ತಾವು ತೋರಿಸಿರುವುದರಿಂದ ನಿಮ್ಮ ಸರ್ಕಾರ ಯಾವ ರೀತಿ ಅನವಶ್ಯಕವಾಗಿ ಗೊಂದಲ ನಿರ್ಮಾಣ ಮಾಡಿದೆ ಎಂದು ನಾನು ಹೇಳುತ್ತೇನೆ. ಉಳಿದ ವಿಚಾರಗಳು ಬಹಳಷ್ಟಿತ್ತು. ನಮ್ಮ ರೈತರ ವಿರೋಧಿ ಕೃತ್ಯಗಳು ನಿಮ್ಮವು ಏನಿವೆ ಅಂದರೆ, ಗ್ರಾಮೀಣ ಪ್ರದೇಶದ ಆಡಳಿತ ಸಂಪೂರ್ಣವಾಗಿ ಇವತ್ತು ಕುಸಿದು ಬಿದ್ದಿದೆ. ನಿಮ್ಮ ಮೇಲೆ ಅವಿಶ್ವಾಸ ನಿರ್ಣಯ ತಂದು ನೇರವಾಗಿ ನೀವು ಭ್ರಷ್ಟರು ಎಂಬ ಆಪಾದನೆ ಮಾಡುವುದಕ್ಕೆ ನಾವ್ಯಾರೂ ಹೋಗಿಲ್ಲ, ಆದರೆ ಆಡಳಿತಾನೇ ಇಲ್ಲ, ಇವತ್ತು ಶಾಸಕರಿಗೆ ಅವರು ಹೇಳಿದ ಮೂರು ಕಾಸಿನ ಕೆಲಸ ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಆಗುತ್ತಿಲ್ಲ. ಇದಕ್ಕೆ ಕಾರಣವೇನು ಎಂಬ ಬಗ್ಗೆ ತಾವು ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಒಳ್ಳೆಯದು. ಆದ್ದರಿಂದ ಈ ಸರ್ಕಾರದ ಗ್ರಾಮೀಣ ಜನತೆಯ ವಿರೋಧಿ ಕ್ರಮಗಳನ್ನು ನಾನು ಖಂಡನೆ ಮಾಡಿ ನಮ್ಮ ವಿರೋಧಪಕ್ಷದ ಎಲ್ಲಾ ಮಿತ್ರರೂ ಏನು ಅವಿಶ್ವಾಸ ನಿರ್ಣಯ ಮಂಡಿಸಿದ್ದೇವೆ. ಅದಕ್ಕೆ ಬೆಂಬಲ ಸೂಚನೆ ಮಾಡಿ ತಾವು ನನಗೆ ಮಾತಾಡಲಿಕ್ಕೆ ಸಾಕಷ್ಟು ಸಮಯ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಸಿ. ಬೈರೇಗೌಡ : ಅಬ್ಸೆಂಟ್ ಶ್ರೀ ಬಿ.ಎಚ್. ಬನ್ನಿಕೋಡ್

(ಗೊಂದಲ)

ಅಧ್ಯಕ್ಷರು : ಒಂದೈದು ನಿಮಿಷ ಕುಳಿತುಕೊಳ್ಳಿ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ : ಅಧ್ಯಕ್ಷರೇ ನನ್ನದೊಂದು ಮನವಿ ಇದೆ. ಈ ಸದನದಲ್ಲಿ 224 ಜನರಿದ್ದೇವೆ. ತಾವು ಅವರಿಗೆ ಗಂಟೆಗಟ್ಟಲೆ ಭಾಷಣ ಮಾಡುವುದಕ್ಕೆ ಅವಕಾಶ ಕೊಡುತ್ತೀರಿ. ನಾವು ಕೇವಲ ಪ್ರೇಕ್ಷಕರಾಗಿ ನೋಡಿಕೊಂಡು ಕುಳಿತಿರಬೇಕೇ? ನಮಗೂ ಸಮಯ ಬೇಡವೇ? ಹಿಂದಿನಿಂದ ಬಂದ ಸಂಪ್ರದಾಯದಂತೆ ವಿರೋಧಪಕ್ಷದವರಿಗೆ ಒಬ್ಬರಿಗೆ ಕೊಟ್ಟರೆ ಆಡಳಿತಪಕ್ಷದವರಿಗೆ ಇಬ್ಬರಿಗೆ ಕೊಡಬೇಕು. ತಾವು ಅದನ್ನು ಮಾಡುವುದಿಲ್ಲ. ಅವರಿಗೇ ಎಲ್ಲಾ ಅವಕಾಶ ಕೊಡ್ತೀರಿ ನಮಗೆ ಇಲ್ಲ.

ಅಧ್ಯಕ್ಷರು : ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಕಳುಹಿಸಿದ್ದಾರೆ.

+ ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಅಧ್ಯಕ್ಷರೇ, ನಮ್ಮ ವಿರೋಧಪಕ್ಷದ ನಾಯಕರಾದ ಆರ್.ವಿ. ದೇಶಪಾಂಡೆಯವರು ವೀರಪ್ಪ ಮೊಯಿಲಿಯವರ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ತಂದಿರುವುದನ್ನು ಬೆಂಬಲಿಸುತ್ತಾ ಅನೇಕ ವಿಚಾರಗಳನ್ನು ಹೇಳುತ್ತೇನೆ. ಈ ಸರ್ಕಾರದಲ್ಲಿರುವ ಅದಕ್ಷತೆ ಅಪ್ರಾಮಾಣಿಕತೆ ಜನತೆಯನ್ನು ಮಾತುಗಳಿಂದ ಮೋಡಿ ಹಾಕಿ ಕೇವಲ ಸಭೆ ಚರ್ಚೆಗಳ ಮೂಲಕ ಮಾತಿನ ಚಾಣಾಕ್ಷತನದಿಂದ ಮಾತ್ರ ಆಡಳಿತ ನಡೆಸಲಿಕ್ಕೆ ಸಾಧ್ಯವಿಲ್ಲ ಎಂಬುದು ಇವತ್ತು ಸಿದ್ಧವಾಗಿದೆ. ಕೇವಲ ಮಾತಿನ ಚಾಕಚಕ್ಯತೆಯಿಂದ ಇದು ನಡೆಯುವುದಿಲ್ಲ. ಜನತೆಯ ಸಂಕಷ್ಟಗಳಿಗೆ ಸ್ಪಂದಿಸಬೇಕಾಗುತ್ತದೆ. ಇದರಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಒಂದೇ ಒಂದು ಉದಾಹರಣೆ ಕೊಡುತ್ತೇನೆ : ಕಂದಾಯ ಸಚಿವರು ಇಲ್ಲಿದ್ದರು. 1992ರ ನವೆಂಬರ್ ತಿಂಗಳಲ್ಲಿ ಎಂದು 350 ಕೋಟಿ ರೂ.ಗಳ ಹಾನಿಯಾಗಿದೆ. ಸರ್ಕಾರ ಈವರೆವಿಗೂ ಕೊಟ್ಟ ಪರಿಹಾರ ಎಷ್ಟು? ಜನರಿಗೆ, ಸರ್ಕಾರಿ ಆಸ್ತಿಗಳಿಗೆ, ನೀರಾವರಿ ಕೆರೆಕಟ್ಟೆಗಳಿಗೆ ಅಥವಾ ರಸ್ತೆಗಳಿಗೆ ಕೊಟ್ಟ ಪರಿಹಾರ ಎಷ್ಟು? ರೈತರು ಕಳೆದುಕೊಂಡ ಬೆಳೆಗೆ ಪರಿಹಾರ ಎಷ್ಟು? ಮೊದಲು ಇದನ್ನು ನೋಡೋಣ. ಈ ಸರ್ಕಾರದವರು ಹೇಳುತ್ತಾ ಇರುತ್ತಾರೆ, ಕಾವೇರಿ, ಕೃಷ್ಣಗಳ ಒಂದು ಹನಿ ನೀರು ಬಿಡದಂತೆ ನಾವು ಕೆಲಸ ಮಾಡುತ್ತೇವೆ, ನೀರಾವರಿಗೆ ಮೊದಲ ಆದ್ಯತೆ, ನಮ್ಮ ಪ್ರಾಣವನ್ನಾದರೂ ಪಣಕ್ಕಿಟ್ಟು ನೀರಾವರಿಗೆ ರೈತರಿಗೆ ಸಹಾಯ ಮಾಡುತ್ತೇವೆ ಎಂದು ಹೇಳುವ ಸರ್ಕಾರದವರು ರಿಪೇರಿ ಕೆಲಸವನ್ನಾದರೂ ಮಾಡಿದ್ದಾರಾ ಅಂದರೆ ಅದೂ ಸಹ ಇಲ್ಲ ಅತಿವೃಷ್ಟಿಯಿಂದ ನನ್ನ ತಾಲ್ಲೂಕಿನಲ್ಲಿ 92ನೇ ಇಸವಿ ನವೆಂಬರ್‌ನಲ್ಲಿ ಜಿಲ್ಲಾಪರಿಷತ್ತಿಗೆ ಸೇರಿದ 55 ಕೆರೆಗಳು ಚಿಕ್ಕ ನೀರಾವರಿ ಇಲಾಖೆಗೆ ಸೇರಿದ 17 ಕೆರೆಗಳು ಒಡೆದು ಸುಮಾರು 40.90 ಲಕ್ಷ ರೂ. ಹಾನಿಯಾಗಿದೆ. ನವೆಂಬರ್ ತಿಂಗಳಲ್ಲೇ ಇದನ್ನು ಪ್ರಸ್ತಾಪ ಮಾಡಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಂದ ಸರ್ಕಾರ ಮಾಹಿತಿ ತರಿಸಿದೆ. ಆ ಮಾಹಿತಿ ಆಧಾರದ ಮೇಲೆ ಹೇಳುತ್ತಿದ್ದೇನೆ. 40.90 ಲಕ್ಷ ರೂ. ಹಾನಿಯಾಗಿದೆ. ನೀರಾವರಿ ಕೆರೆಗಳಿಗೆ 72 ಕೆರೆಗಳು ಒಡೆದುಹೋಗಿವೆ ಎಂದು ಅಧಿಕಾರಿಗಳು ವರದಿ ಕೊಟ್ಟರೂ ಸಹ ನಾನು ಸದನದಲ್ಲಿ ಪ್ರಸ್ತಾಪ ಮಾಡಿದರೂ ಸಹ ರೈತರು ಸತ್ಯಾಗ್ರಹ ಧರಣಿ ಮಾಡಿದರೂ ಸಹ ಸರ್ಕಾರಕ್ಕೆ ಅನೇಕ ಸಲ ಪತ್ರ ಬರೆದರೂ ಸಹ ಸಣ್ಣ ನೀರಾವರಿ ಇಲಾಖೆ ಸಚಿವರನ್ನು, ಮುಖ್ಯಮಂತ್ರಿಗಳನ್ನು ಹಾಗೂ ಇಲಾಖೆ ಅಧಿಕಾರಿಗಳನ್ನು ಭೇಟಿಯಾಗಿ ಇರುವ ಈ ತೊಂದರೆಯನ್ನು ಹೇಳಿದ್ದರೂ ಸಹ ಏನೂ ಪ್ರಯೋಜನವಾಗಿಲ್ಲ. ರೈತರು ಪ್ರೀತಿಯಿಂದ ಭತ್ತದ ಬೆಳೆ ಹಾಕಿದ್ದಾರೆ, ಕೆರೆಗಳು ಒಡೆದುಹೋಗಿವೆ, ಸುಮಾರು ಸಾವಿರಾರು ಎಕರೆಗಳ ಭತ್ತದ ಬೆಳೆ ಹಾಳಾಗುತ್ತಿದೆ, ಏನಾದರೂ ಮಾಡಿ ರಿಪೇರಿ ಮಾಡಿ ಎಂದರೂ ಸಹ ಇವತ್ತಿನವರೆಗೂ ಪರಿಹಾರನಿಧಿಯಲ್ಲೂ ಒಂದು ಪೈಸೆ ಕೂಡ ಕೊಡಲಿಲ್ಲ. ನೀರಾವರಿ ಇಲಾಖೆಯ ಸಚಿವರನ್ನು ಕೇಳಿದರೆ ನಮ್ಮ ಹತ್ತಿರ ಹಣ

ಇಲ್ಲ ಎಂದು ಹೇಳಿದರು. ಕೊನೆಯದಾಗಿ, ಹೋದ ವಾರ ಮುಖ್ಯಮಂತ್ರಿಗಳಿಗೆ ಹಾಗೂ ಕಂದಾಯ ಮಂತ್ರಿಗಳಿಗೆ ಕಡೆಯ ಪತ್ರ ಬರೆದಿದ್ದೇನೆ.

ಈ ಸರ್ಕಾರಕ್ಕೆ ಮೌಖಿಕವಾಗಿ, ಲಿಖಿತವಾಗಿ ಪತ್ರಗಳನ್ನು ಕೊಟ್ಟು, ಚರ್ಚಿಸಿ ಅನೇಕ ಸಲ ಹೇಳಿದರೂ ಸಹ ಮಹಾಪೂರದಿಂದ 72 ಕೆರೆಗಳು ಒಡೆದು ಹೋದುದಕ್ಕೆ ಒಂದೂ ಕಾಸನ್ನು ಬಿಡುಗಡೆ ಮಾಡದೆ, ಇವೊತ್ತು ರೈತರು ಬೆಳೆದಂಥ ಬೆಳೆಗೆ ಅಪಾರ ಹಾನಿಯಾಗಿದೆ. ಇದರಿಂದ ರೈತರಿಗೆ ತುಂಬಾ ನೋವುಂಟಾಗಿದೆ, ಸರ್ಕಾರ ಹಣ ಬಿಡುಗಡೆ ಮಾಡದಿರುವುದರಿಂದ ಅವರಿಗೆ ಅನ್ಯಾಯವಾಗುತ್ತಿದೆ. ಹಣವನ್ನು ಕಂದಾಯ ಇಲಾಖೆಯಿಂದಾಗಲಿ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದಾಗಲಿ ಅಥವಾ ನೀರಾವರಿ ಇಲಾಖೆಯಿಂದಾಗಲಿ ಬಿಡುಗಡೆ ಮಾಡಿ ಒಡೆದು ಹಾಳಾದಂಥ ಕೆರೆಗಳನ್ನು ದುರಸ್ತಿ ಮಾಡಿಸಬೇಕು. ಈಗ ಮಳೆಗಾಲ ಪ್ರಾರಂಭವಾಗಿದೆ. ರೈತರು ಬೆಳೆದಿರುವ ಭತ್ತದ ಬೆಳೆಗೆ ಹಾನಿಯುಂಟಾಗಿರುವುದರಿಂದ ಇವೊತ್ತಿನವರೆವಿಗೂ ಸರ್ಕಾರ ಅತ್ತ ಕಡೆ ಲಕ್ಷ್ಯ ವಹಿಸಿಲ್ಲ. ನಾನು ಈ ಕುರಿತು ಸರ್ಕಾರಕ್ಕೆ ಕೊನೆಯದಾಗಿ ಪತ್ರ ಕೊಟ್ಟು ವಿಧಾನ ಸಭೆಯಲ್ಲಿ ಪ್ರಸ್ತಾಪಿಸಿದರೂ ಸಹ ಮುಖ್ಯಮಂತ್ರಿಗಳಾಗಲಿ, ಕಂದಾಯ ಮಂತ್ರಿಗಳಾಗಲಿ, ನೀರಾವರಿ ಮಂತ್ರಿಗಳಾಗಲಿ, ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಾಗಲಿ ಒಂದೂ ಪೈಸೆಯನ್ನು ಪರಿಹಾರವಾಗಿ ಕೊಟ್ಟಿಲ್ಲ. ರೈತರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ನಾನು ಎಷ್ಟೇ ಒತ್ತಾಯಪೂರ್ವಕವಾಗಿ ನಿಮ್ಮ ಸರ್ಕಾರದ ಗಮನ ಸೆಳೆಯುವಲ್ಲಿ ವಿಫಲನಾಗಿದ್ದೇನೆ. ಆದುದರಿಂದ, ಇನ್ನು ಮುಂದೆ ಮಾನ್ಯ ಮುಖ್ಯಮಂತ್ರಿಗಳಿಗಾಗಲಿ, ಕಂದಾಯ ಮಂತ್ರಿಗಳಿಗಾಗಲಿ ಪತ್ರ ಬರೆಯುವುದಿಲ್ಲ. ಈ ದಿಸೆಯಲ್ಲಿ ಸರ್ಕಾರದ ಗಮನ ಸೆಳೆಯಲು ಅವಶ್ಯಕವಾಗಿರುವಂಥ ಕಾರ್ಯಕ್ರಮವನ್ನು ನಾನು ಹಾಕಿಕೊಳ್ಳಬೇಕಾಗುತ್ತದೆ. ಎಂದು ಕೊನೆಯ ಪತ್ರ ಬರೆದಿದ್ದೇನೆ. ಇಷ್ಟಾದರೂ ಸಹ ಇವೊತ್ತಿನವರೆಗೆ ಸರ್ಕಾರ ಒಂದೂ ಪೈಸೆಯನ್ನೂ ಕೊಟ್ಟಿಲ್ಲ. ಮಹಾಪೂರದಿಂದ 72 ಕೆರೆಗಳು ಒಡೆದಿರಬೇಕಾದರೆ ತಾಲ್ಲೂಕಿನಾದ್ಯಂತ ರೈತರ ಪರಿಸ್ಥಿತಿ ಏನಾಗಿರಬೇಕು? ಅಲ್ಲಿಯ ಜನರ ಪ್ರತಿನಿಧಿಯಾದ ನಾನು ಅವರನ್ನು ಯಾವ ರೀತಿಯಲ್ಲಿ ಸಂತೈಸಬೇಕು? ಇವೊತ್ತು ಅಲ್ಲಿಯ ಜನರು ಹೇಳುತ್ತಿದ್ದಾರೆ, ನಾವು ಆಯ್ಕೆ ಮಾಡಿ ಕಳುಹಿಸಿದಂಥ ಪ್ರತಿನಿಧಿ ಸರ್ಕಾರದ ಗಮನ ಸೆಳೆಯಲು ವಿಫಲನಾಗಿದ್ದಾನೆಂದು. ಅಲ್ಲಿ ಕೆರೆಗಳು ಒಡೆದಿರುವುದನ್ನು ದುರಸ್ತಿ ಮಾಡದೆ ಹೋದರೆ, ಆಗಿರುವ ನಷ್ಟಕ್ಕೆ ಪರಿಹಾರ ಕೊಡದೆ ಹೋದರೆ ಹೇಗೆ? ಇವೊತ್ತು ಹಾನಿಯಿಂದಾದ ಅಂದಾಜು 40 ಲಕ್ಷ ರೂಪಾಯಿಗಳಾದರೆ ನಾಳೆ 40 ಕೋಟಿ ರೂಪಾಯಿಗಳಾಗಬಹುದು. ಅಲ್ಪಸ್ವಲ್ಪ ಒಡೆದುಹೋಗಿರುವ ಕೆರೆಗಳನ್ನು ದುರಸ್ತಿಪಡಿಸದಿದ್ದಲ್ಲಿ ಸಂಪೂರ್ಣ ವಾಷ್‌ಔಟ್ ಆಗುತ್ತದೆ, ಕೋಡಿಗಳು ನಾಶವಾಗುತ್ತವೆ, ಪರಿಣಾಮವಾಗಿ ರೈತರ ಜಮೀನುಗಳು ಹಾಳಾಗುತ್ತವೆ. ಇಷ್ಟೊಂದು ಅನ್ಯಾಯವಾಗುತ್ತಿದೆಯೆಂದು ಹೇಳಿದರೂ ಸಹ ಆ ಕಡೆ ಸರ್ಕಾರ ಗಮನ ಹರಿಸಿಲ್ಲ. ಸರ್ಕಾರಕ್ಕೇನಾದರೂ ಕಣ್ಣು, ಕಿವಿ ಇದೆಯೇ? ಅಲ್ಲಿ ಸಂಭವಿಸಿರುವ ಹಾನಿ ಗೊತ್ತಾಗಿದೆಯೇ? ಇನ್ನು ಯಾವ ಭಾಷಣದ ವೈಖರಿಯಿಂದ ಈ ಸರ್ಕಾರವನ್ನು ವರ್ಣಿಸಬೇಕೋ ಗೊತ್ತಾಗುತ್ತಿಲ್ಲ. ಸರ್ಕಾರದ ಗಮನ ಸೆಳೆಯಲು ಅಲ್ಲಿನ ಜನತೆ ಇವೊತ್ತು ಅನಿವಾರ್ಯವಾಗಿ ಸತ್ಯಾಗ್ರಹ ಮಾಡುತ್ತಾರೆಂದು ಹೇಳಿದಾಗ, ಏನು ಸತ್ಯಾಗ್ರಹ ಮಾಡುತ್ತಾರೆಯೇ? ಅದಕ್ಕೇನು ಮಾಡಬೇಕು ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ.

ಇದಕ್ಕೆ ಅಧ್ಯಕ್ಷರಾದ ತಾವೇ ಪರಿಹಾರ ಒದಗಿಸಿಕೊಡಬೇಕು. ಒಡೆದುಹೋದ ಕೆರೆಗಳನ್ನು ಸರ್ಕಾರ ದುರಸ್ತಿ ಮಾಡುವುದಕ್ಕೆ ಯೋಚನೆ ಮಾಡದೆ ಹೋದರೆ, ಯಾವುದೇ ಯೋಜನೆಯನ್ನು ಕೈಗೊಳ್ಳದೆ ಹೋದರೆ, ರೈತರ ನೆರವಿಗೆ ಬಾರದೆ ಹೋದರೆ ನಿಮಗೆ ರೈತರ ಬಗ್ಗೆ ಎಳ್ಳಷ್ಟೂ ಕಳಕಳಿ ಇಲ್ಲವೆಂದು ಹೇಳಬೇಕಾಗುತ್ತದೆ. ಇವೊತ್ತು ಕಾವೇರಿಯ ಕಣ್ಣೀರಿನ ಕಥೆ ಬಗ್ಗೆ ಮಾತನಾಡುತ್ತಿದ್ದೀರಿ, ಕೃಷ್ಣಾ ನದಿ

ನೀರಿನ ಬಗ್ಗೆಯಾಗಲಿ ಎಳ್ಳಷ್ಟೂ ಕಳಕಳಿ ಇಲ್ಲ ಇವೊತ್ತು ನಾನು ತಮ್ಮ ಪಕ್ಷದ ಮೂರನೇ ಸರ್ಕಾರವನ್ನು ಕೇಳುತ್ತಿದ್ದೇನೆ, ಇದಕ್ಕೆ ಈಗಲಾದರೂ ಪರಿಹಾರವಿದೆಯೇ ಎಂದು ಇವೊತ್ತು ರಾಜ್ಯಾದ್ಯಂತ ಸಾವಿರಾರು ಕೆರೆಗಳು ಒಡೆದುಹೋಗಿ, ಕೋಟ್ಯಾಂತರ ರೂಪಾಯಿಗಳ ಹಾನಿಯಾಗಿದ್ದರೂ ಎಲ್ಲಿಯೂ ಪರಿಹಾರದ ಕೆಲಸವನ್ನು ಸರ್ಕಾರ ಪ್ರಾರಂಭಿಸಿಲ್ಲ. ಒಡೆದುಹೋದ ಕೆರೆಗಳನ್ನು ಪುನಃ ಕಟ್ಟುವುದಕ್ಕಾಗಲಿ, ಕಾಲುವೆಯನ್ನು ನಿರ್ಮಿಸುವುದಕ್ಕಾಗಲಿ ಇವರಿಗೆ ಸಾಧ್ಯವಿಲ್ಲ. ಒಂದು ವೇಳೆ ಒಡೆದುಹೋದ ಕೆರೆ, ಕಾಲುವೆ, ತೂಬು, ಕೋಡಿಗಳನ್ನು ಕಟ್ಟಿಸಿದರೂ ಸಹ ಅದನ್ನು ಕಾಯ್ದುಕೊಳ್ಳುವಂಥ ಶಕ್ತಿ ಈ ಸರ್ಕಾರಕ್ಕಿಲ್ಲವೆಂದು ನಾನು ದುಃಖದಿಂದ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುವುದೇನೆಂದರೆ, ರಾಷ್ಟ್ರೀಯ ಜಲ ನಿರ್ವಹಣಾ (ನ್ಯಾಷನಲ್ ವಾಟರ್ ಮ್ಯಾನೇಜ್‌ಮೆಂಟ್) ಯೋಜನೆಯಲ್ಲಿ ನನ್ನ ತಾಲ್ಲೂಕಿಗೆ ಸೇರಿದ ಕೊಳವೆ ಮಸ್ಕೂರು ಎಂಬ ಕೆರೆಯ ದುರಸ್ತಿಗಾಗಿ ಮನವಿ ಮಾಡಿಕೊಂಡ ಎರಡು ವರ್ಷಗಳಾದ ನಂತರ ಕೇಂದ್ರ ಸರ್ಕಾರದವರು ಸುಮಾರು ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದರು. ರಾಜ್ಯ ಸರ್ಕಾರ ಇದಕ್ಕೆ ಹಣವನ್ನು ಖರ್ಚು ಮಾಡಿ ಕೆಲಸ ಮಾಡಿದರೆ ರಾಜ್ಯ ಸರ್ಕಾರ ಖರ್ಚು ಮಾಡಿದ ಹಣವನ್ನು ಕೇಂದ್ರ ಸರ್ಕಾರ ರೀ-ಇಂಬರ್ಸ್‌ಮೆಂಟ್ ಮಾಡುತ್ತದೆ. ಈ ವರ್ಷದ ಬಜೆಟ್‌ನಲ್ಲಿ ಪುನಃ ಇದಕ್ಕೆಂದೇ 50 ಲಕ್ಷ ರೂಪಾಯಿಗಳನ್ನಿಟ್ಟಿದ್ದರೂ ಇಲ್ಲಿಯವರೆಗೆ ಒಂದೂ ಪೈಸೆಯಷ್ಟು ಹಣ ಬಿಡುಗಡೆ ಮಾಡಿಲ್ಲ.

7.10 ಪಿ.ಎಂ

ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಹಣ ಏನೂ ಖರ್ಚಾಗುವುದಿಲ್ಲ. ಇಂತಹ ಯೋಜನೆಗಳನ್ನೂ ಸಹಿತ ಸರ್ಕಾರ ಉಪಯೋಗಿಸಿಕೊಳ್ಳುವುದಕ್ಕೆ ಸಂಪೂರ್ಣ ವಿಫಲವಾಗಿದೆ. ಇವರ ಆಡಳಿತ, ಇವರ ಒಂದು ಕಾರ್ಯ ವೈಖರಿ ನೋಡಿದರೆ ಯಾವ ಅಭಿವೃದ್ಧಿಯ ಕಡೆಗೂ, ಯಾವ ಒಂದು ರೈತರ ಅಥವಾ ಹಳ್ಳಿಗಳ ಅಭಿವೃದ್ಧಿ ಕಡೆಗೂ ಇವರ ಗಮನ ಇಲ್ಲ ಎನ್ನುವುದು ಸ್ಪಷ್ಟವಾಗಿದೆ. ಇವರು ಕೇವಲ ಕುರ್ಚಿಗಾಗಿ ರಾಜಕೀಯ ರಣರಂಗದಾಟ ಆಡುವುದನ್ನು ಬಿಟ್ಟರೆ ಬೇರೆ ಯಾವುದೇ ಕೆಲಸ ಆಗಿಲ್ಲ ಎಂದು ತಮ್ಮ ಮೂಲಕ ಹೇಳಬೇಕಾಗುತ್ತದೆ.

ಇನ್ನು ಮಾನ್ಯ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ಕಾಲದಲ್ಲಿ ಈ ಸದನದಲ್ಲಿ ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಹೇಳಿದೆ. ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ಹೊನ್ನಾಳಿ, ಧಾರವಾಡ ಜಿಲ್ಲೆಯ ಹಿರೇಕೆರೂರು, ರಾಣೆಬೆನ್ನೂರು, ಹಾವೇರಿ ಮತ್ತು ಹಾನಗಲ್ ತಾಲ್ಲೂಕುಗಳ 2 ಲಕ್ಷ 34 ಸಾವಿರ ಎಕರೆಗೆ ಬರ ಬರುತ್ತಿದೆ, ಮಳೆ ಆಗುತ್ತಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಪ್ರೊಟೆಕ್ಟೆಡ್ ಇರಿಗೇಷನ್ ಮಾಡಿ ಎರಡು ಲಕ್ಷ 34 ಸಾವಿರ ಎಕರೆಯಲ್ಲಿಯ ರೈತರ ಜಮೀನುಗಳ ಬೆಳೆಗಳನ್ನು ರಕ್ಷಿಸತಕ್ಕ ಅತ್ಯಂತ ಸುಲಭವಾದಂತಹ ಯೋಜನೆ ಇದೆಂದು ತಜ್ಞರು ಬರೆದಿದ್ದಾರೆ. This upper Tunga irrigation project is the most economically cheap and it is a pro-irrigation and a more cheap irrigation work in India.

ಭಾರತದಲ್ಲಿ ಅತ್ಯಲ್ಪ ಖರ್ಚಿನಿಂದ ಅತಿ ಹೆಚ್ಚಿನ ನೀರಾವರಿ ಮಾಡಬಲ್ಲ ಯೋಜನೆ ಎಂದು ಹೇಳಿದ್ದಾರೆ. ಹೀಗಿದ್ದರೂ ಸಹಿತ ಮುಖ್ಯಮಂತ್ರಿಗಳಿಗೆ ಹೇಳಿದೆ. ಇದು ನೂರಾರು ವರ್ಷಗಳ ಹೋರಾಟ. 1906ನೇ ಇಸವಿಯಲ್ಲಿ ಬ್ರಿಟಿಷ್‌ರ ಕಾಲದ ಇಂಜಿನಿಯರ್ ವಾಯಿಟ್ ಎನ್ನುವವರು ತಯಾರು ಮಾಡಿದ ಈ ಯೋಜನೆ ಇಂದಿನವರೆಗೆ ಕಾರ್ಯರೂಪಕ್ಕೆ ಬರಲಿಲ್ಲ. ಇದನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದಾರೆ.

ಇದರ ಬಗ್ಗೆ ರಾಜ್ಯ ಸರ್ಕಾರ ಮಾಹಿತಿ ಕಳಿಸಿಕೊಡುವಂತಹ ವ್ಯವಸ್ಥೆ ಮಾಡಬೇಕು ಎಂದು. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾನು ಈಗ ತಾನೇ ಅಧಿಕಾರಕ್ಕೆ ಬಂದಿದ್ದೇನೆ. ಒಂದು ತಿಂಗಳ ಅವಕಾಶ ಕೊಡಿ. ಒಂದೇ ತಿಂಗಳ ಅವಕಾಶವನ್ನು ಕೊಟ್ಟರೆ ನಾನು ಕೇಂದ್ರ ಸರ್ಕಾರದಿಂದ ಮಂಜೂರು ಮಾಡಿಸುತ್ತೇನೆ ಎಂದು ಅವರು ಹೊಸದಾಗಿ ಮುಖ್ಯಮಂತ್ರಿಗಳಾಗಿದ್ದಾಗ ಹೇಳಿದರು. ಆಗ ನಾನು ಬಹಳ ಹರ್ಷ ಪಟ್ಟೆ. ಮುಖ್ಯಮಂತ್ರಿಗಳು ಹೊಸದಾಗಿ ಬಂದಿದ್ದಾರೆ ರೈತರ ಪರವಾಗಿ, ಹಳ್ಳಿಯ ಜನರ ಪರವಾಗಿ ಬಹಳ ಒಳ್ಳೆಯ ಹುರುಪನಿಂದ ಕೆಲಸ ಮಾಡುತ್ತಾರೆ, ಒಂದು ತಿಂಗಳಲ್ಲಿ ಕೇಂದ್ರದಿಂದ ಯೋಜನೆ ಮಂಜೂರು ಮಾಡಿಸುತ್ತೇವೆ ಎಂದು ಹೇಳಿದ್ದಾರೆ ಎಂದು. ಆದರೆ ಆಗಿದ್ದು ಏನು? ಇಲ್ಲಿಯವರೆಗೆ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಅವಶ್ಯ ಇರತಕ್ಕಂಥ ಮಾಹಿತಿಯನ್ನು ಸಹ ಕಳಿಸಿಲ್ಲ.

ಕೃಷಿ ಇಲಾಖೆಯವರು, ನೀರಾವರಿ ಇಲಾಖೆಯವರು, ಅರಣ್ಯ ಇಲಾಖೆಯಿಂದ ಅಲ್ಲಿ ಇರತಕ್ಕ ಅವಶ್ಯ ಮಾಹಿತಿಯನ್ನು ಸಹಿತ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿಲ್ಲ. ಅನಂತರ ನಮ್ಮ ಉಪ ಮುಖ್ಯಮಂತ್ರಿಗಳು ನೀರಾವರಿ ಇಲಾಖೆಯನ್ನು ವಹಿಸಿಕೊಂಡರು. ಆವಾಗ ಇಲ್ಲಿ ನಾನು ಒಂದು ಪ್ರಶ್ನೆಯನ್ನು ಕಳಿಸಿದ್ದೆ. ಆಗ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದಿಂದ ಒಂದು ತಿಂಗಳಲ್ಲಿ ಇದನ್ನು ಮಂಜೂರು ಮಾಡಿಸುತ್ತೇನೆಂದು ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದರು. ಈವರೆಗೆ ಮಂಜೂರು ಆಗಿಲ್ಲ, ಏನು ಪ್ರಗತಿ ಆಗಿದೆ ಎಂದು. ಅದಕ್ಕೆ ಉತ್ತರ ಯಾವುದೇ ಮಂಜೂರಾತಿ ಸಿಕ್ಕಿಲ್ಲ, ಏನೂ ಪ್ರಗತಿ ಆಗಿಲ್ಲ ಎಂದು. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದರು, ಎರಡು ತಿಂಗಳು ಕಾಲಾವಕಾಶ ಕೊಡಿ, ನಾನು ಹೊಸದಾಗಿ ಬಂದಿದ್ದೇನೆ, ಕೇಂದ್ರದ ನೀರಾವರಿ ಮಂತ್ರಿಗಳಿಂದ ಅದನ್ನು ಮಂಜೂರು ಮಾಡಿಸುತ್ತೇನೆಂದು ಹೇಳಿದರು. ಇವತ್ತಿಗೂ ಬಹಳ ಖೇದದಿಂದ ಹೇಳುತ್ತೇನೆ. ನೀರನ್ನು ಬಳಕೆ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಕೃಷ್ಣಾ ಯೋಜನೆಯಲ್ಲಿ ಬರತಕ್ಕ ತುಂಗಾ ಮೇಲ್ದಂಡೆ ಸಹಿತ ಎಲ್ಲ ನೀರನ್ನು ಬಳಕೆ ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತಿಗೂ ಸಹಿತ ಕೃಷಿ ಇಲಾಖೆ ನೀರಾವರಿ ಇಲಾಖೆ ಅರಣ್ಯ ಇಲಾಖೆಯವರು ಒಂದು ಕಡೆ ಕುಳಿತು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕಳುಹಿಸಲು ವಿಫಲವಾಗಿರುವಾಗ ಎಷ್ಟರಮಟ್ಟಿಗೆ ಇವರಿಗೆ ನೀರಾವರಿ ಬಗ್ಗೆ, ರೈತರ ಬಗ್ಗೆ ರಾಜ್ಯದ ಅಭಿವೃದ್ಧಿ ಬಗ್ಗೆ ಕಳಕಳಿ ಇದೆ ಎನ್ನುವುದನ್ನು ಇಲ್ಲಿ ನಾವು ಕಾಣಬಹುದು. ಅದಕ್ಕಾಗಿ ಅಧಿಕಾರಿಗಳಿಗೆ ಹೇಳಿದೆ. ಕೃಷಿ ಇಲಾಖೆಯವರು, ನೀರಾವರಿ ಇಲಾಖೆಯವರು, ಅರಣ್ಯ ಇಲಾಖೆಯವರು ಸೇರಿ ಒಂದು ಸಭೆಯನ್ನಾದರೂ ಕರೆದು ನೀವೆಲ್ಲಾ ಕೋ-ಆರ್ಡಿನೇಷನ್ ಮಾಡಿಕೊಂಡು ಅವಶ್ಯ ಇರತಕ್ಕಂಥ ಮಾಹಿತಿಯನ್ನು ಕಳುಹಿಸಿ ಎಂದು. ಈವರೆಗೆ ಕಳುಹಿಸಿಲ್ಲ. ಈ ಒಂದು ಯೋಜನೆ ಕೇಂದ್ರ ಸರ್ಕಾರಕ್ಕೆ ಹೋಗಿದ್ದು 23.03.92ರಂದು. 23.03.92ರಂದು ಹೋದರೆ ನಾಲ್ಕು ಸಾರಿ ವಾಪಸ್ಸು ಬಂದಿದೆ. ರಾಜ್ಯ ಸರ್ಕಾರ ಸರಿಯಾದ ಮಾಹಿತಿಯನ್ನು ಕಳುಹಿಸಿ ಕೊಡುತ್ತಿಲ್ಲ ಎಂದು ಹೇಳಿ ನಾಲ್ಕು ಸಾರಿ ವಾಪಸ್ಸು ಬಂದಿದೆ. ಇದೊಂದು ಬಹಳ ಹಾಸ್ಯಾಸ್ಪದವಾದ ವಿಷಯ. ಇದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿರತಕ್ಕ ವಿಷಯ. ಅವರ ಗಮನಕ್ಕೂ ಸಹ ತಂದಿದ್ದೇನೆ. ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದವರು ಮಾಹಿತಿಯನ್ನು ಕೇಳಿದರೆ ಈ ಬಗ್ಗೆ ಮಾಹಿತಿಯನ್ನು ಅರಣ್ಯ ಇಲಾಖೆಯಲ್ಲಿ ಕೊಡಲಿಕ್ಕೆ ಸಿಬ್ಬಂದಿ ಇಲ್ಲ ಎಂದು ಉತ್ತರ ಕೊಟ್ಟಂತಹ ಅಧಿಕಾರಿಗಳು ಇದ್ದಾರೆ.

ಇದು ನಮ್ಮ ದುರ್ದೈವ ಎಂದು ಹೇಳಬೇಕಾಗಿದೆ. ಯಾರಾದರೂ ಹೇಳುವವರು ಕೇಳುವವರು ಈ ಅಧಿಕಾರಿಗಳಿಗೆ ಇದ್ದಾರೆಯೇ? ನೀರಾವರಿ ಯೋಜನೆಗೆ ಅರಣ್ಯ ಇಲಾಖೆಯಿಂದ ಅವಶ್ಯ ಮಾಹಿತಿ ಕೇಳಿದರೆ ನಮ್ಮಲ್ಲಿ ಸಿಬ್ಬಂದಿ ಕೊರತೆ ಇದೆ ಮಾಹಿತಿ ಕೊಡಲಿಕ್ಕೆ ಆಗುವುದಿಲ್ಲ ಎನ್ನುವಷ್ಟು ಉದ್ಧಟತನದ ಉತ್ತರವನ್ನು ಕೊಡುವಂತಹ

ಅಧಿಕಾರಿಗಳು ಇದ್ದಾಗ ಈ ಆಡಳಿತ ಹೇಗಿರಬೇಕು ಎಂದು ನಾವು ಬಹಳ ತೀವ್ರವಾಗಿ ಇದನ್ನು ಗಮನಿಸಬೇಕಾಗುತ್ತದೆ. ರಾಜ್ಯದ ಜನತೆ ಸಹ ಗಮನಿಸಬೇಕಾಗುತ್ತದೆ. ಈಗಲಾದರೂ ತಮ್ಮ ಮೂಲಕ ಹೇಳುತ್ತೇನೆ. ಕೇಂದ್ರಕ್ಕೆ ಈ ಯೋಜನೆಯ ಮಾಹಿತಿಯನ್ನಾದರೂ ಕಳುಹಿಸುವುದಕ್ಕೆ ಕ್ರಮ ಕೈಗೊಳ್ಳಿ. ನಿಮ್ಮ ಉತ್ಸುಕತೆಯನ್ನು ಬಲ್ಲೆ. ಆದರೆ ಸಮಯ ಸಿಕ್ಕಿಲ್ಲ. ಸಮಯ ಕೂಡುತ್ತಾ ಇಲ್ಲ, ಈ ಒಂದು ವ್ಯವಸ್ಥೆಯಲ್ಲಿ, ನಿಮಗೆ ವಿಚಾರ ಮಾಡಲಿಕ್ಕೆ ಸರಿಪಡಿಸಲಿಕ್ಕೆ ಸಮಯ ಸಿಕ್ಕಿಲ್ಲ ಎಂದು ನಾನು ಬಲ್ಲೆ.

ಈಗಾಲಾದರೂ ತಾವು ನೀರಾವರಿ ಇಲಾಖೆ ಕೃಷಿ ಇಲಾಖೆ ಮತ್ತು ಅರಣ್ಯ ಇಲಾಖೆಯವರನ್ನು ಕೋ-ಆರ್ಡಿನೇಟ್ ಮಾಡಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಕನಿಷ್ಠ ಪಕ್ಷ ನೀರಾವರಿ ಇಲಾಖೆ, ಕೃಷಿ ಇಲಾಖೆ ಮತ್ತು ಅರಣ್ಯ ಇಲಾಖಾಧಿಕಾರಿಗಳನ್ನೊಳಗೊಂಡ ರಾಜ್ಯ ಮಟ್ಟದ ಒಂದು ಸಮಿತಿಯನ್ನು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಿ ಮುಖ್ಯಮಂತ್ರಿಗಳು ಆದಷ್ಟು ಶೀಘ್ರವಾಗಿ ಅವಶ್ಯವಾಗಿರುವಂಥ ಮಾಹಿತಿಯನ್ನು ಕೇಂದ್ರಕ್ಕೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ರೈತರ ಪರವಾಗಿ ಕೈಗಳನ್ನು ಜೋಡಿಸಿ ಕೇಳುತ್ತಿದ್ದೇನೆ. ಇದೊಂದು ಕೆಲಸವನ್ನಾದರೂ ಮಾಡುತ್ತೀರಾ? ನಿಮ್ಮ ಆಡಳಿತಾವಧಿಯಲ್ಲಿ ಈ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ? ಅನಂತರ, ಈ ಯೋಜನೆಗೆ ಸುಮಾರು 370 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ನಾನು ಬಜೆಟ್ ಅಧಿವೇಶನದಲ್ಲಿ ಮಾತನಾಡುತ್ತಾ, ಈ ಕೆಲಸಕ್ಕಾಗಿ 50 ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕೆಂದು ಹೇಳಿದೆ. ಅದಕ್ಕೆ ಕೇಂದ್ರ ಸರ್ಕಾರದಿಂದ ಈ ಯೋಜನೆ ಮಂಜೂರಾಗಬೇಕಾಗಿದೆಯೆಂದು ಹೇಳಿದರು. ನಾನು ಕೇಳುತ್ತಿದ್ದೇನೆ, ಕಾವೇರಿ ಜಲಾನಯನ ಪ್ರದೇಶಾಭಿವೃದ್ಧಿಗಾಗಿ ಕೇಂದ್ರದಿಂದ ಮಂಜೂರಾತಿ ಸಿಕ್ಕಿದೆಯೇ?

(ಗೊಂದಲ)

ಇದನ್ನು ಮಾಡುವ ಅವಶ್ಯಕತೆ ಇಲ್ಲವೇ? ರೈತರ ಹಿತರಕ್ಷಣೆಗಾಗಿ ಕಾವೇರಿ ನೀರನ್ನು ಬಳಸಿಕೊಳ್ಳುವುದಕ್ಕೆ ನಾನ್-ಪ್ಲಾನ್ ಯೋಜನೆಯಡಿಯಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಇದಕ್ಕೆ ಒದಗಿಸಿರುವ ಹಣ ಸಾಕಾಗದಿರುವುದರಿಂದ ಇನ್ನೂ ಹೆಚ್ಚಿನ ಹಣ ಖರ್ಚು ಮಾಡಿ ಕಾವೇರಿ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಬರದಿದ್ದರೂ ಸಹ ನಾನ್-ಪ್ಲಾನ್‌ನಲ್ಲಿ ಪ್ರಾರಂಭ ಮಾಡಿ ಎಂದು ನಾನು ಹೇಳಿದೆ. ಇದಕ್ಕಾಗಿ ಬಜೆಟ್‌ನಲ್ಲಿದ್ದ 5 ಕೋಟಿ ರೂಪಾಯಿಗಳಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಇಲ್ಲಿಯವರೆವಿಗೂ ಐದು ಪೈಸೆಯಷ್ಟು ಹಣವನ್ನು ಖರ್ಚು ಮಾಡಿಲ್ಲ. ಹೀಗಾದರೆ ನೀರಾವರಿ ಯೋಜನೆ ಹೇಗೆ ಪೂರ್ಣವಾಗುತ್ತದೆ? ಹೇಗೆ ಈ ರಾಜ್ಯದ ಅಭಿವೃದ್ಧಿಯಾಗುತ್ತದೆ? ಕನಿಷ್ಟ ಪಕ್ಷ ನೀರಾವರಿ ಬಗ್ಗೆಯಾದರೂ ಈ ಸರ್ಕಾರ ಗಮನಹರಿಸದಿರುವುದು ಈ ರಾಜ್ಯದಲ್ಲಿರತಕ್ಕ ಬಹುತೇಕ ರೈತರನ್ನು ಕೆರಳುವಂತೆ ಮಾಡಿದೆ. ನನ್ನ ಮಾತನ್ನು ಮುಖ್ಯಮಂತ್ರಿಗಳು ಕೇಳುತ್ತಿದ್ದೀರೆಂದು ಭಾವಿಸಿದ್ದೇನೆ. ಇದಕ್ಕೆ ತಮ್ಮ ಉತ್ತರದಲ್ಲಿ ಏನು ಪರಿಹಾರ ಹೇಳುತ್ತೀರೆಂದು ನೋಡೋಣ. ನಾವು ಪ್ರಸ್ತಾಪಿಸಿದಂಥ ಎಲ್ಲಾ ವಿಷಯಗಳಿಗೆ ತಾವು ಏನೂ ಉತ್ತರ ಕೊಡುತ್ತೀರೆಂದು ಕಾದು ನೋಡುತ್ತಿದ್ದೇವೆ. ಅನಂತರ, ರಸ್ತೆಗಳ ದುಸ್ಥಿತಿ ಬಗ್ಗೆ ಹೇಳುವುದಾದರೆ ಇವೊತ್ತು ರಸ್ತೆಗಳ ಪರಿಸ್ಥಿತಿ ಏನಾಗಿದೆ? ಅತಿವೃಷ್ಟಿಯಿಂದ ಹಾಳಾಗಿ ಹೋದ ರಸ್ತೆಗಳಲ್ಲಿ ಬಸ್ಸುಗಳನ್ನು ಓಡಿಸುವುದಕ್ಕಾಗುವುದಿಲ್ಲವೆಂದು ಅದಕ್ಕೋಸ್ಕರ ಗ್ರಾಮೀಣ ಬಸ್ಸುಗಳನ್ನು ನಿಲುಗಡೆ ಮಾಡಲಾಗುವುದೆಂದು ಕೆ.ಎಸ್.ಆರ್.ಟಿ.ಸಿ ಯವರು ಒಂದು ನೋಟ್ ಕೊಟ್ಟಿದ್ದಾರೆ.

ಅತಿವೃಷ್ಟಿಯಿಂದ ಹಾಳಾದ ರಸ್ತೆಗಳ ದುರಸ್ತಿಗಾಗಿ ಸರ್ಕಾರ ಇದುವರೆಗೆ ಹಣ ಬಿಡುಗಡೆ ಮಾಡಿಲ್ಲ. ರಸ್ತೆಗಳು ದುರಸ್ತಿಯಾಗದಿರುವುದರಿಂದ ಕೆಎಸ್‌ಆರ್‌ಟಿಸಿಯವರು

ಬಸ್ಸುಗಳನ್ನು ಓಡಿಸದೆ ನಿಲ್ಲಿಸಿದ್ದಾರೆ. ಒಂದು ಕಡೆ ಹೇಳುತ್ತೀರಿ? ಆ ಭಾಗದಲ್ಲಿ ಬಸ್ಸುಗಳನ್ನು ಓಡಿಸುವುದರಿಂದ ಹಣ ಪೋಲಾಗುತ್ತದೆ, ಆದ್ದರಿಂದ ಕೆಎಸ್‌ಆರ್‌ಟಿಸಿಯವರು ಬಸ್ಸುಗಳನ್ನು ಓಡಿಸುತ್ತಿಲ್ಲವೆಂದು. ರಸ್ತೆಗಳು ಸರಿಯಾಗಿಲ್ಲದಿದ್ದರೆ ಬಸ್ಸುಗಳನ್ನು ಹೇಗೆ ಓಡಿಸುವುದಕ್ಕೆ ಸಾಧ್ಯ? ಗ್ರಾಮೀಣ ಭಾಗದ ರಸ್ತೆಗಳು ಹಾಳಾಗಿದ್ದು, ಅಲ್ಲದೆ, ಬಸ್ಸಿನ ಮೇಲೆ, ಒಳಗೆ 150 ಜನರು ಪ್ರಯಾಣಿಸಿದರೆ ಡ್ರೈವರ್ ಬಸ್ಸನ್ನು ಹೇಗೆ ತಾನೆ ಹಳ್ಳಿಯೊಳಗೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ? ಇದರಿಂದ ಬಸ್ಸುಗಳು ಸಹ ಹಾಳಾಗಿ ಹೋಗುತ್ತವೆ. ಒಂದು ರಸ್ತೆಯ ದುರಸ್ತಿ ಕೆಲಸ ಸಹ ಆಗಿಲ್ಲ. ಇನ್ನು ಕಟ್ಟಡಗಳ ದುರಸ್ತಿ ಕುರಿತು ಹೇಳಬೇಕೆಂದರೆ ಮಹಾಪೂರದಿಂದ ಆಸ್ಪತ್ರೆಗಳ ಕಟ್ಟಡ, ಶಾಲಾ-ಕಛೇರಿಗಳ ಕಟ್ಟಡದ ಪರಿಸ್ಥಿತಿ ಇವೊತ್ತು ಏನಾಗಿದೆ? ನಾನು ಮೊನ್ನೆ ದಿವಸ ತಾಲ್ಲೂಕು ಪಂಚಾಯಿತಿ ಸಮಿತಿ ಸಭೆಗೆ ಹಾಜರಾಗಲು ಬಂದಾಗ ಮೇಲ್ಮನೆಯ ನನ್ನ ಸ್ನೇಹಿತರು ಹೇಳುತ್ತಿದ್ದರು. ಹೆರಿಗೆಗೆಂದು ತಮ್ಮ ಮನೆಯವರು ಆಸ್ಪತ್ರೆಗೆ ಸೇರಿದರೆ, ಆಸ್ಪತ್ರೆಯ ಕಟ್ಟಡ ಮಳೆ ಬಂದು ಸಂಪೂರ್ಣ ಸೋರುತ್ತಿತ್ತು. ಎಂದು ಇವರ ಕಾಂಗ್ರೆಸ್ ಪಕ್ಷದವರೇ ಇದನ್ನು ಹೇಳಿದ ಮೇಲೆ ಯಾವ ಹೆಣ್ಣುಮಕ್ಕಳು ಹೆರಿಗೆಗೆಂದು ಆ ಆಸ್ಪತ್ರೆಗೆ ಹೋಗುತ್ತಾರೋ ಗೊತ್ತಿಲ್ಲ. ಆ ಆಸ್ಪತ್ರೆಯ ಕಟ್ಟಡವನ್ನು ದುರಸ್ತಿಪಡಿಸುವುದಕ್ಕೆ ಗಮನಹರಿಸದಂಥ ಸರ್ಕಾರ ಈ ರಾಜ್ಯದ ಜನತೆಯ ಅದರಲ್ಲೂ ಮಹಿಳೆಯರ ಅಭಿವೃದ್ಧಿಗಾಗಿ ಯಾವುದೇ ರೀತಿಯ ಗಮನವನ್ನು ಹರಿಸಿಲ್ಲವೆಂದು ಹೇಳಬಹುದು. ಈ ಎಲ್ಲ ಕಾರಣಗಳಿಂದ ಇವರ ಆಡಳಿತವು ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳುತ್ತೇನೆ. ಇನ್ನು ಬೆಳೆಯ ಹಾನಿಯ ಬಗ್ಗೆ ಹೇಳುವುದಾದರೆ ಮೊದಲು ಒಂದು ಎಕರೆಗೆ 200 ರೂ. ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದರು. ಆಗ ರೈತರಿಗೆ ಏನೋ ಈ ಸರ್ಕಾರ ಉತ್ತಮವಾದ ಕೆಲಸವನ್ನು ಮಾಡುತ್ತಿದೆ ಎಂದು ಅನ್ನಿಸಿತು.

ಅಧ್ಯಕ್ಷರೇ ನಾನು ಮಾತನಾಡುವಾಗ ಅವರು ವೃಥಾ ತೊಂದರೆಯನ್ನು ಕೊಡುತ್ತಿದ್ದಾರೆ. ಇದು ಸರಿಯಲ್ಲ. ಮೊದಲು ರೈತರಿಗೆ ಪರಿಹಾರವಾಗಿ ಒಂದು ಎಕರೆಗೆ 200 ರೂ. ಕೊಡುತ್ತೇವೆಂದು ಹೇಳಿದರು, ಅನಂತರ 500 ರೂ. ಕೊಡುತ್ತೇವೆಂದು ಹೇಳಿದರು. ಆ ರೀತಿ ಹೇಳಿ ರೈತರಲ್ಲಿ ಆಶೆ ಆಮಿಷವನ್ನು ಉಂಟು ಮಾಡಿದರು. ಅನಂತರ, ಪಂಪು ಸೆಟ್ಟುಗಳಿಗೆ 1 ಸಾವಿರದಿಂದ 3 ಸಾವಿರದವರೆಗೆ ಪರಿಹಾರವನ್ನು ಕೊಡುತ್ತೇವೆಂದು ಹೇಳಿದರು. ಆದರೆ ಈಗ ಸರ್ಕಾರದ ಒಂದು ಆದೇಶ ಬಂದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ನೋಡಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಅವರೂ ಸಹ ಇದನ್ನು ಗಮನಿಸಬೇಕು. ಆ ಆದೇಶದಲ್ಲಿ ಏನಿದೆ ಎಂದರೆ, ಒಂದು ಎಕರೆಗಿಂತ ಹೆಚ್ಚಿಗೆ ಜಮೀನಿದ್ದರೆ ಪರಿಹಾರವನ್ನು 500 ರೂಪಾಯಿಗಳಿಂದ ಹೆಚ್ಚಾಗಿ ಒಬ್ಬ ವ್ಯಕ್ತಿಗೆ ಕೊಡಬಾರದೆಂದು ಇದೆ. ಧಾರವಾಡ ಜಿಲ್ಲೆಯ ಕೃಷಿ ಇಲಾಖೆಯ ಅಧಿಕಾರಿ ಈ ಸುತ್ತೋಲೆಯನ್ನು ಕಳಿಸಿದ್ದಾರೆ. ಅದರಲ್ಲಿ ಒಬ್ಬ ರೈತನಿಗೆ 500 ರೂ.ಗಿಂತ ಹೆಚ್ಚಾಗಿ ಪರಿಹಾರವನ್ನು ಕೊಡುವಂತಿಲ್ಲವೆಂದು ಹೇಳಿದ ಕಾರಣ ರೈತರಿಗೆ 500 ರೂ.ಗಿಂತ ಹೆಚ್ಚಾಗಿ ಪರಿಹಾರ ಸಿಕ್ಕಿಲ್ಲ. ಇದೇ ರೀತಿಯಲ್ಲಿ ಪಂಪುಸೆಟ್ಟುಗಳು ನಾಶವಾಗಿರುವವರಿಗೆ ಮೂರು ಸಾವಿರ ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದರೂ ಸಹ ಇದುವರೆಗೆ ಒಂದು ಸಾವಿರಕ್ಕಿಂತೂ ಹೆಚ್ಚು ಪರಿಹಾರ ಕೊಟ್ಟಿಲ್ಲ. ಅಂದರೆ ಸರ್ಕಾರ ಮೊದಲು ಜನರಿಗೆ ಆಸೆ ಆಮಿಷವನ್ನು ತೋರಿಸುತ್ತದೆ. ನಂತರ ಅದನ್ನು ಕಾರ್ಯರೂಪಕ್ಕೆ ತರುವಾಗ ಅದರ ವಿರುದ್ಧವಾಗಿ ಕೆಲಸ ಮಾಡುತ್ತದೆ. ಜನರಿಗೆ ಒಂದೆರಡು ಸಾರಿ ಮೋಸ ಮಾಡಬಹುದು, ಆದರೆ ಮೂರನೇ ಸಾರಿ ಮೋಸ ಮಾಡಲು ಆಗುವುದಿಲ್ಲ, ಇವತ್ತು ಜನರು ನಮಗಿಂತಲೂ ಬುದ್ಧಿವಂತರಾಗಿದ್ದಾರೆ. ಇದನ್ನು ನಾವು ಮರೆಯಬಾರದು. ರೈತರಿಗೆ ಆಗಿರುವ ಹಾನಿಯನ್ನು ಸಂಪೂರ್ಣವಾಗಿ ಕೊಡಲು ಸಾಧ್ಯವಿಲ್ಲದಿದ್ದರೂ ಸಹ, ಅವರು 2-3 ಎಕರೆ ಬೆಳೆಯನ್ನು ಕಳೆದುಕೊಂಡಿದ್ದರೆ ಅದರಲ್ಲೂ ಸಹ ಕೇವಲ ಒಂದು

ಎಕರೆಗೆ ಮಾತ್ರ ಪರಿಹಾರವನ್ನು ಅಂದರೆ 500 ರೂ.ಗಿಂತಾ ಹೆಚ್ಚು ಪರಿಹಾರವನ್ನು ಕೊಡಬಾರದೆಂದು ಸರ್ಕಾರ ಆದೇಶವನ್ನು ಕೊಟ್ಟರೆ, ಸರ್ಕಾರ ಏನು ಘೋಷಣೆಯನ್ನು ಮಾಡುತ್ತದೆ, ಆ ಘೋಷಣೆಗೆ ವಿರುದ್ಧವಾಗಿ ಕೆಲಸ ಮಾಡಿದಂತೆ ಆಗುವುದಿಲ್ಲವೇ?

ಇನ್ನು ಸರ್ಕಾರದ ಆಡಳಿತ ವೈಖರಿಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನನ್ನ ಹಿರೇಕೆರೂರು ತಾಲ್ಲೂಕಿನಲ್ಲಿ ಒಬ್ಬರು ಬಿ.ಡಿ.ಓ. ಇದ್ದಾರೆ. ಅವರು ಆಶ್ರಯ ಯೋಜನೆಯ ಅಡಿಯಲ್ಲಿ ಯಾವುದೇ ಕೆಲಸವನ್ನು ಮಾಡಿಲ್ಲ. ಒಂದು ಮನೆಯನ್ನೂ ಸಹ ಕಟ್ಟಿಸಿಲ್ಲ. ಅಲ್ಲಿಯ ಸಂಬಂಧಪಟ್ಟ ಶಾಸಕರು ಆಶ್ರಯ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಮಾನ್ಯ ವಸತಿ ಖಾತೆಯ ಸಚಿವರು ಇಲ್ಲಿ ಇಲ್ಲ, ಆದರೆ ಗ್ರಾಮೀಣಾಭಿವೃದ್ಧಿ ಸಚಿವರಾದ ಘೋರ್ಪಡೆಯವರು ಇದ್ದಾರೆ. ಅಲ್ಲಿ ಒಂದು ಮನೆಯನ್ನೂ ಸಹ ಕಟ್ಟಿಲ್ಲ. ಇವತ್ತು ಕೆಲಸ ಪ್ರಾರಂಭವಾಗಿದ್ದರೆ ಯಾವ ಕೆಲಸವಾಗಿದೆ? ಎಷ್ಟು ಖರ್ಚಾಗಿದೆ ಎನ್ನುವ ಬಗ್ಗೆ ನೋಡಬಹುದಿತ್ತು ಆದರೆ ಮನೆಗಳ ಕೆಲಸವೇ ಪ್ರಾರಂಭವಾಗಿಲ್ಲ. ಆ ಬಿ.ಡಿ.ಓ. 10 ಲಕ್ಷ ರೂಪಾಯಿಗಳಷ್ಟು ಸರ್ಕಾರದ ಹಣವನ್ನು ತನ್ನ ಖಾತೆಗೆ ವರ್ಗಾವಣೆ ಮಾಡಿಕೊಂಡು ಒಂದು ಮನೆಯನ್ನೂ ಕಟ್ಟದೆ ಪರಾರಿಯಾಗಿದ್ದಾನೆ. ಅದನ್ನು ಸರ್ಕಾರದ ಗಮನಕ್ಕೆ, ಜಿಲ್ಲಾಧಿಕಾರಿಯವರ ಗಮನಕ್ಕೆ ತಂದಿದ್ದೇವೆ. ಮತ್ತು ಜಿಲ್ಲಾ ಅಭಿವೃದ್ಧಿ ಸಭೆಯಲ್ಲಿ ಕೂಡ ಹೇಳಿದ್ದೇನೆ. ಆ ಅಧಿಕಾರಿಯ ಬಗ್ಗೆ ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ದೂರನ್ನು ಕೊಟ್ಟರೂ ಸಹ ಆ ಬಿ.ಡಿ.ಓ. ಅವರನ್ನು ದಸ್ತಗಿರಿ ಮಾಡಲಿಲ್ಲ, ಸರ್ಕಾರದ 10 ಲಕ್ಷ ರೂಪಾಯಿ ಹಣ ಏನಾಯಿತು ಎಂದು ಕೇಳಲಿಲ್ಲ, ಇದರ ಬಗ್ಗೆ ಸರ್ಕಾರ ಗಮನಹರಿಸಲಿಲ್ಲ, ಇದರ ಬಗ್ಗೆ ವಿಚಾರಣೆ ಮಾಡಲಿಲ್ಲ. ಒಂದು ಮನೆಯನ್ನೂ ಕಟ್ಟದಿದ್ದರೂ ನಾವು ಮನೆ ಕಟ್ಟಿದ್ದೇವೆ ಎಂದು, ಬಡವರಿಗೆ ಸೂರನ್ನು ಕೊಟ್ಟಿದ್ದೇವೆಂದು ಸರ್ಕಾರ ಪೌರುಷದಿಂದ ಹೇಳಿಕೊಳ್ಳುತ್ತಿದೆ. ಇದು ಸಂಪೂರ್ಣ ಸತ್ಯಕ್ಕೆ ದೂರವಾದುದು. ಈ ರೀತಿ ಇದ್ದರೂ ಸಹ ವಸತಿ ಸಚಿವರು ಅದೇ ಅಧಿಕಾರಿಯನ್ನು ಮತ್ತೆ ಹಿರೇಕೆರೂರಿಗೆ ಹಾಕಬೇಕೆಂದು ಗ್ರಾಮಾಭಿವೃದ್ಧಿ ಸಚಿವರಿಗೆ ಮಿನಿಟ್‌ನ್ನು ಹಾಕಿದ್ದಾರಲ್ಲಾ ಇವರ ಆಡಳಿತಕ್ಕೆ ಏನು ಹೇಳಬೇಕು? ಆದ್ದರಿಂದ ದಯಮಾಡಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಯವರಾದ ಕಾನಡೆಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವು ಹಿರೇಕೆರೂರಿಗೆ ಬೇರೆ ಅಧಿಕಾರಿಯನ್ನು ಹಾಕಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಏಕೆಂದರೆ ಹತ್ತು ಲಕ್ಷ ಹೊಡೆದವರನ್ನು ನನ್ನ ಕ್ಷೇತ್ರಕ್ಕೆ ಕಳುಹಿಸಿ ಅಭಿವೃದ್ಧಿ ಕೆಲಸವನ್ನು ಹಾಳು ಮಾಡುವ ಬದಲು ಸಾಂಡ್ರಾ ಅವರ ಕ್ಷೇತ್ರಕ್ಕೇ ಅವರನ್ನು ಕಳುಹಿಸಿ ಕೊಡಿ. ಮಾನ್ಯ ಘೋರ್ಪಡೆಯವರಲ್ಲಿಯೇ ಇದ್ದಾರೆ. ಆಶ್ರಯ ಯೋಜನೆಯಲ್ಲಿ 10 ಲಕ್ಷ ರೂಪಾಯಿ ತಿಂದವರ ಮೇಲೆ ವಿಚಾರಣೆ ಮಾಡಲಿಲ್ಲ ಹಾಗೂ ಆ ಬಿ ಡಿ ಓ ಅಧಿಕಾರಿಯನ್ನು ಅರೆಸ್ಟ್ ಮಾಡಲಿಲ್ಲ. ಇವತ್ತಿಗೂ ಇದು ವಿಚಾರಣೆಯಾಗಿಲ್ಲ. ನಾನು ನಿಮಗೆ ಹೇಳಿದ್ದೆ, ದಯಮಾಡಿ ಅವರು ಬೇಡ ಬೇರೆಲ್ಲಿಯಾದರೂ ಕಳುಹಿಸಿ ಎಂದು. ಯಾರಾದರೂ ಮಂತ್ರಿಗಳು ಶಾಸಕರು ಬಂದು ಇವನು ಇರಲಿ ಎಂದು ಹೇಳಿದರೆ ಅವರ ಕ್ಷೇತ್ರಕ್ಕೆ ಕಳುಹಿಸಿ ಕೊಡಿ ಎಂದು ನಾನು ಹೇಳಿದ್ದೆ. ನಾನು ಆ ರೀತಿ ಮಾಡಿ ಇವನನ್ನು ಬದಲಾವಣೆ ಮಾಡಿಕೊಂಡರೆ ಪುನಃ ಅವನನ್ನು ಅಲ್ಲಿಗೇ ಹಾಕಬೇಕೆಂದು ವಸತಿ ಸಚಿವರಾದ ಸಾಂಡ್ರಾ ಅವರು ಹೇಳುತ್ತಾರೆಂದರೆ ಇವರ ಆಡಳಿತ ಯಾವ ರೀತಿ ನಡೆಯುತ್ತಿದೆಯೆಂಬುದು ಎದ್ದು ಕಾಣುತ್ತಿದೆ. ನರಗುಂದ ಪುರಸಭೆಯಲ್ಲಿಯಲ್ಲಿರತಕ್ಕಂತಹ ಆಡಳಿತ ವರ್ಗ ಅಲ್ಲಿರತಕ್ಕಂತಹ ನಗರ ಸಭೆ ಮುಖ್ಯಾಧಿಕಾರಿಯ ಬಗ್ಗೆ ಒಂದೆರಡು ಮಾತನ್ನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ನರಗುಂದದ ಪುರಸಭೆ ಆಡಳಿತದಲ್ಲಿ ಭ್ರಷ್ಟಾಚಾರ ಎಂಬುದು ತಾಂಡವವಾಡುತ್ತಿದೆ. ಸ್ವಜನ ಪಕ್ಷಪಾತಗಳು ನಡೆದಿದೆ. ಪರಿಶಿಷ್ಟ ಜಾತಿಯವರ ಮೇಲೆ ನಗರ ಸಭೆಯ

ಮುಖ್ಯಾಧಿಕಾರಿ ದೌರ್ಜನ್ಯ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ, ನರಗುಂದ ಪುರಸಭೆಯಲ್ಲಿರತಕ್ಕಂತಹ ಕಮೀಷನರ್ ಅವರು .....

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ನರಗುಂದ ಪುರಸಭೆಯಲ್ಲಿರತಕ್ಕಂತಹ ಕಮಿಷನರ್ ಎಂದು ಇಷ್ಟು ಅನ್ನುವುದರೊಳಗೆ ಅವರು ಏಳುತ್ತಾರೆಂದರೆ (ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ)

(ಗೊಂದಲ)

ಅಧ್ಯಕ್ಷರು : ಅದು ಸರಿಯಲ್ಲ

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಜವಾಬ್ದಾರಿ ಯುತ ಸದಸ್ಯರಿದ್ದೀರಿ. ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾನು ಇನ್ನೂ ಯಾವುದೇ ರೀತಿಯ ಆಪಾದನೆ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು : ನಾನು ಇದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಬನ್ನಿಕೋಡ್ ಅವರು ಏನು ಹೇಳುತ್ತಿದ್ದಾರೆ. ನರಗುಂದ ಚೀಫ್ ಆಫೀಸರ್ ದುರಾಡಳಿತ ಮಾಡುತ್ತಿದ್ದಾರೆ. ಅಲ್ಲಿ ಇದ್ದ ಪರಿಶಿಷ್ಟ ಜಾತಿಯ ಒಬ್ಬ ನಗರ ಸಭೆಯ ಸದಸ್ಯರ ಮೇಲೆ ಮಾಸ್ ಕಂಪ್ಲೈಂಟ್ ಕೊಟ್ಟಿದ್ದಾನೆಂದು ಹೇಳುತ್ತಿದ್ದಾರೆ. ಇದರಿಂದ ಶಾಸಕರಿಗೇಕೆ ಬೇಜಾರಾಗಬೇಕು ಮಾನ್ಯ ಮುಖ್ಯ ಮಂತ್ರಿಗಳಿದ್ದಾರೆ ಅವರು ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದು ಅಂದರೆ ಬಹಳ ವ್ಯಂಗ್ಯವಾಗಿ....

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ನಗರ ಸಭೆ ಅಲ್ಲಿನ ಅಧಿಕಾರಿ ಇಷ್ಟು ಬಿಟ್ಟು ನಾನು ಇನ್ನೂ ಮುಂದೆ ಹೋಗಿಲ್ಲ. ಆ ಅಧಿಕಾರಿಯೇನು ಮಾಡಿದರು, ಅಲ್ಲಿರತಕ್ಕಂತಹ ಜನ ಪ್ರತಿನಿಧಿಗಳೇನು ಮಾಡುತ್ತಿದ್ದಾರೆ, ಹಾಗೂ ಯಾವ ಶಾಸಕರ ಬಗ್ಗೆಯೂ ನಾನು ಮಾತನಾಡಲಿಲ್ಲ....

ಶ್ರೀ ಎಂ. ವೀರಪ್ಪ ಮೊಯಿಲಿ : ದಯಮಾಡಿ ಮುನಿಸಿಪಾಲಿಟಿ ವಿರುದ್ಧ ನಿರ್ಣಯ ಮಾಡುವಾಗ ಈ ಮಾತನ್ನು ಹೇಳಿ. ಇಲ್ಲಿ ಏಕೆ ಅದನ್ನು ಈಗ ಹೇಳುತ್ತಿದ್ದೀರಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಪರಿಶಿಷ್ಟ ಜಾತಿಯವರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆಂದು ಹೇಳುತ್ತಿದ್ದೇನೆ. ಅದನ್ನು ಕೇಳಲಿಕ್ಕೆ ಮನಸ್ಸಿಲ್ಲ ಅಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ತಾವು ಮುಕ್ತಾಯ ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಮ್ಮ ಹಕ್ಕನ್ನು ಕಸಿದು ಕೊಳ್ಳಲಿಕ್ಕೆ ನೋಡಿದರೆ ಅದು ಸರಿಯಲ್ಲ ಜನ ನಮ್ಮನ್ನು ಆರಿಸಿಕಳುಹಿಸಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅತ್ಯಾಚಾರವಾಗಿದೆ ಅನ್ಯಾಯವಾಗಿದೆ ಎಂದು ಹೇಳಬಾರದೇನು?

ಶ್ರೀ ಬಿ.ಹೆಚ್. ಬನ್ನಿಕೋಡ್ : ನನ್ನ ಸ್ನೇಹಿತರು ಉತ್ತರ ಹೇಳುವುದಾದರೆ ಅವರಿಗೇನು ಗೊತ್ತಿದೆ ಅದನ್ನು ಹೇಳಲು ಅವಕಾಶ ಮಾಡಿಕೊಡಿ. ಅವರ ಮೇಲೆ ಅಪಾದನೆಯನ್ನು ಮಾಡಲಿಲ್ಲ, ಅವರ ಹೆಸರನ್ನು ತೆಗೆದುಕೊಂಡಿಲ್ಲ, ಶಾಸಕರು, ಎನ್ನುವ ಶಬ್ದವನ್ನು ತೆಗೆದುಕೊಂಡಿಲ್ಲ. ಅವರು ಏಕೆ ಹೀಗೆ ಮಾಡುತ್ತಿದ್ದಾರೆ, ನನಗೆ ಗೊತ್ತಿಲ್ಲ.

ಅಧ್ಯಕ್ಷರು : ತಾವು ಬೇಗ ಮುಕ್ತಾಯ ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾನು ಹೇಳಿದ್ದರಲ್ಲಿ ಏನಾದರೂ ಸರಿಪಡಿಸುವುದಿದ್ದರೆ ತಾವು ಅವಕಾಶ ತೆಗೆದುಕೊಂಡು ವಿವರಣೆ ನೀಡಿ, ಇದು ಸರಿಯಿಲ್ಲವೆಂದು ಹೇಳಿ, ಅದು ಬಿಟ್ಟು ನನ್ನ ಹಕ್ಕಿಗೆ ಇವರು ಅಡ್ಡಿ ಬರುತ್ತಿದ್ದಾರೆ. ಈ ಮಾತನ್ನು ತಮ್ಮ ಮುಖಾಂತರ ಅವರಿಗೆ ತಿಳಿಸುತ್ತೇನೆ. ಅಲ್ಲಿ ಸಂತಪ್ಪ ಜಂಕಿನಿ ಎಂಬವರು ತಮಗೆ ಆದಂಥ ತೊಂದರೆಗಳನ್ನು ನಿವಾರಿಸಿ ನಮಗೆ ಮನೆ ಸಿಕ್ಕಿಲ್ಲ, ನಮಗೆ ಅನ್ಯಾಯವಾಗಿದೆ ಮತ್ತು ಸರ್ಕಾರದ ಕೆಲಸದಲ್ಲಿ ಪರಿಶಿಷ್ಟ ಜಾತಿಯವರಿಗೆ ಸಿಗಬೇಕಾದ ಸೌಲಭ್ಯ ಸಿಕ್ಕಿಲ್ಲವೆಂದು ಹೇಳುವುದಕ್ಕೆ ಹೋದರೆ, ಅವರ ಮೇಲೆ ಅಲ್ಲಿನ ಪುರಸಭೆಯ ಮುಖ್ಯಾಧಿಕಾರಿ ಫಿರ್ಯಾದು ಕೊಟ್ಟು ಜೈಲಿನಲ್ಲಿ ಇಟ್ಟಂಥ ಒಂದು ಧಾರುಣ ಘಟನೆಯ ಬಗ್ಗೆ ನಾನು ಹೇಳುತ್ತಿದ್ದೇನೆ. ಅದಕ್ಕೆ ನಮ್ಮ ಶಾಸಕರು......

ಅಧ್ಯಕ್ಷರು : ತಾವು ಮುಕ್ತಾಯ ಮಾಡಿ, ಇದಕ್ಕೆ ಏನೂ ಅರ್ಥವಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇನ್ನು ನರಗುಂದದಲ್ಲಿ ಆದಂತಹ ಬೆಳೆ ಹಾನಿಗೆ ಪರಿಹಾರ ಕೊಟ್ಟಿಲ್ಲ, ಪಂಪ್ ಸೆಟ್ ಕೊಟ್ಟಿಲ್ಲ. ಅಲ್ಲೂ ಸಹ ಜನರ ಬೇಡಿಕೆಗಳನ್ನು ಸರ್ಕಾರ ಈಡೇರಿಸಿಲ್ಲ. ಈ ರೀತಿ ಕೇವಲ 4-5 ಗೋಡೆಗಳ ಮಧ್ಯದಲ್ಲಿ, ಇಡೀ ರಾಜ್ಯದಾದ್ಯಂತ ಸುವ್ಯವಸ್ಥಿತವಾದ ರೀತಿಯಲ್ಲಿ ದೌರ್ಜನ್ಯ ಮತ್ತು ಚಾಕು ಚೂರಿ ಸಂಸ್ಕೃತಿ ಇನ್ನೂ ಮುಂದುವರೆಯುತ್ತಿರುವಂತಹ ಸೂಚನೆಗಳು ಇಲ್ಲಿ ಕಂಡು ಬರುತ್ತಿರುವುದರಿಂದ ಇದು ಪ್ರಜಾಪ್ರಭುತ್ವ ಸರ್ಕಾರ ಅಲ್ಲವೆಂದು ಸ್ಪಷ್ಟವಾಗಿ ಕೇಳಿ, ಈ ಅವಿಶ್ವಾಸ ನಿರ್ಣಯಕ್ಕೆ ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಕಳೆದ ಮೂರು ದಿವಸಗಳಿಂದ ವಿರೋಧಪಕ್ಷದವರು ಮಂಡಿಸಿದ ಅವಿಶ್ವಾಸ ನಿರ್ಣಯದ ಸಂಬಂಧ ಸಾಕಷ್ಟು ಚರ್ಚೆಯಾಗಿದೆ. ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇವೆ.

ಪ್ರಕಟಣೆ

ಈಗ ಒಂದು ಪ್ರಕಟಣೆ ಮೈಸೂರು ವಿಶ್ವ ವಿದ್ಯಾನಿಲಯದ ಸೆನೆಟ್ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮಪತ್ರಗಳು ಬಂದಿರುವುದರಿಂದ, ಈ ಕೆಳಕಂಡ ಮಾನ್ಯ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸಲಾಗಿದೆ :

1. ಶ್ರೀ ಜೆ.ಸಿ. ಮಧುಸ್ವಾಮಿ
2. ಶ್ರೀ ಬಿ. ಶಿವರಾಂ